ಮೇಲುಕೋಟೆಯ

# ಶ್ರೀನಾರಾಯಣಸ್ವಾಮಿ – ಶ್ರೀಚಲುವರಾಯಸ್ವಾಮಿ
# ಶ್ರೀಯೋಗಾನರಸಿಂಹಸ್ವಾಮಿ

ಮತ್ತು

# ತೊಂಡನೂರಿನ ದೇವಸ್ಥಾನಗಳು

ಇತಿಹಾಸ, ವೈಶಿಷ್ಟ್ಯ, ಶಾಸನಗಳು ಮತ್ತು ಸೇವೆಗಳು

ಮೇಲುಕೋಟೆ ಶ್ರೀಯದುಗಿರಿ
ಯತಿರಾಜ ಸಂಪತ್ಕುಮಾರ ರಾಮಾನುಜ ಜೀಯರ್ ಸ್ವಾಮಿಗಳಿಂದ
ಅನುಗ್ರಹೀತವಾದುದು


**ಪ್ರಕಾಶಕರು :**

ಶ್ರೀ ಮಂಡಯಂ ಅಣ್ಣಾಧೊರೆ ಶ್ರೀನಿವಾಸಯ್ಯಂಗಾರ್
ಯದುಗಿರಿಯಮ್ಮ ಟ್ರಸ್ಟ್,
ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟೆ
ಬೆಂಗಳೂರು–560 018

1988

ಶ್ರೀಮೇಲುಕೋಟೆ ಶ್ರೀಯತಿರಾಜಸ್ವಾಮಿಗಳಿಂದ ಅನುಗೃಹೀತನಾಗಿ
ಶ್ರೀಮಂಡಯಂ ಆಸ್ಥಾನಧೋರಿ ಶ್ರೀನಿವಾಸಯ್ಯಂಗಾರ್ ಯಾದುಗಿರಿಯಮ್ಮ ಟ್ರಸ್ಟ್
ನವರಿಂದ ಪ್ರಕಾಶಿಸಲ್ಪಟ್ಟಿತು.

ಎಲ್ಲಾ ಹಕ್ಕುಗಳೂ ಕಾದಿರಿಸಲ್ಪಟ್ಟಿವೆ

ಬೆಲೆ: ರೂ. 10-00

ಪ್ರಕಟಣೆ : 1988

ಮುದ್ರಕರು :
ಜ್ಯೋತಿ ಮುದ್ರಣ
1046, 31ನೇ ಮುಖ್ಯರಸ್ತೆ,
ಬನಶಂಕರಿ ಮೊದಲನೆ ಹಂತ, 2ನೇ ವಿಭಾಗ
ಬೆಂಗಳೂರು-560 050

ಈ ಕೆಳಗೆ ಕಂಡ ಗ್ರಂಥಗಳು ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟು ಮುದ್ರಣಕ್ಕೆ ಸಿದ್ಧವಾಗಿವೆ. ಕ್ಷೇತ್ರಮಹಾತ್ಮ್ಯ, ಚರಿತ್ರೆ, ಶಿಲಾಶಾಸನ, ಫರ್ಮಾನ್‌ಗಳು, ವಿವರಿಸಲ್ಪಟ್ಟಿರುವುದು. ಜೊತೆಯಲ್ಲಿ ಪರಿಸರದ ದೇವಾಲಯಗಳೂ ವಿವರಿಸಲ್ಪಟ್ಟಿರುವುದು–

| | | |
|---|---|---|
| 1. | ಶ್ರೀರಂಗನಾಥಸ್ವಾಮಿ ದೇವಸ್ಥಾನ | ಶ್ರೀರಂಗಪಟ್ಟಣ. |
| 2. | ಶ್ರೀನಾರಾಯಣಸ್ವಾಮಿ ದೇವಸ್ಥಾನ | ಮೇಲುಕೋಟೆ–ತಿರುನಾರಾಯಣಪುರ. |
| 3. | ತೊಂಡನೂರು ದೇವಸ್ಥಾನಗಳು | ತೊಂಡನೂರು. |
| 4. | ಮಳೂರು ಚನ್ನಪಟ್ಟಣ ದೇವಸ್ಥಾನಗಳು | ಮಳೂರು ಚನ್ನಪಟ್ಟಣ. |
| 5. | ಶ್ರೀನಂಜುಂಡೇಶ್ವರಸ್ವಾಮಿ ದೇವಸ್ಥಾನ | ನಂಜನಗೂಡು |
| 6. | ಶ್ರೀಲಕ್ಷ್ಮೀಕಾಂತಸ್ವಾಮಿ ದೇವಸ್ಥಾನ | ಕಳಲೆ. |
| 7. | ಶ್ರೀವಿಜಯನಾರಾಯಣಸ್ವಾಮಿ ದೇವಸ್ಥಾನ | ಗುಂಡ್ಲುಪೇಟೆ. |
| 8. | ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನ | ಚಾಮರಾಜನಗರ. |
| 9. | ರಾಜಧಾನಿ ದೇವಸ್ಥಾನಗಳು | ರಾಜಧಾನಿ, ಮೈಸೂರು. |
| 10. | ಬೆಂಗಳೂರು ಕೈಪಿಡಿ | ಬೆಂಗಳೂರು. |
| 11. | ಶ್ರೀಗೊಮ್ಮಟೇಶ್ವರ | ಶ್ರವಣಬೆಳಗೊಳ. |
| 12. | ಶ್ರೀಚನ್ನಕೇಶವಸ್ವಾಮಿ ದೇವಸ್ಥಾನ | ಬೇಲೂರು. |
| 13. | ಶ್ರೀರಂಗನಾಥಸ್ವಾಮಿ ದೇವಸ್ಥಾನ | ಶ್ರೀರಂಗಕ್ಷೇತ್ರ. |
| 14. | ಹಳೇಬೀಡು ದೇವಸ್ಥಾನಗಳು | ಹಳೇಬೀಡು |
| 15. | ಶ್ರೀವೆಂಕಟೇಶ್ವರಸ್ವಾಮಿ ದೇವಸ್ಥಾನ | ತಿರುಪತಿ. |
| 16. | ಶ್ರೀವರದರಾಜಸ್ವಾಮಿ ದೇವಸ್ಥಾನ | ಕಾಂಚೀಪುರ. |
| 17. | ತಿರುಮಕೂಡಲು ನರಸಿಂಹಪುರ ದೇವಸ್ಥಾನಗಳು | ಟಿ.ನರಸೀಪುರ. |
| 18. | ಶ್ರೀಪಾರ್ಥಸಾರಥಿಸ್ವಾಮಿ ದೇವಸ್ಥಾನ | ತಿರುವಲ್ಲಿಕ್ಕೇಣಿ. ಮದರಾಸ್. |

ಇನ್ನೂ ಅನೇಕ ದೇವಸ್ಥಾನಗಳ ಮತ್ತು ಎಲ್ಲಾ ಮಠಗಳ ಚರಿತ್ರೆಯೂ ಬರೆಯಲ್ಪಟ್ಟಿವೆ.

# ಸೂಚನೆ

ಮೇಲುಕೋಟೆ ಶ್ರೀನಾರಾಯಣಸ್ವಾಮಿ ಶ್ರೀಚೆಲುವರಾಯಸ್ವಾಮಿ ಮಹಾತ್ಮ್ಯ, ಚರಿತ್ರೆ, ಧರ್ಮ, ಶಾಸನಗಳು ಬರೆಯಲು ಈ ಕೆಳಗೆಕಂಡ ಗ್ರಂಥಗಳ ಆಧಾರಬಲದಿಂದ ವಿಷಯಗಳನ್ನು ಸಂಗ್ರಹಿಸಿ ಬರೆದಿರುವುದು.

1. ಶ್ರೀರಾಮಾಯಣ
2. ಯಾದವಗಿರಿ ಮಹಾತ್ಮ್ಯ
3. ಶ್ರೀವೈಷ್ಣವ ಗುರುಪರಂಪರಾ
4. ಮೇಲುಕೋಟೆ ದೇವಸ್ಥಾನದ ನಿಯಮಪಟ್ಟಿ
5. ಮೈಸೂರು ರಾಜವಂಶಾವಳಿ
6. ಮೈಸೂರು ಶಾಸನ ಇಲಾಖೆಯವರು ಪ್ರಕಟಗೊಳಿಸಿರುವ ಎಪಿಗ್ರಾಫಿಯಾ ಕರ್ನಾಟಿಕ.

ಚಿಹ್ನೆಗಳು : ಪಾಂ: ಪು = ಪಾಂಡವಪುರ
ಶ್ರೀ. ಪ. = ಶ್ರೀರಂಗಪಟ್ಟಣ
ಶ್ರ. ಬೆ. = ಶ್ರವಣಬೆಳಗೊಳ
ತಿ. ವಾ. = ತಿರುವಾಯ್ಮೊಳಿ (ದಿವ್ಯಪ್ರಬಂಧ)

ಪುಟ 12 ರಲ್ಲಿ ಶಾ 91, ಶಾ 96, ಶಾ 99 ಎಂದಿದೆ. ಇದು ತೊಂಡನೂರು ಶಾಸನ ಎಂದು ತಿಳಿಯಬೇಕು.

ಪುಟ 14 ರಲ್ಲಿ ನಂದಾದೀವಿಗೆ.,....ನಂದನವನ. ಬಿಟ್ಟಿರುವ ಸ್ಥಳದಲ್ಲಿ ಇಂಥ ನಂದನ ವನ ಎಂದು ತಿಳಿಯುದು. ನಂದನವನದ ಹೆಸರಿರಬೇಕು.

ಪುಟ 14, 15, 81, 84, 86, 93, ತೊಂಡನೂರು ಪುಟ 19, 20 ಇಲ್ಲಿ ಶಕ......ಸಂ. ...... AD ಇ... ಎಂದಿರುವುದು, ಈ ರೀತಿ ಇರುವ ಎಲ್ಲೆಡೆಯಲ್ಲೂ ಕಾಲವನ್ನು ಬರೆಯಬೇಕು. ಕಾಲ ತಿಳಿಯದ್ದರಿಂದ ಬರೆದಿರುವುದಿಲ್ಲ.

ಪುಟ 14 ರಲ್ಲಿ ನಂದಾದೀವಿಗೆ......ನಂದನವನ ಇಲ್ಲಿ ನಂದನವನದ ಹೆಸರು ಬಿಟ್ಟು ಹೋಗಿದೆ.

ಪುಟ 15 ರಲ್ಲಿ ಮಹಾಪ್ರಧಾನ....... ಮುಂದೆ ಸ್ಥಳ ಬಿಟ್ಟಿದೆ. ಬಿಟ್ಟಿರುವ ಸ್ಥಳದಲ್ಲಿ ಹೆಸರು ಬರೆಯಬೇಕು.

ಪುಟ 15 ರಲ್ಲಿ ಶಾ. ಎಂದಿದೆ ಅದನ್ನು ಪಾಂ. ಪು. 96 ಎಂದು ತಿಳಿಯಬೇಕು.

ಪುಟ 57 ರಲ್ಲಿ ...... ನನಹಳ್ಳಿ. ಇಲ್ಲಿ ಗ್ರಾಮದ ಹೆಸರು ಬಿಟ್ಟುಹೋಗಿದೆ.

ಪುಟ 59 ರಲ್ಲಿ ......೨೧೦ = ಪಾಂ. ಪು. ೨೧೦ ಎಂದಿರಬೇಕು.

ತೊಂಡನೂರು ದೇವಸ್ಥಾನ :

ಪುಟ 2, 10, E. C, VI M. G. 22 = ಎಪಿಗ್ರಾಫಿಯಾ ಕರ್ನಾಟಿಕ (ಸಂಪುಟ 6 ಎಂದರ್ಥವು) M. G. = ಮೈಸೂರು ಗೆಜೆಟಿಯರ್.

# ವಿಷಯಸೂಚಿ


| | | |
|---|---|---|
| ೧ | ಕ್ಷೇತ್ರನಾಮಕರಣ | 3 |
| ೨ | ಮೂಲ ವಿಗ್ರಹ ಶ್ರೀನಾರಾಯಣಮೂರ್ತಿ, ಉತ್ಸವಮೂರ್ತಿ | 3–4 |
| ೩ | ಶ್ರೀರಾಮಾನುಜಾಚಾರ್ಯರ ಸಾನ್ನಿಧ್ಯ | 4 |
| ೪ | ವಿಷ್ಣುವರ್ಧನನ ಪೂರ್ವಿಕರು – ಹೊಯ್ಸಳವಂಶ | 5–12 |
| ೫ | ದೇವಸ್ಥಾನ, ಮೇಲುಕೋಟೆ, ಕಲ್ಯಾಣಿ ಪುಷ್ಕರಿಣಿ | 13 |
| ೬ | ಒಂದು ಚರಿತ್ರಾಂಶ – ಒಬ್ಬ ಮಹಾರಾಜರು | 14 |
| ೭ | ರಾಜ ಮುದ್ರೆ – ರಾಮಾನುಜ ಮುದ್ರೆಗಳು | 15 |
| ೮ | ವಿರಕ್ತ ಸನ್ಯಾಸಿಗಳು – ಆಚಾರ್ಯಪ್ರವರರು | 16 |
| ೯ | ಯದುರಾಯರು – ಕೃಷ್ಣರಾಯರು | 17 |
| ೧೦ | ವಿಷ್ಣುವರ್ಧನ ಮತ್ತು ಶ್ರೀರಾಮಾನುಜರ ಸಂಬಂಧ | 17 |
| ೧೧ | ಚಲುವರಾಯಸ್ವಾಮಿ – ಆವಿರ್ಭಾವ ದಿಲ್ಲಿ ವಿಹಾರ | 18–19 |
| ೧೨ | ಅನಿರುದ್ಧ ಕೀರ್ತಿ – ಮಯಿಲಮ್ಮ ಚರಿತ್ರೆ | 19–24 |
| ೧೩ | ಉಭಯನಾಚ್ಚಿಯಾರು | 25 |
| ೧೪ | ವಿಶೇಷಮರ್ಯಾದೆಗಳು – ಸಂಪ್ರದಾಯಭೇದ | 26–27 |
| ೧೫ | ದಿವ್ಯದೇಶ ವೈಭವವು – ಮತ್ತು ವೈಭವ ವಿಶೇಷ | 27–32 |
| ೧೬ | ಅಸಾಧಾರಣ ಸಂಪ್ರದಾಯ ಸಂಭ್ರಮ | 32 |
| ೧೭ | ತಿರುನಾರಾಯಣಪುರದ ದಿವ್ಯದೇಶ ಹಿರಿಮೆ | 33 |
| ೧೮ | ಭಾಗಿಗ ಕೈಂಕರ್ಯಗಳ ವಿವರ | 33–39 |
| ೧೯ | ಮಹಾದ್ವಾರದ ಜೀರ್ಣೋದ್ಧಾರ ಕಾರ್ಯ | 39 |
| ೨೦ | ಮಠ, ಮನೆಗಳ ಭೂಮಿ ನಿವೇಶನ ಪ್ರಮಾಣ | 43–44 |
| ೨೧ | ಮುಕ್ತಿಯಸ್ಥಂ – ಶ್ರೀಕ್ಷೇತ್ರದ ದೇವಾಲಯ | 44 |
| ೨೨ | ಶ್ರೀನಾರಾಯಣಸ್ವಾಮಿ – ಚಲುವರಾಯಸ್ವಾಮಿ ದೇವಸ್ಥಾನ ಕಟ್ಟಡದ ಲಕ್ಷಣ | 45–52 |
| ೨೩ | ಬದರೀನಾರಾಯಣ ಸನ್ನಿಧಿ | 53 |
| ೨೪ | ಶ್ರೀವೇದಾಂತದೇಶಿಕರು – ಶ್ರೀಮಣವಾಳ ಮಾಮುನಿ ಜೀಯರ ಗುಡಿ | |
| ೨೫ | ಶ್ರೀಯದುಗಿರಿ ಯತಿರಾಜ ಮಠ (ಶ್ರೀಭಾಷ್ಯಕಾರರ ಮಠ) | |
| ೨೬ | ತಿರುಮಂಗೈಯಾಳ್ವಾರ್ ಸನ್ನಿಧಿ – ಶ್ರೀನಮ್ಮಾಳ್ವಾರ ಸನ್ನಿಧಿ | 55 |
| ೨೭ | ಮಂಟಪಗಳು ಮತ್ತು ರಾಯಗೋಪುರ | 57–59 |
| ೨೮ | ಸಪ್ತಕ್ಷೇತ್ರಗಳು – ಮೂರ್ತಿ ಮತ್ತು ವಿಗ್ರಹಗಳು | 60–61 |
| ೨೯ | ಮೂಲಮೂರ್ತಿ – ಶ್ರೀನಾರಾಯಣಸ್ವಾಮಿ | 64 |

೩೦ ಉತ್ಸವಮೂರ್ತಿ ಶ್ರೀಚೆಲುವನಾರಾಯಣಸ್ವಾಮಿ (ಶ್ರೀಸಂಪತ್ಕುಮಾರ) 64
೩೧ ಶ್ರೀಸುದರ್ಶನಾಳ್ವಾರು – ಪಂಚಾಯುಧಧಾರಕರು 66
೩೨ ಶ್ರೀಲಕ್ಷ್ಮೀಅಮ್ಮನವರ ಸನ್ನಿಧಿ (ಶ್ರೀಯದುಗಿರಿ ಅಮ್ಮನವರು) 67
೩೩ ಶ್ರೀಗಜೇಂದ್ರವರದಸ್ವಾಮಿ ಸನ್ನಿಧಿ 68
೩೪ ಭಕ್ತ ವಿಗ್ರಹಗಳು (ಆಳ್ವಾರಾಚಾರ್ಯಾದಿಗಳು ಮತ್ತು
ರಾಜಪ್ರತಿಮೆ 69–77
೩೫ ಪೂಜಾ – ಉತ್ಸವಾದಿಗಳು 78–79
೩೬ ಆಭರಣಗಳು ಆರಾಧನ ಪಾತ್ರೆಗಳು 79–80
೩೭ ರಥ ಮತ್ತು ವಾಹನಗಳು 80–81
೩೮ ಧರ್ಮಗಳು 81–86
೩೯ ನಂದಾದೀಪ– ತಿರುನಂದಾದೀಪ– ಪುಷ್ಪಕೈಂಕರ್ಯ 86
೪೦ ಆಳ್ವಾರಾಚಾರ್ಯರುಗಳಿಗೆ ಧರ್ಮ 87
೪೧ ಅಗ್ರಹಾರ – ಮನೆಗಳು – ಭೂದಾನ – ವೃತ್ತಿ – ಧರ್ಮಗಳು 89
೪೨ ತೀರ್ಥ– ಪುಷ್ಕರಿಣಿ, ಕಲ್ಯಾಣಿ – ಅಷ್ಟತೀರ್ಥ 92
೪೩ ಪಂಚ ಭಾಗವತ ಕ್ಷೇತ್ರ– ಬಿಂದುಮಾಧವನ ಗುಡಿ 93–94
೪೪ ಅನ್ನದಾನ– ರಾಮಾನುಜಕೂಟ, ಶ್ರೀ ಯತಿರಾಜಮಠ
ಅನ್ನದಾನ ಒಡೆಯರಮಠ 93
೪೫ ವರ್ಣರಂಜಿತ ಚಿತ್ರಗಳು 94
೪೬ ದೇವದಾಸಿ ವಿಚಾರ 95
೪೭ ದೇವಸ್ಥಾನದ ಕೈಂಕರ್ಯಪರರು 97
೪೮ ಮಠ– ಮಠಾಧಿಪತಿಗಳು ಪಾಠಶಾಲೆ 99–102
೪೯ ಶ್ರೀ ಯದುಗಿರಿ ಯತಿರಾಜಮಠ– ಭಾಷ್ಯಕಾರರಮಠ 102
೫೦ ಶ್ರೀ ಪರಕಾಲಮಠ– ಶ್ರೀ ಅಹೋಬಿಲಮಠ 109
೫೧ ಕಾಂಚಿ ವಾದಿಕೇಸರಿ ಅಳಗಿಯ ಮಣವಾಳಮಠ–
ಶ್ರೀ ವಾನ ಮಾಮುನಿಮಠ 112
೫೨ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ
೫೩ ತೊಂಡನೂರು ದೇವಸ್ಥಾನಗಳು 120

ಶ್ರೀಃ

# ಶ್ರೀಮತೇರಾಮಾನುಜಾಯನಮಃ

ಪುಣ್ಯನದಿ, ಪುಣ್ಯಕ್ಷೇತ್ರ ಇವುಗಳಯಾತ್ರೆಮಾಡುವುದೇತಕ್ಕೆ? ನಾವು ವಾಸ ಮಾಡುವ ಸ್ಥಳ, ಪರಿಸರ, ಬಂಧುಬಳಗ, ಸಂಸಾರ, ಇವುಗಳಿಂದ ನಮ್ಮ ಮನಸ್ಸು ಕಲುಷಿತವಾಗಿರುವುದು. ಕೆಲವುಕಾಲ ಇವುಗಳ ಸಂಪರ್ಕವನ್ನು ಬಿಟ್ಟು ಮನಸ್ಸು ನೆಮ್ಮದಿಯಾಗಿ ಭಗವಂತನ ವಿಷಯ ಮನಸ್ಸಿಗೆ ಬರಲು ಯಾತ್ರೆ ಹೋಗುತ್ತೇವೆ. ಅಲ್ಲಿ ಶಾಂತವಾತಾವರಣವಾದ ಪುಣ್ಯನದಿ, ದೇವಸ್ಥಾನ, ಮಹನೀಯರ ಸೇವೆ ಇವುಗಳಿಂದ ಮನಸ್ಸು ತಿಳಿಯಾಗುವುದು. ತಿಳಿಯಾದ ಮನಸ್ಸಿನಿಂದ ಭಗವಂತನನ್ನು ಒಂದುಸಲ ಸ್ಮರಿಸಿ ಅವನ ನಾಮವನ್ನುಚ್ಚರಿಸಿದರೆ ಸಾಕು ನಮ್ಮ ಜನ್ಮ ಸಾರ್ಥಕ ವಾಗುತ್ತದೆ.

ಆದರೆ ನಾವು ಯಾತ್ರೆಮಾಡಿದ ಸ್ಥಳ, ದೇವಸ್ಥಾನ, ಆ ಕ್ಷೇತ್ರ ಮಹಾತ್ಮ್ಯೆ, ಅಲ್ಲಿನ ಮಹನೀಯರ ಚರಿತ್ರೆ, ತಿಳಿಯಬೇಡವೆ? ಅಗತ್ಯತಿಳಿಯ ಬೇಕಾದುದರಿಂದ ಅದಕ್ಕಾಗಿ ಕರ್ನಾಟಕ ದೇಶದ ಮುಖ್ಯ ಮುಖ್ಯ ಸ್ಥಳಗಳ, ಪ್ರಸಿದ್ಧ ದೇವಾಲಯ ಗಳ, ಚರಿತ್ರಾರ್ಹಸ್ಥಳಗಳ, ಅಲ್ಲಿಯ ಮಹನೀಯರ, ಅವರು ಮಾಡಿದ ಧರ್ಮ, ಚರಿತ್ರೆಗಳನ್ನು ಸಾಧ್ಯವಾದಮಟ್ಟಿಗೆ ಬರೆಯಲು ಪ್ರಯತ್ನಿಸಿರುವುದು.

ಆ ರೀತಿ ಬರೆಯುವಾಗ ಮುಖ್ಯ ಮುಖ್ಯ ಸ್ಥಳಗಳ ಪಕ್ಕದಲ್ಲಿರುವ ಪರಿಸರದ ಸಾಧಾರಣ ದೇವಸ್ಥಾನಗಳನ್ನು ಪ್ರತ್ಯೇಕವಾಗಿ ಬರೆಯಲಾಗುವುದಿಲ್ಲ. ಈ ಗ್ರಂಥದಲ್ಲಿ ಪರಿಸರದ ದೇವಾಲಯ ಚರಿತ್ರಾಂಶಗಳನ್ನು ಬರೆದು ಸೇರಿಸಿರುವುದು.

## ತಿರುನಾರಾಯಣಪುರ ಮೇಲುಕೋಟೆ

ಈ ಕ್ಷೇತ್ರಸ್ಥಳವು ಮೈಸೂರು ನಾಗಮಂಗಲ ಬಸ್ ಮಾರ್ಗದಲ್ಲಿ ಮೈಸೂರಿನಿಂದ 80 ಮೈಲಿ ದೂರದಲ್ಲಿರುವುದು. ಈ ಮಾರ್ಗದಲ್ಲಿ ಬರುವಾಗ ಮೊದಲು ಶ್ರೀರಂಗಪಟ್ಟಣ, ಪಾಂಡವಪುರ, ಅಲ್ಲಿಂದ ಮುಂದೆ ಜಕ್ಕನಹಳ್ಳಿ ಎಂಬ ಸ್ಥಳದಿಂದ ಪಶ್ಚಿಮಕ್ಕೆ ಐದುಮೈಲಿ ದೂರದಲ್ಲಿ ಸುಮಾರು ಭೂಮಟ್ಟಕ್ಕೆ 200 ಅಡಿ ಎತ್ತರವಾದ **ಯಾದವಗಿರಿಬೆಟ್ಟದ** ಮೇಲೆ ಇರುವುದು. ಇಲ್ಲಿ ತಿರುನಾರಾಯಣ ದೇವರು ನಿತ್ಯವಾಸಮಾಡುವುದರಿಂದ ಅವರ ಹೆಸರಲ್ಲಿ **ತಿರುನಾರಾಯಣಪುರವೆಂದೂ, ಬೆಟ್ಟದಮೇಲೆ ಕೋಟೆ** ಕಟ್ಟಿರುವುದರಿಂದ **ಮೇಲುಕೋಟೆ** ಯೆಂದೂ ಕರೆಯಲ್ಪಡು

ತ್ತದೆ. ಈ ಬೆಟ್ಟದ ಮೇಲೆ ಸುಮಾರು 100 ಅಡಿ ಎತ್ತರದಲ್ಲಿ ಶಿಖರವಿರುವುದು. ಅಲ್ಲಿಯು ಸಮಸ್ಥಳದಲ್ಲಿ ಪ್ರಹ್ಲಾದವರದ ಶ್ರೀನರಸಿಂಹಸ್ವಾಮಿ ದೇವಸ್ಥಾನವಿರುವುದು **ಶ್ರೀರಾಮಾನುಜರು** ತಾವು ವಾಸಮಾಡಿದ ಈ ಸ್ಥಳದಲ್ಲಿ ಅವರ ಉತ್ತರಾಧಿಕಾರಿಯಾಗಿ ಏರ್ಪಟ್ಟ ಸನ್ಯಾಸಿ ಪರಂಪರಾ ಮಠಾಧಿಪತಿಗಳ ಪರಂಪರೆಯಾಗಿ **ಶ್ರೀಯತಿರಾಜಮಠ** ಇರುವುದು.

## ಉಪೋದ್ಘಾತವು

ಪ್ರತಿಯೊಬ್ಬ ವ್ಯಕ್ತಿಯೂ, ತನ್ನ ಧರ್ಮ, ಸಂಪ್ರದಾಯ ಮತ್ತು ನಂಬಿಕೆಗಳಿಗೆ ಅನುಸಾರವಾಗಿ ಭಗವಂತನ ಯಾವುದಾದರೊಂದು ರೂಪದ ಸ್ಮರಣೆ, ಧ್ಯಾನ, ದರ್ಶನ ಪೂಜಾದಿಗಳನ್ನು ಮಾಡುವುದಲ್ಲದೆ ಸಾರ್ವಜನಿಕರು ಸಾಮೂಹಿಕವಾಗಿ ಒಂದೆಡೆಸೇರಿ ಭಗವಂತನ ಆರಾಧನೆಗಳಲ್ಲಿ ಭಾಗವಹಿಸಿ ತಮ್ಮ ಐಹಿಕ, ಆಮುಷ್ಮಿಕ ಪ್ರಯೋಜನಗಳನ್ನು ಪಡೆಯುವುದು ನಮ್ಮ ಭಾರತದ ಸಂಸ್ಕೃತಿಯ ಒಂದು ಅಂಗವಾಗಿರುವುದು.

ಕಲಿಯುಗದಲ್ಲಿ ಭಗವಂತನು ಅರ್ಚಾವತಾರಮಾಡಿ ನಾನಾ ಮೂರ್ತಿಗಳರೂಪದಲ್ಲಿ ಭಕ್ತರನ್ನು ಅನುಗ್ರಹಿಸುವನಾದ್ದರಿಂದ ಆ ಮೂರ್ತಿಗಳಿಗೆ ಆಲಯಗಳನ್ನು ನಿರ್ಮಿಸಿ ಮೂರ್ತಿಯನ್ನು ಪ್ರತಿಷ್ಠಿಸಿ ಉತ್ಸವಾದಿಗಳನ್ನು ಏರ್ಪಡಿಸಿ, ಸಾರ್ವಜನಿಕರಿಗೆ ಸೇವಾವಕಾಶದೊರೆಯುವಂತೆ ರಾಜರುಗಳು, ಧರ್ಮದೃಷ್ಟಿಯುಳ್ಳ ಶ್ರೀಮಂತರು ಈ ವಿಧವಾದ ಅವಕಾಶಗಳನ್ನು ಕಲ್ಪಿಸುವುದು ರೂಢಿಯಾಗಿ ಭಾರತದಲ್ಲಿ ಒಂದು ದೇವಾಲಯವಾದರೂ ಇಲ್ಲದ ಊರು ಕಾಣಿಸುವುದಿಲ್ಲ.

ಭಾರತದೇಶದಲ್ಲಿ ನಮ್ಮ ದೇವಾಲಯಗಳು ಪುನರುಜ್ಜೀವನವನ್ನು ಹೊಂದಿ ನಿಂತಿರುವುದಕ್ಕೆ ನಮ್ಮ ಆಮುಷ್ಮಿಕ ಶ್ರದ್ಧೆಯೇ ಕಾರಣವಾಗಿರುವುದು. ಭಾರತೀಯರಾದ ನಮ್ಮ ಸಂಸ್ಕೃತಿಯ ಬಲದಿಂದಲೇ ದೇವಾಲಯಗಳು ನಿರ್ಮಿಸಲ್ಪಟ್ಟು ಆಸೇತು ಹಿಮಾಚಲಪರ್ಯಂತ ಒಂದು ಜನಾಂಗವಾಗಿ ಭಾರತದೇಶ ಎಂಬು ಪ್ರಸಿದ್ಧಿ ಪಡೆದಿರುವುದು. ಹಿಂದೂ ಸಂಸ್ಕೃತಿಗೆ ಆಧಾರಭೂತವಾದ ದೇವಾಲಯಗಳ ನಿರ್ಮಾಣ ವಿಗ್ರಹಪ್ರತಿಷ್ಠೆ, ಧ್ಯಾನಪೂಜಾದಿಗಳು ಇಲ್ಲವಾದಲ್ಲಿ ಸಂಸ್ಕೃತಿಯೂ ಇಲ್ಲ. ತದನುಗುಣವಾಗಿ ಒಂದು ಜನಾಂಗವೂ ಇಲ್ಲ. ನಾವು ಭಾರತೀಯರೆಂದು ಹೇಳಿಕೊಳ್ಳಲು ಸಾಧ್ಯವೂ ಇರುವುದಿಲ್ಲ.

ದೈವಸಂಕಲ್ಪವು ಮನುಷ್ಯಬುದ್ಧಿಗೆ ಗೋಚರವಾಗದು. ಆ ಸಂಕಲ್ಪವು ನೆರವೇರುವುದಕ್ಕೆ ಮನುಷ್ಯರಿಗೆ ಬುದ್ಧಿಯುಂಟಾಗಿ ವೃದ್ಧಿಕ್ಷಯಗಳು ಲೋಕದಲ್ಲಿ ನಡೆಯುತ್ತಲಿವೆ. ವಿವೇಕದಿಂದ ಇದನ್ನು ವಿಶ್ಲೇಷಿಸಿಕೊಂಡು ಸಹಿಸಿಕೊಳ್ಳುವುದ ಮುಖ್ಯವಾದ ಪರಿಹಾರವು. ಅದ್ಯಂತದಲ್ಲಿ ಧರ್ಮವೇ ಜಯಿಸುವುದಾದರೂ ಅಧರ್ಮದ ಪಕ್ಷಕ್ಕೆ ಜಯವೂ ಧರ್ಮದ ಪಕ್ಷಕ್ಕೆ ಅಪಜಯವೂ ಉಂಟಾಗುವುದು ಈ ಕಲಿಯುಗದ ಸ್ವಭಾವವಾಗಿದೆ.

ಈ ಗ್ರಂಥವು ಶ್ರೀನಾರಾಯಣಸ್ವಾಮಿ, ಚೆಲುವನಾರಾಯಣಸ್ವಾಮಿ, ಇವರ ದೇವಸ್ಥಾನಮಾಹಾತ್ಮ್ಯ, ಜೀರ್ಣೋದ್ಧಾರ, ನಿಯಮನಿಷ್ಠೆ, ವೈಭವಚರಿತ್ರೆ, ಶಾಸನಗಳು, ಧರ್ಮಗಳು, ಇವುಗಳನ್ನು ಸಂಗ್ರಹಿಸಿ ಬರೆದಿರುವುದು. ನಮಗೆ ಕೆಲವು ಕಾಗದ ಪತ್ರಗಳು ರಾಜಕೀಯ ಕಾರಣದಿಂದ ದೊರಕದ್ದರಿಂದ ನಮಗೆ ದೊರಕಿದ ಮಟ್ಟಿಗೆ ವಿಷಯಗಳನ್ನು ಸಂಗ್ರಹಿಸಿ ಬರೆದಿರುವುದು.

108 ದಿವ್ಯ ದೇಶಗಳ ವೈಭವ ವಿಷಯದಲ್ಲಿ ಪ್ರಧಾನವಾಗಿ ಶ್ರೀರಂಗ, ತಿರುಪತಿ, ತಿರುನಾರಾಯಣಪುರ, ಕಾಂಚೀಪುರ ಅಲ್ಲದೆ ಪ್ರಸಿದ್ಧವಾದ ಇತರ ದೇವಸ್ಥಾನಗಳು ಮತ್ತು ಚರಿತ್ರಾರ್ಹವಾದ ಸ್ಥಳಗಳ ವಿಷಯಗಳನ್ನು ಬರೆದು ಪ್ರಕಾಶಪಡಿಸಬೇಕೆಂಬ ಅಭಿಪ್ರಾಯವಿದೆ. ಸಹೃದಯ ವಾಚಕರ ಸಹಾಯದಿಂದ ಆ ಗ್ರಂಥಗಳೂ ಬೆಳಕಿಗೆ ಬರುವುವೆಂದು ಆಶಿಸುತ್ತೇವೆ. ಈ ಮೇಲುಕೋಟೆ ಪಕ್ಕದಲ್ಲಿರುವ ತೊಂಡನೂರು ದೇವಸ್ಥಾನಗಳ ಚರಿತ್ರೆಯ ವಿಚಾರವನ್ನೂ ಪ್ರತ್ಯೇಕವಾಗಿ ಬರೆದಿರುವುದು.

## ಕ್ಷೇತ್ರನಾಮಕರಣ

ಕೃತಯುಗದಲ್ಲಿ ಸನತ್ಕುಮಾರರು ಸತ್ಯಲೋಕದಿಂದ ಆನಂದಮಯದಿವ್ಯ ವಿಮಾನದೊಂದಿಗೆ ನಾರಾಯಣಮೂರ್ತಿಯನ್ನು ಬಿಜಯಮಾಡಿಸಿಕೊಂಡು ಬಂದು ಈ ಬೆಟ್ಟದಲ್ಲಿ ಪ್ರತಿಷ್ಠಿಸಿದುದರಿಂದ **ನಾರಾಯಣಾದ್ರಿ**ಯೆಂದೂ, ತ್ರೇತಾಯುಗದಲ್ಲಿ ದತ್ತಾತ್ರೇಯರು ನಾಲ್ಕು ವೇದಪುರುಷರನ್ನು ಶಿಷ್ಯರನ್ನಾಗಿಮಾಡಿಕೊಂಡು ವೇದಪುಷ್ಕರಣೀತೀರದಲ್ಲಿ ಸದಾ ವೇದಾಧ್ಯಯನ ನಿರತರಾದ್ದರಿಂದ **ವೇದಾದ್ರಿ**ಯೆಂದೂ, ದ್ವಾಪರಯುಗದಲ್ಲಿ ಯಾದವ ವಂಶದವರಾದ ಬಲರಾಮಕೃಷ್ಣರಿಂದ ಆರಾಧಿಸಲ್ಪಟ್ಟದ್ದರಿಂದ **ಯಾದವಾದ್ರಿ**ಯೆಂದೂ ಕಲಿಯುಗದಲ್ಲಿ ಶ್ರೀರಾಮಾನುಜರು ದಯಮಾಡಿಸಿ ಜೀರ್ಣೋದ್ಧಾರಮಾಡಿ ಅಭಿಮಾನಿಸಿದುದರಿಂದ **ಯತಿಶೈಲ**ವೆಂದೂ ಪ್ರಸಿದ್ಧವು.

## ಮೂಲವಿಗ್ರಹ ಶ್ರೀನಾರಾಯಣಮೂರ್ತಿ

ಶ್ರೀ ಮಹಾವಿಷ್ಣುವಿನ ಆದೇಶದಂತೆ ಚತುರ್ಮುಖಬ್ರಹ್ಮನು ತಾನು ಆರಾಧಿಸುತ್ತಿದ್ದ ನಾರಾಯಣವಿಗ್ರಹವನ್ನು ಸನತ್ಕುಮಾರನಿಗೆ ಕೊಟ್ಟು ಲೋಕಕ್ಷೇಮಾರ್ಥವಾಗಿ ಭೂಲೋಕದಲ್ಲಿ ಪ್ರತಿಷ್ಠಿಸಿ ಆರಾಧಿಸುವಂತೆ ಹೇಳಿದನು. ಸನತ್ಕುಮಾರರು ಈ ನಾರಾಯಣವಿಗ್ರಹವನ್ನು ಈ ಕ್ಷೇತ್ರ ಬೆಟ್ಟದಲ್ಲಿ ಮೀನಮಾಸ ಹಸ್ತನಕ್ಷತ್ರದಲ್ಲಿ ಪ್ರತಿಷ್ಠಿಸಿದರು. ಅಂದಿನಿಂದ ಈ ಬೆಟ್ಟಕ್ಕೆ **ನಾರಾಯಣಾದ್ರಿ** ಎಂದು ಪ್ರಸಿದ್ಧವಾಯಿತು.

# ಉತ್ಸವಮೂರ್ತಿ ವಿಚಾರ

ಶ್ರೀರಾಮನು ರಾವಣಾದಿರಾಕ್ಷಸರನ್ನೆಲ್ಲಾ ಜಯಿಸಿ ಸುಗ್ರೀವಾಂಗದ ವಿಭೀಷಣಾದಿ ಭಕ್ತರೊಡನೆ ಅಯೋಧ್ಯಾಪಟ್ಟಣಕ್ಕೆ ಬಂದು ಪಟ್ಟಾಭಿಷೇಕವಾದನಂತರ ಬಂದಿದ್ದ ರಾಜರಿಗೆಲ್ಲಾ ಬಹುಮಾನವನ್ನು ಕೊಡುವ ಸಮಯದಲ್ಲಿ ಅತ್ಯಂತ ಪ್ರೀತಿಯುಕ್ತರಾದ ವಿಭೀಷಣನಿಗೆ ಇಕ್ಷ್ವಾಕುಕುಲಕ್ಕೆ ಮಹಾರಾಧಿತರಾದ **ಶ್ರೀರಂಗನಾಥ** ದಿವ್ಯಮೂರ್ತಿಯನ್ನು ಬಿಜಯಮಾಡಿಸಿಕೊಟ್ಟರು—ಇದರಿಂದ ಶ್ರೀರಾಮನಿಗೆ ಪೂಜಿಸಲು ಅರ್ಚಾವಿಗ್ರಹವಿಲ್ಲದಿರುವುದನ್ನು ಕಂಡು ಬ್ರಹ್ಮನು ಈ **ಚೆಲ್ವಪಿಳ್ಳೆ** ವಿಗ್ರಹವನ್ನು ಶ್ರೀರಾಮನಿಗೆ ಕೊಟ್ಟರು.

ಶ್ರೀರಾಮನು ತಾನು ಇರುವವರೆಗೂ ಈ ವಿಗ್ರಹವನ್ನು ಆರಾಧಿಸುತ್ತಿದ್ದು, ತಾನು ಸರಯೂನದಿ ಮೂಲಕ ಪ್ರಯಾಣಮಾಡುವಾಗ ಪರಮ ಭಕ್ತನಾದ ಹನುಮಂತನಿಗೆ ಕೊಟ್ಟನು. ಹನುಮಂತನು ಶ್ರೀರಾಮನ ಮಗನಾದ ಕುಶಮಹಾರಾಜನಿಗೆ ಕೊಟ್ಟನು. ಕುಶಮಹಾರಾಜನು ತನ್ನ ಮಗಳಾದ ಕನಕಮಾಲಿನಿಯನ್ನು ಯದುವಂಶೋತ್ಪನ್ನನಾದ ಯದುಶೇಖರನೊಂದಿಗೆ ವಿವಾಹಮಾಡಿ ಮಗಳಿಗೆ ಸ್ತ್ರೀಧನ ಬಳುವಳಿಯೊಂದಿಗೆ ಉಭಯಕುಲಾರಾಧ್ಯ ಪೂಜಿತವಾದ ಈ ವಿಗ್ರಹವನ್ನು ಕೊಟ್ಟನು. ಈ ಪ್ರಕಾರ ರಾಮಪ್ರಿಯನಾದ ವಿಗ್ರಹವು ಯದುವಂಶಕ್ಕೆ ಬಂದು ಕ್ರಮವಾಗಿ ಶ್ರೀಕೃಷ್ಣನಿಂದಲೂ ಆರಾಧಿಸಲ್ಪಟ್ಟಿತು.

## ಮೂಲಮೂರ್ತಿಯೊಂದಿಗೆ ಉತ್ಸವ ಮೂರ್ತಿಯನ್ನು ಪ್ರತಿಷ್ಠಿಸಿದುದು

ಭಾರತ ಯುದ್ಧಕ್ಕೆ ಸ್ವಲ್ಪ ಪೂರ್ವಭಾವಿಯಾಗಿ ರಾಜತಂತ್ರ ಕಾರಣದಿಂದ ಶ್ರೀಕೃಷ್ಣನು ತನ್ನ ಅಣ್ಣನಾದ ಬಲರಾಮನನ್ನು ತೀರ್ಥಯಾತ್ರೆ ಮಾಡಿಬರಬೇಕೆಂದು ತಿಳಿಸಿದನು ಬಲರಾಮನು ತೀರ್ಥಯಾತ್ರೆ ಮಾಡುತ್ತಾ ಈ ನಾರಾಯಣಾದ್ರಿಗೆ ಬಂದು ಶ್ಲಾಘ್ಯವಾದ ಕಲ್ಯಾಣೀತೀರ್ಥದಲ್ಲಿ ಸ್ನಾನಮಾಡಿ ಈ ನಾರಾಯಣಮೂರ್ತಿಯನ್ನು ಅಪಾರ [illegible] ಅನಂತರ ದ್ವಾರಕಾ ಪಟ್ಟಣಕ್ಕೆ ಬಂದನು. ತಮ್ಮ ಮನೆಯಲ್ಲಿ ಆರಾಧನೆಯಲ್ಲಿರುವ ಶ್ರೀರಾಮಪ್ರಿಯ ವಿಗ್ರಹಕ್ಕೂ ತಾನು ಸಂದರ್ಶಿಸಿದ ನಾರಾಯಣ ವಿಗ್ರಹಕ್ಕೂ ಸೌಂದರ್ಯ ಸಾದೃಶ್ಯಗಳಲ್ಲಿ ಯಾವ ಭೇದವೂ ಇಲ್ಲದೆ ಇರುವುದನ್ನು ಶ್ರೀಕೃಷ್ಣನಿಗೆ ತಿಳಿಸಿದನು. ಇದನ್ನು ಕೇಳಿ ಶ್ರೀಕೃಷ್ಣನಾದಿಯಾಗಿ ಎಲ್ಲರೂ ಹೊರಟು ಅವಿರುದ್ಧ [illegible] ಶ್ರೀರಾಮಪ್ರಿಯನನ್ನು ಮಾಘಮಾಸ ಚಿತ್ತಾ ನಕ್ಷತ್ರದಲ್ಲಿ, ಶ್ರೀನಾರಾಯಣಸ್ವಾಮಿಯೊಂದಿಗೆ ಕ್ರಿ.ಪೂ. 3139 ರಲ್ಲಿ ಸಂಪರ್ಕಿಸಲು ಯಾವಭೇದವೂ ಇಲ್ಲದಿರುವುದನ್ನು ಕಂಡು ಸಂತೋಷಿಸಿದರು. ಅಂದಿನಿಂದ [illegible] ವಂಶೋತ್ಪನ್ನರಾದ ರಾಜರು ಈ ಕ್ಷೇತ್ರಕ್ಕೆ ಬಂದು ಶ್ರೀನಾರಾಯಣಮೂರ್ತಿ

ಯನ್ನು ಸಂಘಟಿಸಿ ಕೈಂಕರ್ಯಾದಿಗಳನ್ನು ನಡೆಸುತ್ತಬಂದರು. ಯಾದವರ ಸಂಬಂಧ ವಿನದಿಂದ ಈ ಕ್ಷೇತ್ರಕ್ಕೆ ಯಾದವಾದ್ರಿ ಎಂದು ಹೆಸರು ಪ್ರಸಿದ್ಧವಾಯಿತು.

## ಶ್ರೀರಾಮಾನುಜಾಚಾರ್ಯರಿಗೆ ಯಾದವಗಿರಿ ತಿರುನಾರಾಯಣಪುರವು ಉಳಿದುಹೋಗಿದ್ದ ವಿಷಯವು ತಿಳಿದಿತ್ತೇ ?

ಶ್ರೀರಾಮಾನುಜಾಚಾರ್ಯರು ಸಕಲಶಾಸ್ತ್ರವಿದ್ವಾಂಸರಾಗಿದ್ದುದು ಸರಿಯಷ್ಟೆ. ಅವರು ಧರ್ಮಶಾಸ್ತ್ರ, ಪುರಾಣ, ಆಗಮಶಾಸ್ತ್ರ ಇವುಗಳನ್ನು ನೋಡಿ ಓದಿದವರಾಗಿದ್ದರು. ತಾವು ರಚಿಸಿದ ಶ್ರೀ ಭಾಷ್ಯಾದಿ ಗ್ರಂಥಗಳಲ್ಲಿ ನಾರದೀಯಪುರಾಣ, ಪಾಂಚರಾತ್ರ ಸಂಹಿತೆಗಳನ್ನು ಉದಾಹರಿಸಿರುವರು. ಈ ಗ್ರಂಥಗಳಲ್ಲಿ ಯಾದವಗಿರಿ ಮಾಹಾತ್ಮ್ಯೆಯು ವರ್ಣಿತವಾಗಿರುವುದು. ಈ ಗ್ರಂಥವನ್ನು ಓದಿದ ಅವರಿಗೆ ಯಾದವಗಿರಿಯು ವಿಚಾರವಾಗಿ ವಿಷಯವು ತಿಳಿದೇ ಇರಬೇಕು.

ಅಲ್ಲದೆ ನಮ್ಮಾಳ್ವಾರವರು ಹಾಡಿದ 1000 ಪದ್ಯಗಳಲ್ಲಿ **ಒರುನಾಯಕಂ** ಎನ್ನುವ ಹತ್ತು ಪದ್ಯಗಳು (ತಿ.ವಾ. 3–3) ಓದಿ ತಿಳಿಯಬಹುದಾಗಿರುವರು. ಆದಿವ್ಯದೇಶ ಯಾವುದು ? ದೇವರು ಯಾರು ? ಎನ್ನುವ ವಿಷಯವು ಯಾರಿಗೂ ತಿಳಿಯದಿರಲು ಕಾರಣವೇನೆಂದರೆ ಆ ಪ್ರಬಂಧವು ಪ್ರಚಾರಕ್ಕೆ ಬರಲು ಆರಂಭವಾದಕಾಲ ಸುಮಾರು. ಸಂಪೂರ್ಣವಾಗಿ ಪ್ರಚಾರವಾಗುವುದರೊಳಗೆ ತಿರುನಾರಾಯಣಪುರವು ನಾಶವಾಗುವುದರಲ್ಲಿತ್ತು. ಮೇಲುಕೋಟೆ ಸ್ಥಳ ಮತ್ತು ಹೆಸರು ಹೇಳುವವರೂ ಇಲ್ಲ. ಪಾಟ್ಟಿಂದ ಸ್ತೋತ್ರಮಾಡಿದ ದೇವರೂ ಸಹ ಕಾಣಿಸಲಿಲ್ಲ. ಶ್ರೀರಾಮಾನುಜರು AD 1099ರಲ್ಲಿ ಈ ಕರ್ನಾಟಕಕ್ಕೆ ಬಂದಮೇಲೆ ಜನಗಳಿಗಿದ್ದ ಸಂದೇಹವನ್ನು ಪರಿಹರಿಸಿದರು. ಅದಕ್ಕೆ ಗುರುತಾಗಿ ಮೇಲುಕೋಟೆಯಲ್ಲಿ ಪ್ರಬಂಧವನ್ನು ಆರಂಭ ಮಾಡುವ ಮೊದಲು **ಕಣ್ಣಿನುಣ್ ಶಿರುತ್ತಾಂಬು** ಎಂಬ ನಮ್ಮಾಳ್ವಾರ ಬಿರುದು ಪ್ರಬಂಧವನ್ನು ಅನುಸಂಧಿಸಿದ ಮೇಲೆಯೇ ಮುಂದಿನ ಪ್ರಬಂಧಗಳನ್ನು ಅನುಸಂಧಿಸಿ ಬರುವಂತೆ ಹೇಳಿದಕ್ರಮವು ಅದ್ಯಾವಧಿ ಆಚರಣೆಯಲ್ಲಿರುವುದು-ಕಂಡುಬರುವುದು.

## ಶ್ರೀರಾಮಾನುಜಾಚಾರ್ಯರ ಸಾನ್ನಿಧ್ಯ

ಶ್ರೀರಾಮಾನುಜಾಚಾರ್ಯರು ಅರಣ್ಯವಾಗಿದ್ದ ಯಾದವಗಿರಿಯನ್ನು ದೇವಸ್ಥಾನ, ಊರು, ಮನೆ, ಕೊಳ, ಕೋಟೆ ಇತ್ಯಾದಿಯಾಗಿ ಜೀರ್ಣೋದ್ಧಾರಮಾಡಿದರು. ಆಗ ಬಾಲುಕಟ್ಟ್ಯವಾಗ ದೇವಸ್ಥಾನದ ಕೈಂಕರ್ಯಪರರು, ರಕ್ಷಣೆ, ಅಧಿಕಾರ ಆಶ್ರಿತ ಜನಗಳು ಇತ್ಯಾದಿಯಾಗಿ 530 ಮನೆಗಳಿಂದ ಜೀರ್ಣೋದ್ಧಾರ ಮಾಡಿದುದಾಗಿ ತಿಳಿದುಬರುತ್ತದೆ.

ಶ್ರೀರಾಮಾನುಜರು ಶಕ ೧೦೨೦ (1098)ರಲ್ಲಿ ಈ ದೇಶಕ್ಕೆ ಬಂದು ಅವರು ಮಾಡಿದ ಜೀರ್ಣೋದ್ಧಾರ ಸಿದ್ಧಾಂತ ಸ್ಥಾಪನೆ ಇವುಗಳ ಜ್ಞಾಪಕಾರ್ಥವಾಗಿ ಅನೂಚಾನವಾದ ಉತ್ಸವಾದಿ ದಿನಾಚರಣೆಗಳು ಅನೇಕವಿಧವಲ್ಲಿ ಈಗಲೂ ನಡೆದು ಬರುತ್ತಿರುವುದನ್ನು ಕಾಣಬಹುದು.

ಯಾದವಗಿರಿ ಜೀರ್ಣೋದ್ಧಾರ ಕಾರ್ಯವು ನಡೆಯುತ್ತಿದ್ದಾಗ ಶ್ರೀರಾಮಾನುಜರು ತೊಂಡನೂರಿನಲ್ಲಿ ನೆಲೆಸಿದ್ದರು ಆ ಕಾಲದಲ್ಲಿ ಅವರ **ರಾಮಾನುಜಕೂಟಕ್ಕೆ** (ರಾಮಾನುಜಮಠ) ತೊಂಡನೂರಿನ ಅರ್ಚಕ ಮಹಾಜನಗಳು ವೃತ್ತಿಮಾನ್ಯ ಕೊಟ್ಟಿರುವುದು ತಿಳಿದು ಬರುವುದು —ಶಾಸನ.

ಶ್ರೀರಾಮಾನುಜರು ಚೋಳನ ಬಾಧೆಯಿಂದ ಈ ದೇಶಕ್ಕೆ ಬಂದರು. ಆಗ ಅಜ್ಞಾತವಾಸ ಮಾಡಬೇಕಾಗಿತ್ತು. ಹಾಗಿದ್ದರೂ ಈ ದೇಶಾಧಿಪತಿಯಾದ ವಿಷ್ಣುವರ್ಧನ ರಾಜನು ಇವರನ್ನು ಕಾಪಾಡಿದುದಲ್ಲದೆ ಅವರಿಗೆ ಶಿಷ್ಯನಾಗಿ ಶ್ರೀರಾಮಾನುಜರ ಮೂಲಕ ದರ್ಶನ ಸ್ಥಾಪನವನ್ನೂ ಅವರಿಂದ ದೇಶ ಕ್ಷೇಮವಾಗಿ ಅನೇಕ ದೇವಸ್ಥಾನಗಳ ಜೀರ್ಣೋದ್ಧಾರ, ಗುಡಿಗೋಪುರ ಮಹತ್ಕಾರ್ಯಗಳನ್ನೂ ಮಾಡಿಸಿ ಸುಖವಾಗಿ ಶ್ರೀರಂಗಕ್ಷೇತ್ರಕ್ಕೆ ಹಿಂತಿರುಗಿಸಿ ಕಳುಹಿಸಿ ಕೊಟ್ಟನು.

ಅಲ್ಲದೆ ಶ್ರೀರಾಮಾನುಜರ ಶಿಷ್ಯಪ್ರಶಿಷ್ಯರಾದ, ರಾಮಾನುಜ, ಕುಲಶೇಖರ ದಾಸರು, ತಿರುವರಂಗಪ್ಪೆರುಮಾಳರೆಯರು, ಉತ್ತಮನಂಬಿ, ಅಂಡಾಳ್, ತಿರುವಿನಂ ವಿಳಕ್ಕು ದಾಸರು, ತಿರುನಕ್ಷ್ಯಯೂರು ದಾಸರು, ತಿರುವರಂಗದಾಸರು, ಇತ್ಯಾದಿಗಳು ಅಭಿಮಾನಿಸಿ ವೃತ್ತಿಭೂಮಿಯನ್ನು ಸಮರ್ಪಿಸಿರುವುದು ಶಾಸನಗಳಲ್ಲಿ ಕಂಡುಬರುವುದು.

ಶ್ರೀರಾಮಾನುಜರು ಶ್ರೀರಂಗಕ್ಕೆ ಹಿಂತಿರುಗುವ ಕಾಲದಲ್ಲಿ ಎಂದರೆ AD 1033 ರಲ್ಲಿ ಇಲ್ಲಿಯವರು ಕೇಳಿಕೊಂಡಂತೆ ಅವರು ಸಾಕ್ಷಾತ್ತಾಗಿ ತಾವೇ ತಮ್ಮ ವಿಗ್ರಹವನ್ನು ಮಾಡಿಸಿ ಪ್ರತಿಷ್ಠಿಸಿದ ವಿಗ್ರಹವನ್ನು ಅದ್ಯಾವಧಿ ನಾವು ಪೂಜಿಸಿ ಮರ್ಯಾದಿಸಿ ಬರುತ್ತೇವೆ.

ಶ್ರೀರಾಮಾನುಜರು ಪರಮಪದಿಸುವುದಕ್ಕೆ ಮುಂಚೆ AD 1137ರಲ್ಲಿ ಶ್ರೀಪೆರಂಬದೂರಿನಲ್ಲೂ, ಶ್ರೀರಂಗದಲ್ಲಿ AD 1137ರಲ್ಲಿ ಕನ್ಯಾದ್ವೈ ಆಂಡಾನ್ ಎಂಬುವರಿಂದ ಪ್ರತಿಷ್ಠೆಯಾಯಿತು.

ಕಾಂಚೀಪುರದಲ್ಲಿ 1191ರಲ್ಲಿ ನೆಯೂರಿಗೆ ಸೇರಿದ ಚೋಳಮಂಡಲಾಧಿಪತಿ **ಇಳೈಯಾಳ್ವಾರ್** ಎಂಬುವರು ಪ್ರತಿಷ್ಠಿಸಿದರು. ಅನಂತರ ಕಾಲಕ್ರಮದಲ್ಲಿ ಎಲ್ಲಾ ದೇವಸ್ಥಾನಗಳಲ್ಲೂ ಶ್ರೀರಾಮಾನುಜರ ವಿಗ್ರಹವನ್ನು ಪ್ರತಿಷ್ಠಿಸುತ್ತಾ ಬಂದರು.

64ನೇ ಶಾಸನದಲ್ಲಿ ಶ್ರೀರಾಮಾನುಜಾಚಾರ್ಯರ ಸಾನ್ನಿಧ್ಯವು ತೊಂಡನೂರಿನಲ್ಲಿ ಕೆಲವುಕಾಲ ಇದ್ದಿತೆಂದು ಈ ಕೆಳಗಿನ ಶ್ಲೋಕವು ಸ್ಪಷ್ಟವಾಗಿ ತಿಳಿಸುವುದು.

ತೇಷ್ವಾದ್ಯಾ ಯಾದವಪುರೀ ತೊಂಡನೂರಿತಿ ಯಾ ಜನೈಃ ।
ಸದೇಶೋ ಯಾದವಗಿರೇರ್ದಕ್ಷಿಣೇತ್ಯರ್ಧಯೋಜನೇ ।
ಕಾವೇರ್ಯಾಃ ಶ್ವೇತವೇಭಾಗೇ ನೀಲಾದ್ರೇಃ ಪಶ್ಚಿಮೋತ್ತರೇ ।
ರಾಮಾನುಜಾಂಘ್ರಿ ಶ್ರೀತೀರ್ಥ ತಟಾಕಾದ್ಯೇ ಸ್ತು ಪೂರ್ವತಃ ।
ಉಪತ್ಯಕಾಯಾಂ ಪುಣ್ಯಾಯಾಂ ಲಕ್ಷ್ಮೀನಾರಾಯಣಾಶ್ರಮಃ ।
ರಮ್ಯೋಯೋಽಯಂ ಪ್ರದೇಶಾಖ್ಯ ಸರ್ವಕಾಲ ಸುಖಪ್ರದಃ ।
ತತ್ರಸ್ಥಾ ಯಾದವಪುರೀ ವಿಷ್ಣುವರ್ಧನ ಪಾಲಿತಾ ।
ಶ್ರೀರಾಮಾನುಜ ಪಾದಾಬ್ಜ ಪರಾಗೈಃ ಪಾವನೀಕೃತಾ ।

ಇತ್ಯಾದಿ.

ಶ್ರೀರಾಮಾನುಜರು ಕಾರಣಾಂತರವನ್ನು ಹೊಂದಿ ದೆಹಲಿ ಪಟ್ಟಣಕ್ಕೆ **ಹೋಗಿದ್ದು** ದೆಹಲಿಯಿಂದ ಬಂದಕಾಲ ಶಕ 1033 ವಿಕೃತಿ ಸಂ. AD 1110 ಆಶ್ವಯುಜ ಸಪ್ತಮಿ. ಈ ದಿನದ ಜ್ಞಾಪಕಾರ್ಥವಾಗಿ ಅನೂಚಾನವಾಗಿ **ದೆಹಲಿ ಉತ್ಸವ** ಎಂಬುದಾಗಿ ನಡೆಸುತ್ತಾರೆ. ಇದರ ಪ್ರಕೃತ ಈ ಉತ್ಸವವನ್ನು ಕುಂಭಮಾಸ ಜ್ಯೇಷ್ಠಾ ನಕ್ಷತ್ರದಲ್ಲಿ ನಡೆಸುತ್ತಾರೆ.

ಈ ಉತ್ಸವವಂತೆಯೇ ಬಲರಾಮಕೃಷ್ಣರು ಮೂಲಮೂರ್ತಿಯೊಂದಿಗೆ ಉತ್ಸವಮೂರ್ತಿಯನ್ನು ಪ್ರತಿಷ್ಠಿಸಿದಕಾಲ ಮೀನಮಾಸ (ಮಾಘ) ಚಿತ್ತಾ ನಕ್ಷತ್ರ, ಆ ದಿನದ ಜ್ಞಾಪಕಾರ್ಥವಾಗಿ **ತೇತಿರ್ನಸೇವೆ** ಎಂಬ ಉತ್ಸವವನ್ನೂ, ರಾಮಚಂದ್ರನ ಪಟ್ಟಾಭಿಷೇಕದಿನ ಮೊದಲು ಏರ್ಪಡಿಸಿದ ಪುಷ್ಯನಕ್ಷತ್ರದಲ್ಲಿ **ವಯಿರಮುಡಿ** ಉತ್ಸವವನ್ನು ಏರ್ಪಡಿಸಿರುವುದು ಅನೂಚಾನವಾಗಿ ನಡೆಸಿಕೊಂಡು ಬರುವುದು ಸಾಕ್ಷಿ **ರೂಪವಾಗಿರುವುದು.**

ಅಲ್ಲದೆ—ಪಿಶಾಚಾವಿಷ್ಟೆಯಾದ ವಿಷ್ಣುವರ್ಧನ ಮಹಾರಾಜನ ಸಂಸಾರಕ್ಕೆ ಸೇರಿದ ಮಗಳಾದ ರಾಜಕುಮಾರಿಯನ್ನು ಶ್ರೀರಾಮಾನುಜರು ಮಂತ್ರಪುನಶ್ಚರಣೆಯಿಂದ

ಸ್ವಸ್ಥರನ್ನಾಗಿ ಮಾಡಿದರು. ಅಲ್ಲದೆ ತೊಂಡನೂರಿನ ನರಸಿಂಹಸ್ವಾಮಿ ದೇವಸ್ಥಾನವಿರುವ ಸ್ಥಳದಲ್ಲಿ ವಿಶಿಷ್ಟಾದ್ವೈತಸಿದ್ಧಾಂತಸ್ಥಾಪನೆಮಾಡಿದುದರ ಫಲವಾಗಿಯೂ ರಾಮಾನುಜರಿಗೆ ಈ ಕೆಳಗಿನ ವಿಶೇಷ ಬಿರುದುಗಳಿಂದ ಕೂಡಿದ ಶಾಸನಗಳು ಅನೇಕವಾಗಿ ದೊರಕುವುವು.

**ಮಾಯಾವಾದಿ ಕೋಲಾಹಲ, ಮಂತ್ರವಾದಿ ಭಯಂಕರ, ಶರಣಾಗತ ವಜ್ರಪಂಜರ, ಉಭಯವೇದಾಂತಾಚಾರ್ಯ, ವೇದಮಾರ್ಗಪ್ರತಿಷ್ಠಾಪನಾಚಾರ್ಯ ಅಭಂಗಗರುಡ ಷಡ್ದರ್ಶನ ಸ್ಥಾಪನಾಚಾರ್ಯ, ನಾರಾಯಣಪಾದ ಪದ್ಮಾರಾಧಕ.**

ಇತ್ಯಾದಿ ತಿಪಟೂರು ೫೩

ಈ ಬಿರುದುಗಳು ಅನೇಕ ಶಾಸನಗಳಲ್ಲಿವೆ. ಅಲ್ಲದೆ ಬ್ರಿಟಿಷ್ ಮ್ಯೂಸಿಯಂನಲ್ಲಿ ರುವ ಸದಾಶಿವ ಮಹಾರಾಜರು ಬರೆದ ತಾಮ್ರದ ಶಾಸನದಲ್ಲಿ AD 1556 ಶ್ರೀಪೆರಂಬೂದೂರು ರಾಮಾನುಜರ ಮೂರ್ತಿಗೆ ಕೆಲವು ಧರ್ಮಗಳಲ್ಲಿ ಮಾಡಿರುವುದು, ಕಂಡುಬರುವುದು ಈ ಶ್ಲೋಕವು ಮೇಲಿನ ಶ್ಲೋಕದೊಂದಿಗೆ ಹೋಲಿಕೆ ಬರುವುದು.

ಪ್ರಮೇಯಶೇಷ ವೇದಮಾರ್ಗಪ್ರತಿಷ್ಠಾಪನಾಚಾರ್ಯ ವರ್ಯತಾಂ
ತಪ್ತ ಗ್ರೈವ ಶಿಖಾಸಾರ ದ್ವಾಮಿನಾಗಮ ವೇದಿನೇ ।
ಷಡ್ದರ್ಶನಾರ್ಥ ಸಿದ್ಧಾಂತ ಸ್ಥಾಪನಾಚಾರ್ಯ ಮೌಳಯೇ ।
ಮಾಯಾವಾದ ಮಹೋಗರ್ವ ಭೇದಿನೇ ಜಿತವಾದಿನೇ ।
ಮಂತ್ರವಾದ ಮಹೀಷೇಂದ್ರ ಸ್ಕಂದಾದಂತಾಪಹಾರಿಣೇ ।
ಅಭಂಗಗರುಡಾಖ್ಯಾಯ ಶರಣಾಗತ ಪಾಲಿನೇ ।
ನಾರಾಯಣಪದದ್ವಂದ್ವ ಪರಾಯಣ ನಿಜಾತ್ಮನೇ ।

ಇತ್ಯಾದಿ

## ರಾಜವಂಶ-ವಿಷ್ಣುವರ್ಧನನ ಪೂರ್ವಿಕರು

ಯದುವಂಶ ತಿಲಕನಾದ ಶ್ರೀಕೃಷ್ಣ ಪರಮಾತ್ಮನ ವಂಶದವರಾದ ಯಾದವರಲ್ಲಿ ಒಂದು ಪಂಗಡದವರು ಅನೇಕ ಕಾಲಗಳ ಮೊದಲೇ ಈ ದೇಶಕ್ಕೆ ಬಂದು ನೆಲೆಸಿದ್ದರು. ಕಾಲಕ್ರಮದಲ್ಲಿ ಯಾದವ ವಂಶಸ್ಥ ರಾಜ **ಸಳ** ಎಂಬರಾಜನಿಗೆ ಅವನ ಪರಾಕ್ರಮದಿಂದ **ಹೊಯ್ಸಳ** ಎಂಬ ಅಡ್ಡ ಹೆಸರು ಪ್ರಸಿದ್ಧವಾಗಿ ಬಂದಿತು. ಇವನ ಮಗ ವಿನಯಾದಿತ್ಯನೂ (ಪಶ್ಚಿಮ ಕೆಲಯುಚ್ಚರಿ) ಅವನ ಮಗ ಎರೆಯಂಗನೂ ಕೆಲವುಕಾಲ ರಾಜ್ಯವಾಳಿದರು. ಆ ಸಮಯದಲ್ಲಿ ತೊಂಡನೂರನ್ನು AD 1000ಕ್ಕೆ ಹಿಂದೆಯೇ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು.

ಒಂದು ಕಾಲದಲ್ಲಿ ಯಾದವಗಿರಿ ತಿರುನಾರಾಯಣಪುರವು ಅಭಿವೃದ್ಧಿ ಸ್ಥಿತಿಯಲ್ಲಿದ್ದು ಕ್ರಿ.ಶ. 8–9ನೇ ಶತಮಾನದ ಮಧ್ಯ ಭಾಗದ ಸ್ವಾಮಿಯವರಿಂದಲೋ ಅಥವಾ ರಾಜರುಗಳಿಂದಲೋ ಧ್ವಂಸವಾಗಿ ಹಾಳಾದ ಮೇಲೆ ಅದರ ಜ್ಞಾಪಕಾರ್ಥವಾಗಿ ಅದಕ್ಕೆ ಸಮೀಪದ ಸ್ಥಳದಲ್ಲೇ ಊರು ಕಟ್ಟಿ ಅದಕ್ಕೆ **ಯಾದವನಾರಾಯಣ ಪುರವೆಂದೂ**, ವೇದವಿದ್ಯಾಶಾಸ್ತ್ರ ಪಂಡಿತರುಗಳಿಂದ ಕೂಡಿದ್ದರಿಂದ **ಚತುರ್ವೇದಿ ಮಂಗಲವೆಂದೂ** ಕರೆಯಲ್ಪಟ್ಟಿತು. (ಈಗಿನ ತೊಂಡನೂರು) ಅದಕ್ಕೆ ಸಾಕ್ಷಿಯಾಗಿ ಮೇಲೆ ತಿಳಿಸಿದ ವಿನಯಾದಿತ್ಯ ಅವನ ಮಗ ಎರೆಯಂಗನೂ ಕ್ರಿ.ಶ. 1000 ಕ್ಕೆ ಹಿಂದೆಯೇ ಈಗಿನ ತೊಂಡನೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು.

ಈ ಎರೆಯಂಗನಿಗೆ **ಬಲ್ಲಾಳ, ಬಿಟ್ಟಿದೇವ** ಮತ್ತು **ಉದಯಾದಿತ್ಯ**ರೆಂಬ ಮೂವರು ಮಕ್ಕಳು. ಇವರಲ್ಲಿ ಹಿರಿಯವನಾದ ಬಲ್ಲಾಳನು 1101 ರಿಂದ 1104 ರ ವರೆಗೆ ರಾಜ್ಯವಾಳಿದನು. ಕೊನೆಯ ಮಗನಾದ ಉದಯಾದಿತ್ಯನು ರಾಜ್ಯಭಾರಕ್ಕೆ ಸಹಾಯಕನಾಗಿದ್ದು ಇವರ ಕಾಲದಲ್ಲೇ ಅಂದರೆ 1123 ರಲ್ಲಿ ಕಾಲವಾದನು. ಮೂರು ಜನ ಅಣ್ಣತಮ್ಮಂದಿರೂ ಅನ್ಯೋನ್ಯವಾಗಿದ್ದು ಪರಾಕ್ರಮ ಶಾಲಿಗಳಾಗಿದ್ದರು. ವಿಷ್ಣುವರ್ಧನನು ಶಕ್ತನೂ, ಮೇಧಾವಿಯೂ ಆಗಿ ರಾಜಕಾರಣ ಪಟುವಾಗಿದ್ದನು. ಇವನಿಗೆ ಬಿಟ್ಟಿದೇವ, ವಿಠಲದೇವ, ವಿಷ್ಣುನಾಥ, ವಿಷ್ಣುವರ್ಧನ ಎಂಬ ಹೆಸರುಗಳಿದ್ದುವು. ಬಲ್ಲಾಳನು ರಾಜ್ಯಭಾರ ಮಾಡುತ್ತಿದ್ದರೂ ಪ್ರತಾಪಶಾಲಿಯಾದ ವಿಷ್ಣುವರ್ಧನನದೇ ಆಡಳಿತವಾಗಿದ್ದಿತು. ಬಲ್ಲಾಳನು, ಮರಿಯಾನೆ ದಣ್ಣನಾಯಕ ಅವನ ಹೆಂಡತಿ ಚಾಮವ್ವೆ ಇವರ ಮೂರು ಜನ ಸಹೋದರಿಯರಾದ ಅಕ್ಕ ತಂಗಿ ರಾಜಪುತ್ರಿಯರು **ಪದ್ಮಲದೇವಿ, ಚಾಮಲದೇವಿ, ಬೊಪ್ಪದೇವಿ** ಇವರನ್ನು 1103ರಲ್ಲಿ ಒಂದೇ ಭವನದಲ್ಲಿ ಇತಿಹಾಸಪ್ರಸಿದ್ಧವಾಗಿ ಏಕಕಾಲದಲ್ಲಿ ಅತ್ಯಂತ ವಿಜೃಂಭಣೆಯಿಂದ ವಿವಾಹವಾದನು. ಈ ಮೂರು ಜನ ರಾಜಪುತ್ರಿಯರೂ ವಿದ್ಯಾವತಿಯರಾಗಿಯೂ, ಸುಂದರಿಯರಾಗಿಯೂ, ಭರತನಾಟ್ಯ, ಸಂಗೀತದಲ್ಲಿಯೂ, ಕಲಾಶಾಸ್ತ್ರದಲ್ಲಿಯೂ ಪ್ರವೀಣೆಯರಾಗಿದ್ದರು. ಆದರೆ ಬಲ್ಲಾಳನು ಮದುವೆಯಾದ ಮಾರನೇ ವರ್ಷವೇ ಕಾಲವಾಗಿರಬೇಕೆಂದು ತಿಳಿಯಬರುತ್ತದೆ.

## ವಿಷ್ಣುವರ್ಧನ

ಬಲ್ಲಾಳನಿಗೆ ಮಕ್ಕಳಿಲ್ಲವಾದ್ದರಿಂದ ವಿಷ್ಣುವರ್ಧನನೇ ದೊರೆಯಾದನು. **ವಿಷ್ಣುವರ್ಧನನು** ಕ್ರಿ.ಶ. 1116 ರಲ್ಲಿ ಚೋಳರಾಜನ ಮೇಲೆ ಯುದ್ಧಮಾಡಿ ತಲಕಾಡು, ಕೋಲಾರ ಪಟ್ಟಣಗಳನ್ನು ಜಯಿಸಿ ಬೇಲೂರಿಗೆ ಬಂದನು. ಈ ಜಯದ ಗುರುತಾಗಿ ತಲಕಾಡಿನಲ್ಲಿ ಕೀರ್ತಿನಾರಾಯಣಸ್ವಾಮಿ ದೇವರನ್ನೂ ಬೇಲೂರಿನಲ್ಲಿ ಕೇಶವನಾರಾಯಣ ದೇವರನ್ನೂ ಪ್ರತಿಷ್ಠಿಸಿದನು. ಅನೇಕ ದೇಶ

ಕೋಟೆಗಳನ್ನು ಜಯಿಸಿ ಬಿರುದುಗಳನ್ನು ಹೊಂದಿ, ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡುತ್ತಿದ್ದು ಬಂಕಾಪುರದಲ್ಲಿ, 1141ರಲ್ಲಿ ಕಾಲವಾದನು. ಹೊಯ್ಸಳ ರಾಜರಲ್ಲಿ ಇವನೇ ಪ್ರಖ್ಯಾತನಾದವನು.

ವಿಷ್ಣುವರ್ಧನನಿಗೆ ಅನೇಕ ಪತ್ನಿಯರಿದ್ದರು. ಅವರಲ್ಲಿ ಪಿರಿಯ **ಶಾಂತಳಾದೇವಿ, ಕಿರಿಯ ಶಾಂತಳಾದೇವಿ, ೩ ಬಾಮಲಾದೇವಿ, ೪ ರಾಜಲದೇವಿ, ೫ ಶ್ರೀಲಕ್ಷ್ಮೀದೇವಿ, ೬ ದೇವಕೀದೇವಿ** ಇವರು ಮುಖ್ಯರಾದವರು. ಹಿರಿಯ ಹೆಂಡತಿಯಾದ ಶಾಂತಳಾದೇವಿಯಲ್ಲಿ ಬಲ್ಲಾಳನೆಂಬ ಮಗನೂ, ಹಿರಿಯಬ್ಬರಸಿ ಎಂಬ ಮಗಳೂ ಹುಟ್ಟಿದರು.

ಹಿರಿಯವಳಾದ **ಶಾಂತಳಾದೇವಿಯು** ಪಟ್ಟದರಾಣಿಯಾಗಿದ್ದಳು. **ಶಾಂತಳಾ**ದೇವಿಯು ವಿದ್ಯಾವತಿಯೂ, ಸಂಗೀತ, ಭರತನಾಟ್ಯ, ಚಿತ್ರವಿದ್ಯೆ ಮತ್ತು ವೀಣಾಗಾನ ಇವುಗಳಲ್ಲಿ ಚತುರೆಯಾಗಿದ್ದಳು – ಅನ್ನದಾನ, ನೃತ್ಯವಿದ್ಯೆ ಹೇಳಿಕೊಡುವುದು ಇವುಗಳಲ್ಲಿ ಬಹು ಪ್ರೀತಿ. ಇವಳು ಕ್ರಿ.ಶ. 1131 ರಲ್ಲಿ ಕಾಲವಾದಳು.

ವಿಷ್ಣುವರ್ಧನನಿಗೆ ಹಿರಿಯಬ್ಬರಸಿಯಲ್ಲದೆ ಇನ್ನೂ ಹೆಣ್ಣುಮಕ್ಕಳಿದ್ದಂತೆ ಕಂಡುಬರುತ್ತದೆ. ಕುಮಾರ ಬಲ್ಲಾಳನು 1129 ರಲ್ಲಿ ಯುವರಾಜನಾಗಿಯೂ ಇದ್ದನೆಂದು ತಿಳಿದುಬರುತ್ತದೆ. E.C.VI M.G. 22 ಮಗಳು ಹಿರಿಯಬ್ಬರಸಿಯನ್ನು ಅರಸೀಕೆರೆಯ ಸಾಮಂತರಾಜನಾದ ನೊಳಂಬ ಪಂತೀಕ ಸಿಂಹನೆಂಬುವನಿಗೆ ಕೊಟ್ಟು ಮದುವೆಯಾಗಿತ್ತು. ಕುಮಾರ ಬಲ್ಲಾಳನು 1133 ರಕ್ಕೆ ಮುಂಚೆಯೇ ಕಾಲವಾಗಿರಬೇಕೆಂದು ಕಂಡುಬರುತ್ತದೆ.

ಕಿರಿಯ ಶಾಂತಳಾದೇವಿಯು ಬಹಳ ಸೌಂದರ್ಯವತಿಯಾದ್ದರಿಂದ ರಾಜನು ಪ್ರೀತಿಸಿ ಮದುವೆಯಾದನು. 1135 ರಲ್ಲಿ ಇವಳೂ ಇವಳ ಮಗುವೂ ಕಾಲವಾದರು.

2ನೆಯ ಪಲ್ಲವ ಕುಲದವಳಾದ ಬಾಮಲಾದೇವಿಯೇ ಮುಖ್ಯಳಾದವಳು. ಅವಳು ರಾಜ್ಯಭಾರದಲ್ಲಿಯೂ ವಿಷ್ಣುವರ್ಧನನಿಗೆ ಸಹಾಯಕಳಾಗಿದ್ದಳು. ಇವಳೂ ಸಹ ರಾಜ್ಯದ ಒಂದು ಭಾಗವನ್ನು ಆಳುತ್ತಿದ್ದಳು. ಇವಳು ಯುದ್ಧಕ್ಕೆ ಸಹಾಯಕವಾಗ ಒಂದು ಅಶ್ವಶಾಲೆಯನ್ನಿಟ್ಟಿದ್ದಳು. ಅದರಲ್ಲಿ ಕುದುರೆ ಸವಾರಿ, ಯುದ್ಧ ಚಾತುರ್ಯ ಗತಿ ಮುಂತಾಗಿ ವಿದ್ಯೆಗಳನ್ನು ಹೇಳಿಕೊಡುವುದಾಗಿದ್ದಿತು. ಇವಳೂ ವಿಷ್ಣುವರ್ಧನನೂ ಸೇರಿ ಅನೇಕ ಭೂಮಿಗಳನ್ನೂ, ಅಗ್ರಹಾರಗಳನ್ನೂ ಕಟ್ಟಿ ದಾನ ಮಾಡಿರುವರು.

ಕ್ರಿ.ಶ. 1141 ರಲ್ಲಿ ರಾಜಲದೇವಿಯು ಪಟ್ಟದರಾಣಿಯಾದಳು. ಇವಳು ಬಾಮಲಾದೇವಿಯ ತಂಗಿಯು.

೩ನೆಯವಳಾದ ಲಕ್ಷ್ಮೀದೇವಿಯು ಇವನಿಗೆ 1133ರಲ್ಲಿ ಹುಟ್ಟಿದ ನರಸಿಂಹ ನೆಂಬ ಮಗನೇ ಮುಂದೆ ದೊರೆಯಾದನು.

1117ರಲ್ಲಿ ವಿಷ್ಣುವರ್ಧನನು ಹಿರಣ್ಯದಾನ, ತುಲಾದಾನ, ಅಶ್ವಮೇಧ ಯಾಗ ಮುಂತಾದವುಗಳನ್ನು ಮಾಡಿದನು. (E.C. VB, 1-124)

## ೧ನೆಯ ನರಸಿಂಹ ೧೧೪೧–೧೧೭೩

ವಿಷ್ಣುವರ್ಧನನು ಕಾಲವಾದಾಗ ನರಸಿಂಹನಿಗೆ ಕೇವಲ ಎಂಟು ವರ್ಷ ವಯಸ್ಸಾಗಿದ್ದಿತು. ಮಂತ್ರಿಗಳೂ, ಸೇನಾಪತಿಗಳೂ ರಾಜ್ಯಭಾರವನ್ನು ವಹಿಸಿ ನಡೆಸಿದರು. ನರಸಿಂಹನ ಪತ್ನಿ **ಏಚಲಾದೇವಿ.**

ನರಸಿಂಹನ ಕಾಲದಲ್ಲಿ ಪದ್ಮರಸನೆಂಬ ಮಂತ್ರಿಯು ರಾಜನಿಗೆ ತಿಳಿಸದೆಯೇ ರಾಜಭಂಡಾರದಿಂದ ೧೨,೦೦೦ ಹೊನ್ನುಗಳನ್ನು ತೆಗೆದು ಬೇಲೂರಿನ **ಬಿಟ್ಟಿಸಮುದ್ರ** ವನ್ನು ಕಟ್ಟಿಸಿದನು. ಇದು ರಾಜನಿಗೆ ತಿಳಿದು ಆಕ್ಷೇಪಿಸಲು ಮಂತ್ರಿಯು ತಾನು ಮಾಡಿದ ಧರ್ಮವನ್ನು ತೋರಿಸಲು ಅದನ್ನು ನೋಡಿ ರಾಜನು ಸಂತುಷ್ಟನಾದನು.

ನರಸಿಂಹನು ತಂದೆಯಂತೆ ಅನೇಕ ಬಿರುದುಗಳನ್ನು ಹೊಂದಿದ್ದನು. ತಂದೆಯೂ ತಾನೂ ಸಂಪಾದಿಸಿದ, ರಾಜ್ಯ, ಐಶ್ವರ್ಯ, ಅಧಿಕಾರಗಳು ಅಧಿಕವಾಗಲು ಅವನ ಭುಜಶಕ್ತಿಯಿಂದ ಮತ್ತನಾಗಿ ಸ್ತ್ರೀಲೋಲನಾದನು. ಅವನ ಸಂತೋಷಕ್ಕೆ ಕರ್ನಾಟಕ, ಆಂಧ್ರ, ದ್ರಾವಿಡ, ಗೂರ್ಜರ, ಮಹಾರಾಷ್ಟ್ರ, ಬಂಗಾಳ ಎಲ್ಲಾ ದೇಶದ ಸುಂದರಿಯರೂ. ಯೌವನವತಿಯರೂ ಆದ ೩೮೪ ಜನ ಸ್ತ್ರೀಯರು ಅವನ ಅರಮನೆಯಲ್ಲಿದ್ದರು. ಈ ಕಾರಣದಿಂದಲೇ ನರಸಿಂಹನು ತನ್ನ ೪೦ನೆಯ ವಯಸ್ಸಿನಲ್ಲಿಯೇ ಕಾಲವಾದನು.

## ೨ನೆಯ ಬಲ್ಲಾಳ ೧೧೭೩–೧೨೨೦

ನರಸಿಂಹನ ಅನಂತರ ಅವನ ಮಗ ಬಲ್ಲಾಳನು ಪಟ್ಟಕ್ಕೆ ಬಂದನು. ಇವನೂ ತಂದೆ ತಾತರಂತೆ ದಾನಧರ್ಮಗಳನ್ನು ಮಾಡಿ ಕೀರ್ತಿಯನ್ನು ಹೊಂದಿದನು. ಇವನ ಕಾಲದಲ್ಲಿಯೇ ಇನ್ನೊಂದು ಪಂಗಡದವರಾದ ಯಾದವರು ಆಗಿಂದಾಗ್ಯೆ ಯುದ್ಧ ಮಾಡುತ್ತಿದ್ದರು. ಇವನಿಗೆ ೭ ಜನ ಪತ್ನಿಯರಿದ್ದರು.

ಅವರಲ್ಲಿ ಬಮ್ಮಲದೇವಿ, ಕೇತಲದೇವಿಯೆಂಬುವರು ಪಿದ್ಯಾವತಿಯರಾಗಿ ರಾಜ್ಯಭಾರವನ್ನೂ ನಡೆಸುತ್ತಿದ್ದರು. ಮತ್ತೊಬ್ಬಳಾದ ಪದ್ಮಲದೇವಿಯಲ್ಲಿ ಜನಿಸಿದ ನರಸಿಂಹನೆಂಬುವನು ಮುಂದೆ ದೊರೆಯಾದನು.

## ೨ನೆಯ ನರಸಿಂಹ ೧೨೨೦-೧೨೩೫

ಇವನು ದೊರೆಯಾದ ಮೇಲೆ ಇನ್ನೊಂದು ಪಂಗಡದ ಯಾದವರಿಗೂ ಇವನಿಗೂ ಯುದ್ಧವಾಗುತ್ತಿತ್ತು. ಇವನ ನಂತರ ಇವನ ಮಗ **ಸೋಮೇಶ್ವರನು** ಪಟ್ಟಕ್ಕೆ ಬಂದು ಸುಮಾರು ೨೦ ವರ್ಷಗಳು ರಾಜ್ಯವಾಳಿದನು. ಅನಂತರ ಇವನ ಮಗ ನರಸಿಂಹನು ರಾಜ್ಯವಾಳಿದನು (೩ನೆಯ ನರಸಿಂಹ). ಅನಂತರ ೩ನೆಯ ನರಸಿಂಹನ ಮಲತಾಯಿಯ ಮಗ ರಾಮನಾಥನೂ, ಅವನ ಮಗ ವಿಶ್ವನಾಥನೂ 1297ರ ವರೆಗೆ ರಾಜ್ಯವಾಳಿದರು.

## ೩ನೆಯ ಬಲ್ಲಾಳ ೧೨೯೧-೧೩೪೨

ವಿಶ್ವನಾಥನು ಕಾಲವಾದ ಮೇಲೆ ಅವನ ಜ್ಞಾತಿಯಾದ ಬಲ್ಲಾಳನು ಅಧಿಕಾರಕ್ಕೆ ಬಂದನು. ಇವನು ಬಹುಪ್ರತಾಪಶಾಲಿಯಾಗಿ ಅನೇಕ ಯುದ್ಧಗಳನ್ನು ಮಾಡಿ ಜಯಿಸಿದನು. ಇವನ ಕಾಲದಲ್ಲಿ ತುರುಷ್ಕರು ದಂಡಯಾತ್ರೆ ಬರುವುದನ್ನು ಸಾಮದಾನ ಭೇದಗಳಿಂದ ಎದುರಿಸಿದನು. ಇವನಿಗೂ ಇವನ ಚಿಕ್ಕಪ್ಪನ ಮಕ್ಕಳಿಗೂ ಹಿಂದಿನಿಂದಲೂ ಜಗಳವಿದ್ದೇ ಇದ್ದಿತು.

ಮಹಮ್ಮದೀಯರ ದಾಳಿಯು 1295ರಲ್ಲೇ ಆರಂಭವಾಯಿತು. ಇದನ್ನೆಲ್ಲಾ ನೋಡಿ ಬಲ್ಲಾಳನು ನೆರೆಹೊರೆಯ ಎಲ್ಲಾ ರಾಜರನ್ನು ಒಟ್ಟುಗೂಡಿಸಿ ಬಲಪಡಿಸಲು ಶ್ರಮಿಸಿದನು. ಈ ಕಾಲದಲ್ಲಿ ಎಂದರೆ 1306-1309-1310ರಲ್ಲಿ ಅಲ್ಲಾವುದ್ದೀನನ ಸೈನ್ಯಾಧಿಕಾರಿಯಾದ ಮಲ್ಲಿಕಾಫರನು ಅಪಾರವಾದ ಸೈನ್ಯವನ್ನು ತೆಗೆದುಕೊಂಡು ಬಂದು ಅನೇಕ ರಾಜ್ಯಗಳನ್ನು ನಾಶಮಾಡಿ ಜನರನ್ನು ಕೊಂದು ದೇವಾಲಯಗಳನ್ನು ನಾಶಮಾಡಿ ಐಶ್ವರ್ಯವನ್ನೆಲ್ಲಾ ಕೊಳ್ಳೆಹೊಡೆದನು. ತಾನು ಹೋಗುವಾಗ 312 ಆನೆಗಳು 20.000 ಕುದುರೆಗಳು 96,000 ಮಣ ಬಂಗಾರವನ್ನು ಅನೇಕ ಕೊಪ್ಪರಿಗೆಗಳ ನಗನಾಣ್ಯ ವಜ್ರವೈಡೂರ್ಯ, ಮುತ್ತು, ರತ್ನಗಳನ್ನು ತೆಗೆದುಕೊಂಡು ದೆಹಲಿಯ ಸುಲ್ತಾನನಿಗೆ ಕೊಟ್ಟನು. 1327ರಲ್ಲಿ ತುರುಕರ ಸೈನ್ಯವು ಮಹಮ್ಮದ ತೊಗಲಕನ ಕೈಕೆಳಗೆ ಬಂದು ರಾಜ್ಯಗಳು ನಾಶಮಾಡಲ್ಪಟ್ಟವು.

ಬಲ್ಲಾಳನು ಈ ನಾಶಕ್ಕೆಲ್ಲಾ ಕಾರಣರಾದ ತುರುಕರನ್ನು ಅಡಗಿಸಲು ಅನೇಕ ಕಾರ್ಯಗಳನ್ನು ಕೈಗೊಂಡಿದ್ದನು. ವಿಧಿಲಿಖಿತವು ಬೇರೆಯಾದ್ದರಿಂದ ಯಾವುದೂ ನಡೆಯಲಿಲ್ಲ. ಬಲ್ಲಾಳನು ಅನೇಕ ದಾನ ಧರ್ಮಗಳನ್ನು ಮಾಡಿ ದೇವಸ್ಥಾನಗಳನ್ನು ಸರಿಪಡಿಸಿ ಕವಿಗಳಿಗೂ ವಿದ್ವಾಂಸರಿಗೂ ಆಶ್ರಯವಾಗಿದ್ದನು.

ಹೊಯ್ಸಳರು ರಾಜ್ಯವಾಳಿದಮೇಲೆ ಯಾದವರು ಪ್ರಬಲರಾಗಿ ಬಂದರು. ಆದರೆ ಮಹಮ್ಮದೀಯರ ದಂಡಯಾತ್ರೆಯ ಫಲದಿಂದ ಯಾದವರೂ ಹೊಯ್ಸಳರೂ ನಾಶ

ಮಾಡಿದರು. ಈ ಕಾಲದಲ್ಲಿ ಹಿಂದೂ ಧರ್ಮವನ್ನು ಕಾಪಾಡಲು ಪ್ರಬಲವಾದ ಶಕ್ತಿಯುಳ್ಳ ರಾಜನು ಬೇಕಾದುದರಿಂದ **ವಿದ್ಯಾರಣ್ಯರೆಂಬ** ಆಚಾರ್ಯರು **ಹಕ್ಕ–ಬುಕ್ಕ** ಎಂಬುವರನ್ನಿಟ್ಟುಕೊಂಡು 1336 ರಲ್ಲಿ **ವಿಜಯನಗರ** ಸ್ಥಾಪನೆಮಾಡಿ ತಾವೇ ಮಂತ್ರಿಯಾಗಿ ನಿಂತರು. ಹೊಯ್ಸಳರ ಮತ್ತು ಯಾದವರ ಬಲವು ತಗ್ಗಿದ ಮೇಲೆ ವಿಜಯನಗರದ ರಾಜರುಗಳೇ ದೇಶಕ್ಕೆಲ್ಲಾ ರಾಜರಾದರು. ಆ ಕಾಲದಿಂದ ಮೈಸೂರು ರಾಜರಾದ ರಾಜಒಡೆಯರ ಕಾಲದವರೆಗೆ ವಿಜಯನಗರದ ಅರಸರ ಪ್ರಾಬಲ್ಯವು ನಡೆದುಬಂದಿತು. ರಾಜಒಡೆಯರು 1612 ರಲ್ಲಿ ರಾಜರಾಗಿ ಅಧಿಕಾರವನ್ನು ವಹಿಸಿಕೊಂಡರು.

## ಶ್ರೀ ನಾರಾಯಣಸ್ವಾಮಿ ದೇವಸ್ಥಾನದ ಕಟ್ಟಡ

ಗ್ರಾಮಜೀರ್ಣೋದ್ಧಾರ ಮಾಡಿ ದೇವಸ್ಥಾನವನ್ನು ಕಟ್ಟಲು ಒಂದು ದಿನದಲ್ಲಿ ಅಂದರೆ ಅಲ್ಪ ಕಾಲದಲ್ಲಿ ಕಟ್ಟಲು ಸಾಧ್ಯವಿಲ್ಲವಷ್ಟೆ! ಶ್ರೀ ರಾಮಾನುಜಾಚಾರ್ಯರು ಮನಶುದ್ಧಿಯಿಂದ ದೇವಸ್ಥಾನವನ್ನು ಕಟ್ಟಿರುವ ಕಾಲ 1099–1103ರ ವರೆಗೆ ಎಂದು ಹೇಳುವಾಗ ಆಗಮೋಕ್ತ ಕ್ರಮಗಳನ್ನೇರ್ಪಡಿಸಿ ಧರ್ಮವನ್ನು ಮಾಡಿದ ಮೇಲೆ ಶಿಲಾಶಾಸನವನ್ನು ಬರೆಯುವುದು ಪದ್ಧತಿ. ಆದ್ದರಿಂದ ಶ್ರೀ ನಾರಾಯಣಸ್ವಾಮಿ ದೇವಸ್ಥಾನ ಕಟ್ಟಡವು 1099 ರಿಂದ 1103ರ ವರೆಗೆ ಕಟ್ಟಿರುವುದು ಸ್ಪಷ್ಟವಾಗುವುದು. ಇದಕ್ಕೆ ಸಾಕ್ಷಿಯಾಗಿ ಶ್ರೀ ನಾರಾಯಣಸ್ವಾಮಿ ದೇವಸ್ಥಾನದ ರಂಗಮಂಟಪದ ಆವರಣದಲ್ಲಿ ನಂ. 93ನೇ ಶಾಸನದಲ್ಲಿ ವಿಷ್ಣುವರ್ಧನ ಮಹಾರಾಜರ ಮಹಾಪ್ರಧಾನ ತಂತ್ರಾಧಿಷ್ಠ ನಾಯಕರೂ ಆದ ಸುರಿಗೆಯ ನಾಗಿದೇವಣ್ಣನು ಕೆಲವು ಧರ್ಮಗಳನ್ನು ಮಾಡಿರುವುದು ಕಂಡುಬರುತ್ತದೆ.

## ಮೇಲುಕೋಟೆ

ಶಕ ೧೧೧೧ ಸೌಮ್ಯ ಸಂ. (A.D. 1189) ರಲ್ಲಿ ಸರ್ವಾಧಿಕಾರಿ ಸೇನಾಧಿಪತಿ ಚೋಕಿಮಯ್ಯ, ಹಾಮಯ್ಯ, ಬಿಟ್ಟಿಯ್ಯಗಳು ತಿರುನಾರಾಯಣಪುರದ ಕೋಟೆಯನ್ನು ರಕ್ಷಿಸುತ್ತಿದ್ದರೆಂದು ಶಾಸನದಲ್ಲಿ ಕಂಡುಬರುವುದರಿಂದ ಆ ಕಾಲಕ್ಕೆ ಮುಂಚೆಯೇ ಕೋಟೆಯು ಕಟ್ಟಲ್ಪಟ್ಟಿತೆಂದು ಅರ್ಥವಾಗುತ್ತದೆ. ಶ್ರೀ ರಾಮಾನುಜಾಚಾರ್ಯ ಕಾಲದಲ್ಲಿ ಕೋಟೆಯನ್ನು ಕಟ್ಟಿದ್ದಕ್ಕೆ ವೆಚ್ಚ ೧೬೧೫೦ ಗದ್ಯಾಣ ಕಾಣಬರುವುದರಿಂದ ಶ್ರೀ ರಾಮಾನುಜರು ಇದ್ದಾಗಲೇ ಕೋಟೆಯು ಕಟ್ಟಲ್ಪಟ್ಟಿದ್ದಿತೆಂದು ತಿಳಿಯಬೇಕು (1099–1103).

## ದೇವಸ್ಥಾನದ ಇತರ ಭಾಗಗಳು

ಗರ್ಭಗೃಹವು ಮೊದಲೇ ಇದ್ದಿತೆಂದು ನಿರ್ಧಾರವಾಗಿದೆ. ಶ್ರೀ ರಾಮಾನುಜರು

ಕಟ್ಟಿದ ಕಟ್ಟಡದ ಅಂಕಣ ವಿವರಿಸಿರುವುದು. ಹೊಸದಾಗಿ ಅಸ್ತಿಭಾರದಿಂದ ಕಟ್ಟಲಿಲ್ಲ. ಯಾದವರ ಕಾಲದಲ್ಲಿ ಇದ್ದ ರೀತಿಯಲ್ಲೇ ಕಟ್ಟಿರುವುದು.

**ಕಲ್ಯಾಣಿ ಪುಷ್ಕರಣಿ—** ಈ ಪುಷ್ಕರಿಣಿಯನ್ನು ಕಟ್ಟಲು (1099–1103) ೨೫೩೭ ವರಹಗಳು ಖರ್ಚಾದವು. ೫೦೦ ವರ್ಷಗಳಾದ ಮೇಲೆ ಶಿಥಿಲವಾದುದು ಕೆಡುತ್ತಿದ್ದುದರಿಂದ ಮೈಸೂರು ರಾಜರಾದ ಚಾಮರಾಜಒಡೆಯರು ತಮ್ಮ ಧರ್ಮಪತ್ನಿಯ ಕೈಂಕರ್ಯವಾಗಿರಬೇಕೆಂದು (AD 1633 ರಲ್ಲಿ) ಕಲ್ಯಾಣಿಗೆ ಕಾಶಿ ಕೆಲಸದ ಸೋಪಾನವನ್ನು ಕಟ್ಟಿಸಿದರು.

**ಗೋಪುರ —** ಶ್ರೀ ರಾಮಾನುಜರ ಅನಂತರ 30–40 ವರ್ಷಗಳಾದ ಮೇಲೆ ಪರಾಶರಭಟ್ಟರು ಈ ಊರಿಗೆ ಬಂದಾಗ ಚತುರಾಸನ ಗೋಪುರವನ್ನು ಸೇವಿಸಿದ್ದಾಗಿಯೂ, ದೇವಸ್ಥಾನದಲ್ಲಿ ಪ್ರದಕ್ಷಿಣೆಯಾಗಿ ಬರುವಾಗ ಎಲ್ಲಾ ಸನ್ನಿಧಿಗಳಲ್ಲೂ ದೇವರನ್ನು ದರ್ಶನ ಮಾಡಿರುವುದು ಗುರುಪರಂಪರಾ ಗ್ರಂಥದಲ್ಲಿ ತಿಳಿಸಿರುವರು.

**ಒಂದು ಚರಿತ್ರಾಂಶ —** ಒಂದು ಕಾಲದಲ್ಲಿ ದೇಶದಲ್ಲಿ ಭಕ್ತರಿಗೂ (ವಿಷ್ಣುಭಕ್ತರು) ಜೈನರಿಗೂ ಕಲಹವುಂಟಾಗಿ ಭಕ್ತರು ಸುಮಾರು ೭೦೦ ಜೈನ ದೇವಾಲಯಗಳವರೆಗೆ ನಾಶಮಾಡಿದರು. ಜೈನರ ಸಹಾಯಕ್ಕಾಗಿ ಶ್ರೀವೈಷ್ಣವರು ಪ್ರಯತ್ನಿಸಲು ಇದರಿಂದ ಶ್ರೀವೈಷ್ಣವ ದೇವಸ್ಥಾನಗಳೂ ನಾಶವಾಗಲ್ಪಟ್ಟವು. ಭಕ್ತರು ರಾಜಶಾಸನವನ್ನು ಮೀರಿದರು. ಈ ಕಾಲದಲ್ಲೇ ಚೆಲುವರಾಯಸ್ವಾಮಿ ನವರಂಗವು ನಾಶಪಡಿಸಲ್ಪಟ್ಟಿತು. ಇದರಿಂದ ಕುಪಿತರಾದ ಶ್ರೀವೈಷ್ಣವರು ಮೇಲುಕೋಟೆಯಲ್ಲಿದ್ದ ಶಿವ ದೇವಾಲಯದಲ್ಲಿನ ಶಿವಲಿಂಗವನ್ನು ಕಿತ್ತುಹಾಕಿ, ಅಲ್ಲಿ ನಮ್ಮಾಳ್ವಾರ ವಿಗ್ರಹವನ್ನು ಸ್ಥಾಪಿಸಿರುವಂತೆ ಕಾಣಬರುವುದು – ಈ ವಿಚಾರವೆಲ್ಲಾ ಮಹಾರಾಜ ಬುಕ್ಕಣ್ಣನವರಿಗೆ ತಿಳಿದು ಈ ಕಾಲದಲ್ಲಿ ಶ್ರೀವೈಷ್ಣವರು ಪ್ರಬಲರಾಗಿದ್ದುದನ್ನು ಕಂಡು ಶ್ರೀವೈಷ್ಣವರಿಂದ ಜೈನ ಸಮುದಾಯದವರಿಗೆ ಸಹಾಯ ಮಾಡಿಸಿ ಭಕ್ತರನ್ನು ಅಡಗಿಸಿದರು.

**ಬುಕ್ಕಣ್ಣ ಮಹಾರಾಜರು** ಶ್ರೀರಂಗ, ತಿರುಪತಿ, ಕಾಂಚೀಪುರ, ತಿರುನಾರಾಯಣಪುರ ಈ ನಾಲ್ಕು ಸ್ಥಳಗಳ ಮುಖ್ಯರಾದ ಶ್ರೀವೈಷ್ಣವ ಸಕಲಾಚಾರ್ಯರುಗಳನ್ನು ಮತ್ತು ಇತರ ಸಮಯಿಗಳನ್ನು ಕರೆದು ಮಹಾಸಭೆಯಲ್ಲಿ ಸೇರಿಸಿ ಶ್ರೀವೈಷ್ಣವರು ತಮ್ಮ ಮತದೊಂದಿಗೆ ಜೈನ ಮತವನ್ನು ಭೇದಮಾಡದೆ ಜೈನಧರ್ಮವನ್ನು ಕಾಪಾಡಿ ಬರಬೇಕೆಂದೂ, ಇದಕ್ಕಾಗಿ ಜೈನರು ತಮ್ಮ ಶುಭಶೋಭನಗಳಲ್ಲಿ ಶ್ರೀವೈಷ್ಣವರಿಗೆ ಪಂಚಮಹಾವಾದ್ಯಗಳು, ಕಲಶ, ಕನ್ನಡಿ, ಶ್ವೇತಛತ್ರ, ಚಾಮರ ಮೊದಲಾದ ಬಿರುದು ಮರ್ಯಾದೆಗಳಿಂದ ಅಗ್ರತಾಂಬೂಲವನ್ನು ಕೊಟ್ಟು ಬರುವ

ಬೇಡೋ ಆ ಹಣದಿಂದ ಶ್ರೀವೈಷ್ಣವ ದೇವಾಲಯಗಳನ್ನೂ, ಜಿನಾಲಯಗಳನ್ನೂ ಶ್ರೀವೈಷ್ಣವರು ಕಾಪಾಡಿ ಬರಬೇಕೆಂದೂ ತೀರ್ಮಾನಿಸಿ ಶಕ ೧೨೯೦ ಕೀಲಕ ಸಂ॥ **(A.D. 1368)**ರಲ್ಲಿ ಧರ್ಮಶಾಸನ ಬರೆದರು.

ಶ್ರವಣಬೆಳಗೊಳ ತಾ.
ಮಾಗಡಿ ತಾ.

ಈ ಶಾಸನದಲ್ಲಿ ಶ್ರೀ ರಾಮಾನುಜಾಚಾರ್ಯರು **ವಿಶಿಷ್ಟಾದ್ವೈತ ಸಿದ್ಧಾಂತ ಸಾರ್ವಭೌಮ**ರೆಂಬ ವಿಚಾರವಾದ ಈ ಕೆಳಗಿನ ಶ್ಲೋಕವು ಬರೆದಿರುವುದು :

ಪಾಷಂಡಸಾಗರ ಮಹಾ-ಬಡಬಾ-ಮುಖಾಗ್ನಿಃ
ಶ್ರೀರಂಗರಾಜ ಚರಣಾಂಬುಜ ಮೂಲದಾಸಃ ।
ಶ್ರೀವಿಷ್ಣುಲೋಕ ಮಣಿಮಂಟಪ ಮಾರ್ಗದಾಯೀ ।
ರಾಮಾನುಜೋ ವಿಜಯತೇ ಯತಿರಾಜರಾಜಃ ।

ಮೇಲಿನ ಮತ್ತು ಇತರ ಕಾರಣಗಳನ್ನೊಳಗೊಂಡ ಸುಮಾರು ಈ ಕಾಲದಲ್ಲಿ ಮೇಲುಕೋಟೆಯಲ್ಲಿ ಶ್ರೀರಾಮಾನುಜಾಚಾರ್ಯರ ಕಾಲದಲ್ಲಿ ಕಟ್ಟಲ್ಪಟ್ಟಿದ್ದ **ಶಿವ ದೇವಾಲಯವು** ಅಳಿದು ಆ ಕಟ್ಟಡದಲ್ಲಿ **ನಮ್ಮಾಳ್ವಾರ್ರವರ** ವಿಗ್ರಹಪ್ರತಿಷ್ಠೆಯಾಗಿರಬಹುದೆಂದು ತೋರುತ್ತದೆ. ಇದಕ್ಕೆ ಅನುಗುಣವಾಗಿ ಶಕ ೧೨೯೧ ಸೌಮ್ಯ ಸಂ॥ **A.D. 1369** ವಿಜಯದಶಮಿಯ ದಿನದಲ್ಲಿ ತಿರುನಾರಾಯಣಪುರದ ಶ್ರೀವೈಷ್ಣವರು ನಮ್ಮಾಳ್ವಾರ್ರವರ ಜನ್ಮದಿನವಾದ ವಿಶಾಖ ನಕ್ಷತ್ರ ಮತ್ತು ಶ್ರೀತಿರುನಾರಾಯಣ ಸ್ವಾಮಿಯ ತಿರುಪಡಿಯಾಟಕ್ಕೂ, ದೇವರ ಅಮೃತಪಡಿ ದೀವಿಗೆಯೆಣ್ಣೆ ತಿರುನಾಳು ಮತ್ತು ನಿತ್ಯನೈಮಿತ್ಯದಲ್ಲೂ ಸಮಾರಾಧನೆ ಇತ್ಯಾದಿ ಧರ್ಮಗಳನ್ನು ಮಾಡಿ ಧರ್ಮ ಸಾಧನ ಬರೆದರು. ಈ ಧರ್ಮಗಳ ಮೇಲ್ವಿಚಾರಣೆಯನ್ನು **ಶ್ರೀಯತಿರಾಜಮಠದ ಶ್ರೀ ರಾಮಾನುಜ ಜೀಯರು** ನೋಡುವುದಾಗಿದ್ದಿತು.

ಶ್ರೀ, ಪ. ತಾ. ನಂ. ೪೭

## ರಾಜಮುದ್ರೆ-ರಾಮಾನುಜ ಮುದ್ರೆಗಳು

ವಿಷ್ಣುವರ್ಧನಮಹಾರಾಜನ ಸಹಾಯದಿಂದ ದೇವಸ್ಥಾನ, ಆಲಯ, ಗ್ರಾಮ ಜೀರ್ಣೋದ್ಧಾರವಾದ ಮೇಲೆ ದೇವಸ್ಥಾನದ ಆಲಯ ಕಟ್ಟಿ ಅನಂತರ **ರಾಜ ಮುದ್ರೆ**ಯು ಅಗತ್ಯವಾದ್ದರಿಂದ ರಾಜಮುದ್ರೆಯನ್ನು, ದೇವಸ್ಥಾನದ ಒಳಾಡಳಿತ ವಾಗಿಯೂ, ಲೌಕಿಕ ವೈದಿಕವಾಗಿ **ರಾಮಾನುಜಮುದ್ರೆ**ಯೆಂಬುದನ್ನೂ ಶ್ರೀಭಾಷ್ಯಕಾರರು ಏರ್ಪಡಿಸಿದರು. ರಾಮಾನುಜಮುದ್ರೆಯಲ್ಲಿ **ರಾಮಾನುಜ** ಎಂಬುದಾಗಿಯೂ, ರಾಜಮುದ್ರೆಯಲ್ಲಿ **ವಿಷ್ಣುವರ್ಧನ ಬಲಾಳ** ಎಂಬುದಾಗಿದ್ದ

ಬಹುದೆಂದು ಊಹಿಸಲಾಗಿದೆ. ಈ ರಾಜಮುದ್ರೆಯು ವಿಜಯನಗರದ ಅರಸರ ಸಾಮ್ರಾಜ್ಯವಾದ ನಂತರ ಮೈಸೂರು ಅರಸರು ಪ್ರಾಬಲ್ಯಕ್ಕೆ ಬಂದ ಮೇಲೆ ಶ್ರೀಚಿಕ್ಕದೇವ ಮಹಾರಾಜರು ರಾಜ್ಯದಲ್ಲಿ ಒಂದೊಂದು ಸ್ಥಳದಲ್ಲಿ ಒಂದೊಂದು ವಿಧವಾದ ಮುದ್ರೆ ಇರುವುದನ್ನು ತಪ್ಪಿಸಿ ಒಂದೇ ವಿಧವಾದ ರಾಜಮುದ್ರೆ ಇರಬೇಕೆಂಬ ನಿಬಂಧನೆ ಮಾಡಿದಾಗ ಈ ದೇವಸ್ಥಾನದ ರಾಜಮುದ್ರೆಯೂ ವ್ಯತ್ಯಾಸವಾಗಿ, ಈಗ ಈ ಮುದ್ರೆಯಲ್ಲಿ **ದೇ** ಎಂಬ ಅಕ್ಷರವೂ ಸುತ್ತಲೂ **ಚೆಲುವರಾಯಸ್ವಾಮಿ** ಎಂಬುದಾಗಿ ಕೆತ್ತಿದ ಸುವರ್ಣದ ರಾಜಮುದ್ರೆಯುಂಗುರವಿರುವುದು.

ದೇವಸ್ಥಾನದಲ್ಲಿ ಪ್ರತಿನಿತ್ಯ ಇಡುವ ರಾಜಮುದ್ರೆಯೊಂದಿಗೆ ಶ್ರೀಯತಿರಾಜಸ್ವಾಮಿಗಳು **ರಾಮಾನುಜಮುದ್ರೆ**ಯನ್ನು ಉಪಯೋಗಿಸುತ್ತಿದ್ದರು. ಶ್ರೀ ಭಂಡಾರಕ್ಕೆ ಸಲ್ಲುವ ರೊಕ್ಕ, ತಿರುವಾಭರಣ ವಸ್ತ್ರಭಂಡಾರ ಮೊದಲಾದುವುಗಳಿಗೆ **ಹನುಮಂತಮುದ್ರೆ** – ಶ್ರೀಭಂಡಾರ ಮೊದಲಾದ ಸ್ಥಿರಸ್ವತ್ತು ಭೂಮಿಗಳ ವಿಚಾರದಲ್ಲಿ **ದೇಶಾಯಿಮುದ್ರೆ** – ಈ ರೀತಿ ರಾಜಮುದ್ರೆ, ರಾಮಾನುಜ ಮುದ್ರೆ, ಹನುಮಂತಮುದ್ರೆ, ದೇಶಾಯಿಮುದ್ರೆ ಎಂಬುದಾಗಿ ನಾಲ್ಕು ಮುದ್ರೆಗಳು ಕಂಡುಬರುತ್ತವೆ.

ರಾಮಾನುಜಮುದ್ರೆಯುಂಗುರವು ಶ್ರೀಯತಿರಾಜ ಮಠಾಧಿಪತಿಗಳ ಶಾಸನ ಆಡಳಿತದಲ್ಲಿದ್ದು ನಡೆದುಬಂದಿತು. AD 1544-1545ರ ಕಾಲದಲ್ಲಿಯ ಶಾ. ಪು. 129-130 ರಲ್ಲೂ ರಾಮಾನುಜ ಮುದ್ರೆ ವಿಷಯವಿರುವುದು. ಅಲ್ಲಿಂದ ಮುಂದೆ 1575 ರಲ್ಲಿ ಶ್ರೀಯತಿರಾಜ ಮಠಾಧಿಪತಿಗಳಿಗೆ ಅತ್ಯಂತರಿಂದ ವಿಘಾತವುಂಟಾದ ಮೇಲೆ ರಾಮಾನುಜ ಮುದ್ರೆಯುಂಗುರವು ಇತರ ಅಧಿಕಾರಿ ಕೈಂಕರ್ಯಪರರ ವಶವಾಗಿ 1850 ರವರೆಗೂ ಇದ್ದುದು ತಿಳಿದುಬರುವುದು. ಅನಂತರ ಅಧಿಕಾರವನ್ನು ಕೈಂಕರ್ಯ ಪರರಿಗೂ ಅಧಿಕಾರವು ಹೋಗಿ ಸರಕಾರದವರು ಆಡಳಿತವನ್ನು ವಹಿಸಿದಾಗ ರಾಮಾನುಜಮುದ್ರೆ ಅಂತರ್ಧಾನವಾದಂತೆ ಕಂಡುಬರುತ್ತದೆ. ಈಗ ಬೇರೆ ಮುದ್ರೆಯಾಗಿ **ಹಯಗ್ರೀವ** ಎಂಬುದಾಗಿರುವುದು, ಸ್ಥಳಮುದ್ರೆ ಎನ್ನುವುದು 1585 ರಲ್ಲಿ ಏರ್ಪಟ್ಟಿರಬಹುದು.

## ವಿರಕ್ತ ಸನ್ಯಾಸಿಗಳು – ಆಚಾರ್ಯ ಪುರುಷರು

ಶ್ರೀ ಯತಿರಾಜ ಮಠಾಧಿಪತಿಗಳಲ್ಲದೆ, ತಿರುನಾರಾಯಣಪುರದಲ್ಲಿ ಶ್ರೀ ತಿರುನಾರಾಯಣ, ಚೆಲ್ವಪಿಳ್ಳೆಯವರ ಕೈಂಕರ್ಯದಲ್ಲಿ ನಿರತರಾಗಿ ನಿತ್ಯವಾಸಿಗಳಾಗಿ ಅನೇಕರು ಸನ್ಯಾಸಿಗಳೂ, ಆಚಾರ್ಯಪುರುಷರೂ ಇದ್ದುದಾಗಿ ಅನೇಕ ಶಾಸನಗಳಿಂದ ತಿಳಿದುಬರುತ್ತದೆ. ಅವರಿದ್ದ ಜಾಗದಲ್ಲಿ ನಿತ್ಯ ತದೀಯಾರಾಧನೆ ನಡೆಯುತ್ತಿದ್ದಿತು. ಅವರು ಶಿಷ್ಯಸಂಪತ್ತುಳ್ಳವರಾಗಿ ವೇದಾಂತ ಧರ್ಮಬೋಧಕರಾಗಿದ್ದರು.

**ವೇದಾಂತದೇಶಿಕರು** — ಸುಮಾರು 1320–1325 ಈ ಮಧ್ಯೆ ವೇದಾಂತ ವಿದ್ವತ್ಪ್ರಸಿದ್ಧರಾದ ವೇದಾಂತ ದೇಶಿಕರು ತಿರುನಾರಾಯಣಪುರಕ್ಕೆ ದಯಮಾಡಿಸಿ ತಿರುನಾರಾಯಣ, ಚೆಲ್ವಪಿಳ್ಳೆಯವರನ್ನು ದರ್ಶನಮಾಡಿ ಮಂಗಳಾಶಾಸನ ಮಾಡಿರುತ್ತಾರೆ.

## ಯದುರಾಯರು – ಕೃಷ್ಣರಾಯರು

ಇದೇ ಕಾಲದಲ್ಲಿ ಈಗಿನ ಮೈಸೂರು ದೊರೆಗಳ ಮೂಲಪುರುಷರಾದ ಯದುರಾಯರು ಕೃಷ್ಣರಾಯರು ಯಾದವಗಿರಿಗೆ ಬಂದು ಕಲ್ಯಾಣಿ ತೀರ್ಥದಲ್ಲಿ ಸ್ನಾನಮಾಡಿ ತಮ್ಮ ಕುಲದೈವವಾದ ತಿರುನಾರಾಯಣಸ್ವಾಮಿ, ಚೆಲುವರಾಯಸ್ವಾಮಿಯವರನ್ನು ಸೇವಿಸಿ ಅವರ ಅನುಗ್ರಹದಿಂದ ಮೈಸೂರು ರಾಜರ ಮಗಳು ರಾಜಕುಮಾರಿಯನ್ನು ವಿವಾಹವಾಗಿ ಮೈಸೂರು ರಾಜ್ಯವನ್ನು ಪಡೆದು 1399ರಲ್ಲಿ ರಾಜ್ಯ ಪಟ್ಟಾಭಿಷಿಕ್ತರಾದರು.

## ವಿಷ್ಣುವರ್ಧನ ಮತ್ತು ರಾಮಾನುಜರ ಸಂಬಂಧ ಶಾಸನದಲ್ಲೇಕೆ ಕಾಣಿಸುವುದಿಲ್ಲ ?

ವಿಷ್ಣುವರ್ಧನನು ಮಾಡಿದ ಧರ್ಮಗಳಿಗೆಲ್ಲಾ ಶಾಸನವಿರುವಾಗ ಪ್ರಸಿದ್ಧ ತನ್ನ ಗುರುವಾದ ಶ್ರೀ ರಾಮಾನುಜರ ಹೆಸರನ್ನೇಕೆ ಶಾಸನದಲ್ಲಿ ಸೇರಿಸಲಿಲ್ಲ ? ಮತ್ತು ಒಂದುವೇಳೆ ಮೇಲುಕೋಟೆ ದೇವಸ್ಥಾನವು ವಿಷ್ಣುವರ್ಧನನಿಂದ ಕಟ್ಟಲ್ಪಟ್ಟಿದ್ದ ? ಅಥವಾ ಅಲ್ಲವೆ ? ಎಂಬುದೇ ಸಂಶಯವಾಗುವುದು. ತನ್ನ ರಾಜಧಾನಿ ಪಕ್ಕದಲ್ಲಿ ಪ್ರಸಿದ್ಧವಾದ ನಾರಾಯಣಮೂರ್ತಿ ಪ್ರತಿಷ್ಠಿತವಾದಾಗ ಅದಕ್ಕೆ ಎಳ್ಳಷ್ಟೂ ಅವನ ಧರ್ಮ ಕಾಣಿಸುವುದಿಲ್ಲ. ಇದಕ್ಕೆ ಕಾರಣವೇನು ?

ವಿಷ್ಣುವರ್ಧನನು ತಾನು ಶಿಷ್ಯನಾಗಿ ಶ್ರೀ ರಾಮಾನುಜರು ಅಪೇಕ್ಷೆ ಪಟ್ಟಂತೆ ಅವರಿಗೆ ಲಕ್ಷ ವರಹಗಳನ್ನು ಕೊಟ್ಟು, ಜೀರ್ಣೋದ್ಧಾರ ಸಹಾಯಕ್ಕಾಗಿ ತನ್ನ ಕಡೆಯ ಮನುಷ್ಯರನ್ನು ಕೊಟ್ಟು ಕಳುಹಿಸಿದನು. ಇದರಿಂದ ಯಾದವಗಿರಿಯ ಜೀರ್ಣೋದ್ಧಾರ ಕಾರ್ಯವು ಶ್ರೀರಾಮಾನುಜರ ನೇತೃತ್ವದಲ್ಲಿ ನಡೆಯಿತೇ ಹೊರತು ವಿಷ್ಣುವರ್ಧನನ ನೇತೃತ್ವದಲ್ಲಿ ನಡೆಯಲಿಲ್ಲವೆಂದು ವ್ಯಕ್ತಪಡುವುದು. ಅಲ್ಲದೆ ಜೀರ್ಣೋದ್ಧಾರವಾದ ಮೇಲೆ ಪಂಡಿತರ ದೀಪಾರಾಧನೆಗೆ ವಿಷ್ಣುವರ್ಧನನ ಧರ್ಮವು ಕಾಣುವುದಿಲ್ಲ. ಇದಕ್ಕೆ ಕಾರಣ ಜೀರ್ಣೋದ್ಧಾರಕ್ಕೆ ತೆಗೆದ ಲಕ್ಷ ವರಹಗಳಲ್ಲಿ ೫೦ ಸಾವಿರ ವರಹಗಳು ಜೀರ್ಣೋದ್ಧಾರಕ್ಕೆ ಖರ್ಚಾದವು. ಮಿಕ್ಕ ೫೦ ಸಾವಿರ ವರಹಗಳನ್ನು ಪಂಡಿತರ ದೀಪಾರಾಧನೆಗೆ ರಾಮಾನುಜರೇ ಏರ್ಪಡಿಸಿ ವಿಷ್ಣುವರ್ಧನನ ಒಪ್ಪವನ್ನು ಹಾಕಿಸಿರುವುದು ಜೀರ್ಣೋದ್ಧಾರ ಲೆಕ್ಕದಿಂದ ಹೊರಪಡುವುದು. ಆದುದರಿಂದ ಯಾದವ

ಗಿರಿಯ ಸಂಪೂರ್ಣ ಜೀರ್ಣೋದ್ಧಾರ ಕಾರ್ಯವು ಶ್ರೀರಾಮಾನುಜರ ನೇತೃತ್ವದಲ್ಲಿ ನಡೆದುದರಿಂದಲೂ. ಈ ವಿಚಾರದಲ್ಲಿ ವಿಷ್ಣುವರ್ಧನನು ಯಾವ ಭಾಗವನ್ನೂ ವಹಿಸದಿದ್ದುದರಿಂದಲೂ ಯಾವ ರೀತಿಯಲ್ಲೂ ಶ್ರೀರಾಮಾನುಜರ ಮತ್ತು ವಿಷ್ಣುವರ್ಧನರ ಸಂಬಂಧವಾಗಿ ಶಾಸನದಲ್ಲಿ ಬರಲು ಅವಕಾಶವಿಲ್ಲವೆಂದು ತಿಳಿದು ಬರುತ್ತದೆ.

## ಚೆಲುವರಾಯಸ್ವಾಮಿ

ಹಿಂದೆಯೇ ತಿಳಿಸಿದಂತೆ ಮಹಾ ಕ್ಷಾಮ ಮತ್ತು ಕ್ಷಾಮ ಡಾಮರಗಳಿಂದಲೋ ಅಥವಾ ರಾಜಕೀಯ ಕಾರಣದಿಂದಲೋ ಊರು ಹಾಳಾದುದು ಸರಿಯಷ್ಟೆ. ಆ ಕಾಲದಲ್ಲಿ ಮೂಲ ವಿಗ್ರಹಕ್ಕೆ ಕಲ್ಲುಚಪ್ಪಡಿಗಳನ್ನು ಮುಚ್ಚಿಸಿ ಉಭಯನಾಚ್ಚಿಯಾರುಗಳನ್ನೂ, ದ್ರವ್ಯಾಭರಣಗಳನ್ನೂ ಭೂಮಿಯಲ್ಲಿ ನಿಕ್ಷೇಪಮಾಡಿ ಉತ್ಸವ ವಿಗ್ರಹವನ್ನು ನಿತ್ಯ ಪ್ರಾಣದಿಂದ ಕಾಪಾಡಿಕೊಂಡು ಬರಲು ಹೊರಕ್ಕೆ ತೆಗೆದುಕೊಂಡು ಹೋಗುವುದು ಪದ್ಧತಿ.

ಮಹದೃಷ್ಟವಶದಿಂದಲೋ ವಿಗ್ರಹವನ್ನು ಕಾಪಾಡುವ ಪ್ರಬಲ ಉದ್ದೇಶದಿಂದಲೋ ಪುನಃ ಉತ್ಸವಮೂರ್ತಿ ಸ್ವಸ್ಥಾನಕ್ಕೆ ಸೇರದಹೋಯಿತು. ಊರು ಸಂಪೂರ್ಣ ನಾಶವಾಗಿ ಪುನಃ ಊರಿನ ಹೆಸರೇ ಇಲ್ಲದಿರುವ ಕಾರಣ ಉತ್ಸವ ವಿಗ್ರಹವು ಆಹ್ವಾನವಿಲ್ಲದ ಸ್ಥಳಗಳಲ್ಲಿದ್ದಿರಬಹುದು. ಸಮುದಾಯದಿಂದ ಕಾಪಾಡುವ ವಿಗ್ರಹವು ಕಾಲವಶಾತ್ ವ್ಯಕ್ತಿಗತವಾದ ಪರಂಪರೆಯಾಗಿ **ಅಮ್ಮಾಳುರಾಯನ** ಅರಮನೆಯಲ್ಲಿ ಪೂಜೆಯಮಾಡಿಸುತ್ತಿದ್ದರು.

ಚಲ್ವಪಿಳ್ಳೆ ವಿಗ್ರಹವನ್ನು ಅಮ್ಮಾಳುರಾಯನ ಅರಮನೆಯಿಂದ ಬಿಜಯ ಮಾಡಿಸಿದವರು, ರಾಜಕುಮಾರಿ ವರನಂದಿಯು ಹಿಂಬಾಲಿಸಿದಳು ಎನ್ನುವಾಗ ರಾಮಾನುಜರು ಮನಸ್ಸಿಗೆ ಬಂದ ಅಮ್ಮಾಳುರಾಯ - ಅಜಮ್ಮಾದ - ತುರುಷ್ಕ ಅರಮನೆ ಡಿಲ್ಲಿ ಮುಂತಾಗಿ ಕಟ್ಟುಕತೆಯನ್ನು ಹೇಳಿಬಂದಿರುವರು.

## ಶ್ರೀರಾಮಾನುಜರ ಕಾಲದಲ್ಲಿ ಯಾವ ತುರುಷ್ಕರೂ ಇರಲಿಲ್ಲ ಅಮ್ಮಾಳುರಾಯನಾರು ?

ಗುರು ಪರಂಪರೆಯಲ್ಲಿ ಅಮ್ಮಾಳುರಾಯನ ಅರಮನೆಯಲ್ಲಿ ಚಲುವರಾಯಸ್ವಾಮಿ ಪೂಜೆಯನಾಡಿಸಿದ್ದರೆಂದು, ಹೇಳಲಾಗುತ್ತಿದೆ. ರಾಜನು ಅರಬ ದೇಶದವನಾಗಿರಬೇಕೆಂದು ತೋರುತ್ತದೆ. ಪಶ್ಚಿಮ ಚಾಲುಕ್ಯ ರಾಜರಲ್ಲಿ ಆರನೆಯ **ವಿಕ್ರಮಾದಿತ್ಯನಿಗೆ ಪೆರ್ಮಾಡಿ** ಎಂಬ ಬಿರುದುಂಟು. ಈ ರಾಜನು ಕ್ರಿಮಿಕಂಠ ಚೋಳನ ಶತ್ರುಗಳಲ್ಲಿ (ಕುಲೋತ್ತುಂಗ ಚೋಳ) ಪ್ರಸಿದ್ಧನಾದ **ತ್ರಿಭುವನಮಲ್ಲ**

**ವಿಕ್ರಮಾಂಕ**ನೆಂದು ಪ್ರಸಿದ್ಧಿ ಈ ರಾಜನಿಗಿದ್ದ ಬಿರುದು ಪೆರ್ಮಾಡಿ, ಪೆರ್ಮಾಳಿ, ಅಪ್ಪಾಳಿ, ಅಪ್ಪಾಳ್ವಂಡಾಯನಾಗಿರಬಹುದು. ಅಲ್ಲಿಂದ ಶ್ರೀರಾಮಾನುಜರು ಶ್ರೀಚೆಲ್ವಪ್ಪಿಳ್ಳೆರಾಯರನ್ನು ವಿಜಯಮಾಡಿಸಿರಬಹುದು. ಆಗ ಪೃಥ್ವೀರಾಜನ ತಂದೆಯ ತಂದೆ ತಾತನು ರಾಜ್ಯವಾಳುತ್ತಿದ್ದನು.

## ದೆಹಲಿ ವಿಚಾರ

A.D. 993 ರಲ್ಲಿ ತೋಮರರೆಂಬ ರಜಪೂತ ವಂಶದ ರಾಜ್ಯವಾಳುತ್ತಿದ್ದು ಈಗ ಕುತುಬಮಿನಾರ್ ಸ್ತಂಭವಿರುವ ಸ್ಥಳದಲ್ಲಿ **ಢಿಲು** ಎಂಬ ರಾಜನು ರಾಜ್ಯ ಕಟ್ಟಿದನು. **ಈ** ಸ್ಥಳಕ್ಕೆ ಕಾಲಕ್ರಮದಲ್ಲಿ ಢಿಲು, ದಿಲ್ಲಿ ಎಂದು ಹೆಸರಾಯಿತು. **ಈ** ಸ್ಥಳದಲ್ಲಿ **A.D. 1052** ರಲ್ಲಿ **ಕೆಂಪುಕೋಟೆ**ಯನ್ನು ಕಟ್ಟಿಸಿ 16 ಅಡಿ ವ್ಯಾಸ ಮತ್ತು 23 ಅಡಿ ಎತ್ತರದ **ಜಯಸ್ತಂಭ**ವನ್ನು ಕಟ್ಟಿಸಿ ನಿಲ್ಲಿಸಿದನು.

ಕ್ರಿ.ಶ. 1306–1309–1310 ರಲ್ಲಿ ಅಲ್ಲಾವುದ್ದೀನನ ಸೈನ್ಯಾಧಿಕಾರಿಯಾದ ಮಲ್ಲಿಕಾಫರನು ದೋರಸಮುದ್ರದ ಮೇಲೆ ದಂಡೆತ್ತಿ ಬಂದು ರಾಜ್ಯವನ್ನು ನಾಶಮಾಡಿ ಜನರನ್ನು ಕೊಂದು ಐಶ್ವರ್ಯವನ್ನು ದೋಚಿಕೊಂಡು ಹೋಗುವಾಗ ಆಗಿನ ರಾಜನಾದ ಬಲ್ಲಾಳನನ್ನೂ ಸೆರೆಹಿಡಿದುಕೊಂಡು ಹೋದನು. ಅವನನ್ನು ಬಿಡಿಸಿಕೊಂಡು ಬರಲು ಮೇಲುಕೋಟೆ ಯತಿರಾಜಮಠದ ರಾಮಾನುಜಾಚಾರ್ಯರೆಂಬುವರು ದೆಹಲಿಗೆ ಹೋಗಿ ಬಂದರು. ಕಥೆಯಲ್ಲಿ ಬರೆಯುವಾಗ ಒಂದು ಮುಂದು ಮಾಡಿಕೊಂಡು ರಾಮಾನುಜಾಚಾರ್ಯರು ದೆಹಲಿಗೆ ಹೋಗಿದ್ದರು, ಅಷ್ಟುಮಾತ್ರ ಕಲ್ಪನೆಯಿಟ್ಟು ದಂತಕಥೆ ಪ್ರಚಾರವಾಯಿತೇ ಹೊರತು ಮತ್ತೇನೂ ಇರುವುದಿಲ್ಲ.

## ಅನಿರುದ್ಧ ಕಿರೀಟವು

ಶ್ರೀಮಹಾವಿಷ್ಣುವಿಗೆ **ಅನಿರುದ್ಧ**ನೆಂದು ಹೆಸರು. ಒಂದು ಕಾಲದಲ್ಲಿ ಕ್ಷೀರಾಬ್ಧಿಯಲ್ಲಿ ಶ್ರೀಮಹಾವಿಷ್ಣುವು ಯೋಗನಿದ್ರೆಯಲ್ಲಿದ್ದಾಗ ಪ್ರಹ್ಲಾದನ ಮಗ **ವಿರೋಚನನು** ಅಸುರಭಾವದಿಂದ ವಿಷ್ಣುವಿನ ಕಿರೀಟದ ಮೇಲುಭಾಗದ ಕಲಶವನ್ನು ತನ್ನ ಮನೆಯಲ್ಲಿ ಆರಾಧನೆಗಾಗಿ ತೆಗೆದುಕೊಂಡು ಬಂದನು. ಈ ವಿಚಾರವು ತಿಳಿದು ಗರುಡನು ವಿರೋಚನನನ್ನು ಕೊಂದು ಅವನಿಂದ ಕಿರೀಟವನ್ನು ತೆಗೆದುಕೊಂಡು ಆಕಾಶ ಮಾರ್ಗದಲ್ಲಿ ಬರುವಾಗ ಬೃಂದಾವನದಲ್ಲಿ ಶ್ರೀಮಹಾವಿಷ್ಣುವಿನ ಅವತಾರವಾದ **ಶ್ರೀಕೃಷ್ಣ**ನನ್ನು ನೋಡಿ ಅವನಿಗೆ ಈ ಕಿರೀಟವನ್ನು ಸಮರ್ಪಿಸಿದನು. ಅನಂತರ **ಶ್ರೀಕೃಷ್ಣ**ನು ಆ ಅನಿರುದ್ಧ ಕಿರೀಟವನ್ನು ತನ್ನ ಮನೆಯಲ್ಲಿ ಅರ್ಚಾಮೂರ್ತಿಯಾಗಿ ವಿಜಯಮಾಡಿಸಿದ್ದ **ಶ್ರೀರಾಮಪ್ರಿಯ**ನಿಗೆ ಧರಿಸಿದನು.

ಕೆಲಕಾಲದ ಮೇಲೆ ಶ್ರೀಕೃಷ್ಣನು ಬಲರಾಮನೊಂದಿಗೆ ಈ ಕ್ಷೇತ್ರಕ್ಕೆ ಬಂದು ಮೂಲ ಮೂರ್ತಿಯೊಂದಿಗೆ ಶ್ರೀರಾಮಪ್ರಿಯಮೂರ್ತಿಯನ್ನು ಉತ್ಸವಮೂರ್ತಿ

ದಾಗಿ ಸೇರಿಸಿದಾಗ ಈ ಕಿರೀಟವನ್ನು ಸಮರ್ಪಿಸಿದರು. ಆ ಕಿರೀಟವು ಸರ್ವ ಕಾಲದಲ್ಲಿಯೂ ದೇವರ ಮಸ್ತಕದ ಮೇಲೆ ವಿರಾಜಮಾನವಾಗಿದ್ದಿತು. ಅನಿರುದ್ಧ ಕಿರೀಟ (ವಯಿರಮುಡಿ ಕಿರೀಟ) ಶ್ರೀಮಹಾವಿಷ್ಣುವಿನ ಕಿರೀಟದ ಮೇಲ್ಭಾಗ ಕಳಶ ಸ್ಥಾನದಲ್ಲಿದ್ದ ಒಂದು ಭಾಗವು.

## ವಯಿರಮುಡಿ ಚರಿತ್ರೆ

ಶ್ರೀರಾಮಾನುಜಾಚಾರ್ಯರು ಯಾದವಾದ್ರಿ ಊರು ಹಾಳಾಗಿದ್ದ ಸ್ಥಳವನ್ನು ನಿರ್ಣಯ ಮಾಡಿ ದೇವರನ್ನು ಹುಡುಕುತ್ತಿರುವಾಗ ಗರ್ಭಗೃಹವು ಕಂಡುಬಂದು ದೇವಸ್ಥಾನದ ಜೀರ್ಣೋದ್ಧಾರ ಕಟ್ಟಿ, ಅದನಂತರ ಶ್ರೀವೈಷ್ಣವರಿಗೆ ವಾಸಕ್ಕೆ ನಿವೇಶನವನ್ನು ಗೊತ್ತುಮಾಡಿದರು. ಪ್ರಧಾನ ಶ್ರೀವೈಷ್ಣವರಲ್ಲಿ ಒಬ್ಬರಾದ **ತಿರುವನಂತಪುರ ದಾಸರು** ತಮಗೆ ಏರ್ಪಟ್ಟ ನಿವೇಶನದಲ್ಲಿ ಮನೆಕಟ್ಟಲು **ಹೊರಟು** ಪೂರ್ವದಲ್ಲಿ ಅಳಿದುಳಿದು ನಿಂತಿದ್ದ ಗೋಡೆಗಳನ್ನು ಕೆಡವಿ ನೆಲಸಮ ಮಾಡುವಾಗ ಗೋಡೆಯಂಚಿನಲ್ಲಿ ದಿವ್ಯಾಭರಣವಿದ್ದ ಕೂಡಿ ಉಭಯನಾಚ್ಚಿಯಾರು ಜೊತೆ ಕೊಪ್ಪರಿಗೆಯಲ್ಲಿ ಇದ್ದುದು ದೊರಕಿತು. ಈ ವಿಚಾರವು ರಾಮಾನುಜಾಚಾರ್ಯರಿಗೆ ತಿಳಿದು ಅವರು ಬಂದು ಉಭಯನಾಚ್ಚಿಯಾರರನ್ನು ದಿವ್ಯಾಭರಣದೊಂದಿಗೆ ಕಂಡರು. ಈರೀತಿ ಕೊಪ್ಪರಿಗೆಯಲ್ಲಿ ದೊರೆತ ದಿವ್ಯಾಭರಣಗಳಲ್ಲಿ ಈ ಕಿರೀಟವು ಅತ್ಯಂತ ಪ್ರಕಾಶಮಾನವಾಗಿದ್ದುದರಿಂದಲೂ ಶ್ರೀರಾಮಾನುಜಾಚಾರ್ಯರು ದ್ರಾವಿಡ ದೇಶದವರಾದುದರಿಂದಲೂ ಈ ಕಿರೀಟವನ್ನು ದ್ರಾವಿಡಪದದಿಂದಲೇ **ವಯಿರಮುಡಿ** ಎಂಬ ಹೆಸರಿನಿಂದ ಕರೆದರು. ಆ ದಿನದಿಂದ ದ್ರಾವಿಡಪದವಾದ ವಯಿರಮುಡಿ ಎಂಬ ಹೆಸರಿನಿಂದಲೇ ಅನೂಚಾನವಾಗಿ ಕರೆಯಲ್ಪಟ್ಟು ಇಂದಿಗೂ ಆ ದ್ರಾವಿಡ ಪದದ ಹೆಸರೇ ಪ್ರಸಿದ್ಧವಾಗಿರುತ್ತದೆ. ಇದಕ್ಕೆ ಪೂರ್ವ ಈ ಕಿರೀಟಕ್ಕೆ **ಅನಿರುದ್ಧ ಕಿರೀಟ**ವೆಂಬ ಹೆಸರಿದ್ದಿತು.

ದಿವ್ಯಾಭರಣಗಳು ದೊರಕಿದುದಲ್ಲದೆ ನರಸಿಂಹಸ್ವಾಮಿ ಬೆಟ್ಟಕ್ಕೆ ಪಶ್ಚಿಮ ಗ್ರಾಮದಂಚಿನಲ್ಲಿ ಸುವರ್ಣನಾಣ್ಯಗಳೂ ಸಹ ದೊರಕಿದವು. ಇವುಗಳೆಲ್ಲವು ರಕ್ಷಾಕಾರೇಕ ಪಾರ್ಥಿವಃ ಎನ್ನುವಂತೆಯೂ, ಭೂಮಸ್ಥಭವಃ ಎನ್ನುವ ಸೂತ್ರವನ್ನನುಸರಿಸಿ ರಾಜಧರ್ಮ ಶಾಸನದಂತೆ ರಾಜನಿಗೆ ಸೇರಬೇಕಾದ್ದರಿಂದ ವಿಷ್ಣುವರ್ಧನ ಬಲ್ಲಾಳನ ಅರಮನೆಗೆ ಕಳುಹಿಸಲ್ಪಟ್ಟವು. ಆ ದಿವ್ಯಾಭರಣಗಳೆಲ್ಲವನ್ನು ರಾಜನಾದ ವಿಷ್ಣುವರ್ಧನ ಬಲ್ಲಾಳನು ತನ್ನ ಸೇವೆಯೆಂದು ದೇವರಿಗೆ ಸಮರ್ಪಿಸಿದನು.

ಹಾಗಿಲ್ಲದ ಈ ವಯಿರಮುಡಿ ಕಿರೀಟವನ್ನು ಯಾವ ರಾಜರೇ ಆಗಲಿ ಸಮರ್ಪಿಸಿದ್ದರೆ, ರಾಜಮುಡಿ, ಕೃಷ್ಣರಾಜಮುಡಿಯಂತೆ ಇಂಥ ರಾಜರ ಧರ್ಮದ

ಕಿರೀಟ ಅಥವಾ ಉತ್ಸವ, ಸೇವೆ ಎಂಬ ಹೆಸರಿರಬೇಕಾಗಿದ್ದಿತು. ಪ್ರಸಿದ್ಧ ದೇಶದವರಾರೂ ಸಮರ್ಪಿಸಿಲ್ಲವೆಂಬುದೂ ಸಿದ್ಧವೇ. ಅಪ್ರಾಕೃತವಾದ (ಪರಮಪದದವರು ಸಮರ್ಪಿಸಿದವರು ತಿಳಿಯದು) ಈ ಅನಿರುದ್ಧ ಕಿರೀಟವನ್ನೇ ಶ್ರೀರಾಮಾನುಜಾಚಾರ್ಯರು **ವಯಿರಮುಡಿ** ಎಂಬ ಅರವ ಪದದ ಹೆಸರಿನಿಂದ ಕರೆದು ಅನೂಚಾನವಾಗಿ ಬಂದಿರುವುದರಿಂದಲೇ ಈ ಕಿರೀಟಕ್ಕೆ ಅಷ್ಟು ಶ್ರೇಷ್ಠತೆಯು.

## ಪ್ರತ್ಯೇಕವಾಗಿ ವಯಿರಮುಡಿ ಉತ್ಸವಕ್ಕೆ ಕಾರಣ

ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ ನಡೆಸಲು ಚೈತ್ರಮಾಸ ಪುಷ್ಯ ನಕ್ಷತ್ರದಲ್ಲಿ ನಿರ್ಧರಿಸಿದರು. ಅದರೆ ಪಟ್ಟಾಭಿಷೇಕವು ತಪ್ಪಿ ಅರಣ್ಯ ಸಂಚಾರವೇರ್ಪಟ್ಟಿತು. ಈ ವಿಚಾರವು ಪಕ್ಕದಲ್ಲಿದ್ದ ಲಕ್ಷ್ಮಣ ದೇವರಿಗೆ (ರಾಮಾನುಜ) ತಿಳಿದ ವಿಷಯವೇ ಆಗಿದ್ದಿತು. ಅದೇ ಲಕ್ಷ್ಮಣನು ಬಲರಾಮನಾಗಿ ಅವತರಿಸಿದ್ದನು. ಈ ವಿಷಯಗಳನ್ನು ತಿಳಿದ ಶ್ರೀಕೃಷ್ಣ ಬಲರಾಮರು ತಮ್ಮ ಕಾಲದಲ್ಲಿ ಆರಾಧಿತರಾದ ರಾಮಪ್ರಿಯರನ್ನು ಅದೇ ಪುಷ್ಯ ನಕ್ಷತ್ರದಲ್ಲಿ ಪ್ರತಿಷ್ಠಿಸಿದನಂತರ ಬಲರಾಮರೇ ಶ್ರೀರಾಮಾನುಜಾಚಾರ್ಯರಾಗಿ ಅವತರಿಸಿ ಬಿಳಿದಿದ ಯಾದವಾದ್ರಿಯ ನ ಜೀರ್ಣೋದ್ಧಾರ ಮಾಡಿ ದೇವಸ್ಥಾನದಲ್ಲಿ ಆರಾಧನೆ, ಮರ್ಯಾದೆ, ಅಧಿಕಾರ ಕೈಂಕರ್ಯಾದಿಕ್ರಮಗಳನ್ನು ನಿರ್ಧರಿಸಿ ದೇವರಿಗೆ ಆಗಮೋಕ್ತವಾಗಿ, ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಗಳನ್ನು ಕ್ರಮವಾಗಿ ಏರ್ಪಡಿಸಿದರು. ತಮ್ಮ ಕೊರತೆಯನ್ನು ನೀಗಿಸಲು ಅದೇ ಪುಷ್ಯ ನಕ್ಷತ್ರದಲ್ಲಿ ಪ್ರತಿಷ್ಠಿತರಾದ ಶ್ರೀರಾಮಪ್ರಿಯರಿಗೆ ಆಗಮಶಾಸ್ತ್ರದಲ್ಲಿ ತಿಳಿಸಿದಂತೆ ಬ್ರಹ್ಮೋತ್ಸವ ಕಾಲದಲ್ಲಿ ವಿಶೇಷೋತ್ಸವವಾಗಿ ಈ ಅನಿರುದ್ಧ ಕಿರೀಟವಾದ ವಯಿರಮುಡಿ ಕಿರೀಟವನ್ನು ಧರಿಸಿ ಉತ್ಸವವನ್ನು ನಡೆಸಲು ನಿರ್ಧರಿಸಿದುದರಿಂದ ಅನೂಚಾನವಾಗಿ ವಯಿರಮುಡಿ ಉತ್ಸವವು ನಡೆದುಬರುತ್ತಿದೆ. ಆಗಮೋಕ್ತವಾದ ಈ ನಿರ್ಧಾರಕ್ಕೆ ಪೂರ್ವದಲ್ಲಿ ಚೆಲ್ವಪಿಳ್ಳೆಸ್ವಾಮಿಯವರಿಗೆ ಈ ಕಿರೀಟವು ಸದಾಕಾಲದಲ್ಲಿಯೂ ಧರಿಸಲ್ಪಟ್ಟಿದ್ದಿತು.

## ವಯಿರಮುಡಿ – ಶ್ರೀಯತಿರಾಜ ಮಠಾಧಿಕಾರಿಗಳ ಅಧಿಕಾರದಲ್ಲಿ

ಶ್ರೀರಾಮಾನುಜಾಚಾರ್ಯರು ಶ್ರೀರಂಗಕ್ಕೆ ಬಿಜಯಮಾಡಿಸಿದಾಗ ದೇವಸ್ಥಾನದ ಸಕಲಾಧಿಕಾರವನ್ನೂ ತಮ್ಮ ಶಿಷ್ಯರಾದ ದೇಶಾಯಿ ಕೇಳ್ವಿ ತಿರುನಾರಾಯಣಜೀಯರಿಗೆ ವಹಿಸಿದರು. ಅಂದಿನಿಂದ ಈ ಕಿರೀಟವು ದೇವಸ್ಥಾನದಲ್ಲಿಯೇ ಇದ್ದಿತು. ಅಂದಿನಿಂದ ಯತಿರಾಜ ಮಠಾಧಿಪತಿಗಳು, ದೇವಸ್ಥಾನದ ಕೈಂಕರ್ಯಪರರು 1100 ರಿಂದ 1312ರ ವರೆಗೆ ನಿರ್ದಿಷ್ಟವಾಗಿ ಕಾಪಾಡಿಕೊಂಡು ಬಂದರು. ಶಾಸನ ಕ್ರ. ಪಿ. ನಂ. ೩೪೪. ಮಾಗಡಿ ೧೯. ಸಿಯಮನ್‌ಪ್ರತಿ ಶ್ರೀ. ಪ. ೮೭–೨೫೦

## 1312 ರಿಂದ 1450ರ ವರೆಗೆ

ಅನಂತರ ದೇಶದ ರಾಜರ ರಾಜಕೀಯವು ದುರ್ಬಲವಾಗಿ ತುರುಷ್ಕರ ಹಾವಳಿಯಿಂದ ಊರುಗಳು ಆಗಿಂದಾಗ್ಯೆ ಹಾಳಾಗುತ್ತಿದ್ದು ಮಧ್ಯೆ ಮಧ್ಯೆ ಎಚ್ಚರಗೊಳ್ಳುತ್ತಿತ್ತು. ಆ ಕಾಲದಲ್ಲಿ ಮೂಲ ದೇವರಿಗೆ ಕಲ್ಲುಚಪ್ಪಡಿಗಳಿಂದ ಮರೆಮಾಡುವುದು ಉತ್ಸವಮೂರ್ತಿಯನ್ನು ದ್ರವ್ಯಾಭರಣಗಳನ್ನೂ ತೆಗೆದುಕೊಂಡು ಹೋಗುವುದು ಅಥವಾ ಭೂಮಿಯಲ್ಲಿ ನಿಕ್ಷೇಪವಿರಿಸಿ ಶಾಂತ ವಾತಾವರಣವು ಏರ್ಪಟ್ಟ ಮೇಲೆ ಉಪಯೋಗಿಸುವುದು ಈ ರೀತಿಯಲ್ಲಿ ಸುಮಾರು 1312 ರಿಂದ 1450ರ ವರೆಗೆ ಇರಬಹುದು.

## 1450–1460 ಹತ್ತು ವರ್ಷಗಳ ವರೆಗೆ

ಸಂಪೂರ್ಣವಾಗಿ ಹಾಳಾಗದ್ದ ತಿರುನಾರಾಯಣಪುರವು 1450 ರಿಂದ ಈಚೆಗೆ ಸ್ವಲ್ಪ ಸ್ವಲ್ಪವಾಗಿ ಚೇತರಿಸಿಕೊಂಡು ಬರುತ್ತಿದ್ದಿತು. ಶಾಸನ ನಂ. ಶ್ರೀ. ಪ. [illegible] ರಿಂದ ತಿಳಿದುಬರುತ್ತದೆ. ಸಂಗಮಂಗಳದ ತಿಮ್ಮಣ್ಣ ದಣ್ಣಾಯಕರ ಅಭಿಮಾನದಿಂದ ಊರೂ ದೇವಸ್ಥಾನವೂ ಜೀರ್ಣೋದ್ಧಾರವಾದ ಮೇಲೆ ವಿಜಯನಗರದ ಅರಸರ ಪ್ರಾಬಲ್ಯದಿಂದ ತಿರುನಾರಾಯಣಪುರವು ಚೇತರಿಸಿಕೊಂಡು ಅತ್ಯಂತಾಭಿವೃದ್ಧಿ ಸ್ಥಿತಿಯಲ್ಲಿದ್ದಿತು. 1450 ರಿಂದ 1460ರ ವರೆಗೆ ಯತಿರಾಜ ಮಠಾಧಿಪತಿಗಳ ಸಂಪೂರ್ಣಾಧಿಕಾರವು ಕಂಡುಬರುವುದು.

## 1460 ರಿಂದ 1544ರ ವರೆಗೆ

ಪುನಃ ವಿಜಯನಗರದ ಅರಸರೂ, ಮಾಂಡಲೀಕರೂ ಶ್ರೀಯತಿರಾಜ ಮಠಾಧಿಪತಿಗಳಿಗೆ 1544 ರಲ್ಲಿ ದೇವಸ್ಥಾನದ ಸಕಲವಾದ ಅಧಿಕಾರವನ್ನೂ, ಮರ್ಯಾದೆಯನ್ನು ಕೊಟ್ಟುದು ಕಂಡುಬರುವುದರಿಂದ ಈ ಮಧ್ಯೆ 84 ವರ್ಷಗಳು ಅಧಿಕಾರ ಲೋಪವಾಗಿರಬೇಕೆಂದು ತಿಳಿದುಬರುತ್ತದೆ. ಶಾಸನ,

## 1544 ರಿಂದ 1575ರ ವರೆಗೆ

ಶ್ರೀಯತಿರಾಜ ಮಠಾಧಿಪತಿಗಳು ಪುನಃ 1544 ರಲ್ಲಿ ದೇವಸ್ಥಾನದ ವಿಶಿಷ್ಟ ಅಧಿಕಾರವನ್ನೂ ಮರ್ಯಾದೆಯನ್ನೂ ಹೊಂದಿ ಶ್ರೀನಾರಾಯಣಸ್ವಾಮಿಯವರ ಕೈಂಕರ್ಯದಲ್ಲಿ 30 ವರ್ಷಗಳು ನಡೆಸಿರಬಹುದೆಂದು ತಿಳಿದುಬರುವುದು. ದೇವಸ್ಥಾನಕ್ಕೆ ಆಗ ವರಮಾನವು ಹತ್ತು ಸಹಸ್ರ ವರಹಕ್ಕೆ ಮೇಲ್ಪಟ್ಟು ಉತ್ಪತ್ತಿಯಿದ್ದಿತು. ಪ್ರತಿದಿನ ದೇವರಿಗೆ 150 ಪಡಿ ಪ್ರಸಾದವು ನಿವೇದನವಾಗುತ್ತಿದ್ದಿತು.

## 1575 ರಿಂದ 1612ರ ವರೆಗೆ

ಈ ಕಾಲದಲ್ಲಿ 1575 ರಿಂದ ಮುಂದಕ್ಕೆ ಶ್ರೀಯತಿರಾಜ ಮಠಾಧಿಪತಿಗಳಿಗೆ ಆಘಾತವುಂಟಾದುದೂ ಮತ್ತು ರಾಷ್ಟ್ರಾಂಗದಲ್ಲಿ ಶ್ರೀರಂಗರಾಜರ ಪ್ರಾಬಲ್ಯವು ಕಡಿಮೆಯಾದುದೇ ಮೊದಲಾದ ಕಾರಣಗಳಿಂದ ದೇವಸ್ಥಾನದ ಅಧಿಕಾರ ವರ್ಗದ ಕೈಂಕರ್ಯ ಪರರಲ್ಲಿ ಅಸೂಯೆ. ಸ್ವಲಾಭಾಪೇಕ್ಷೆಯಿಂದ ನಿರಂಕುಶಾಧಿಕಾರವು ಉಂಟಾಗಿ ಸುಮಾರು 35 ವರ್ಷಗಳ ವರೆಗೆ ನಡೆದುಬಂದಮೇಲೆ ಆಗ ರಾಜ್ಯಭಾರ ನಡೆಸುತ್ತಿದ್ದ ರಾಜಒಡೆಯರಿಗೆ ವಿಷಯಗಳು ತಿಳಿಸಲ್ಪಟ್ಟು 1612 ರಲ್ಲಿ ದೇವಸ್ಥಾನದ ಸರ್ವಾಧಿಕಾರವನ್ನೂ ಅರಮನೆಯವರೇ ವಿಚಾರಣೆಮಾಡಿ ದೇವತಾ ಆರಾಧನೆ ಚೆನ್ನಾಗಿ ನಡೆಸುವಂತೆ ಏರ್ಪಟ್ಟಿತು. ದೇವಸ್ಥಾನದ ಸಕಲವಾದ ಅಧಿಕಾರವೂ ಅರಮನೆಗೆ ಸೇರಿದುದರಿಂದ ಇನ್ನು ದೇವಸ್ಥಾನದ ಸ್ವತ್ತುಗಳಿಗೆ ಲೋಪ ಭಯವಿಲ್ಲವೆಂದು ತಿಳಿದು **ರಾಜಒಡೆಯರು** ಅಮೂಲ್ಯ ರತ್ನಗಳಿಂದ ಚಲುವರಾಯ ಸ್ವಾಮಿಗೆ ತಮ್ಮ ಹೆಸರಲ್ಲಿ **ರಾಜಮುಡಿ** ಎಂಬ ಕಿರೀಟವನ್ನೂ ಇನ್ನೂ ಅನೇಕ ಆಭರಣಗಳನ್ನೂ ಮಾಡಿಸಿ ವಯಿರಮುಡಿ ಉತ್ಸವವಾದ ಮೇಲೆ ವಯಿರಮುಡಿ ಸಹಿತವಾಗಿ ಆಭರಣಗಳೆಲ್ಲವೂ ಶ್ರೀರಂಗಪಟ್ಟಣದ ಅರಮನೆಗೆ ತೆಗೆದುಕೊಂಡು ಬರುವಂತೆ ಏರ್ಪಡಿಸಿದರು, ತದಾರಭ್ಯ ಶ್ರೀರಂಗಪಟ್ಟಣದ ಅರಮನೆಯಲ್ಲಿ ವಯಿರಮುಡಿಯು ಸೇರಿತು. ಅಷ್ಟತೀರ್ಥ ಮುಂತಾದ ಉತ್ಸವಗಳಲ್ಲಿ **ರಾಜಮುಡಿಯು** ಮಾತ್ರ ಹೋಗಿಬರುವಂತೆ ಏರ್ಪಡಿಸಿದರು.

## 1672 ರಿಂದ 1792ರ ವರೆಗೆ

ರಾಜಒಡೆಯರು ದೇವಸ್ಥಾನದ ಸಕಲವಾದ ಅಧಿಕಾರವನ್ನೂ ತೆಗೆದುಕೊಂಡ ಮೇಲೆ ತದಾರಭ್ಯ 1792ರ ವರೆಗೂ ಮೈಸೂರು ರಾಜರು ಯಾವ ಅತಂಕವೂ ಇಲ್ಲದೆ ಶ್ರೀರಂಗಪಟ್ಟಣದ ಅರಮನೆಯಲ್ಲಿಟ್ಟು ಕಾಪಾಡಿ ಬಂದರು.

## 1792 ರಿಂದ 1800ರ ವರೆಗೆ

ರಾಜತಂತ್ರ ಬಲವು ಕಡಿಮೆಯಾಗಿ ಹೈದರಾಲಿ ಟಿಪ್ಪು ಇವರ ಕೈಯಲ್ಲಿ ರಾಜ್ಯದ ಅಧಿಕಾರವಿದ್ದಾಗ ಆಂಗ್ಲೇಯರಿಗೂ ಟಿಪ್ಪುವಿಗೂ 1792 ರಲ್ಲಿ ಯುದ್ಧವುಂಟಾಗಿ ಟಿಪ್ಪುವು ಸೋತು ಆಂಗ್ಲೇಯರ ಅಧಿಕಾರಿಯಾದ ಕಾರ್ನವಾಲೀಸಿಗೆ 1792 ರಲ್ಲಿ ಆದ ಒಪ್ಪಂದದಂತೆ ಬ್ರಿಟಿಷರಿಗೆ ಅರ್ಧ ರಾಜ್ಯವನ್ನೂ ಮೂರುಕೋಟಿ ರೂಪಾಯಿಗಳನ್ನೂ ಕೊಡಬೇಕಾಗಿ ಬಂದಿತು. ಅದಕ್ಕಾಗಿ ದೇಶದಲ್ಲಿದ್ದ ಪ್ರತಿಯೊಂದು ಸಂಸ್ಥೆಯಿಂದಲೂ, ಪ್ರಜೆಯಿಂದಲೂ ಹಣವನ್ನು ಶೇಖರಿಸಿದನು. ಈ ಕಾಲದಲ್ಲಿ

ದೇವಸ್ಥಾನದ ಸಂಪತ್ತುಗಳನ್ನು ತೆಗೆದುಕೊಂಡುದಾದರಿಂದ ಅಂದಿನಿಂದ 1800ರ ವರೆಗೆ ಟಿಪ್ಪುವಿನ ಭಂಡಾರದಲ್ಲಿ ವಯಿರಮುಡಿಯು ಸೇರಿದ್ದಿತು.

## 1800 ರಿಂದ 1956ರ ವರೆಗೆ

### ಪುನಃ ಮೈಸೂರು ರಾಜರ ಅರಮನೆಯಲ್ಲಿ

ಶ್ರೀರಂಗಪಟ್ಟಣದಲ್ಲಿ ರಾಜ್ಯಾಧಿಕಾರವನ್ನು ಹೊಂದಿದ ಟಿಪ್ಪು 1799ರ ಯುದ್ಧದಲ್ಲಿ ಕಾಲವಾದನು. ಆಂಗ್ಲೇಯರು ರಾಜ್ಯವನ್ನು ಹಿಡಿದು ಸಮಸ್ತ ಐಶ್ವರ್ಯವನ್ನು ವಶಪಡಿಸಿಕೊಂಡಾಗ ರಾಜ ಭಂಡಾರದಲ್ಲಿದ್ದ ಅನೇಕ ವಿಗ್ರಹಗಳು, ಐಶ್ವರ್ಯಾಭರಣಗಳಲ್ಲಿ ತಮಗೆ ಬೇಕಾದವುಗಳನ್ನು ತೆಗೆದುಕೊಂಡು ಮಿಕ್ಕ ಅನೇಕ ಆಭರಣಗಳನ್ನು ಹರಾಜು ಹಾಕಿದರು. ಆ ರೀತಿ ಹರಾಜು ಹಾಕಿದ ಆಭರಣ ವಸ್ತುಗಳಲ್ಲಿ ವಯಿರಮುಡಿಯೂ ಸೇರಿರುವಹಾಗಿದೆ. ಅನಂತರ **ಕೃಷ್ಣರಾಜ ಒಡೆಯರು** ಆ ವಯಿರಮುಡಿಯನ್ನು ದೇವಸ್ಥಾನಕ್ಕೆ ಸಮರ್ಪಿಸಿ ಪುನಃ ಹಿಂದಿನಂತೆ ದೇವರ ಕಿರೀಟಧಾರಣೆ ಉತ್ಸವವಾದೊಡನೆ ವಯಿರಮುಡಿ. ರಾಜಮುಡಿ ಮೈಸೂರು ರಾಜಭವನದಲ್ಲಿ ಇಡಲ್ಪಡುತ್ತ ಬಂದಿತು.

## 1956 ರಿಂದ ಇಂದಿನವರೆಗೆ

ತದನಂತರ ರಾಜಕೀಯ ಕಾರಣಗಳಿಂದ ರಾಜ್ಯತಂತ್ರವು ವ್ಯತ್ಯಾಸವಾಗಿ ಪ್ರಸ್ತುತ ಮಂಡ್ಯ ಜಿಲ್ಲಾಧಿಕಾರಿಗಳ ಭಂಡಾರದಲ್ಲಿ ಇಡಲ್ಪಟ್ಟಿರುವುದು.

## ಶ್ರೀನಾರಾಯಣಸ್ವಾಮಿ ದೇವಸ್ಥಾನದ ಆಡಳಿತ ಉತ್ಪತ್ತಿ ಪರಿಮಾಣ

ಶ್ರೀರಾಮಾನುಜಾಚಾರ್ಯರು ದೇವರಿಗೆ ಪಡಿತರ ದೀಪಾರಾಧನೆಯನ್ನು ಏರ್ಪಡಿಸಿದ ನಂತರ ರಾಜಕೀಯ ಬದಲಾವಣೆ ಇತರ ಕಾರಣಗಳಿಂದಲೂ. ದೇವಸ್ಥಾನದಲ್ಲೂ ವ್ಯತ್ಯಾಸವಾಗುತ್ತಿತ್ತು. ಸುಮಾರು A.D. 1564 ರಲ್ಲೂ ಸಹ ದೇವಸ್ಥಾನಕ್ಕೆ ಹತ್ತು ಸಹಸ್ರ ವರಹಗಳಿಗೆ ಮೇಲ್ಪಟ್ಟು ಉತ್ಪತ್ತಿಯೂ, ದಿನ ಒಂದಕ್ಕೆ [illegible] ಅಮೃತಪಡಿ ನಿವೇದನವೂ ನಡೆಯುತ್ತಿದ್ದುದು ಅನೇಕ ಶಾಸನಗಳಿಂದ ಕಂಡುಬರುತ್ತದೆ.

ರಾಜ್ಯದ "ಆಡಳಿತವು ಕೆಲವುಕಾಲ ವಿಧರ್ಮಿಗಳ ವಶದಲ್ಲಿದ್ದಾಗ ದೇಶದಲ್ಲಿ ಅನೇಕ ದೇವಸ್ಥಾನಗಳು ನೆಲಸಮ ಮಾಡಲ್ಪಟ್ಟುವು. ಕ್ರಿ. ಶ. 1801ರ ವೇಳೆಗೆ ದೇಶದಾದ್ಯಂತ ಒಟ್ಟು 1065 ದೇವಸ್ಥಾನಗಳಿದ್ದುವು. ಆಗ ದೇವಸ್ಥಾನ ಮತ್ತು ಅಗ್ರಹಾರಗಳಿಗೆ ಸುಮಾರು ಎರಡು ಲಕ್ಷ ವರಹಗಳೂ ಮಠ ಮತ್ತು ಬ್ರಾಹ್ಮಣರಿಗೆ

30,000 ವರಹಗಳೂ ಸೇರುತ್ತಿತ್ತು. ಏತಿಷ್ಟು ಗ್ರಾಮಭೂಮಿಗಳನ್ನು ಸರಕಾರಕ್ಕೆ ತೆಗೆದುಕೊಂಡಾಗ ಪಂಡಿತರ ದೇವಾರಾಧನೆಗೆ ೨೫ ಸಾವಿರ ರೂಪಾಯಿಗಳ ರೊಕ್ಕವಾಗಿ ಕೊಡುತ್ತಿದ್ದರು.

ಪ್ರಸ್ತುತ ಈ ಗ್ರಂಥ ಪ್ರಕಾಶನ ಕಾಲದಲ್ಲಿ ಸರಕಾರದಿಂದ ದೇವಸ್ಥಾನ ನಡೆಸಲು ಸುಮಾರು ಒಂದುಲಕ್ಷ ರೂಪಾಯಿವರೆಗೂ ಕೊಡುವುದು ತಿಳಿದುಬರುತ್ತದೆ.

## ಉಭಯನಾಚ್ಚಿಯಾರರು

ಶ್ರೀರಾಮಾನುಜರು ತಿರುನಾರಾಯಣಪುರವನ್ನು ಜೀರ್ಣೋದ್ಧಾರ ಮಾಡಿದ ಮೇಲೆ ಕೈಂಕರ್ಯಪರರಿಗೆ ಮನೆಕಟ್ಟಿಕೊಳ್ಳಲು ನಿವೇಶನಗಳನ್ನು ಕೊಟ್ಟರು.

ಪ್ರಧಾನ ಕೈಂಕರ್ಯಪರರಲ್ಲಿ ಒಬ್ಬರಾದ **ತಿರುವನಂತಪುರದಾಸರು** ತಮ್ಮ ಮನೆಗೆ ತಳಹದಿಯನ್ನು ತೆಗೆಯುವಾಗ ಗೋಡೆಯ ಸಾಲಿನಲ್ಲಿ ಇಬ್ಬರು ನಾಚ್ಚಿಯಾರುಗಳು ದಿವ್ಯಾಭರಣಗಳೊಂದಿಗೆ ದೊಡ್ಡ ಪಾತ್ರೆಯಲ್ಲಿದ್ದುದನ್ನು ಕಂಡು ಎಂಬೆರುಮಾನಾರವರ ಸನ್ನಿಧಿಗೆ ಬಂದು ವೃತ್ತಾಂತವನ್ನು ನಿರೂಪಿಸಿದರು. ಶ್ರೀರಾಮಾನುಜರು ಓಡಿಬಂದು ನಾಚ್ಚಿಯಾರರನ್ನು ಕಂಡು ಸಂತೋಷಪಟ್ಟು **ಚೆಲ್ವನಾಯಕಿ, ಚೆಲ್ವಪೆಂಡಾಟ್ಟಿ** ಎಂದು ನಾಮಧೇಯಗಳನ್ನಿಟ್ಟವರಾದರು.

**ತಿರುವನಂತಪುರದಾಸರು** ಯತಿರಾಜಕುಮಾರರಾದ ಚೆಲ್ವಪಿಳ್ಳೆರಾಯರಿಗೆ ಆ ದಿವ್ಯಾಭರಣ ಸಮೇತವಾಗಿ ನಾಚ್ಚಿಯಾರರನ್ನು ಸಮರ್ಪಿಸಿದರು.

ಉಡಯರವರು ತಿರುವನಂತಪುರದಾಸರ ಮನೆಯಿಂದ ನಾಚ್ಚಿಯಾರರನ್ನು ತಮ್ಮ ಮಠಕ್ಕೆ ಬರಮಾಡಿಕೊಂಡು ಬಂದು ತಮ್ಮ ಮನೆಯೇ ತವರುಮನೆಯೂ, ತಿರುವನಂತಪುರದಾಸರ ಮನೆಯೇ ಹುಟ್ಟಿದ ಮನೆಯೂ ಆಗಿ ಚೆಲ್ವಪಿಳ್ಳೆರಾಯರಿಗೆ ಸಂತೋಷದಿಂದ **ಕಲ್ಯಾಣಮಹೋತ್ಸವ**ವನ್ನು ನಡೆಸಿದರು.

ಈ ನಾಚ್ಚಿಯಾರರು ದೊರಕಿದ ಸ್ಥಳವು ತಿರುವನಂತಪುರದಾಸರ ಮನೆ ನಿವೇಶನದ ಹಾಳು ಗೋಡೆಯಾಳದಲ್ಲಿ ಹುದುಗಿಸಿಟ್ಟಿದ್ದ ದೊಡ್ಡ ಗಂಗಾಳಪಾತ್ರೆಯಲ್ಲಿ— ತಿರುವನಂತಪುರದಾಸರ ಮನೆಯು ಈಗ ಜೀಯರ್ ಗುಡಿ ಇರುವ ಸ್ಥಳದಲ್ಲಿ ಇತ್ತು. ಶಾಲಿ— ಶ್ರೀರಾಮಾನುಜರು ಚೆಲ್ವಪಿಳ್ಳೆರಾಯರನ್ನು ಬಿಜಯಮಾಡಿಸಿಕೊಂಡು ಬಂದನಂತರ ಕೆಲವು ದಿವಸಗಳಲ್ಲೇ ಈ ಪ್ರಕರಣವು ನಡೆಯಿತೆಂದು ತಿಳಿಯಬೇಕು.

ಉಡೈಯವರು ತಿರುವನಂತಪುರದಾಸರನ್ನು ತಮ್ಮಲ್ಲಿಗೆ ಕರೆಯಿಸಿ "ನಾವು ನಿಮಗೆ ಒಂದು ಮರ್ಯಾದೆಯನ್ನು ಮಾಡುವೆವು ಸ್ವೀಕರಿಸಿ" ಎನ್ನಲು ಅವರು ಮಹಾಪ್ರಸಾದವೆಂದರು.

ಚಲ್ವನಾಚಿ ನಾಚಿಯಾರ್‌ರೊಡನೆ ದೊರೆತ ದ್ರವ್ಯವನ್ನು ಆಭರಣಗಳನ್ನೆಲ್ಲಾ ನೀವೇ ತೆಗೆದುಕೊಳ್ಳಿ ಎಂದರು. ಅದಕ್ಕೆ ತಿರುವನಂತಪುರದಾಸರು ಆ ದ್ರವ್ಯವನ್ನು ರತ್ನಾದಿಗಳು ನನಗೆ ಬೇಡವೆಂದರು.

ಶ್ರೀರಾಮಾನುಜರು ನಿಧಿನಿಕ್ಷೇಪ ಜಲತರುಪಾಷಾಣ, ಅಕ್ಷೀಣಿ ಆಗಾಮಿ ಸಿದ್ಧ ಸಾಧ್ಯಂಗಳಲ್ಲಿ ಸ್ವಾಮ್ಯಧರ್ಮಗಳನ್ನು ನಾವು ಮೀರತಕ್ಕವರಲ್ಲ ಎಂದರು. ತಿರುವನಂತಪುರದಾಸರು **"ಶರೀರಮರ್ಥಂ ಚ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್"** ಎಂಬ ಶಿಷ್ಟ್ಯವನ್ನು ನಾವೂ ಮೀರತಕ್ಕವರಲ್ಲವೆಂದು ತಿಳಿಸಿದರು. ಇದನ್ನು ಕೇಳಿ ಶ್ರೀರಾಮಾನುಜರು ಸಂತೋಷಗೊಂಡವರಾಗಿ ಅವರಿಗೂ ದೇವಸ್ಥಾನದಲ್ಲಿ ವಿಶೇಷವಾದ ಉಳಿಗ ಮರ್ಯಾದೆಯನ್ನು ಅನುಗ್ರಹಿಸಿದರು.

ತಿರುವನಂತಪುರದಾಸರಿಗೆ ಮನೆ ಕಟ್ಟಲು ನಿವೇಶನ ಕೊಟ್ಟ ಕಾಲ ಭೂಮಿ ಜೀರ್ಣೋದ್ಧಾರವಾದ ಮೇಲೆ 1103 ರಲ್ಲಿ ನಿವೇಶನ ಕೊಟ್ಟರು. 1110ರ ವರೆಗೆ ಅವರು ಮನೆ ಕಟ್ಟಲಿಲ್ಲವೆಂದು ಕಾಣಬರುವುದು.

ಶ್ರೀನಾರಾಯಣಸ್ವಾಮಿ ಚಲುವರಾಯಸ್ವಾಮಿಗೆ ಅಮೂಲ್ಯವಾದ ಅನೇಕ ಆಭರಣಗಳಿದ್ದುವು. ರಾಜಕೀಯ ಕಾರಣಗಳಿಂದ ಅನೇಕ ಆಭರಣಗಳು ನಷ್ಟವಾದುವು. ಪ್ರತ್ಯೇಕ ದೇವರಿಗೆ ಅಪ್ರಾಕೃತವಾದ **ವೈರಮುಡಿ,** ರಾಜಒಡೆಯರು, ಕೃಷ್ಣರಾಜ ಒಡೆಯರು ಮಾಡಿಸಿ ಸಮರ್ಪಿಸಿದ **ರಾಜಮುಡಿ, ಕೃಷ್ಣರಾಜಮುಡಿ** ಎಂಬ ಕಿರೀಟಗಳು, ಬಂಗಾರದ ಬಟ್ಟಲು, ಅಭಯಹಸ್ತ, ಪಾದುಕೆ. ಶಂಖಚಕ್ರಗಳು ಕಂಠಾಭರಣ, ಯಜ್ಞೋಪವೀತ, ರಾಮಾನುಜಾಚಾರ್ಯರಿಗೆ ಬಂಗಾರದ ತ್ರಿದಂಡ ಮುಂತಾಗಿ ಅನೇಕ ಆಭರಣಗಳಿರುವುವು.

ಕಳ್ಳಪ್ಪಿಳ್ಳೈ ದೇವರಿಗೆ ಹೃದಯದಲ್ಲಿರುವ ಲಕ್ಷ್ಮಿಯನ್ನು **ಶ್ರೀಯತಿರಾಜಸ್ವಾಮಿ**ಗಳು (1140-1186) ಈ ಮಧ್ಯಕಾಲದಲ್ಲಿ ಸಮರ್ಪಿಸಿದುದು ಅದ್ಯಾವಧಿ ಕಾಣಬರುವುದು.

ಸಂಪತ್ಸುತಸ್ಯ ಯದುಭೂಧರ ಮಂಗಳಸ್ಯ ।
ವಕ್ಷಸ್ಥಲಸ್ಥಿತ ವರೇಣ್ಯಮಯೀಂ ಶ್ರಿಯಂ ।
ತಾಂ ಯೋಗಿನಂ ಯತಿಪತೇರ್ಯ ನಿಯೋಗಲಬ್ಧ ।
ಸಂಪತ್ಕುಮಾರವದ ಮನ್ಮಥ ಮಹಾತ್ಮ್ಯಯಮಾನಃ ।

## ವಿಶೇಷ ಸಂದರ್ಭಗಳು

ಶಕ ೧೫೦೭ರ ಪಾರ್ಥಿವ ಸಂ. (A. D. 17-10-1585) ರಲ್ಲಿ ಶ್ರೀರಂಗ ರಾಯರು ಉಭಯ ವೇದಾಂತ ವಿದ್ವಾಂಸರಾದ ಪೆರಿಯ ತಿರುಮಲನಂಬಿ

ಷಟೂರಕುಮಾರ ತಿರುಮಲ ತಾತಾಚಾರ್ಯರಿಗೆ. ಶ್ರೀಚೆಲ್ವಪಿಳ್ಳೆ ಸನ್ನಿಧಿಯಲ್ಲಿ ಇರುವಲ್ ಶ್ರೀವೈಷ್ಣವರಿಗೆ ಪರಕೋಪ ಮರ್ಯಾದೆಯಾದ ಮೇಲೆ ಇವರಿಗೆ ಪ್ರತ್ಯೇಕವಾಗಿ ಅನುಕ್ರಮವಾದ ಮರ್ಯಾದೆಯಿಂದ ತೀರ್ಥಪ್ರಸಾದ ಸಲ್ಲಿಸುವರು. ಅಲ್ಲದೆ,

ಅಧ್ಯಯನೋತ್ಸವ ಕಾಲದಲ್ಲಿ ಆರನೇ ದಶಕದ ಪ್ರಬಂಧ ಪಾರಾಯಣ ಸಮಯದಲ್ಲಿ ಇವರು ಶ್ರೀಶಠಕೋಪರನ್ನು ಹಿಡಿಯುವರು. ಉಲಕ ವೃಷಭವಾಹನೋತ್ಸವದ ಪ್ರಾರಂಭದ ದಿನ ಇವರಿಗೆ ಪ್ರತ್ಯೇಕವಾದ ಮರ್ಯಾದೆಯನ್ನು ಹೊಂದಬೇಕೆಂದು ನಿರ್ಧರಿಸಿದ ಮರ್ಯಾದೆ ಶಾಸನ. (ಶಾಂಪ್ರ. ೧೪೯–೧೫೦)

## ಸಂಪ್ರದಾಯ ವಿವಾದ ತೀರ್ಪು

ಸಂಪ್ರದಾಯದ ಸ್ವರೂಪದಲ್ಲಿ **ಯತಿರಾಜ ಸಪ್ತತಿ** ಸ್ತೋತ್ರ ಅನುಸಂಧಾನ ವಿಷಯದಲ್ಲಿ ವಾದ ವಿವಾದಗಳುಂಟಾಗಿ ರಾಜಪ್ರತಿನಿಧಿ ಶ್ರೀರಂಗರಾಯರಿಗೆ ತಿಳಿದು ಶಕ ೧೪೯೬ ಭಾವ ಸಂ॥ (A. D. 1574) ತಿರುನಾರಾಯಣಪುರದಲ್ಲಿ ಶ್ರೀಯತಿರಾಜಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಶ್ರೀರಂಗರಾಯರ ಕುಮಾರರು ರಾಮರಾಜ ಅರಸುಗಳು, ಶ್ರೀಪರಾಂಕುಶಜೀಯರು, ಕಾಂತಾಚಾರ್ಯರು, ವೆಂಕಟೋಲ ಭಟ್ಟರು, ಜನಪ್ಪಯ್ಯರು, ಚೊಕ್ಕಣ್ಣನವರ ಕುಮಾರರು ರಾಮರಾಜಯ್ಯನವರು, ಸಕಲಾಚಾರ್ಯಪುರುಷರು, ಅಧಿಕಾರಿಗಳು ಎಲ್ಲರೂ ಸಭೆ ಸೇರಿ ತಿರುನಾರಾಯಣ ಚೆಲ್ವಪಿಳ್ಳೆಯವರ ಸನ್ನಿಧಿಯಲ್ಲಿ **ಅಕ್ಷರಾವೃತ್ತಿ** (ಪುಂಖಪುಷ್ಪ) ಅನಂತರ ಯತಿರಾಜ ಸಪ್ತತಿಯನ್ನು ಅನುಸಂಧಾನಮಾಡಿ ಬರುವುದು ಎಂದು ತೀರ್ಮಾನಿಸಿ ಧರ್ಮಶಾಸನವನ್ನು ಬರೆದರು. ಮತ್ತು ತಿರುನಕ್ಷತ್ರದ ಕಾಲಗಳಲ್ಲಿಯೂ ಅನುಸಂಧಾನಮಾಡಿ ಬರಬಹುದು. (ಶಾಂಪ್ರ. 136)

## ವಿಶೇಷ ವಿಷಯ – ವಾರದ ಸಂತೆ

ಸಾಧಾರಣವಾಗಿ ಪ್ರತಿ ಊರು ಗ್ರಾಮಗಳಲ್ಲಿಯೂ ವಾರಕ್ಕೆ ಒಂದಾವರ್ತಿ ವ್ಯಾಪಾರಸ್ಥರು ಸಾಮೂಹಿಕವಾಗಿ ಒಂದೆಡೆ ಸೇರಿ ತಮ್ಮ ಪದಾರ್ಥಗಳನ್ನು ವಿಕ್ರಯ ವಿನಿಮಯ ಮಾಡಿಕೊಳ್ಳುವರು. ಇದಕ್ಕೆ **ವಾರದ ಸಂತೆ** ಎಂದು ಹೆಸರು. ಆ ರೀತಿಯಲ್ಲಿ ಶಕ ೧೪೫೦ ಸರ್ವಜಿತು ಸಂ॥ (28–1–1528)ದಲ್ಲಿ ಮೇಲುಕೋಟೆಯಲ್ಲಿ ಮೊದಲ ಸಂತೆ ಏರ್ಪಟ್ಟಿತು. ಶಾಂಪ್ರ. ೧೩೩

## ದಿವ್ಯದೇಶ ವೈಭವವು – ತಿರುನಾರಾಯಣಪುರ (ಮೇಲುಕೋಟೆ)

ಶ್ರೀಯಃಪತಿಯಾದ ಕೃಪಾಪರತಂತ್ರನಾಗಿರುವ ಸರ್ವೇಶ್ವರನು, ಅಚಿತ್ಕಲ್ಪರಾಗಿ ಬಿದ್ದಿದ್ದ ಚೇತನರಿಗೆ ಕರಣಕಳೇಬರಗಳನ್ನು ದಾನಮಾಡಿ ಅಜ್ಞಾನವೆಂಬ

ಕತ್ತಲೆಯನ್ನು ನೀಗಿಸಿ ಒಳ್ಳೆಯದು, ಕೆಟ್ಟುದು ಎಂಬ ವಿವೇಕವುಂಟಾಗುವುದಕ್ಕೋಸ್ಕರ ಶಾಸ್ತ್ರವೆಂಬ ದೀಪವನ್ನು ಕೊಟ್ಟರೂ, ಕಾರ್ಯಕರವಾಗದಿರುವುದನ್ನು ಕಂಡು ರಾಮಕೃಷ್ಣಾದ್ಯವತಾರಗಳನ್ನು ಮಾಡಿ, ತನ್ನ ಉಪದೇಶದಿಂದಲೂ, ನಡವಳಿಕೆಯಿಂದಲೂ ಮನಸೋತು, ತನ್ನನ್ನು ಹೊಂದಿ ಬಾಳಕ್ಕೆ ರೀತಿಗಳನ್ನು ತೋರಿಸಿ ಅನುಗ್ರಹಿಸಿದನು. ಆದರೂ ಕೆಲವರಿಗೆ ಕಾಲದೇಶಗಳಿಂದ ಸಿಕ್ಕದೆಯೂ, ಮತ್ತೆ ಕೆಲವರಿಗೆ ಪ್ರಾಕೃತ ಸಂಬಂಧ ವಿಶೇಷದಿಂದುಂಟಾದ ಅನಾದರಣೆಯಿಂದಲೂ, ಇನ್ನು ಕೆಲವರಿಗೆ ಅಜ್ಞಾನದಿಂದಲೂ ಬೇರೆ ವಿಧವಾದ ಭಾವನೆಯುಂಟಾಗಿ ಪ್ರಯೋಜನವಾಗದೆ ಹೋಯಿತು.

ಇದನ್ನು ನೋಡಿ ತಾನು ಎಲ್ಲಾ ಕಡೆಗಳಲ್ಲಿಯೂ ಅಂತರ್ಯಾಮಿಯಾಗಿ ನಿಂತಿರುವ ನೆಲೆಯನ್ನು ಕಣ್ಣಿಗೆ ತೋರಿಸುವುದಕ್ಕಾಗಿ, ಚೇತನರು ಅವರವರ ಇಷ್ಟ ಬಂದಂತೆ ಆಕಾರವನ್ನೂ ಹೆಸರನ್ನೂ ಕಲ್ಪಿಸಿಕೊಂಡು ಮಾಡುವ ಅವರ (**ಸ್ವಾರ್ಥ** ಪ್ರವೃತ್ತಿ) ಅನಾದರ ರೂಪವಾದ ನಡತೆಗಳನ್ನೇ ನೆಪಮಾಡಿಕೊಂಡು ಆ ಚೇತನರನ್ನು ಒಪ್ಪಿಕೊಳ್ಳುವುದಕ್ಕೋಸ್ಕರ **ಅರ್ಚಾವತಾರ**ವನ್ನು ಅಂಗೀಕರಿಸಿದನು.

ಇದರ ರಹಸ್ಯವನ್ನು ಉಪದೇಶಿಸುವುದಕ್ಕಾಗಿ ನಿತ್ಯಸೂರಿಗಳನ್ನು ಈ ಲೀಲಾ ವಿಭೂತಿಯಲ್ಲಿ ಅವತರಿಸುವಂತೆ ಮಾಡಿ, ಅವರ ಮೂಲಕ ಆಚಾರ್ಯಕೃತ್ಯವನ್ನೂ ಪ್ರಕಟವಾಗುವಂತೆ ಮಾಡಿದನು.

ಇದರ ಸಾರವನ್ನು ಬಲ್ಲ ನಮ್ಮ ಪೂರ್ವಾಚಾರ್ಯರುಗಳು ಪರಮಪದದಲ್ಲಿ ಇರುವ ನಿಲವುಗಳೂ, ರಾಮಕೃಷ್ಣಾದಿ ವಿಭವಾವತಾರಗಳಲ್ಲಿದ್ದ ನಿಲವುಗಳೂ, ಈ ಅರ್ಚಾವತಾರ ನಿಲವುಗಳೂ ವ್ಯತ್ಯಾಸವಿಲ್ಲದಂತೆ ಸಾಕ್ಷಾತ್ಕಾರವಮಾಡಿ, ಅದನ್ನು ನೇರವಾಗಿ ಉಪದೇಶಗಳಿಂದಲೂ, ಪ್ರಬಂಧಗಳಿಂದಲೂ ಚೇತನರ ಉಜ್ಜೀವನಾರ್ಥವಾಗಿ ಪ್ರಕಾಶಪಡಿಸಿಕೊಂಡು ದಿವ್ಯದೇಶದ ವೈಭವಗಳನ್ನು ಬಾಳಿಸಿಕೊಂಡು ಬಂದರು.

ಹಲವು ದಿವ್ಯದೇಶಗಳು ಇರುತ್ತಿದ್ದರೂ ನಮ್ಮ ಪೂರ್ವಾಚಾರ್ಯರುಗಳು ಇಷ್ಟಪಟ್ಟಿದ್ದು ಕೊಂಡಾಡಿದ್ದು ಮಾತ್ರವೇ. ಅವುಗಳಲ್ಲಿಯೂ "ಮಹದ್ಧಾಮ ಚತುಷ್ಟಯಂ" ನನ್ನ ಕೆಲ ಕ್ಷೇತ್ರಗಳು ನಾಲ್ಕು ಎಂದು ಪ್ರತ್ಯೇಕವಾಗಿ ನಿರ್ದಿಷ್ಟವಾದವು. **ಶ್ರೀರಂಗ, ತಿರುಪತಿ, ಕಂಚಿ, ತಿರುನಾರಾಯಣಪುರ** ಎಂಬೀ ನಾಲ್ಕು ಮಾತ್ರ. ಈ ನಾಲ್ಕರಲ್ಲಿಯೂ "ಅಷ್ಟೋತ್ತರ ಶತಸ್ಥಾನ ಸಾರೋಯಾದವ ಭೂಧರೇ" ಎಂದರೆ ನೂರೆಂಟು ದಿವ್ಯದೇಶಗಳಲ್ಲಿಯೂ ಸಾರತಮವೆಂದು ಹೇಳಲ್ಪಟ್ಟಿರುವುದು. ಈ **ತಿರುನಾರಾಯಣಪುರ** (ಮೇಲುಕೋಟೆ) ಎಂಬ ದಿವ್ಯದೇಶ ಮಾತ್ರವೇ.

## ಯಾದವಾದ್ರಿ (ಮೇಲುಕೋಟೆ) ವೈಭವ ವಿಶೇಷ

ಪರಾಂಕುಶಮುನಿಗಳು (ನಮ್ಮಾಳ್ವಾರು) ಮತ್ತು ಆಳ್ವಾರುಗಳೂ, ದಿವ್ಯದೇಶಗಳಲ್ಲಿರುವ ದೇವರುಗಳನ್ನೆಲ್ಲಾ ಸಾಕ್ಷಾತ್ಕಾರಮಾಡಿಕೊಂಡು ಆಯಾಯ ದೇಶದಲ್ಲಿ ಭೋಗ್ಯತಮವಾಗಿರುವ ದೇವರ ವಿಗ್ರಹಸೌಂದರ್ಯಾದಿ ಗುಣಚೇಷ್ಟಿತಗಳನ್ನೂ, ಆಯಾ ದೇಶದ ಸಮೃದ್ಧಿಗಳನ್ನೂ ಮಂದಮತಿಗಳಾದವರು ತಿಳಿದುಕೊಂಡು ಬದುಕಲಿ ಎಂದು ಹಾಡಿ ಅನುಗ್ರಹಿಸಿದರು. ಆ ರೀತಿ ನಮ್ಮಾಳ್ವಾರರು ಹಾಡಿ ಅನುಗ್ರಹಿಸಿದ **ತಿರುವಾಯ್ಮೊಳಿ** ಎಂಬ ಪ್ರಬಂಧದ ನಾಲ್ಕನೇ ಶತಕದ ಮೊದಲನೆಯದಾದ **ಒರುನಾಯಗಂ** ಎಂಬ ಹತ್ತು ಪದ್ಯ (ಹಾಡು) ಗಳಿಗೆ ಸಂಬಂಧಪಟ್ಟ ದಿವ್ಯದೇಶವು ಯಾವುದು? ದೇವರು ಯಾರು? ಎಂಬುದು ತಿಳಿಯದೆ ಭವಿಷ್ಯದಾಚಾರ್ಯನ ಮುಖದಿಂದ ಸ್ಪಷ್ಟವಾಗುತ್ತದೆಂಬ ಕಾರಣದಿಂದ ನಾಥಮುನಿಗಳ ಕಾಲದಿಂದ ಹಿಡಿದು ಯಾಮುನಮುನಿಗಳ ಕಾಲದವರೆಗೂ ರಹಸ್ಯವಾಗಿಯೇ ಇದ್ದಿತು.

ತರುವಾಯ ಚೇತನರ ಭಾಗ್ಯವಿಶೇಷದಿಂದ ಶ್ರೀರಾಮಾನುಜಾಚಾರ್ಯರು ಅವತರಿಸಿದವರಾಗಿ ಯಾಮುನಮುನಿಗಳ ಕಟಾಕ್ಷದಿಂದ ರಹಸ್ಯಾರ್ಥಗಳನ್ನರಿತು, ಶ್ರೀಭಾಷ್ಯವನ್ನು ರಚನೆಮಾಡಿ, ವಿಶಿಷ್ಟಾದ್ವೈತ ದರ್ಶನವನ್ನು ನಿರ್ವಾಹಮಾಡಿಕೊಂಡು ಇರುತ್ತಿದ್ದರು. ಆಗ ಅವರಿಗೆ ಕ್ರಿಮಿಕಂಠಚೋಳನ ಬಾಧೆ ತಪ್ಪಲು ಅದನ್ನು ನೆಪಮಾಡಿಕೊಂಡು ಶ್ವೇತವಸ್ತ್ರಧರರಾಗಿ ಕಾವೇರಿಯಿಂದಲಂಕೃತವಾದ ಈ ಹೊಯ್ಸಳದೇಶವನ್ನು ಈ ಮೇಲುನಾಡಿಗೆ ಶಕ ೧೦೨೦ ಬಹುಧಾನ್ಯ ಸಂ|| (A.D. 1098) ರಲ್ಲಿ ದಯಮಾಡಿಸಿದರು.

ಅನಂತರ ಪದ್ಮಗಿರಿಯಲ್ಲಿ (ತೊಂಡನೂರು) ಬೌದ್ಧ ಸಮಯವನ್ನು ಜಯಿಸಿ ತಮ್ಮ ಸಿರಿಯಡಿಗಳಲ್ಲಿ ಆಶ್ರಯಿಸಿದ ವಿಷ್ಣುವರ್ಧನ ಮಹಾರಾಜನಿಗೆ ತಪ್ತಚಕ್ರಾಂಕನ ಅಷ್ಟಾಕ್ಷರೀ ಮಂತ್ರೋಪದೇಶವನ್ನು ಮಾಡಿ ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಈ ಕಾಲದಲ್ಲಿ ನಾರಾಯಣಾದ್ರಿ ಅಥವಾ ಯಾದವಾದ್ರಿ ಎಂಬ ತಿರುನಾರಾಯಣಪುರವು ಈ ದಿವ್ಯಕ್ಷೇತ್ರವು ಜೀರ್ಣವಾಗಿ ದೇವರು ಆನಂದಮಯ ವಿಮಾನದೊಂದಿಗೆ ಹುತ್ತದಲ್ಲಿರುವುದನ್ನು ಸ್ವಪ್ನಮುಖೇನ ತಿರುನಾರಾಯಣ ದೇವರಿಂದಲೇ ತಿಳಿದು ಆ ವಿಚಾರವನ್ನು ಶಿಷ್ಯ ರಾಜನಾದ ವಿಷ್ಣುವರ್ಧನರಾಯನಿಗೆ ಹೇಳಿಕಳುಹಿಸಿ ಅವನ ಸಹಾಯದಿಂದ ಜೀರ್ಣೋದ್ಧಾರ ಕಾರ್ಯವನ್ನು ಬಹುಧಾನ್ಯ ಸಂ|| ಮಾಘ ಶುದ್ಧ ಸ್ಥಿರವಾರ ರೇವತಿ ನಕ್ಷತ್ರದಲ್ಲಿ ಆರಂಭಿಸಿದರು. ಜೀರ್ಣೋದ್ಧಾರ ಕಾರ್ಯವು ಶಕೆ ೧೦೨೦ ಬಹುಧಾನ್ಯ ಸಂ|| ಮಾಘ ಶುದ್ಧ ತ್ರಯೋದಶಿ ಆದಿವಾರ (ಗುರುವಾರ) ಪುನರ್ವಸು ನಕ್ಷತ್ರ ದಿನ ಶ್ರೀನಾರಾಯಣಸ್ವಾಮಿಯವರ ಮೂರ್ತಿ

ಬೆಳೆದಿದ್ದ ವೃಕ್ಷವನ್ನು ತರಗಿಸಿ "**ಶೆಲ್ವ ಕಂಡೇನ್**" ಚೆಲುವನ್ನು ಕಂಡೆನು **ನಾರಾಯಣನ್ನೈ ಕಂಡೇನ್** ನಾರಾಯಣನನ್ನು ಕಂಡೆನು— ಎಂದು ದೇವರನ್ನು ಕಂಡು ಅದನ್ನ ವಿಷ್ಣುವರ್ಧನ ಮಹಾರಾಜನನ್ನು ಕರೆಯಿಸಿ ಮಹಾರಾಜನಿಗೆ ದೇವರ ಸೇವೆಯನ್ನು ಪಾಂಚರಾತ್ರವಿಧಾನದಲ್ಲಿ ಮಾಡಿಸಿ ಬಹಳ ಸಂತೋಷಪಟ್ಟು, ಪರಾಂಕುಶ ಮುನಿಗಳ (ನಮ್ಮಾಳ್ವಾರ್) ಅಭಿಪ್ರಾಯದಂತೆ **ಒರುನಾಯಕಂ** ಎಂಬ ಪಾಶುರ (ಪದ್ಯ) ಗಳನ್ನು ಈ ದೇವರ ವಿಷಯವಾಗಿ ಸಮರ್ಪಿಸಿ ಅವರಲ್ಲಿ ವಿವರಿಸಿರುವ ಮೇರೆಗೆ ಆ ದೇವರಿಗೆ ತಿರುನಾರಾಯಣನೆಂದೂ ಆ ದಿವ್ಯದೇಶಕ್ಕೆ ತಿರುನಾರಾಯಣ ಪುರವೆಂದೂ ಹೆಸರಿಟ್ಟರು. ಅನಂತರ ಮಹಾರಾಜರಿಗೆ ಅದಿನಾರಾಯಣಸ್ವಾಮಿಯ ಮಹಾತ್ಮ್ಯೆಯನ್ನು ಸವಿಸ್ತಾರವಾಗಿ ಹೇಳಿ ಜೀರ್ಣವಾಗಿದ್ದ ದೇವಸ್ಥಾನದ ಗುಡಿ ಗೋಪುರ, ಪ್ರಾಕಾರ, ಅಂಗರಂಗ ವೈಭವ ಅದೋಗಳಕಟ್ಟಳೆ ಈ ಸಕಲ ಧರ್ಮಗಳೂ ಮಹಾರಾಜರ ಕೈಂಕರ್ಯವಾಗಬೇಕೆಂದು ತಿಳಿಸಿದರು. ವಿಷ್ಣುವರ್ಧನ ಮಹಾರಾಜರು ಶ್ರೀರಾಮಾನುಜಾಚಾರ್ಯರು ತಿಳಿಸಿದ ರೀತಿಯಲ್ಲಿ ಶಿಥಿಲವಾದ ಗುಡಿ ಗೋಪುರ ಪ್ರಾಕಾರಗಳನ್ನು ಕಟ್ಟಿಸುವುದಕ್ಕೆ ಅನುಕೂಲವಾದ ದ್ರವ್ಯವನ್ನು ಗ್ರಾಮ ಸಹಿತ ಶಾಸನವನ್ನು ಕೊಟ್ಟು ತಮ್ಮ ಮನುಷ್ಯ **ವೆಂಕಟಾದ್ರಿನಾಯಕ**ನನ್ನು ಇರಿಸಿ ಪೌಷ ಬಹುಳ ಸಪ್ತಮಿ ಮಂಗಳವಾರ ತೊಂಡನೂರಿಗೆ ಹಿಂತಿರುಗಿದರು.

ಶ್ರೀರಾಮಾನುಜಾಚಾರ್ಯರು ವೆಂಕಟಾದ್ರಿನಾಯಕನನ್ನು ಕರೆದು ಸಕಲವಾದ ಕೆಲಸವನ್ನು ಹೇಳಿದ ರೀತಿಯಲ್ಲಿ, ವೆಂಕಟಾದ್ರಿನಾಯಕರು ಸಕಲವಾದ ಕೆಲಸದವರನ್ನೂ ಕರೆತರಿಸಿ "ಎಲ್ಲವೂ ಸಿದ್ಧವಾಗಿದೆ" ಎಂದು ತಿಳಿಸಲು ಶ್ರೀರಾಮಾನುಜಾಚಾರ್ಯರು ತಿಥಿ, ವಾರ, ನಕ್ಷತ್ರ, ಯೋಗ, ಕರಣ ಮುಹೂರ್ತವನ್ನು ನಿಷ್ಕರ್ಷಿಸಿ ಫಾಲ್ಗುಣ ಶುದ್ಧ ೧೩ ಶುಕ್ರವಾರ ಹಸ್ತ ನಕ್ಷತ್ರ ವೃಷಭ ಲಗ್ನದಲ್ಲಿ ದೇವಸ್ಥಾನವನ್ನು ಕಟ್ಟುವುದಕ್ಕೆ ಮುಹೂರ್ತ ಮಾಡಿದರು.

ಈ ರೀತಿಯಲ್ಲಿ ಗುಡಿಗೋಪುರ ಪ್ರಾಕಾರಾದಿಗಳನ್ನೂ ಗ್ರಾಮವನ್ನೂ ಜೀರ್ಣೋದ್ಧಾರ ಮಾಡಲು ಸ್ವಭಾನು ಸಂ॥ ವೈಶಾಖ ಬಹುಳ ಪಂಚಮಿ ವರೆಗೆ (A.D. 1103) ವರುಷ ೪, ತಿಂಗಳು ೨, ದಿನ ೧೧ ಗಳಾದವು.

ಈ ರೀತಿಯಲ್ಲಿ ಜೀರ್ಣೋದ್ಧಾರ ಕೆಲಸ ಮಾಡಿಸಿ ಶ್ರೀತಿರುನಾರಾಯಣ ದೇವರನ್ನು ಪ್ರತಿಷ್ಠೆ ನಡೆಸಿದರು.

ತದನಂತರ ಕಾಲದಲ್ಲಿ ಶ್ರೀರಾಮಾನುಜಾಚಾರ್ಯರು, ಚೆಲುವರಾಯಸ್ವಾಮಿ, ನಾರಾಯಣಸ್ವಾಮಿಯವರಿಗೆ ನಿತ್ಯಕಟ್ಟಳೆ, ಆರಾಧನೆಗೆ, ಪಕ್ಷೋತ್ಸವ, ಮಾಸೋತ್ಸವ ಸಂವತ್ಸರೋತ್ಸವ ಮುಂತಾದ ಸೇವೆಗಳನ್ನು ಮಾಡಿಕೊಂಡು ೧೨ ವರ್ಷಗಳ ಕಾಲ ವಾಸವಾಗಿದ್ದು ಅನಂತರ ಶ್ರೀರಂಗಕ್ಕೆ ಶ್ರೀರಂಗನಾಥನ ಸೇವೆಯನ್ನು

ಮಾಡುವುದಕ್ಕೆ ಹೋಗಬೇಕೆಂದು ಯೋಚಿಸಿ ಆದಿನಾರಾಯಣಸ್ವಾಮಿಗೆ ಸಕಲವಾದ ಊಳಿಗ ಕೈಂಕರ್ಯವನ್ನು ಸೇವಂತ ಮಾಡುವ ನಿಮಿತ್ತವಾಗಿ ಆಚಾರ್ಯರು ಶ್ರೀರಂಗರಾಜಭಟ್ಟರು, ತಿರುವನಂತಪುರದಾಸರು, ತಿರುಮಾಲೆಕಾರದಾಸರು, ತಿರುಕ್ಕುರುಂಗುಡಿದಾಸರು, ಯತಿರಾಜದಾಸರು, ಈ ಪ್ರಿಯ ಶಿಷ್ಯರುಗಳನ್ನು ಕರೆದು ತಾವು ಶ್ರೀರಂಗಸ್ವಾಮಿಯವರ ಸೇವೆಗೆ ಹೋಗಬೇಕೆಂಬುದಾಗಿ ಹೆಚ್ಚು ಮಾಡಿದ್ದರಿಂದ ಇವರುಗಳು ಶ್ರೀರಾಮಾನುಜರ ಅಗಲುವಿಕೆಯನ್ನು ಸಹಿಸಲಾರದವರಾಗಿ ಅವರ ಪಾದವನ್ನು ಹಿಡಿದುಕೊಂಡು "ತಾಯಿಯಿಲ್ಲದ ಮಕ್ಕಳೋಪಾದಿಯಲ್ಲಿ ಸ್ವಾಮಿಯನ್ನು ಬಿಟ್ಟಿರಲಾರೆವು" ಎಂದು ದುಃಖಿತರಾಗಿರುವಲ್ಲಿ ಮೊದಲೇ ಶಿಷ್ಯರಾಗಿರುವ ದೇವಸ್ಥಾನದ ಅರ್ಚಕರಾದ **ದೇಶಾಯಿ ತಿರುನಾರಾಯಣಜೀಯರನ್ನೂ ಐವತ್ತಿಬ್ಬರನ್ನೂ** ಮನ್ನಿಸಿ "ನಿಮಗೆ ಬೇಕಾದ್ದೇನು" ಎಂದು ಕೇಳಿ ತಾವೇ ಪ್ರತ್ಯಕ್ಷವಾಗಿದ್ದು ಶಿಲ್ಪಿಯಿಂದ ತಮ್ಮ ಅರ್ಚಾವಿಗ್ರಹವನ್ನು ಮಾಡಿಸಿ **"ಅನಂತಃ ಪ್ರಥಮಂ ರೂಪಂ"** ಎಂಬಂತಿರುವ ಆ ಅರ್ಚಾವಿಗ್ರಹದಲ್ಲಿ ತಾವು ನಿತ್ಯವಾಸ ಮಾಡುತ್ತಿರುವುದಾಗಿ ಪ್ರತ್ಯಕ್ಷವಾಗಿ ಹೇಳಿ ಅಂಶತಃ ಸ್ವಶಕ್ತಿಯನ್ನು ಆ ವಿಗ್ರಹದಲ್ಲಿ ಆರೋಪಿಸಿ ಇವರುಗಳಿಗೆ ಆರಾಧನವಾಗಿ ಕೊಟ್ಟು ತಮ್ಮಪ್ಪನ್ನೂ ಚೆಲ್ವಪಿಳ್ಳೆ ನಾಯಕರನ್ನೂ "ನಾವಿಯಂಬಿನಲ್ಲಿರುವ ಮಕ್ಕಳಂತೆ" ಎಂದು ತೋರಿಸಿ ಮುಂದೆ ತಿರುನಾರಾಯಣಸ್ವಾಮಿಯವರ ಕೈಂಕರ್ಯವು ಕೊರತೆ ಇಲ್ಲದೆ ನಡೆಯಬೇಕಾದುದಕ್ಕಾಗಿ **"ತಿರುವೆಂಬನಸ್ವಕರ"** ಎಂಬ ಐವತ್ತೆರಡು **ಊಳಿಗ ಕೈಂಕರ್ಯಗಳನ್ನು** ಸೇವಂತ ಮಾಡಿದರು.

1. ಶ್ರೀಭಾಷ್ಯ ಪ್ರವಚನ. 2. ನಮ್ಮಾಳ್ವಾರರವರ ಶ್ರೀಸೂಕ್ತಿಗಳಲ್ಲಿ ಶ್ರದ್ಧೆ. 3. ದಿವ್ಯ ಕ್ಷೇತ್ರಗಳಲ್ಲಿ ದೇವರ ಕೈಂಕರ್ಯ. 4. ಶರಣಾಗತಿ ಮಂತ್ರ ನಿಷ್ಠೆ. 5. ಭಾಗವತ ಪ್ರತಿಪತ್ತಿ. 6. ತಿರುನಾರಾಯಣಪುರದಲ್ಲಿ ನಿತ್ಯ ವಾಸಮಾಡುವುದು ಎಂಬ ಈ ಆರು ವಿಧಗಳನ್ನು ನಿಯಮಿಸಿ ಸ್ವಾಮಿಯವರ ಸನ್ನಿಧಿ ಸೇವಾಕಾಲವನ್ನು ಸಂಭ್ರಮವಾಗಿ ನಡೆಸಿಕೊಂಡು ಪರಸ್ಪರ ವಿರೋಧವಿಲ್ಲದೆ ಭಯ, ಭಕ್ತಿ, ಶ್ರದ್ಧೆಗಳಿಂದ ಸೇವಾಸಕ್ತರಾಗಿ ವಾಚಕ, ಕಾಯಕ, ಮಾನಸಿಕ ಕೈಂಕರ್ಯಗಳಿಂದ ನಡೆದು ಬನ್ನಿ ಎಂದು ಅನುಗ್ರಹಿಸಿದರು.

ಅನಂತರ ಆಚಾರ್ಯರು, ಸ್ಥಾನಪತರು, ಮುಂತಾದ ಶಿಷ್ಯರನ್ನು ಕೂಡಿಕೊಂಡು ತೊಂಡನೂರಿಗೆ ಹೋಗಿ ಆದಿನಾರಾಯಣಸ್ವಾಮಿಯವರಿಗೆ ಸಕಲವಾದ ಸೇವೆಯೂ ನಡೆಯುವ ರೀತಿಗೆ ನಿರ್ಣಯ ಮಾಡಿಸಿ ವಿವರಗಳಿಗೆ ಪಟ್ಟೋಲೆಯನ್ನು ಬರೆಯಿಸಿ ವಿಷ್ಣುವರ್ಧನರಾಯನಿಂದ ಪಟ್ಟೋಲೆಗೆ ಒಪ್ಪವನ್ನು ಹಾಕಿಸಿ ಸ್ಥಾನಪತರ ಕೈಯಲ್ಲಿ ಕೊಟ್ಟು ತಮ್ಮ ಪಟ್ಟಕ್ಕೆ ತಮ್ಮ ಶಿಷ್ಯರು **ಕೋಯಿಲ್ ಕೇಳ್ವಿ ದೇಶಾಯಿ ತಿರುನಾರಾಯಣಜೀಯರಿಗೆ** ತಿರುನಾರಾಯಣಸ್ವಾಮಿ ಕೈಂಕರ್ಯ ಸರ್ವಸ್ವ

ಸಿಂಹಾಸನಾಧಿಕಾರವನ್ನು ಅವರಿಗೆ ಒಪ್ಪಿಸಿ ಪಟ್ಟದ ರಾಮಾನುಜಮುದ್ರೆ, ಉಂಗುರವನ್ನು ಕೊಟ್ಟು ಸ್ಥಾನಪದವನ್ನು ಕರೆದು ಕಟ್ಟುಮಾಡಿಸಿದ ವಿವರ—

ತಿರುನಾರಾಯಣಸ್ವಾಮಿ ಸನ್ನಿಧಿ ಸೇವಾಕಾಲ ಮೊದಲಾದ ದೀಪಾರಾಧನೆ ಮುಂತಾದ ಉತ್ಸವಗಳಲ್ಲಿ ಅಭಿವೃದ್ಧಿ ಮಾಡಿಕೊಂಡು ಬರುವುದಲ್ಲದೆ ತಮ್ಮ ಪಟ್ಟದ ರಾಮಾನುಜಜೀಯರ ಮಠದ ಈ ಪಟ್ಟವನ್ನು ಸರ್ವೋದ್ಧಾರವಾಗಿ ಶಿಷ್ಯಪ್ರಶಿಷ್ಯ ಕ್ರಮದಿಂದ ನಡೆಸಿಕೊಂಡು ಬರುವುದು ಎಂದು ತಿಳಿಸಿ ಅನುಗ್ರಹಿಸಿದರು.

## ಅಸಾಧಾರಣ ಸಂಪ್ರದಾಯ ಸಂಭ್ರಮ

**ತಿರುನಾರಾಯಣಂ** ಎಂಬ ಪದವನ್ನು ತಾವು ಪ್ರಕಟಪಡಿಸಿದಂತೆ. ನಮ್ಮಾಳ್ವಾರ್ರವರು ತಮಗೆ ಉಪಕಾರ ಮಾಡಿರುವುದನ್ನು ಕಂಡು ಅವರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಬೇಕೆಂದು ತಿರುನಾರಾಯಣಪುರದ ದಿವ್ಯಕ್ಷೇತ್ರದಲ್ಲಿ ಪ್ರಬಂಧವನ್ನು ತೊಡಗುವಾಗ ತಿರುಪ್ಪಲ್ಲಾಂಡಿಗೆ ಮೊದಲು **ಕಣ್ಣಿನುಣ್ ಶಿರುತ್ತಾಂಬು** ಎಂಬ ನಮ್ಮಾಳ್ವಾರ್ರ ವಿಷಯವಾದ ಪ್ರಬಂಧವನ್ನು ಅನುಸಂಧಿಸಿದ ಮೇಲೆಯೇ ಮುಂದಿನ ಪ್ರಬಂಧಗಳನ್ನು ಅನುಸಂಧಿಸಿಕೊಂಡು ಬರತಕ್ಕದು ಎಂದು ಕಟ್ಟಳೆಮಾಡಿ "ತಿರುನಾರಣನ್ ತಾಳ್ ಕಾಲಂಬೆರಚ್ಚಿಂದಿತ್ತು ಉಯ್ಮಿನೋ" ಎಂಬುದಾಗಿ ನೇಮಿಸಿ ತಾವು ವಿಷ್ಣುವರ್ಧನರಾಯನಿಗೆ ಹೇಳಿಕೊಂಡು ಶ್ರೀರಂಗಕ್ಕೆ ಶಕ ೧೦೩೯ ವಿಕೃತಿ ಸಂ|| ಪುಷ್ಯ ಶುದ್ಧ ತ್ರಯೋದಶಿಯಲ್ಲಿ ಶ್ರೀರಂಗಕ್ಕೆ ಚಿತ್ತೈಸಿದರು.

## ಈ ದಿವ್ಯದೇಶದ ಹಿರಿಮೆ

ಈ ವೈಭವ ವಿಶೇಷವು ಮಿಕ್ಕ ಯಾವ ದಿವ್ಯದೇಶಗಳಿಗೂ ಇರುವುದಿಲ್ಲ. ಶ್ರೀರಾಮಾನುಜಾಚಾರ್ಯರು ತಮ್ಮ ವಿಭವಾವತಾರ ಪೂರ್ತಿಯಾಗುವವರೆಗೂ ಶ್ರೀರಂಗದಲ್ಲಿ ಇದ್ದರು. ತಾವು ಭೃತ್ಯನೆಂತಲೂ. ಶ್ರೀರಂಗನಾಥರು ಸ್ವಾಮಿಯೆಂತಲೂ; ಸ್ವಾಮಿಭೃತ್ಯ ಸಂಬಂಧವನ್ನು ತೋರಿಸಿದರು. ತಿರುಪತಿಯಲ್ಲಿ ಶ್ರೀನಿವಾಸ ದೇವರಿಗೆ ಶಂಖಚಕ್ರಗಳನ್ನು ಧಾರಣೆ ಮಾಡಿಸಿ ಗುರುಶಿಷ್ಯ ಭಾವವನ್ನು ತೋರಿಸಿದರು. ಶ್ರೀಕಾಂಚಿಯಲ್ಲಿ ತೀರ್ಥ ಕೈಂಕರ್ಯವನ್ನು ಮಾಡಿ ಶ್ರೀವರದರಾಜ ಸ್ವಾಮಿಯವರ ಸನ್ನಿಧಿಯಲ್ಲಿ ಅರ್ಥವಿಶೇಷಗಳನ್ನು ಕೇಳಿ ವರದರಾಜಸ್ವಾಮಿ ಗುರುಗಳಾಗಿಯೂ ತಾವು ಶಿಷ್ಯನಾಗಿಯೂ ಇರುವ ಸಂಬಂಧವನ್ನು ತೋರಿಸಿದರು. ತಿರುನಾರಾಯಣಪುರದಲ್ಲಿ ತಾವು ಪಿತಾಪುತ್ರರಂತೆ ತಾವು ಪಿತಾವಾಗಿಯೂ, ಚೆಲ್ವಪಿಳ್ಳೆಯು ಕುಮಾರ ಪುತ್ರಸಂತತಿಯೂ (ಸಂಪತ್ಕುಮಾರ) ತೋರಿಸಿ ತಮಗೆ ಎಲ್ಲರಿಗಿಂತಲೂ ತಿರುಮಕ್ಕಳ ಪ್ರೀತಿ ಅಧಿಕವೆಂದು ತೋರಿಸಲು ತಮ್ಮ ಅಭಿ

ವಿಗ್ರಹವನ್ನು ಮಾಡಿಸಿ ಶಿಷ್ಯಾಭಿಮಾನವಿರುವ ದೇವಸ್ಥಾನ ಈ ತಿರುನಾರಾಯಣ ಪುರವೆಂಬ ದಿವ್ಯಕ್ಷೇತ್ರ ಒಂದಕ್ಕೇ ಸಲ್ಲುತ್ತದೆ.

## ಉಳಿಗ ಕೈಂಕರ್ಯಗಳ ವಿವರ

ಶ್ರೀಮನಾದಿಮಹಾಸ್ಥಾನ. ಭೂಲೋಕ ವೈಕುಂಠವರ್ಧನಕ್ಷೇತ್ರ. ಜ್ಞಾನ ಮಂಟಪಾಪರಾಭಿಧಾನ ದಕ್ಷಿಣ ಬದರಿಕಾಶ್ರಮ ಪ್ರಸಿದ್ಧವಾಗಿ ಆನಂದಮಯ ವಿಮಾನಮಧ್ಯಸ್ಥ ಸಂಪತ್ಕುಮಾರ ನಾರಾಯಣಚರಣಾರವಿಂದ ಪ್ರಾಪ್ತ ಶ್ರೀರಾಮಾನುಜಾಚಾರ್ಯೈಃ ಸಂಪತ್ಕುಮಾರಾಯ ಪರಿಕಲ್ಪಿತ ದ್ವಿಸಂಪಾದಕ, ಸಪ್ತಂಚ ಕೈಂಕರ್ಯ ವಿನಿಯೋಗಪ್ರಕಾರಾಃ ಕೀರ್ತ್ಯತೇ

ನೇಕಾಯಿ ೧. ಸ್ಥಾನ ೬. ಶ್ರೀಭಂಡಾರ ತನಿಖೆಯಾದಾಗ ತಿಳಿದ ೭ ಅಂಶ ಪ್ರಾಪ್ತಿಯಲ್ಲಿ ಅನುಭವಿಸಿಕೊಂಡು ಬರುತ್ತಿರುವ ಮೂಲವಸ್ತ್ರದ ಭಾಗಸ್ಥ, ೫೭ ಉಳಿಗ ಕೈಂಕರ್ಯಗಳು—

ದೇಶಾಯಿ ಮೊದಲಾದ ಭಾಗ ಸ್ವಾಮ್ಯದಲ್ಲಿ ಒಪ್ಪಂದಾಯಿತು, ನಿತ್ಯ ನೈಮಿತ್ತಿಕಗಳಲ್ಲಿ ಮೂರು ತೀರ್ಥವು ಯಾತ್ರಾದ ಮಂಗಳವಾದ ಸಲುವಾಗಿ, ಮಾಲೆ, ಶ್ರೀಪಾದತೀರ್ಥ ಇವುಗಳನ್ನು ಪಡೆವ ಗುರು, ಹಿರಿಯ ಹೆಸರುಗಳು—

ಕೈಂಕರ್ಯ ಉಳಿಗದಲ್ಲಿ ಪಾಲು ಪಡೆಯುವ ಹೆಸರುಗಳು—

ಮಠ, ಮನೆ. ತಿರುಪ್ಪು, ಸಂದಣಿ, ತೋಪ್ಪುಗಳು

ಶ್ರೀಭಂಡಾರದ ತಿಪ್ಪ

ದೇವಸ್ಥಾನ ನಿಯಂತ್ರಕರ **ದೇಶಾಯಿ ತಿರುನಾರಾಯಣ ಜೀಯರವರಿಗೂ, ಐವತ್ತಿಬ್ಬರು ಶ್ರೀವೈಷ್ಣವರಿಗೂ,**

ಶ್ರೀಭಂಡಾರವನ್ನು **ತಿ ರು ನಾ ಳಿ ಆ ಜ್ಞಾ ನಿ ಗ ೂ, ಕೋಯಿಲೊಟ್ಟು, ಸ್ವಾಮಿನಾತ್ರಿಗೂ** ಕಿಟ್ಟಿಕೊಟ್ಟು ಅನುಗ್ರಹಿಸಿದರು.

ಸತ್ಯಸ್ವಾಮ್ಯ ಕೈಂಕರ್ಯ ಉಳಿಗ ಪಡಿಸಿಗಳ ಹೆಸರುಗಳು—

1. ಮಠ. 2. ಮನೆ. 3. ತಿರುಪ್ಪು. 4. ಸಂದಣಿಮಾನ. 5. ತೋಪ್ಪು. ಇವುಗಳಲ್ಲಿ ಉಳಿಗ ಕೈಂಕರ್ಯದಲ್ಲಿ ಸ್ವಾತಂತ್ರ್ಯ ಸ್ವತಂತ್ರದಲ್ಲಿ ಪರ್ವದ ಸಮಯದಲ್ಲಿ ಅನುಭೋಗ ಪ್ರಕಾರ —

ಶ್ರೀರಾಮಾನುಜಾಚಾರ್ಯರು ಉಳಿಗದ ವೇಳೆಯಲ್ಲಿ **ಐವತ್ತಿಬ್ಬರು ಶ್ರೀವೈಷ್ಣವರುಗಳು** ಎಂಬ ಸಮುದಾಯ ನಾಮವನ್ನು ಕರುಣಿಸಿ ಪ್ರತ್ಯೇಕವಾದ ದಾಸ್ಯನಾಮವನ್ನೂ ಕೃಪೆಮಾಡಿದವರಾಗಿ ಅವರಿಗೆ ಕೈಂಕರ್ಯದ ಉಳಿಗವನ್ನು ಅನುಗ್ರಹಿಸಿದರು.

## ದೇಶಾಯಿ ತಿರುನಾರಾಯಣಐಯಂಗಾರು, ಐವತ್ತಿಬ್ಬರು ಇತರ ಶ್ರೀವೈಷ್ಣವರು
## ಅವರ ಊಳಿಗ ಕೈಂಕರ್ಯಗಳು

| ಸ್ಥಾನ | ಕೈಂಕರ್ಯಪರರು | ಭಾಗ | ಸ್ವಂತವಾಗಿಮಾಡುವ ಕೈಂಕರ್ಯ | ಇತರರಿಂದ ಮಾಡಿಸತಕ್ಕ ಕೈಂಕರ್ಯ | ಮೊತ್ತ |
|---|---|---|---|---|---|
| ೧ | ಹರಿತಾಯನಗೋತ್ರ, ಕಾತ್ಯಾಯನ ಸೂತ್ರ<br>ಶುಕ್ಲ ಯಜುಶ್ಶಾಖೆ<br>ಶ್ರೀರಂಗರಾಜಭಟ್ಟಾಚಾರ್ಯರು | ೫ | 1. ತಿರುವಾರಾಧನ 2. ಸಹಸ್ರಧಾರ<br>3. ಚಾಮರ 4. ಶ್ರೀಚೂರ್ಣ, ಶಠಕೋಪ<br>ಮಾಲೆ, ಪರಿವಟ್ಟ, ತುಳಸಿಪ್ರಸಾದ<br>5. ಬೀಗಮುದ್ರೆ 6. ಮುಖದರ್ಶನ | 1. ಸ್ವಯಂಪಾಕ<br>2. ಮಧ್ಯಾಹ್ನದ<br>3. ಅಲಂಕಾರ, ಉತ್ಸವ<br>4. ನೈವೇದ್ಯವನ್ನು ತರಿಸುವುದು | ೧೦ |
| ೨ | ವಾಸಿಷ್ಠಗೋತ್ರ, ದ್ರಾಹ್ಯಾಯಣಸೂತ್ರ<br>ಸಾಮಶಾಖೆ,<br>ತಿರುವನಂತಪುರದಾಸರು (ಅನಂತಭಟ್ಟರು) | ೪ | 1. ಹಸ್ತಾಂಜಲಿ 2. ಕರಗ<br>3. ಅರಸ 4. ಪರಿಮಳ 5. ಕನ್ನಡಿ<br>6. ನೈವೇದ್ಯ 7. ಕೀಲಿ | 1. ಋಗ್ವೇದ ಪಾರಾಯಣ<br>2. ನೃತ್ಯಗೀತೆ, ತೆರೆ, ಛತ್ರ | ೯ |
| ೩ | ಕೌಂಡಿನ್ಯಗೋತ್ರ, ಬೋಧಾಯನಸೂತ್ರ,<br>ಯಜುಶ್ಶಾಖೆ<br>ನಾಗಾಭರಣದಾಸರು | ೪ | 1. ಬಲಿಯೋತ್ಸವ 2. ತಂಡ<br>3. ಪೀಕದಾನಿ 4. ಯಜ್ಞೋಪವೀತ<br>5. ಮಾಲೆ | 1. ಯಜುರ್ವೇದ<br>2. ಜ್ಯೋತಿಷ್ಯ<br>3. ಚತುರ್ವಾದ್ಯ | ೮ |
| ೪ | ವಾಸಿಷ್ಠಗೋತ್ರ, ದ್ರಾಹ್ಯಾಯಣಸೂತ್ರ<br>ಸಾಮಶಾಖೆ<br>ತಿರುಕ್ಕುರುಂಗುಡಿದಾಸರು | ೪ | 1. ಹಾಡುವುದು; ಸ್ತೋತ್ರ 2. ಹೊಂಬಾಳೆ<br>ಕಟ್ಟಿಗೆ 3. ಪ್ರಸಾದವಿನಿಯೋಗ<br>4. ದೇವಸ್ಥಾನದ ಅಲಂಕಾರ<br>5. ಗಂಧವನ್ನು ತೇಯುವುದು 6. ಛತ್ರಿ | 1. ಸಾಮವೇದ<br>2. ಕಹಳೆ, ತಪ್ಪಟೆವಾದ್ಯಗಳು | ೪ |
| ೫ | ಭಾರ್ಗವಗೋತ್ರ, ದ್ರಾಹ್ಯಾಯಣಸೂತ್ರ<br>ಸಾಮಶಾಖೆ | ೪ | 1. ದೀವಟಿಗೆ, ಸಂಪಾದನ 2. ಪಡಿಗ<br>3. ಪಾದಾಂಜಲಿ 4. ಗುಡಿಸುವುದು | 1. ಅಥರ್ವಣವೇದ<br>2. ಮೊರೆವು | |

| | | | | | |
|---|---|---|---|---|---|
| | ಯತಿರಾಜದಾಸರು (ವಿಷ್ವಕ್ಸೇನಭಟ್ಟರು) | | 5. ಚಂದನವಿನಿಯೋಗ<br>6. ಹೊರ ಪರಿಚಾರಕ | | ೮ |
| ೩ | ಭಾರದ್ವಾಜಗೋತ್ರ, ಅಶ್ವಲಾಯನ ಸೂತ್ರ, ಋಕ್‌ಶಾಖೆ<br>ಶಠಕೋಪದಾಸರು (ನಾರನಂಬಿ) | ೪ | 1. ತೀರ್ಥ 2. ವಾಹನ 3. ಆರತಿ<br>4. ಶ್ರೀಪಾದಸೇವೆ 5. ಕಾವುಗಾರ | 1. ಪಾಲಿಗಂಟೆ<br>2. ದೀವಟಿಗೆ, ಬಿಡ್ಡಿಗೆ | ೭ |
| | ಶಠಮರ್ಷಣಗೋತ್ರ, ಆಪಸ್ತಂಭಸೂತ್ರ, ಯಜುಶ್ಶಾಖೆ ತಿರುವಾಳಿಆಳ್ವಾನ್ | ೩ | 1. ದೇವಾಯ ಆಜ್ಞೆ ನಡೆಸುವುದು, ವಸ್ತ್ರಭಂಡಾರ, ಹರಸ್ವಾಮಿ ಭಂಡಾರ | | ೧ |
| | ಮೌದ್ಗಲ್ಯಗೋತ್ರ, ದ್ರಾಹ್ಯಾಯಣ ಸೂತ್ರ, ಸಾಮಶಾಖೆ ಶ್ರೀರೆಟ್ಟನಾರಾಯಣಾರ್ಯ | ೩ | 1. ಶ್ರೀಭಂಡಾರ, ವಸ್ತ್ರಭಂಡಾರ, ಚಿನ್ನ ಬೆಳ್ಳಿಯ ಸ್ವರ್ಣಪಾತ್ರಗಳು ದೇವಾಲಯದ ಲೆಕ್ಕ | | ೧/೨೫ |
| | ವಾಧೂಲಗೋತ್ರ, ಆಪಸ್ತಂಭಸೂತ್ರ, ಯಜುಶ್ಶಾಖೆ ತಿರುನಾರಾಯಣಪ್ಪಂಗಾರ್ (ಅರೆಯರು) | ೩ | ದೇವರನಾಮವನ್ನು ಹೇಳುವುದು, ಚಿನ್ನ ಹಂಗ್ಯಯ್ಯುವುದು | | |
| ೧ | ವೇದಸ್ಥಾನ ವಿಚಾರಣಾಕರ್ತ ದೇವಾಯತಿರುನಾರಾಯಣಜೀಯರು | ೫ | 1. ಮಜ್ಜನ 2. ರಾಮಾನುಜಮುದ್ರೆ ಯಮುಂಗುರ 3. ಸಿಂಹಾಸನ ಕೊಟ್ಟಿಲು 4. ಎಂಬೆರುಮಾನಾರ್ ಸನ್ನಿಧಿಯಲ್ಲಿ ತಿರುವಾರಾಧನೆ | 1. ರಸವ್ಯಂಜನ, ಎಣ್ಣೆ, ಪುಷ್ಪಗಳನ್ನು ಒದಗಿಸುವುದು ಉಪಾಧ್ಯಾಯಗಳು | ೫<br>೫ |
| ೭ | ಒಂಟಕ್ಕೆ | | ಭಾಗಗಳು ೩೭ | ಊಳಿಗ ಕೈಂಕರ್ಯ ಮೊತ್ತ | ೫೭ |

ಬಿಂಬಿಸ್ತಿರುವರ್ ಅಥವಾ ಐವತ್ತಿಬ್ಬರು ಎಂಬ ಛತ್ರದವರು ಇವರಿಗೆ ಕೈಂಕರ್ಯವನ್ನು ನಡೆಸುವವರು ಎಂದರ್ಥವು. ಇವರಿಗೆ ಸ್ಥಾನದವರು ಸ್ಥಾನದವರ್ಯರಾದ, ಸ್ಥಾನಾಧಿಕಾರಿಗಳು ಎಂದು ಹೆಸರು.

## ನಿಯಮಗಳು

ಹಿಂದಿನವರಾದ್ರು ಶ್ರೀನಾಯಂದ್ರಿರುವ ದೇವಸ್ಥಾನ ಮಹಾದೇವರೆಂಗ ದೇವಾಲಯ ತಿರುನಾರಾಯಣಯಂಗೆ ಶ್ರೀನಾರಾಯಣಸ್ವಾಮಿ ಸನ್ನಿಧಿಯಲ್ಲಿ ಮೊದಲಿಂದ ನಡೆದುಬರುವ ಕೈಂಕರ್ಯವಾದ ಐದು ಗಳಿಗೆಗಳನ್ನೂ ಐದು ಭಾಗಗಳನ್ನೂ ನಿತ್ಯಪರಂಪರೆಯಾಗಿ ಅನುಭವಿಸಿಕೊಂಡು ಬರುವುದು—

ತಿರುನಾರಾಯಣಯಂಯರು ತಮ್ಮ ಕೈಯಿಂದಲೇ ನಡೆಸಿಕೊಂಡು ಬರುವ ಕೈಂಕರ್ಯಗಳು —

1. ಹೊಂಗೊಂಡ, ಬೆಳ್ಳಿಕೊಡಗಳನ್ನು ಕೊಂಡು ನಿತ್ಯ ತಿರುಮಂಜನಕ್ಕೆ ಮಜ್ಜನವನ್ನು ಹೊತ್ತುತರುವುದು.
2. ಶುಕ್ರವಾರ ದಿವಸಗಳಲ್ಲಿ ಯಾಯಾಗಿಯುಮ್ಮನವರ ಮಜ್ಜನ ಸಾಲಕ್ಕೂ ಬಳ್ಳಿಪ್ಪಳ್ಳಿರುಯುವ ಅಲಂಕಾರ ಮಜ್ಜನಕಾಲಗಳಿಗೂ ಮಜ್ಜನವನ್ನು ಕೊಂಡು ಬರುವುದು.
3. ಮಜ್ಜನ ತೀರ್ಥವನ್ನು ಇರಿಸುವ ಕೊಡಗಳಿಗೆ ತಮ್ಮ ಅಂಗಳಿಂದ ಮಜ್ಜನ ಕಾಲಗಳಲ್ಲಿ ಮಜ್ಜನವನ್ನು ತುಂಬಿಸುವುದು.
4. ವಾಹನಾದಿ ಮುದ್ರೆಯುಂಗುರವನ್ನು ಧರಿಸಿಕೊಂಡಿದ್ದು ಹೊರುವವರಿಗೆ ತೆಗೆಯುವುದು.
5. ಸನ್ನಿಧಿಯಲ್ಲಿ ಸಿರಿಯನ್ನು ಕಾಣಿಕೆ ಬಟ್ಟಲನ್ನು ಹಿಡಿಯುವುದು, ಉತ್ಸವ, ಹಿರಿಯ ಕೂಟಗಳಲ್ಲಿ ಕಾಣಿಕೆ ಪಾತ್ರೆಗಳ ಲೆಕ್ಕವನ್ನು ಶೋಧಿಸುತ್ತ ಬರುವುದು.

ತಮ್ಮ ಸಿಕ್ಕಿಗೆ ಸ್ವಸ್ಥಾನಗಳನ್ನು ಸಿವಾಯಜ್ಯೋತಿಷಯ ಪಂಥಾದಿಗಳಾದ— ಲಪ್ಪಗಳನ್ನು ಧರಿಸದ ಮೊದಲಿಗನನ್ನೂ ದೇವಸ್ಥಾನಗಳಲ್ಲಿ ಕಾಣಿಕೆ, ಮಹಾರಾಣಿ ಅಳಿಯನ್ನು ಮಾಡುವುದು.

## ಶ್ರೀಭಾಷ್ಯಕಾರರ ಸನ್ನಿಧಿಯಲ್ಲಿ ತಿರುವಾರಾಧನ

ಶ್ರೀವರಾಹಸ್ವಾಮಿ, ಹಯಗ್ರೀವರು, ಸಾಲಿಗ್ರಾಮಗಳಿಗೆ ವೇದದ ಆರಾಧನವಾದ ಬಳಿಕ ಅವರವರ ತಿರುವಡಿಗಳನ್ನು ಬೇಗ ಸಿರಿವಸ್ತ್ರ ಧರಿಸಿ. ಧೂಪದೀಪಗಳನ್ನು ತೋರಿಸಿ ಶ್ರೀನಾರಾಯಣಸ್ವಾಮಿಯವರ ಪಾದಗಳ

ತೀರ್ಥವನ್ನು ಅವರಿಗೆ ನಿವೇದನ ಮಾಡಿದ ಪಾತ್ರೆಯಿಂದ ತಂದ ಪ್ರಸಾದವನ್ನು ಮತ್ತೆ ನಿವೇದಿಸಿ ಉಪದೇಶದವರ ಜನ್ಮ ತಿರುನಕ್ಷತ್ರಗಳಲ್ಲಿ ಹಬ್ಬದ ಮುಂತಾದವುಗಳನ್ನು ನಡೆಸಿ ಶ್ರೀವೈಷ್ಣವರುಗಳಿಗೆ ಭೋಜನಮಾಡಿಸಿ ವರ್ಷ ತಿರುನಕ್ಷತ್ರದಲ್ಲಿ ಉಪದೇಶದವರೊಡನೆ ಕಲ್ಪಿಸಿಕೊಳ್ಳುವುದನ್ನು ಯತಿರಾಜ ಪಂಚಾಯತ್ತೆ ಬಿಜಯಂಗೈಸಿ ವೈಭವದೊಡನೆ ತಿರುನಕ್ಷತ್ರವನ್ನು ಪರಿಪಾಲನೆಮಾಡಿಕೊಂಡು ಬರುವುದು.

ಪ್ರತ್ಯಕ್ಷವಾದ ನರಸಿಂಹಸ್ವಾಮಿಯವರಿಗೂ ಆರಾಧನೆ ಮಾಡುತ್ತಾ ಬರುವುದು.

ಶಿವದೇವಾಲಯದ **ತಿರುಮಲನ ಸನ್ನಿಧಿ ಒಡೆಯರೂ** ಸೇವ್ಯ ಕೂಡಿ ಇದ್ದರೂ ನಿತ್ಯಪೂಜೆಯಿಂದ ಮೊದಲುಗೊಂಡು ದಶೋತ್ಸವದವರೆಗೂ ಮಾಡಿಸುವುದು ಎಂದು ನಿರೂಪಿಸಿದರು.

## ತಮ್ಮ ಆಳುಗಳ ಮೂಲಕ ನಡೆಸುವುದು

ನೈವೇದ್ಯಂಥ ಮುಂತಾದ ಉಗ್ರಾಣದ ಕೈಂಕರ್ಯಗಳನ್ನು ಗೋವಿಂದದಾಸ ಮೊದಲಿಗರಿಂದ ಮಾಡಿಸುವುದು.

ಕೈಂಕರ್ಯದ ಉಳಿಗದಲ್ಲಿ ತಪ್ಪುನೆಪ್ಪುಗಳನ್ನು ನೋಡಿಕೊಂಡು ದೋಷಗಳನ್ನು ಕಳೆದು ಕ್ರಮಪ್ಪಡಿಸುವ ಜೊತೆಯ ಶ್ರೀಕಾರ್ಯವನ್ನು ವಿಚಾರಿಸಿಕೊಂಡು ಬರುವುದು.

ಶ್ರೀಕಾರ್ಯಗಳಿಗೆ ಮುಗ್ಗಟೆ ಬಂದಕಾಲದಲ್ಲಿ ಗೋಪುರವನ್ನೇರಿ ಕೆಳಕ್ಕೆ ಧುಮುಕ್ಕಿ ದೇಹವನ್ನು ಬಿಟ್ಟು ಭಗವಂತನ ಸಿರಿಯಡಿಗಳನ್ನು ಸೇರುವುದು.

ಮಹಾನ್ಯಾಸಾಂತಕ್ಕೆ ಸೇವಿಸುವವರನ್ನು ಕೂಡಿಸಿಕೊಂಡು ಗೋಷ್ಠಿಯನ್ನು ಸ್ಥಾಪಿಸಿ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡಿ ಶ್ರೀಕಾರ್ಯವನ್ನು ನೆರವೇರಿಸುವುದು.

ಪೊಯ್ಸಳ ನಾಡಲೊಳ್ಳ ಮಹಾಜನರುಗಳಿಗೆ ಕ್ರಮವಾಗಿ ಕೊಡುವ ಕಾಣಿಕೆಯ ಹೊನ್ನುಗಳನ್ನು ದೇವಸ್ಥಾನದ ಶ್ರೀಭಂಡಾರಕ್ಕೆ ಸಾಗಿಸುವುದು.

ಊರುಗಳಲ್ಲಿ ತಪ್ಪುನೆಪ್ಪುಗಳನ್ನು ವಿಚಾರಿಸಿ ಹೊನ್ನುಗಳನ್ನೆತ್ತಿ ಶ್ರೀಭಂಡಾರದಲ್ಲಿ ಹಾಕಿಸುವುದು.

ಈ ರೀತಿಯಲ್ಲಿ ದೇಶದ ರಾಮಾನುಜಾಚಾರ್ಯರು ಎಲ್ಲಾ ಕೈಂಕರ್ಯಗಳನ್ನೂ ನಡೆಸಿಕೊಂಡು ಬರುವುದು ಎಂದು ನಿರೂಪಿಸಿ ದೇವಸ್ಥಾನದ ಅಧಿಕಾರವನ್ನು ಕೊಟ್ಟು ಬಹುಮಾನವನ್ನು ಕಲ್ಪಿಸಿದರು.

ಸ್ಥಾನದವರಿಗೆ ಶ್ರೀಭಾಷ್ಯಕಾರರು ಚರಪ್ಪುಗಳನ್ನು ನಿಯಮಿಸಿದ ವಿವರ—

ಉಡಯವರು (ಶ್ರೀರಾಮಾನುಜರು) ಶ್ರೀತಿರುನಾರಾಯಣಸ್ವಾಮಿಯನ್ನು ಸೇವಿಸಿದ ದಿವಸವು ಮಕರಮಾಸ ಶುಕ್ಲಪಕ್ಷ ಪುನರ್ವಸು ನಕ್ಷತ್ರ.
ಆ ವಿವರ ಚರಪನ್ನು—

1. **ದೇವರಾಯ ತಿರುನಾರಾಯಣಜೀಯರವರು (ಶ್ರೀಯತಿರಾಜಸ್ವಾಮಿಗಳು)**
2. **ಶ್ರೀರಂಗರಾಜಭಟ್ಟರು** ಮೀನಮಾಸ ಹಸ್ತ ನಕ್ಷತ್ರ ಅವಭೃತದಲ್ಲಿ ಚರಪ್ಪು ಕೈಂಕರ್ಯ.
3. **ಶಠಕೋಪದಾಸರು** ಸಿಂಹಮಾಸ ಕೃಷ್ಣಪಕ್ಷ ಶ್ರೀಜಯಂತ್ಯುತ್ಸವ ದಿವಸದಲ್ಲಿ ಚರಪ್ಪು ಕೈಂಕರ್ಯ.
4. **ಶ್ರೀಭಂಡಾರದ ತಿರುವಾಳಿಅಣ್ಣನು** ಕನ್ಯಾಮಾಸ ಮಹಾನವಮಿಯ ದಿನ ಚರಪ್ಪು ಕೈಂಕರ್ಯ.
5. **ಶ್ರೀವನಮಾಲಾಕಾರದಾಸರು** ದೀಪಾವಳಿದಿನ ಕೈಂಕರ್ಯ ಚರಪ್ಪು.
6. **ತಿರುಕ್ಕುರುಂಗುಡಿದಾಸರು** ಕಾರ್ತಿಕ ಮಾಸ ಉತ್ಸವದಲ್ಲಿ ಚರಪ್ಪು ಕೈಂಕರ್ಯ.
7. **ತಿರುವನಂತಪುರದಾಸರು** ಮಹಾ ಸಂಕ್ರಮಣದಲ್ಲಿ ಕೈಂಕರ್ಯ ಚರಪ್ಪು.
8. **ರಾಜಮುದ್ರೆ ಅಧಿಕಾರಿ** ಯುಗಾದಿ ಕೈಂಕರ್ಯ.
9. ಲೆಕ್ಕಮಬರೆವ **ಘೋರಿಕಟ್ಟುನಾರಾಯಣನವರು** ಅವರ ವಂಶದವರು ವೈಶಾಖ ಮಾಸ ಶುಕ್ಲ ಪೂರ್ಣಿಮಾ ದಿನ ವಸಂತೋತ್ಸವ.
10. **ತಿರುನಾರಾಯಣ ಪೆರುಮಾಳರಿಯರು** ಕೈಶಿಕ ಪುರಾಣವನ್ನು ಉತ್ಥಾನ ದ್ವಾದಶಿ ದಿನ ಓದುವುದು.

ಕೈಂಕರ್ಯದ ಚರಪ್ಪುಗಳಲ್ಲಿ ನಿವೇದಿತವಾದ ಪ್ರಸಾದ ಭಕ್ಷ್ಯಗಳಲ್ಲಿ ನಾಲ್ಕರಲ್ಲೊಂದರಷ್ಟು ಸ್ಥಾನದವರಿಗೆ ಮಿಗು ಅಂಶವಾಗಿ ಸಲ್ಲುವುದು.

ಕೈಂಕರ್ಯದ ಚರಪನ್ನು ಮಾಡಿದವರಿಗೆ ಒಂದಂಶವು.

ನಿತ್ಯ ವಾಸಮಾಡುವ ಜೀಯರು, ಶ್ರೀವೈಷ್ಣವರು, ಆಚಾರ್ಯಪುರುಷರಿಗೆ ಒಂದಂಶವು.

ರಾಜಮುದ್ರಾ ಅಧಿಕಾರಿ, ಅಂಗರಕ್ಷಕರು, ಭಂಡಾರವ ಕಾಯುವವರು ಉಳಿದ ಪರಿಜನಂಗಳು............ಹಿಂದಂತೆಯೆ.

ನಿತ್ಯಗಟ್ಟಲೆ ನಡೆಯುವ ಉತ್ಸವಂಗಳಲ್ಲಿ ನಿವೇದನವಾದ. ಪ್ರಸಾದ. ಭಕ್ಷ್ಯ, ತಾಂಬೂಲ, ಮಾಲೆ ಗಂಧ, ಮುಖ್ಯೋಪಯೋಗ ಇವುಗಳೊಳು ಹೆಚ್ಚುಗಟ್ಟಲೆಯಾಗಿ ನಿರ್ಧರಿತವಾದ ಪದಾರ್ಥಗಳಲ್ಲಿ ನಾಲ್ಕರಲ್ಲೊಂದಂಶವು ಸ್ಥಾನದವರಿಗೆ ಏಳು ಅಂಶವಾಗಿ ಸಲ್ಲುವುದು. ಸ್ಥಾನದವರಲ್ಲಿ ಯಾರೊಬ್ಬರಿಗಾದರೂ ಮಾರಿದ್ದು ದೋಷಪತ್ತ ತಪ್ಪಿ ಸ್ವಾಮ್ಯಸ್ವತಂತ್ರಗಳನ್ನು ಅಭಿಕ್ರಯ ಮಾಡುವಾಗ ಏಕತಿಟ್ಟರು ಉಳಿದು ಬೇರೆಯವರಿಗೆ ಸಲ್ಲದು.

ಏಕತಿಟ್ಟರು ಉಳಿದು ಅನ್ಯರಿಗೆ ಅಭಿಕ್ರಯಯೋಗ್ಯವಾದರೆ ಒಪ್ಪಿದಂತೆ ಪ್ರಸಾದ ಕೈಂಕರ್ಯದಲ್ಲಿ ಉಳಿದ ಸಂಭಾವನೆ ವರ್ತನೆ ಎಂದು ನಾಲ್ಕನುಳಿದು ಮಾಡಲುಳ್ಳವರು.

ಈ ಪರಿಯಾಗಿ ಕೈಂಕರ್ಯಮೂಳಿಗಂಗಳನು ಸ್ವಾಮ್ಯ ಸ್ವತಂತ್ರಕ್ಕೆ ನಿರ್ಧರಿಸಿ ಶ್ರೀಭಾಷ್ಯಕಾರರು ಕಟ್ಟಳೆಯಿಟ್ಟು ಮೇಲೆ ಭಕ್ತಿ ನಿಯಮದೊಡನೆ ಅನವರತ ಸೇವಾ ಪರಿಚರ್ಯರಾಗಿ ನಿತ್ಯನೈಮಿತ್ತಿಕಂಗಳಲ್ಲಿ ಕೈಂಕರ್ಯ ನಿಷ್ಠರಾಗಿ ತಮ್ಮ ತಮ್ಮ ಬಾಳಿಗೆಗಳನು ಆಚಾರ್ಯ ನಿಯಮನದಿಂದ ಸರ್ವ ವಿಧವಾದ ಬಾಳಿಗೆಗಳನೂ ಮಾಡಿಕೊಂಡು ನಡೆದುಕೊಳ್ಳುವರು.

ಉಡಯವರು ತಮ್ಮ ಪ್ರಥಮ ಶಿಷ್ಯರಾದ ದೇವಸ್ಥಾನದ ವಿಚಾರಕರ್ತ ದೇಶಾಯಿ ತಿರುನಾರಾಯಣಜೀಯರು ತಮ್ಮ ಕೈಂಕರ್ಯಪರರಾದ ಏಕತಿಟ್ಟರು, ಇವರು ತಮ್ಮ ಆರ್ಜನತಾರ ವಿಗ್ರಹ ಇದಿರಿನಲ್ಲಿ ದೊಡ್ಡ ಕಣಜವಲ್ಲಿರುವ ದ್ರವ್ಯವನ್ನು ತೆಗೆದು ದೇವಾಲಯ ಸಂರಕ್ಷಣಾ ವೆಚ್ಚಿಸುವುದು ಎಂಬುದಾಗಿ ಇವರಿಗೆ ಅಪ್ಪಣೆಯ ನಯಪಾಲಿಸಿದರು.

## ಯಾದವಾದ್ರಿ ಜೀರ್ಣೋದ್ಧಾರ ಕಾರ್ಯ

**ನಾರಾಯಣಾದ್ರಿ, ಯಾದವಾದ್ರಿ** ಎಂಬ (ತಿರುನಾರಾಯಣಪುರ) ದಿವ್ಯ ಕ್ಷೇತ್ರವು ಜೀರ್ಣವಾಗಿ ದೇವರು ಅನಂತವಾದ ವಿಮಾನದೊಂದಿಗೆ ಹುತ್ತದಲ್ಲಿ ಇರುವುದನ್ನು ಸ್ವಪ್ನಮುಖೇನ ತಿರುನಾರಾಯಣ ದೇವರಿಂದಲೇ ತಿಳಿದು ಈ ವಿಚಾರವನ್ನು ಅಲ್ಲಿಯ ರಾಜ ಶಿಷ್ಯನಾದ ವಿಷ್ಣುವರ್ಧನರಾಯನಿಗೆ ಹೇಳಿ ಕಳುಹಿಸಿ ಅವನ ಸಹಾಯದಿಂದ ಜೀರ್ಣೋದ್ಧಾರ ಕಾರ್ಯವನ್ನು **(A.D. 1099)** ಬಹುಧಾನ್ಯ ಸಂ॥ ಮಾಘ ಶುದ್ಧ ಸ್ಥಿರವಾರ ರೇವತಿ ನಕ್ಷತ್ರದಲ್ಲಿ ಆರಂಭಿಸಿದರು. ಜೀರ್ಣೋದ್ಧಾರ ಕಾರ್ಯವು ನಡೆದು ಶಕ ೧೦೨೦ ಬಹುಧಾನ್ಯ ಮಾಘ ಶುದ್ಧ ತ್ರಯೋದಶೀ

ಆದಿವಾರ (ಗುರುವಾರ) ಪುನರ್ವಸು ನಕ್ಷತ್ರ ದಿನ ಶ್ರೀತಿರುನಾರಾಯಣಸ್ವಾಮಿಯವರ ಮೇಲೆ ಬೆಳೆದಿದ್ದ ಹುತ್ತವನ್ನು ತೆಗೆಸಿ **"ಶೆಲಲ್ ಕಂಡೇನ್ ನಾರಾಯಣನ್ನೈ ಕಂಡೇನ್"** (ಚೆಲುವನ್ನು ಕಂಡೆನು, ನಾರಾಯಣನನ್ನು ಕಂಡೆನು) ಎಂದು ದೇವರನ್ನು ಕಂಡು ಆ ದಿನ ವಿಷ್ಣುವರ್ಧನ ಮಹಾರಾಜನನ್ನು ಕರೆಸಿ ಮಹಾರಾಜನಿಗೆ ದೇವರ ಸ್ವರೂಪವನ್ನು ತೋರಿಸಿ ಬಹಳ ಸಂತೋಷಪಟ್ಟು ಪರಾಂಕುಶಮುನಿಗಳ (ನಮ್ಮಾಳ್ವಾರರ) ಅಭಿಪ್ರಾಯದಂತೆ **ಒರುನಾಯಕಂ** ಎಂಬ ಹತ್ತು ಪಾಶುರಗಳಿಂದ ದೇವರನ್ನು ಸ್ತೋತ್ರಮಾಡಿ, ಸೂತ್ರದಲ್ಲಿ ವಿವರಿಸಿರುವಂತೆ ಆ ದೇವರಿಗೆ ತಿರುನಾರಾಯಣನೆಂದೂ, ಆ ದಿವ್ಯದೇಶಕ್ಕೆ ತಿರುನಾರಾಯಣಪುರವೆಂದೂ ಹೆಸರನ್ನಿಟ್ಟರು. ಅನಂತರ ಮಹಾರಾಜನಿಗೆ ಆದಿನಾರಾಯಣನ ಎಂಬ ಮಹಾತ್ಮೆಯನ್ನು ವಿಸ್ತಾರವಾಗಿ ಹೇಳಿ ಜೀರ್ಣವಾಗಿದ್ದ ದೇವಸ್ಥಾನದ ಗುಡಿಗೋಪುರ ಪ್ರಾಕಾರ ಅಂಗರಂಗ ವೈಭವ, ಆರೋಗಣೆ ಕಟ್ಟಳೆ ಈ ಸಕಲ ಧರ್ಮಗಳೂ ಮಹಾರಾಜನ ಕೈಂಕರ್ಯವಾಗಿ ನಡೆಯಬೇಕೆಂದು ತಿಳಿಸಿದರು. ವಿಷ್ಣುವರ್ಧನ ಮಹಾರಾಜರು ಶ್ರೀರಾಮಾನುಜಾಚಾರ್ಯರು ತಿಳಿಸಿದ ರೀತಿಯಲ್ಲಿ ಸಕಲವಾದ ಗುಡಿಗೋಪುರ ಪ್ರಾಕಾರ ಮಂಟಪಾದಿಗಳನ್ನು ಕಟ್ಟಿಸುವುದಕ್ಕೆ ಅನುಕೂಲ ದ್ರವ್ಯ ನಾಣ್ಯ ಗದ್ಯಾಣ ೫೦,೦೦೦ ಐವತ್ತು ಸಾವಿರವನ್ನು ಕೊಟ್ಟು ತಮ್ಮ ಮಂತ್ರಿ ವೆಂಕಟಾದ್ರಿನಾಯಕರನ್ನು ಇರಿಸಿ ಮಹಾ ಬಹಳ ಸಮೃದ್ಧಿ ಭೋಗಗಳಾದ ತೊಂಡನೂರಿಗೆ ಹಿಂತಿರುಗಿದರು.

ಶ್ರೀರಾಮಾನುಜಾಚಾರ್ಯರು ವೆಂಕಟಾದ್ರಿನಾಯಕನನ್ನು ಕರೆದು ಸಕಲವಾದ ಕೆಲಸವನ್ನೂ ಮಾಡಹೇಳಿದ ಮೇರೆ ವೆಂಕಟಾದ್ರಿನಾಯಕನು ಸಕಲವಾದ ಕೆಲಸದವರನ್ನು ಕರೆತರಿಸಿ "ಎಲ್ಲವೂ ಸಿದ್ಧವಾಗಿದೆ" ಎಂದು ತಿಳಿಸಲು ರಾಮಾನುಜಾಚಾರ್ಯರು ತಿಥಿ, ವಾರ, ನಕ್ಷತ್ರ, ಯೋಗ, ಕರಣ ಮುಹೂರ್ತವನ್ನು ನಿರ್ಧರಿಸಿ **ಫಾಲ್ಗುಣ ಶುದ್ಧ ೧೩ ಶುಕ್ರವಾರ ಹಸ್ತನಕ್ಷತ್ರ ವೃಷಭ ಲಗ್ನದಲ್ಲಿ** ದೇವಸ್ಥಾನವನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿಸಿದರು.

## ದೇವಸ್ಥಾನ ಕಟ್ಟಡದ ವಿವರ

| | ಅಂಕಣ |
|---|---|
| ಗರ್ಭಗೃಹ | ೧ |
| ಶುಕನಾಸಿ | ೧ |
| ಕತ್ತಲೆ ಪ್ರದಕ್ಷಿಣೆ | ೧೮ |
| ರಂಗಮಂಟಪ | ೨೫ |
| ರಂಗಮಂಟಪದ ಬಾಗಿಲಮುಂದಣ ಸ್ಥಳ | ೪ |
| ತೆಂಕಲ ಬಾಗಿಲಮುಂದಣ ಸ್ಥಳ | ೧ |

| | |
|---|---|
| ತಿರುಮಂಡಪಳ್ಳಿ | ೧೮ |
| ಚಕ್ರತ್ತಾಳ್ವಾರ್ ಸನ್ನಿಧಿ | ೧೨ |
| ಉಗ್ರಾಣ | ೬ |
| ಅಮ್ಮನವರ ಸನ್ನಿಧಿ | ೧೨ |
| ಅಮ್ಮನವರ ತಿರುಮಡಪಳ್ಳಿ | ೩ |
| ಯಾಗಶಾಲೆ | ೯ |
| ಗುಡಿಬಾಗಿಲ ಗೋಪುರ | ೮ |
| ಗೋಪುರ ಬಾಗಿಲ ಮುಂಭಾಗದ ಕೈಸಾಲೆ | ೨೦ |
| ಚಾವಡಿ | ೫ |
| ? ? | ೧೪ |
| ಒಟ್ಟು ಅಂಕಣ— | ೧೫೯ |

## ದೇವಸ್ಥಾನ ಕಟ್ಟಡದ ವಿವರ – ಖರ್ಚು

| | | ಗದ್ಯಾಣ |
|---|---|---|
| ೧. | ತಳಗಣ ಗುಂಡಾಂತರ ಪಂಚಾಂಗದ ಜಗತಿ ಸವಡು ಭಿತ್ತಿಗೋಡೆ, ಕೋಟೆ ಬಾಗಿಲುಗಳು, ನೆಲಕ್ಕೆ ಪಾಸಾಲೆ ಗಾರೆಕೆಲಸ, ಚಾಕಿಗೋಡು ಇಷ್ಟಗಳಿಗೆ | ೧೬೧೫೨–೦ |
| ೨. | ದೇವಸ್ಥಾನದ ಮುಂದೆ ಸ್ವಾಮಿಯವರು ಬಿಜಯ ಮಾಡಿಸುವುದಕ್ಕೆ ಮಂಟಪ ೧ಕ್ಕೆ ಅಂಕಣ ೪ ಗಾರೆಕೆಲಸ ಸಹ | ೨೦೦–೦ |
| ೩. | ದೀಪಾಲೆ ಕಂಭಕ್ಕೆ | ೧೨೨–೪ |
| ೪. | ಹನುಮಂತದೇವರ ದೇವಸ್ಥಾನದ ಅಂಕಣ ೧ಕ್ಕೆ ಗಾರೆಕೆಲಸ ಸಹ | ೭೩–೦ |
| ೫. | ಈ ಗುಡಿ ಮುಂದೆ ಗೋಪುರ ಕಟ್ಟಿಸುವುದಕ್ಕೆ ಬಂಗಾರ ಅಂಕಣ ೧ಕ್ಕೆ ಗುಂಡಾಂತರ ಸವಡು ಭಿತ್ತಿ ಸಹ | ೯೭೯–೪ |
| ೬. | ಸೀತಾರಣ್ಯದ ರಾಮಸ್ವಾಮಿ ದೇವಸ್ಥಾನದ ಅಂಕಣ ೭ಕ್ಕೆ ಗಾರೆಕೆಲಸ ಸಹ | ೪೦–೬ |
| ೭. | ಕಲ್ಯಾಣಿ ಕೆಲಸಕ್ಕೆ ಮುಟ್ಟಿದ್ದು | ೨೫೩೯–೦ |
| ೮. | ಬೆಟ್ಟದ ನರಸಿಂಹಸ್ವಾಮಿಯವರ ದೇವಸ್ಥಾನದ ಅಂಕಣ ೩೦ಕ್ಕೆ ಗೋಪುರ ೧ ಸವಡು ಭಿತ್ತಿಗೋಡೆ ಕೋಟೆ, ನೆಲಕ್ಕೆ ಪಾಸಾಲೆ ಗಾರೆ, ದ್ವಾರಪಾಲಕರು ಸಹ | ೫೪೭೦–೦ |
| | ? ? | ೨೪೪–೦ |
| | ಒಟ್ಟುಗದ್ಯಾಣ— | ೨೫೮೦೯–೦ |

## ಗ್ರಾಮ ಜೀರ್ಣೋದ್ಧಾರ ಖರ್ಚು

| | | |
|---|---|---|
| ೧. | ಅರಣ್ಯವಾಗಿದ್ದ ಪಾರಗಳ ಕಡಿಮೆ ನೆಲಸಮ ಮಾಡಿ ಬೀದಿಮಾಡವಮಾಡಿ ಊರು ಕಟ್ಟಿದ್ದಕ್ಕೆ ಮುಟ್ಟಿದ್ದು | ೧೭೫೦-೦ |
| ೨. | ಸಂಪ್ರೋಕ್ಷಣೆಗೆ | ೧೨೧೫-೦ |
| ೩. | ಉಡುಗೊರೆ ಉಚಿತಗಳಿಗೆ | ೩೫೦-೦ |
| ೪. | ಸ್ವಾಮಿಯವರ ಆರೋಗಣೆ ಕಟ್ಟಳೆ ಕಂದಾಚಾರ ಸಹ | ೬೪೨೦-೦ |
| ೫. | ? ? | ೨೧-೦ |
| | ಮೊತ್ತ ಖರ್ಚು— | ೨೫೬೭೫-೦ |
| | ನಿಲವು— | ೧೪೩೪೪-೦ |
| | ಗದ್ಯಾಣ— | ೫೦೦೦೯-೦ |

ಈ ರೀತಿಯಲ್ಲಿ ಗುಡಿಗೋಪುರ ಪ್ರಾಕಾರಾದಿಗಳನ್ನೂ, ಗ್ರಾಮ ಜೀರ್ಣೋದ್ಧಾರವನ್ನೂ ಮಾಡಲು ಸ್ವಭಾನು ಸಂ|| ವೈಶಾಖ ಬಹುಳ ಪಂಚಮಿವರೆಗೆ **(A.D. 1103)** ವರುಷ ೪, ತಿಂಗಳು ೨, ದಿನ ೧೧ ಗಳಾದವು.

ಈ ರೀತಿಯಲ್ಲಿ ಜೀರ್ಣೋದ್ಧಾರ ಕೆಲಸ ಮಾಡಿಸಿ **ವೆಂಕಟಾದ್ರಿನಾಯಕರು** ರಾಮಾನುಜಾಚಾರ್ಯರ ಅಪ್ಪಣೆಯನ್ನು ತೆಗೆದುಕೊಂಡು ವಿಷ್ಣುವರ್ಧನ ಮಹಾರಾಜನಲ್ಲಿಗೆ ಹೋಗಿ "ಗುಡಿಗೋಪುರ ಪ್ರಾಕಾರಾದಿ ಕಟ್ಟಿಮುಗಿಯಿತು ಎಂದು ಬಿನ್ನಹ ಮಾಡಿದರು. ವಿಷ್ಣುವರ್ಧನ ಮಹಾರಾಜರು ತಮ್ಮ ಮನುಷ್ಯರನ್ನು ಕಳುಹಿಸಿ ರಾಮಾನುಜಾಚಾರ್ಯರನ್ನು ಕರೆತರಿಸಿಕೊಂಡು "ಸಕಲವಾದ ಸೇವೆಯೂ ಆಯಿತೆ" ಎಂದು ಕೇಳಲಾಗಿ "ಸಕಲವಾದ ಸೇವೆಯೂ ಆಯಿತು. ಆದಿನಾರಾಯಣ ಸ್ವಾಮಿಯವರಿಗೆ ನಿತ್ಯಕಟ್ಟಳೆಯಲ್ಲಿ ಆರಾಧನೆ ಸೇವೆ ನಡೆಯುವಹಾಗೆ ಆಗಬೇಕು" ಎಂದು ಹೇಳಲು ವಿಷ್ಣುವರ್ಧನ ಮಹಾರಾಜರು ಆದಿನಾರಾಯಣಸ್ವಾಮಿಯವರಿಗೆ ಪಡಿತರ ದೀಪಾರಾಧನೆ ನಡೆಯುವುದಕ್ಕೆ ಗ್ರಾಮಭೂಮಿ, ಸೀಮೆಗಳನ್ನು ಕೊಟ್ಟು ರಾಮಾನುಜಾಚಾರ್ಯರಿಗೆ ಮಠವನ್ನು ಕಟ್ಟಿಸಿಕೊಡುವಂತೆ ತಮ್ಮ ಮನುಷ್ಯರಿಗೆ ಕಟ್ಟಳೆಯನ್ನು ಮಾಡಿಸಿ ರಾಮಾನುಜಾಚಾರ್ಯರನ್ನು ತಿರುನಾರಾಯಣಪುರಕ್ಕೆ ಕಳುಹಿಸಿದರು.

ಶ್ರೀರಾಮಾನುಜರು ತಿರುನಾರಾಯಣಪುರವನ್ನು ಜೀರ್ಣೋದ್ಧಾರ ಮಾಡಿದಾಗ **ಮನೆ, ಮಠ, ಬೀದಿ ಇತ್ಯಾದಿಗಳನ್ನು ವಿಂಗಡಿಸಿ ರೂಪಿಸಿದ ಕ್ರಮ.**

### ಯತಿರಾಜ ಮಠ

೧ **ಶ್ರೀಭಾಷ್ಯಕಾರರ ಭೂಮಿ ನಿವೇಶನದ ಪ್ರಮಾಣವು** ದೇವಾಲಯಕ್ಕೆ ದಕ್ಷಿಣಪೂರ್ವದಲ್ಲಿ ನಿವೇಶನ ಒಂದಕ್ಕೆ ೨೨ ಅಡಿಗಳ ಅಳತೆ ಭೂಮಿಯ ಮೇರೆ ೧೫

ನಿವೇಶನಗಳ ಭೂಮಿ — ತೆಂಕಲಲಿ ಬಡಗಲಲಿ ಇದಕ್ಕೆ ಇಮ್ಮಡಿ — ಮೂಡ ಪಡುವಲಾಗಿ ಭಾಷ್ಯಕಾರರ ಮಠವು.

## ಮನೆಗಳ ಭೂಮಿ ನಿವೇಶನಗಳ ಪ್ರಮಾಣ

೨ **ಯತಿರಾಜ ಮಠಕ್ಕೆ** ಬಡಗಲಾಗಿ ನಿವೇಶನ ಒಂದಕ್ಕೆ ೨೨ ಅಡಿಗಳ ಭೂಮಿ ಪ್ರಮಾಣದಂತೆ ೪ ನಿವೇಶನಗಳ ಹಿರಿಮಾಳಿಗೆಯು ಯತಿರಾಜದಾಸರಿಗೆ ಸಲ್ಲುವುದು.

೩ ದೇವಾಲಯದ ತೆಂಕಣ ಬೀದಿಯಲ್ಲಿ ಮೂಡಲಾಗಿ ೨೨ ಅಡಿಗಳ ಭೂಮಿಯು ಲೆಕ್ಕದಂತೆ ೪ ನಿವೇಶನಗಳ ಮಾಳಿಗೆಯು **ಮಾಲಾಕಾರದಾಸರಿಗೆ** ಸಲ್ಲುವುದು.

೪ ಮಾಲಾಕಾರದಾಸರ ಮಾಳಿಗೆಗೆ ಪಡುವಲಾಗಿ ಎರಡು ನಿವೇಶನಗಳ ಮನೆಯು, ತಿರುಕ್ಕುರುಂಗುಡಿಯಲ್ಲಿ ಶ್ರೀಭಂಡಾರದ ಒಳಗಿನ ಗೈಯ್ಯುವ **ತಿರುವಾಳಿ ಅಣ್ಣನಿಗೆ** ಸಲ್ಲುವುದು.

೫ ತಿರುವಾಳಿ ಅಣ್ಣನ ಮನೆಗೆ ಪಡುವಲಾಗಿ ೨॥ ನಿವೇಶನದ ಮನೆಯು ಲೆಕ್ಕವಬರೆಯುವ **ಶ್ರೀಕೇಟ್ರನಾಯಿನಾರಿಗೆ** ಸಲ್ಲುವುದು.

೬ ದೇವಾಲಯದ ಪಡುವ ಬೀದಿಯೊಳು ತೆಂಕಲಾಗಿ ನಾಲ್ಕು ನಿವೇಶನಗಳ ಮನೆಯು **ತಿರುಕುರುಂಗುಡಿದಾಸರಿಗೆ** ಸಲ್ಲುವುದು.

೭ ತಿರುಕ್ಕುರುಂಗುಡಿದಾಸರ ಮನೆಗೆ ಬಡಗಲಾಗಿ ಐದು ನಿವೇಶನಗಳ ಮಾಳಿಗೆಯು **ಶ್ರೀರಂಗರಾಜಭಟ್ಟರಿಗೆ** ಸಲ್ಲುವುದು.

೮ ದೇವಾಲಯದ ಬಡಗಣ ಬೀದಿಯಲ್ಲಿ ಪಡುವಲಾಗಿ ನಾಲ್ಕು ನಿವೇಶನಂಗಳ ಮನೆಯು **ಶಠಕೋಪದಾಸರಿಗೆ** ಸಲ್ಲುವುದು.

೯ ಶಠಕೋಪದಾಸರ ಮನೆಗೆ ಮೂಡಗಡೆಯೊಳು ನಾಲ್ಕು ನಿವೇಶನಂಗಳ ಮಾಳಿಗೆಯು **ತಿರುವನಂತಪುರದಾಸರಿಗೆ** ಸಲ್ಲುವುದು.

೧೦ ಯತಿರಾಜದಾಸರ ಮನೆಯ ಬಡಗಣಕಡೆಯಲ್ಲಿ ಮೂರು ನಿವೇಶನಂಗಳ ಮನೆಯು **ರಾಜಮುದ್ರೆಯ ಅಧಿಕಾರಿಗೆ** ಸಲ್ಲುವುದು.

೧೧ ಅಧಿಕಾರಿಯ ಮನೆಗೆ ಬಡಗಲಲ್ಲಿ ಎರಡು ನಿವೇಶನಂಗಳ ಮನೆಯು **ತಿರುನಾರಾಯಣಪೆರುಮಾಳಯ್ಯರಿಗೆ** ಸಲ್ಲುವುದು.

೧೨ ಅರೆಯರ ಮನೆಗೆ ಬಡಗಲಾಗಿಯೂ ತಿರುವನಂತಪುರದಾಸರ ಮನೆಗೆ ಬಡಗಲಾಗಿಯೂ ನಿವೇಶನ ಒಂದಕ್ಕೆ ೩೨ ಅಡಿ ಭೂಮಿಯು ಲೆಕ್ಕದಂತೆ ಬಡಗ

ಬಾಗಿಲವರೆಗೂ ಇಕ್ಕೆಲದಲ್ಲಿಯೂ **೭೪ ಆಚಾರ್ಯಪುರುಷರಿಗೂ** ಒಂದೊಂದು ನಿವೇಶನದಂತೆ ಸಲ್ಲುವುದು.

ಶ್ರೀರಂಗರಾಜಭಟ್ಟರ ಮನೆಗೆ ಬಡಗಲಾಗಿಯೂ, ಶಠಕೋಪದಾಸರ ಮನೆಗೆ ಬಡಗಲಾಗಿಯೂ ಇಕ್ಕೆಲದಲ್ಲಿಯೂ ಬಡಗಣ ಗೋಡೆಯವರೆಗೆ ಇರುವ ನಿವೇಶನಗಳು ಜೀಯರುಗಳಿಗೂ ಶ್ರೀವೈಷ್ಣವರುಗಳಿಗೂ ಮಠಕ್ಕಾಗಿಯೂ ಮನೆಗಳಿಗಾಗಿಯೂ ಸಲ್ಲುವುದು.

ಬಡಗಣ ಕೊನೆಯಲ್ಲಿ ಅಂಗರಕ್ಷದ ಮನೆಗಳು.

ದೊಡ್ಡಬಾಗಿಲಿಗೆ ಬಡಗಣ ಕಡೆ ದೇಶಾಧ್ರಿ (ದೇಶಾಯಿ) ವಿಭಾಗಿಗಳು ಶ್ರೀವೈಷ್ಣವರು ತಿನಾಮಯಜ್ಞೋಪವೀತಗಳನ್ನು ಧಾರಣೆ ಮಾಡದ ಶ್ರೀವೈಷ್ಣವರೂ ಇರತಕ್ಕದ್ದು.

ಇತರರು ಮೂಡಣ ಬೀದಿಯೊಂದನುಳಿದು ಮಿಕ್ಕ ಬೀದಿಗಳಲ್ಲಿ ಇರುತಿರುವುದು.

ಈ ಸ್ಥಳದಲ್ಲಿ ಯಾವರೊಬ್ಬರು ಮನೆಯನ್ನು ಕಟ್ಟಿ ನಿತ್ಯವಾಸವನ್ನು ಮಾಡುವರೋ ಅವರೆಲ್ಲರೂ ನಿತ್ಯಸೂರಿಗಳಾಗಿರುವರು ಎಂದು ಶ್ರೀರಾಮಾನುಜರು ನಿಯಮಿಸಿ ವಯ್ಗ್ಯದರು.

## ಮುಕ್ಕಣ್ಣಪ್ಪಂ (ತ್ರಿಣೇಶ್ವರ) ಶಿವದೇವಾಲಯ

ತಿರುನಾರಾಯಣಪುರದ ದೊಡ್ಡಬಾಗಿಲಿಗೆ ಬಡಗಲಾಗಿ ಬೀದಿಯಲ್ಲಿ ಪಡುವ ಮೊಗವಾಗಿ **ಮುಕ್ಕಣ್ಣಪ್ಪಂ** ಎನ್ನುವ ಶಿವದೇವಾಲಯವಿರುವುದು.

ಈ ದೇವಾಲಯಕ್ಕೆ ಗರ್ಭಗೃಹ, ಶುಕನಾಸಿ (ಅರ್ಧಮಂಟಪ) ಮಹಾಮಂಟಪ, ಒಳಪ್ರದಕ್ಷಿಣ, ಅಂಗಳ, ಪಾಕಶಾಲೆ, ನೀರಹೊಂಡ ಇರುವುದು.

ಪಡುವ ಬಾಗಿಲಲ್ಲಿ ಎದುರಾಗಿ **ದೀಪಸ್ತಂಭ**ವಿರುವುದು. ದೀಪಸ್ತಂಭಕ್ಕೆ ಪಶ್ಚಿಮದಲ್ಲಿ ಒಂದು ಬಾಗಿಲು ಇವುಗಳೊಡನೆ ವಿಮಾನದಿಂದೊಡಗೂಡಿ ಈ ದೇವಾಲಯವಿರುವುದು.

ಬೆಟ್ಟದ ಪಡುಗಣೆಯ ಗ್ರಾಮದಂಚಿನಲ್ಲಿ ಎತ್ತಿದ ಹೊನ್ನಿಂದ, ಮಾಸೋತ್ಸವ, ಪಕ್ಷೋತ್ಸವ, ಮಹೋತ್ಸವ ಮುಂತಾದವುಗಳನ್ನು ನಡೆಯಿಸುವುದು.

ಈ ಶಿವದೇವಾಲಯಕ್ಕೆ ವಾಯುವ್ಯ ದಿಕ್ಕು ಮೊದಲಾಗಿ ಅನ್ನದಾನ ಒಡೆಯರ ಮಠಕ್ಕೆ ಪಡುವಲಾಗಿ ಅದೇ ಮಠದ ತೆಂಕಲು ಈ ದೇವಾಲಯದ ನೈರುತ್ಯ ದಿಕ್ಕಿನವರೆಗೂ ಚತುರಶ್ರವಾಗಿ ದೇವಾಲಯದ ಸುತ್ತಲೂ ಈ ದೇವಾಲಯದ ಪರಿಜನಗಳು ಮನೆಗಳನ್ನು ಕಟ್ಟಿಕೊಳ್ಳುವಂತೆ ನಿಯಮಿಸಿದರು. ಮಹೋತ್ಸವ ಕಾಲದಲ್ಲಿ ಈ ಚತುರಶ್ರವೀಧಿಯ ಸುತ್ತಲೂ ಪ್ರದಕ್ಷಿಣವಾಗಿ ಬರುವುದು. ಇದನ್ನು ವಿಹಾರದಂತೆ

ನಡೆವುದು ಎಂದು ನಿಯಮಿಸಿದರು. ದೇವಸ್ಥಾನದ ವಿಚಾರಣೆಕರ್ತ ದೇಶಾಯಿ ತಿರುನಾರಾಯಣಜೀಯರನ್ನು ನೋಡಿ ಈ ಶಿವ ಕೈಂಕರ್ಯವನ್ನೂ ನೀವೇ ನಡೆಸಿಕೊಂಡು ಬರುವುದೆಂದು ನಿಯಮಿಸಿದರು.

## ಈ ಗ್ರಾಮದ ಲೆಕ್ಕ

ವಿಷ್ಣುವರ್ಧನರಾಯರು ಕೊಟ್ಟ ಲಕ್ಷ ವರಹಗಳಲ್ಲಿ ಶ್ರೀನಾರಾಯಣಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಮಾಡಿಯಾದ — ಉಳಿದ ಹಣದಲ್ಲಿ ಶಿವ ದೇವಾಲಯದ ಜೀರ್ಣೋದ್ಧಾರವಾಗಿರುವುದು. ಈ ಗ್ರಾಮದ ಲೆಕ್ಕವೂ ಜೀರ್ಣೋದ್ಧಾರದ ಲೆಕ್ಕವೂ ಸ್ಥಳದ ಕರಣೀಕರ ಬಳಿಯಲ್ಲಿರುವುವು.

ಈ ಲೆಕ್ಕದ ಪ್ರಕಾರ ನಿತ್ಯವೂ ಪೂಜೆ ಮುಂತಾದುವನ್ನು ನಡೆಯಿಸಿಕೊಂಡು ಬರುವಂತೆ ಈ ದೇಶಾಯಿ ತಿರುನಾರಾಯಣಜೀಯರಿಗೆ ಇಪ್ಪತ್ತಿಬ್ಬರ ಮುಂದೆ ಕಟ್ಟಳೆಯಿಟ್ಟರು.

## ಶ್ರೀನಾರಾಯಣಸ್ವಾಮಿ, ಚೆಲುವರಾಯಸ್ವಾಮಿ ದೇವಸ್ಥಾನ

ಶ್ರೀರಾಮಾನುಜಾಚಾರ್ಯರ ಕಾಲದಲ್ಲಿ ಜೀರ್ಣವಾಗಿದ್ದ ದೇವಸ್ಥಾನದ ದೇವರುಗಳನ್ನು ಜೀರ್ಣೋದ್ಧಾರ ಮಾಡಿರುವುದು ಸರ್ವಪ್ರಸಿದ್ಧ. ಆಚಾರ್ಯರು ದೇವಸ್ಥಾನವನ್ನು ಹೊಸದಾಗಿ ಕಟ್ಟಿಸಲಿಲ್ಲ. ಪೂರ್ವದಲ್ಲಿ ಇದ್ದ ದೇವಸ್ಥಾನದ ಅಸ್ತಿಭಾರ ಅಧಿಷ್ಠಾನದ ಮೇಲೆಯೇ ಹಿಂದೆ ಕಟ್ಟಿಸಿದಂತೆಯೇ ಕಟ್ಟಿಸಿದರು.

ಶ್ರೀನಾರಾಯಣಸ್ವಾಮಿ ಸನ್ನಿಧಿ ಗರ್ಭಗೃಹ, ಅಡಿಗೆಮನೆ, ನವರಂಗ, ಸುದರ್ಶನಾಳ್ವಾರ್ ಸನ್ನಿಧಿ, ಅಮ್ಮನವರ ಸನ್ನಿಧಿ ಯಾಗಶಾಲೆ ಮುಂತಾಗಿ ಜೀರ್ಣೋದ್ಧಾರ ಮಾಡಿದರು. ಈ ನಾಲ್ಕು ಸ್ಥಳಗಳೂ ಪ್ರತ್ಯೇಕ ಪ್ರತ್ಯೇಕವಾಗಿದ್ದುವೇ ವಿನಃ ಈಗಿರುವಂತೆ ಕೈಸಾಲೆ ಮಂಟಪಗಳಿಂದ ಸೇರಿಸಲ್ಪಟ್ಟಿರಲಿಲ್ಲ.

ಶ್ರೀನಾರಾಯಣಸ್ವಾಮಿ ಹೊರಗಿನ ಕೈಸಾಲೆ ಅಧಿಷ್ಠಾನದ ಕೆಳಗೆ ಅಷ್ಟದಿಗ್ಗಜಗಳಿವೆ. ಅವುಗಳ ಮೇಲೆ ಹೊರಗಿನ ಕೈಸಾಲೆ ಅಧಿಷ್ಠಾನ ಜಗತಿಯು ನಿಂತಿರುವುದು. ಒಳಭಾಗದಲ್ಲಿ ರಂಗಮಂಟಪ ಮತ್ತು ಗರ್ಭಗೃಹದ ಅಧಿಷ್ಠಾನದ ಕೆಳಗೆ ಏನಿರುವುದೆಂಬುದು ತಿಳಿಯಬರಲಿಲ್ಲ. ಅಲ್ಲಿಯೂ, ಎಂಟು ದಿಕ್ಕುಗಳಲ್ಲಿಯೂ ಬಲವಾದ ಆಧಾರವಸ್ತುಗಳು ಇರುವುವೆಂದು ತಿಳಿಯಬೇಕು.

**ಗರ್ಭಗೃಹ–** ಚತುರಶ್ರವಾಗಿದೆ ಮೂಲಮೂರ್ತಿ ಇರುವ ಸ್ಥಳವು, ಗರ್ಭಗೃಹದ ಮುಂದೆ ಶುಕನಾಸಿ (ಅರ್ಧಮಂಟಪ), ಅದರ ಮುಂದೆ ನವರಂಗವು. ಈ ಶುಕನಾಸಿಯ ದ್ವಾರದ ಉಭಯ ಪಾರ್ಶ್ವದಲ್ಲಿಯೂ ಜಯವಿಜಯರಿರುತ್ತಾರೆ. ಈ ಜಯವಿಜಯರ ಪಕ್ಕದಲ್ಲಿ ಪ್ರಥಮ ಪ್ರಾಕಾರವಿದೆ. (ಕತ್ತಲೆ ಪ್ರದಕ್ಷಿಣೆ)

ಪ್ರಥಮ ಪ್ರಾಕಾರದಲ್ಲಿ ಕೆಲವು ಗುಪ್ತವಸ್ತುಗಳನ್ನಿಡಲು ಕೊಠಡಿಗಳು ನಿರ್ಮಿತವಾಗಿವೆ.

ಗರ್ಭಗೃಹದಲ್ಲಿ ಅಧಿಷ್ಠಾನಾಲಂಕಾರವನ್ನು ಇಲ್ಲಿ ಕಾಣಬಹುದು. ಶಿಲ್ಪ ಚಮತ್ಕಾರದಿಂದ ಉಪಾನ ಜಗತಿ, ಪದ್ಮ, ಕಂಠ, ಕುಮುದ, ಮಹಾಪಟ್ಟಿ ಕುಡ್ಯಸ್ತಂಭ ಇತ್ಯಾದಿ ಶಿಲ್ಪವಿನ್ಯಾಸಗಳನ್ನೂ ಕಾಣಬಹುದು.

ಗರ್ಭಗೃಹದ ಮೇಲೆ ಪ್ರಾಸಾದವಿರುವುದಿಲ್ಲ. ಮುಚ್ಚಳಿಕೆಮಾತ್ರದಿಂದ ನಿರ್ಮಿತವಾಗಿರುವುದಿಲ್ಲ. ಇವನ್ನನ್ನು ಸರಿಸಿ ಹೊರಗೆ ಶಿಖರವಿಮಾನದ ಕೆಳಗೆ ಕಂಠವೆಂಬ ಅಲಂಕಾರ ಭಾಗವಿರುವುದಿಲ್ಲ. ತತ್ಫಲವಾಗಿ ಈ ದೇವಸ್ಥಾನವು ಎಂದರೆ ಗರ್ಭಗೃಹವು ಷಡ್ವರ್ಗದಲ್ಲಿ ಸೇರದೆ ಚತುರ್ವರ್ಗ ಉಪಾ ವಿಮಾನವೆಂದು ಕರೆಯಲ್ಪಡುತ್ತದೆ. ಉಪಾ ವರ್ಗಕ್ಕೆ ಸೇರಿ ಶಿಖರವಿಮಾನವು ವರ್ತುಳಾಕಾರದಲ್ಲಿ ಇರುವುದರಿಂದ ವೇಸರ ಶೈಲಿಗೆ ಸೇರಿದುದೆಂದು ತಿಳಿಯಬೇಕು.

ಪ್ರಥಮ ಪ್ರಾಕಾರದಲ್ಲಿ ಪ್ರದಕ್ಷಿಣವಾಗಿ ಬಂದರೆ ಉತ್ತರಭಾಗದಲ್ಲಿ ಶ್ರೀನಾರಾಯಣಸ್ವಾಮಿ ಅಭಿಷೇಕ ತೀರ್ಥ ಹರಿಯುವ ಜಲಧಾರಾಮಾರ್ಗ ಗೋಮುಖವಿರುವುದು. ಆದರೆ ಈ ಗೋಮುಖವು ಯಾವ ಶಿಲ್ಪವಿನ್ಯಾಸವೂ ಇರುವುದಿಲ್ಲ. ಆದರೆ ಈ ಗೋಮುಖದ ಆಕೃತಿಯಲ್ಲಿ ಸಿಂಹಮುಖವಿರುವುದರಿಂದ ವಿಷ್ಣುವರ್ಧನನ ಪ್ರತಿನಿಧಿ ಪಂಚಬಾಧ್ರಸಾಮಂತನ ಮೇಲ್ವಿಚಾರಣೆಯಲ್ಲಿ ನಿರ್ಮಿತವೆಂದು ತಿಳಿಯಬೇಕು. ಕ್ಷತ್ರಿಯ ಅಧಿಕಾರಿಯಾದವರ ಗೋಮುಖದಲ್ಲಿ ಸಿಂಹಾಕೃತಿಯನ್ನು ರಚಿಸಬೇಕೆಂದು ಹೇಳಿರುವುದು.

**ನವರಂಗ–** ಅರ್ಧಮಂಟಪದಿಂದ ಮುಂದೆ ಬಂದರೆ ನವರಂಗವು. ಈ ನವರಂಗವು 25 ಅಂಕಣಗಳಿಂದಲೂ 36 ಕಂಭಗಳಿಂದಲೂ ರಚಿಸಲ್ಪಟ್ಟಿದೆ. ಇದರಲ್ಲಿರುವ ಕಂಭಗಳೆಲ್ಲವೂ ಚತುರಶ್ರವಾಗಿರುವುವು. ಮಧ್ಯಸಾಲಿನ ಅಕ್ಕಪಕ್ಕದ ಎರಡು ಸಾಲಿನ ಕಂಭಗಳು ಷೋಡಶಾಶ್ರಯುಕ್ತ ಮುಕ್ತಾದಾಮಾದಿ ಅಲಂಕಾರಗಳಿಂದ ಮನೋಹರವಾಗಿ ನಿರ್ಮಿಸಲ್ಪಟ್ಟಿರುವುವು. ಈ ನವರಂಗದಲ್ಲಿ ಯಾವ ಕಂಭದಲ್ಲೂ ಯಾವ ಮೂರ್ತಿವಿಗ್ರಹ ವಿನ್ಯಾಸವೂ ಇರುವುದಿಲ್ಲ,

ನವರಂಗವೆಂದರೇನು ? ದ್ವಾರಪಾಲಕರ ದ್ವಾರದ ಉಭಯ ಪಾರ್ಶ್ವ ಕಂಭಗಳಲ್ಲಿ ಒಂಬತ್ತು ಎಂದರೆ ಅಕ್ಕಪಕ್ಕದಲ್ಲಿ ನಾಲ್ಕು ನಾಲ್ಕು ಮಧ್ಯೆ ಒಂದು ಪಟ್ಟಿಯ ವಿನ್ಯಾಸವು ಪತ್ರಶಾಖಾ. ಗಂಧರ್ವಶಾಖಾ, ರೂಪಸ್ತಂಭ, ಖಲ್ವಶಾಖಾ, ಸಿಂಹಶಾಖಾ ಎಂಬ ಹೆಸರುಳ್ಳ ಪಟ್ಟಿಯ ವಿನ್ಯಾಸವು ಕಂಭಗಳಲ್ಲಿ ರಚಿಸಿದ್ದಲ್ಲಿ ಆಗ ನವರಂಗವೆಂದು ಕರೆಯಲ್ಪಡುವುದು. ಈ ದ್ವಾರಪಾಲಕರ ಉಭಯ ಪಾರ್ಶ್ವದಲ್ಲಿಯೂ ಎರಡು ಗುಪ್ತಸ್ಥಾನಗಳಿವೆ. ಪ್ರಕೃತ ಬಲಭಾಗದ ಸ್ಥಳದಲ್ಲಿ ಬೊಕ್ಕಸವೂ.

ಎಡಭಾಗದ ಸ್ಥಳದಲ್ಲಿ ವಿಷ್ವಕ್ಸೇನ ವಿಗ್ರಹವು ಪ್ರತಿಷ್ಠಿತವಾಗಿರುವುದು. ಈ ಸ್ಥಳದಲ್ಲೇ ಭದ್ರತೆಯ ನಿಮಿತ್ತವಾಗಿ ತಿರುಮಂಗೈಯಾಳ್ವಾರು ನಮ್ಮಾಳ್ವಾರ ಉತ್ಸವ ವಿಗ್ರಹವನ್ನು (ಲೋಹ ವಿಗ್ರಹವು) ಇಟ್ಟಿರುವರು.

ಗರ್ಭಗೃಹದಲ್ಲಿ ಸ್ಥಳ ಸಂಕೋಚವಾದ್ದರಿಂದ ಈ ನವರಂಗದಲ್ಲೇ ಉತ್ಸವ ಮೂರ್ತಿ ಇರಲು ಸನ್ನಿಧಿ ಏರ್ಪಡಿಸಿರುವರು. ಈ ಉತ್ಸವಮೂರ್ತಿ ಗರ್ಭಗೃಹದ ಮೇಲಿನ ವಿಮಾನವು ಕಂಠವೆಂಬ ಅಲಂಕಾರವಿನ್ಯಾಸವಿಲ್ಲದೆ ಏಕ ಕಲಶದಿಂದ ಕೂಡಿ ಶೋಭಾಯಮಾನವಾಗಿರುವುದು. ಈ ನವರಂಗ ಮಂಟಪದಲ್ಲಿಯೂ ರಾಜ ಒಡೆಯರ ಪ್ರತಿಕೃತಿಯನ್ನು ಕಂಭದಲ್ಲಿ ಉಂಟುಮಾಡಿರುವರು.

ಶಕ ೧೭೭೧ ಸೌಮ್ಯ ಸಂ॥ (AD 21-10-1849) ರಲ್ಲಿ ಚಲುವರಾಯ ಸ್ವಾಮಿ ಸನ್ನಿಧಿಯಲ್ಲಿರುವ ಚಿನ್ನದ ಮಂಟಪವು ಮತ್ತು ಸನ್ನಿಧಿ ದ್ವಾರದ ಚಿನ್ನದ ತಗಡಿನ ಅಲಂಕಾರವನ್ನು **ಕೇಟಿಪ್ಪೂರು ಚಿಕ್ಕಗಿರಿ ತಿರುಮಲಾಚಾರ್ಯರು** ಅವರ ತಮ್ಮ **ಸಿಂಗ್ರಾಚಾರ್ಯರು** ನಡೆಸಿದ ಧರ್ಮ. ಶಾ. ಪ್ರ. ೧೬೨

ಇದೇ ಕಾಲಮಾನದಲ್ಲಿ ಶಿವಭಕ್ತರಿಗೂ ಜೈನರಿಗೂ ಉಂಟಾದ ಕಲಹದಲ್ಲಿ ಶ್ರೀವೈಷ್ಣವರು ಜೈನರ ಸಹಾಯಕ್ಕಾಗಿ ಬರಲು ಶಿವಭಕ್ತರಿಗೆ ಕೋಪವುಂಟಾಗಿ ಈ ರಂಗಮಂಟಪದ ಒಂದು ಭಾಗವನ್ನು ಕೆಡಹಿ ನಷ್ಟಪಡಿಸಿದರು. ಅನಂತರ ಈ ಭಾಗವನ್ನು ನಾಗಮಂಗಲದ ಶಿಲ್ಪಾಚಾರಿಯು ಕಟ್ಟಿಸಿರುವುದು ತಿಳಿದುಬರುತ್ತದೆ.

ಪಾಂ. ಪ್ರ. ೧೪೦

**ದ್ವಿತೀಯ ಪ್ರಾಕಾರ**— ನವರಂಗದಿಂದ ಹೊರಕ್ಕೆ ಬಂದರೆ ದ್ವಿತೀಯ ಪ್ರಾಕಾರಕ್ಕೆ ಬರುತ್ತೇವೆ. ಇಲ್ಲಿ ಧ್ವಜಸ್ತಂಭ, ಬಲಿಪೀಠಗಳಿರುವುದು. ಇದು ಎರಡನೆಯ ಪ್ರಾಕಾರ. ಇಲ್ಲಿಂದ ಪ್ರದಕ್ಷಿಣವಾಗಿ ಹೊರ ಹೊರಟರೆ, ಎಡಭಾಗದಲ್ಲಿ ಎತ್ತರವಾದ ಜಗತಿಯಿದೆ ಅದರ ಮೇಲೆ ಹೊರಟರೆ ಆಗ್ನೇಯ ಮೂಲೆಯಲ್ಲಿ ಅತಿವಿಸ್ತಾರವಾದ ೧೮ ಅಂಕಣಗಳುಳ್ಳ **ಪಾಕಶಾಲೆ** ಇರುವುದು. ಮುಂದೆ ನೈಋತ್ಯ ಮೂಲೆಯಲ್ಲಿ **ಚಕ್ರತ್ತಾಳ್ವಾರ್** (ಸುದರ್ಶನ) ಸನ್ನಿಧಿ ಇರುವುದು. ಈ ಚಕ್ರತ್ತಾಳ್ವಾರ್ ಸನ್ನಿಧಿ ಬಲಪಕ್ಕದಲ್ಲೇ ೧೨ ಆಳ್ವಾರುಗಳ ಸನ್ನಿಧಿ ಇರುವುದು. ಈ ಸ್ಥಳದಲ್ಲಿಯೇ ಪರಮಪದನಾಥರೂ ಪ್ರತಿಷ್ಠಿರಾಗಿರುತ್ತಾರೆ. ಮುಂದಕ್ಕೆ ಬಂದರೆ ವಾಯವ್ಯ ಮೂಲೆಯಲ್ಲಿ ಶ್ರೀಲಕ್ಷ್ಮೀ ಅಮ್ಮನವರು (ಯದುಗಿರಿ) ಸನ್ನಿಧಿಗೆ ಬರುತ್ತೇವೆ.

**ಶ್ರೀಲಕ್ಷ್ಮೀ ಅಮ್ಮನವರ ಸನ್ನಿಧಿ**— ಗರ್ಭಗೃಹ, ಶುಕನಾಸಿ, ಮುಖಮಂಟಪ, ೧೨ ಅಂಕಣ ವಿಸ್ತಾರವಾಗಿ ನಿರ್ಮಿಸಿರುವುದು. ಅಲ್ಲಿಂದ ಮುಂದೆ ಬಂದರೆ ರಾಮಾನುಜಾಚಾರ್ಯ ಸನ್ನಿಧಿಗೆ ಸೇರಿದಂತೆ ಯದುಗಿರಿ ಅಮ್ಮನವರ

ಪಾಕಶಾಲೆ ಚಿಕ್ಕದಾಗಿ ಮೂರು ಅಂಕಣದಲ್ಲಿ ಕಟ್ಟಲ್ಪಟ್ಟಿದ್ದಿತು. ಈಗ ಇರುವುದಿಲ್ಲ. ಆ ಸ್ಥಳದಲ್ಲಿ **ವರದರಾಜರ** ಸನ್ನಿಧಿ ಇರುವುದು. ಅದರ ಪಕ್ಕದಲ್ಲಿ **ಕೂರತ್ತಾಳ್ವಾರ್‌ರವರ** ಸನ್ನಿಧಿ. ಅದರ ಪಕ್ಕದಲ್ಲಿ **ರಾಮಾನುಜಾಚಾರ್ಯರ** ಸನ್ನಿಧಿ.

ರಾಮಾನುಜರ ಸನ್ನಿಧಿಯು ಗರ್ಭಗೃಹ, ಮುಖಮಂಟಪ ಮಾತ್ರ ಇರುವುದು. ಈ ಮುಖಮಂಟಪವು ೧೨ ಅಂಕಣ ೧೬ ಕಂಭಗಳಿಂದ ಕೂಡಿರುವುದು. ಯಾವ ಚಿತ್ರಕಲೆಯೂ ಇರುವುದಿಲ್ಲ.

ಶ್ರೀರಾಮಾನುಜಾಚಾರ್ಯರ ಗುಡಿಯ ಬಾಗಿಲುವಾಡ ಹಿತ್ತಾಳೆ ತಗಡಿನ ಅಲಂಕಾರವನ್ನು ತಿರುಮಲೈ ಆನಂದಾಂಪಿಳ್ಳೆ **ಅಂಬಾಸಾಟಿರ್ ಅಳಹಿಯ ಶಿಂಗರಾಚಾರ್ಯರ ಧರ್ಮ**ವಾಗಿರುವುದು. —ಪಾಂ. ಪು. ೧೫೦

ಇದೇ ಮಂಟಪದ ಬಾಗಿಲಿನ ಧರ್ಮವು ತಿಮ್ಮರಸಯ್ಯನ ತಮ್ಮ ಪಿರಿಯಣ್ಣನ ಧರ್ಮವು ಕಾಣಬರುವುದು. ಪಾಂ. ಪು, ೧೫೧

**ಯಾಗಶಾಲೆ**— ಒಂಭತ್ತು ಅಂಕಣ ವಿಸ್ತಾರದಿಂದ ಕೂಡಿರುವುದು. ಮಧ್ಯೆ ವೇದಿಕೆಯಮೇಲೆ ಹೋಮಕುಂಡವು ನಿರ್ಮಿಸಲ್ಪಟ್ಟು ನಾಲ್ಕು ಕಂಭಗಳಿಂದ ಕೂಡಿರುವುದು. ಈ ಹೋಮಕುಂಡದಲ್ಲಿ ಆಗಮಶಾಸ್ತ್ರವನ್ನನುಸರಿಸಿ ಪೂಜಾಂಗವಾಗಿ ವೇದಮಂತ್ರಗಳಿಂದ ಹೋಮಮಾಡುವರು.

**ಪಿಳ್ಳೈಲೋಕಾಚಾರ್ಯರ ಸನ್ನಿಧಿ**— ಯಾಗಶಾಲೆ ಪಕ್ಕದಲ್ಲಿದೆ. ಇಲ್ಲಿ ಆಚಾರ್ಯರನ್ನು ಶಕ ೧೭೫೧ ವಿರೋಧಿ ಸಂ॥ (1829) ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಪ್ರತಿಷ್ಠಿತವಾಯಿತು.

ಪಾಕಶಾಲೆಯಿಂದ ಸುದರ್ಶನಾಳ್ವಾರ್ ಸನ್ನಿಧಿ ವರೆಗೆ ಇರುವ ಮಂಟಪವನ್ನು ಸುದರ್ಶನಾಳ್ವಾರ್ ಸನ್ನಿಧಿಯಿಂದ ಲಕ್ಷ್ಮೀಅಮ್ಮನವರ ಸನ್ನಿಧಿ ವರೆಗೂ ಇರುವ ಮಂಟಪವನ್ನು ಶಕ ೧೩೮೦ ಬಹುಧಾನ್ಯ ಸಂ॥ 2–12–1458 ರಲ್ಲಿ ವಿಜಯನಗರದ ಅರಸರ ಪ್ರತಿನಿಧಿ ತಿಮ್ಮಣ್ಣದಂಡನಾಯಕರು ಕಟ್ಟಿಸಿದರು.

ಈ ಮಂಟಪದಲ್ಲಿ ದಕ್ಷಿಣಭಾಗದ ಮಂಟಪದಲ್ಲಿ ಮೂರು ಸಾಲುಕಂಭಗಳಿವೆ. ಒಂದೆರಡು ಕಂಭ ವಿನಹ ಎಲ್ಲಾ ಕಂಭಗಳೂ ಚತುರಾಕೃತಿಯಾಗಿದ್ದು ಯಾವ ಶಿಲ್ಪಕಲೆಯೂ ಇರುವುದಿಲ್ಲ. ಒಂದೆರಡು ಸ್ತಂಭಗಳು ವೃತ್ತಾಕಾರದಲ್ಲಿರುವುದು.

ಅಂತೆಯೇ ಪಶ್ಚಿಮಭಾಗದ ಮಂಟಪದಲ್ಲೂ ಎರಡುಸಾಲು ಚತುರಾಶ್ರ ಕಂಭಗಳಿವೆ. **ಅವುಗಳಲ್ಲಿ** ಹಿಂದಿನ ಸಾಲಿನ **ಕಂಭದಲ್ಲಿ ಯಾವ ಕೆತ್ತನೆ** ಶಿಲ್ಪ

ಚಾತುರ್ಯವೂ ಇರುವುದಿಲ್ಲ. ಮುಂದಿನ ಸಾಲಿನ ಚತುರಶ್ರ ಕಂಭಗಳಲ್ಲಿ ಪಾಂಡವರ ಕಥಾ ಅರ್ಧಚಿತ್ರ ವಿಗ್ರಹಗಳು ಕೆತ್ತಲ್ಪಟ್ಟಿವೆ.

**ಸಪ್ತಸ್ವರ ಕಂಭ–** ಈ ಮಂಟಪದ ಮುಂದಿನ ಸಾಲಿನ ಕಂಭಗಳಲ್ಲಿ ದಕ್ಷಿಣದಿಂದ ಮೊದಲನೆಯ ಸಾಲಿನಲ್ಲಿ ಸಪ್ತಸ್ವರವನ್ನು ಕೊಡುವ ವಿನ್ಯಾಸಕ್ರಮದಲ್ಲಿ ಶಿಲ್ಪಚಾತುರ್ಯದಿಂದ ನಿರ್ಮಿಸಲ್ಪಟ್ಟಿರುವುದು.

ಈ ಶ್ರೀಲಕ್ಷ್ಮೀಅಮ್ಮನವರ ಸನ್ನಿಧಿಯಿಂದ ಶ್ರೀರಾಮಾನುಜಾಚಾರ್ಯರ ಸನ್ನಿಧಿವರೆಗಿನ ರಂಗಮಂಟಪವನ್ನು ವಿಜಯನಗರದ ಅರಸರ ಪ್ರತಿನಿಧಿ ತಿಮ್ಮಣ್ಣ ದಂಡನಾಯಕರ ಧರ್ಮಪತ್ನಿ ರಂಗನಾಯಕಮ್ಮನವರ ಹೆಸರಿನಲ್ಲಿ ಕಟ್ಟಲ್ಪಟ್ಟಿರುವುದು. (ಶಾಂ. ಪ್ರ. ೧೫೪) ಇಲ್ಲಿ ಕುಸ್ತ ಸ್ತಂಭವನ್ನು ಬಿಟ್ಟು ಮೂರು ಸಾಲು ಕಂಭಗಳಿವೆ. ಸಾಧಾರಣವಾಗಿ ಎಲ್ಲಾ ಸ್ತಂಭಗಳೂ ಚತುರಶ್ರವಾಗಿವೆ. ಕೆಲವು ಸ್ತಂಭಗಳು ಚತುರಶ್ರದಲ್ಲಿ ಅಷ್ಟಾಶ್ರ, ಅಷ್ಟಾಶ್ರದಲ್ಲಿ ವೃತ್ತರೂಪ, ಸ್ತಂಭಗಳಲ್ಲಿ ನಾಲ್ಕು ಮೂಲೆಗಳಲ್ಲಿಯೂ ಸ್ತಂಭರೂಪ ಇರುವ ಶಿಲ್ಪವಿನ್ಯಾಸ ಚಾತುರ್ಯವನ್ನು ಕಾಣಬಹುದು. ಒಂದು ಕಂಭದಂತೆ ಇನ್ನೊಂದು ಕಂಭದ ರೂಪವಿರುವುದಿಲ್ಲ. ಅಂತೆಯೇ ಕಂಭದ ಮೇಲಿರುವ ಬೋದಿಗೆಯ ವಿನ್ಯಾಸವನ್ನೂ ವಿವಿಧ ರೀತಿಯಲ್ಲಿ ಕಾಣಬಹುದು.

ಮುಂದಿನ ಸಾಲಿನ ಕಂಭಗಳಲ್ಲಿ ಶ್ರೀರಾಮಾಯಣ, ಭಾಗವತ ಚರಿತ್ರೆಯ ಅರ್ಧಚಿತ್ರ ಮೂರ್ತಿಗಳನ್ನು ಕೆತ್ತಲಾಗಿರುವುದು. ಇಲ್ಲಿಯ ಸ್ತಂಭಗಳು ನೂತನ ನಿರ್ಮಾಣವೆ ? ಅಥವಾ ಇನ್ನೆಲ್ಲಿಂದಾದರೂ ತಂದು ಜೋಡಿಸಿರುವರೆ, ತಿಳಿಯ ಬರುವುದಿಲ್ಲ.

ದ್ವಿತೀಯ ಪ್ರಾಕಾರದ ಒಳಭಿತ್ತಿಯ ಹೊರಭಾಗ, ಎಂದರೆ ನವರಂಗದ ಹೊರಭಾಗದ ಭಿತ್ತಿ, ಪ್ರಾಕಾರದ ಅಧಿಷ್ಠಾನ ವಿನ್ಯಾಸವು ಬಹು ಲಲಿತವು. ಕಪೋತ, ಉಪಾನ, ಪದ್ಮ, ಕಂಪ, ಕಂಠ, ಊರ್ಧ್ವಪದ್ಮ, ಕಂಪ ಮಹಾಪಟ್ಟಿ ಈ ರೀತಿಯ ಶಿಲ್ಪ ರೇಖಾಚಾತುರ್ಯ ಕಾಣಬರುವುದು.

ಈ ಪ್ರಾಕಾರದಲ್ಲಿ ಪ್ರದಕ್ಷಿಣವಾಗಿ ಬರುವಾಗ ಪಶ್ಚಿಮ ಭಾಗದಲ್ಲಿ ನೈಋತ್ಯ ಮತ್ತು ವಾಯುವ್ಯ ಭಾಗದಲ್ಲಿ ಎರಡು ಮಂಟಪಗಳಿವೆ. ಕೋಡೆ ಉತ್ಸವ ಮಂಟಪ ವೆಂದು ಕರೆಯುವರು. ಅವುಗಳಲ್ಲಿ ವಾಯುವ್ಯ (ಅಮ್ಮನವರ ಸನ್ನಿಧಿ ಪಕ್ಕ)ದ ಮಂಟಪವು ಕೆಸೂರು ನರಸಿಂಹದಾಸರ ಮಗ ಬಿಳಿಕಲಿದಾಸನು ಕಟ್ಟಿಸಿರುವುದಾಗಿ ತಿಳಿದುಬರುವುದು.

**ಧ್ವಜಸ್ತಂಭ–** ದೇವಾಲಯದಲ್ಲಿ ಧ್ವಜಸ್ತಂಭವು ಅತಿಮುಖ್ಯವಾದುದು. ಅಲಂಕಾರಯುತವಾಗಿ ಲಕ್ಷಣವಾಗಿರುವುದು. ಉತ್ಸವಮೂರ್ತಿ ಇಲ್ಲವಾದಲ್ಲಿ

ಧ್ವಜಾರೋಹಣವು ಇರುವುದಿಲ್ಲ. ಅದನ್ನನುಸರಿಸಿ ಉತ್ಸವಾದಿಗಳಿರುವುದಿಲ್ಲ.

ಧ್ವಜಸ್ತಂಭವು ಹೊರತ ಮರದ ಉದ್ದವನ್ನನುಸರಿಸಿ ಗೋಪುರಕ್ಕೆ ಸಮ ವಿಮಾನ ಕಲಶಕ್ಕೆ ಸಮ ನಿರ್ದಿಷ್ಟ ಮಾನದಲ್ಲಿರಬೇಕೆಂಬ ನಿಯಮವುಂಟು.

ನಮ್ಮ ದೇವಸ್ಥಾನದಲ್ಲಿ ವಿಮಾನ ಕಲಶಕ್ಕೆ ಸಮನಾಗಿರುವುದು. ಧ್ವಜದ ಮೇಲಿನ ಧ್ವಜದ ಭಾಗಕ್ಕೆ **ಮುಸೂರಕ**ವೆಂದು ಹೆಸರು, ಅದು ಗರ್ಭಗುಡಿಗೆ ಅಭಿಮುಖವಾಗಿಯೇ ಇರಬೇಕು. ಈ ಮರವು ಚತುರಶ್ರ, ಅಷ್ಟಾಶ್ರ, ಷಡಶ್ರ, ವೃತ್ತ ಇಂತಾದ ಆಕಾರಗಳಲ್ಲಿರಬಹುದು. ಶಾಸ್ತ್ರದಲ್ಲಿ ಬಿದಿರು ಬೊಂಬನ್ನಿಡಬೇಕೆಂದು ಹೇಳಿರುವುದು. ಧ್ವಜಸ್ತಂಭ ಮರವನ್ನಿಟ್ಟು, ಅದರ ಮೇಲೆ ತಗಡಿನ ಅಲಂಕಾರ ಮಾಡುವಾಗ ಬಿದಿರು ಬೊಂಬಿನಲ್ಲಿರುವ ಗಿಣ್ಣಿನಂತೆಯೇ ಅಲಂಕಾರವನ್ನು ಮಾಡುವರು. ಈ ಗಿಣ್ಣುಗಳ ಸಂಖ್ಯೆಯನ್ನನುಸರಿಸಿ ಧ್ವಜಸ್ತಂಭದ ಹೆಸರುಗಳು ವಿವಿಧವಾಗಿರುವುದು. ಧ್ವಜಸ್ತಂಭ, ಧ್ವಜಪಟವನ್ನು ಎತ್ತಿಕಟ್ಟುವುದು ಕೇವಲ ದೇವಸ್ಥಾನದಲ್ಲಿ ಮಾತ್ರವಲ್ಲ, ರಾಜ, ರಾಜಧಾನಿ ನಗರ, ರಥ, ಪ್ರಾಸಾದ, ಕೋಟೆ ಇತ್ಯಾದಿ ಸ್ಥಳಗಳಲ್ಲಿ ಅಗತ್ಯ ಧ್ವಜಾರೋಹಣ ಮಾಡುವರು.

ಧ್ವಜಸ್ತಂಭದ ಕೆಳಗಿನ ಪೀಠವು ಪಾಂಚರಾತ್ರ ಶಾಸ್ತ್ರವನ್ನನುಸರಿಸಿ ತ್ರಿಮೇಖಲಾ ರೂಪದಲ್ಲಿಯೂ ವೈಖಾನಸ ಶಾಸ್ತ್ರವನ್ನನುಸರಿಸಿ ಸೋಪಾನಪಂಕ್ತಿ ರೂಪದಲ್ಲಿಯೂ ನಿರ್ಮಿಸಲ್ಪಡುವುದು. ಸೂರ್ಯದೇವಾಲಯದಲ್ಲಿ ಧ್ವಜಸ್ತಂಭವು ಪಿಬಿರವಿಮಾನದಲ್ಲಿ ಸ್ಥಾಪಿಸಲ್ಪಡುವುದು.

ಧ್ವಜಸ್ತಂಭವು ತ್ರಿಮೂರ್ತಿ ಸ್ವರೂಪವಾದದ್ದು ಅಲ್ಲದೆ **ಧರ್ಮ, ಯಶಸ್ಸು, ಕೀರ್ತಿ**ಸ್ವರೂಪವಾದದ್ದು. ಈ ಧ್ವಜದಂಡದಲ್ಲಿ ಅಷ್ಟದಿಕ್ಪಾಲಕರು, ಅಷ್ಟವಸುಗಳು, 64 ದೇವತೆಗಳು, 21 ಋಷಿಗಳು, ಚತುರ್ವೇದಗಳು ಆವಾಹಿಸಲ್ಪಟ್ಟಿರುತ್ತಾರೆ. ಆದ್ದರಿಂದಲೇ ವಿಗ್ರಹ, ಧ್ವಜ, ಕಲಶ ಇವು ಮೂರೂ ಸಾಕ್ಷಾತ್ ಭಗವಂತನ ಸ್ವರೂಪವೆಂದೂ ತಿಳಿಸಿರುವುದು.

ಧ್ವಜಾರೋಹಣವು ವೀರತ್ವ, ಧರ್ಮದ ಏಳಿಗೆಯ ಧರ್ಮಸ್ವರೂಪವಾಗಿರುವುದು. ಶತ್ರುಗಳನ್ನು ಜಯಿಸಲು ಸೈನ್ಯಕ್ಕೆ ಉತ್ತೇಜನ ಕೊಡಲು ಅತ್ಯಾವಶ್ಯಕವು. ಧ್ವಜಾರೋಹಣವನ್ನು ನೋಡುವುದರಿಂದ ಪಾಪನಾಶವಾಗುವುದು. ಜಯಲಭಿಸುವುದು. ದೇವತೆಗಳು ಸಂತೋಷಿಸುವರು. ದೇಶದಲ್ಲಿ ಸುವೃಷ್ಟಿಯಾಗಿ, ಗೋಧನ, ಧಾನ್ಯ ಸಮೃದ್ಧಿಯಾಗುವುದು. ಧ್ವಜದ ಎತ್ತರವು ರಾಜನ ಶೌರ್ಯ, ಧೈರ್ಯ ಪರಾಕ್ರಮಗಳನ್ನು ಅವಲಂಬಿಸಿರುವುದು.

## ಬಲಿಪೀಠ

ದೇವಸ್ಥಾನವೆಂದರೆ = ವಿಮಾನ (ಗರ್ಭಗೃಹ. ಅದರಮೇಲಿರುವ ಶಿಖರ ಮತ್ತು ಕಲಶ) ಯಾವರೀತಿಯಲ್ಲಿ ಶ್ರೇಷ್ಠವೋ ಅದೇರೀತಿಯಲ್ಲಿ **ಬಲಿಪೀಠವೂ**

ಅತಿಮುಖ್ಯವಾದುದು. ದೇವಸ್ಥಾನದಲ್ಲಿ ಯಾವ ಭಾಗ ಇರಲಿ, ಇಲ್ಲದಿರಲಿ, ಗರ್ಭಗೃಹ, ವಿಮಾನ, ಮೂಲವಿಗ್ರಹ (ದೇವತಾ ಮೂರ್ತಿ) ಬಲಿಪೀಠ ಇವುಗಳು ಇದ್ದೇ ಇರಬೇಕು. ಇವುಗಳು ಶ್ರೇಷ್ಠವೆಂದು ಅರ್ಥವು. ಆಲಯದಲ್ಲಿ ದೇವರಿಗೆ ನಿವೇದನವಾದ ನಂತರ ಪ್ರಾಕಾರಾವರಣ ದೇವತೆಗಳಿಗೆ ಅಷ್ಟದಿಕ್ಪಾಲಕರಿಗೆ (ಪರಿವಾರ ದೇವತೆಗಳು) ಬಲ್ಯನ್ನ ನಿವೇದನ ಮಾಡುವರು. ಬಲಿ ಎಂದರೆ ಪರಿವಾರ ದೇವತೆಗಳಿಗೆ ಅಷ್ಟದಿಕ್ಪಾಲಕರಿಗೆ ನಿವೇದನವೆಂದರ್ಥವು. ಇವರಿಗೆ ತೃಪ್ತಿಯಾಯಿತೆಂದರೆ ಆಗ ಸರ್ವ ಭೂತಗಳಿಗೂ (ಜೀವರಾಶಿ) ನಿವೇದನವಾಯಿತು, ತೃಪ್ತಿಯಾಯಿತೆಂದು ಅರ್ಥವು. ಈ ಬಲಿ ಕರ್ಮವು ಪೂರ್ತಿಯಾದರೇನೆ ಭಗವಂತನಿಗೆ ನಿವೇದನವಾಯಿತು, ತೃಪ್ತಿಯಾಯಿತೆಂದರ್ಥವು. ಇದಾದ ಮೇಲೆಯೇ ಮಹಾ ಮಂಗಳಾರತಿ, ತೀರ್ಥಪ್ರಸಾದವಿನಿಯೋಗಾದಿಗಳು ನಡೆಯುತ್ತವೆ.

ಬಲಿಪೀಠದ ರೂಪವು ಅನೇಕ ಆಕಾರಗಳಲ್ಲಿ ನಿರ್ಮಿಸಲು ಶಾಸ್ತ್ರಗಳಲ್ಲಿ ತಿಳಿಸಿರುವುದು.

ಬಲಿಪೀಠಾಂತ ದೇವಾಲಯವು ಎಂದರೆ ದೇವಾಲಯವು ಬಲಿಪೀಠದ ವರೆಗೆ ಅನಂತರದ ಭಾಗಗಳು ಐಶ್ವರ್ಯವನ್ನವಲಂಬಿಸಿರುವುದು.

**ಪಾತಾಳ ಅಂಕಣ**— ಶ್ರೀರಾಮಾನುಜಾಚಾರ್ಯರ ಸನ್ನಿಧಿಯಿಂದ ಪಾಕಶಾಲೆವರೆಗೆ ೪೫ ಅಂಕಣ ವಿಸ್ತಾರವುಳ್ಳ ಅತ್ಯುನ್ನತ ೪೦ ಕಂಭಗಳಿಂದೊಡಗೂಡಿರುವುದು. ಎಲ್ಲಾ ಕಂಭಗಳೂ ಕೆಳಗಿನಭಾಗವು ಚತುರಶ್ರವಾಗಿಯೂ, ಮೇಲಿನ ಭಾಗವು ವೃತ್ತಾಕಾರವಾಗಿಯೂ ಇರುವುದು. ಈ ಕಂಭಗಳಲ್ಲಿ ಯಾವ ಚಿತ್ರಕಲೆಯೂ ಇರುವುದಿಲ್ಲ.

ಈ ಪಾತಾಳಾಂಕಣವು ಶಕ ೧೨೩೫ ಪರಿಧಾವಿ ಸಂ॥ 1-8-1312 ರಲ್ಲಿ ೧೦೦೫ ಗದ್ಯಾಣಗಳಿಂದ ಮಹಾಪ್ರಧಾನ **ಮಾಧವದಂಡನಾಯಕರೂ** ಮತ್ತು ಸ್ಥಳದ ಅಗ್ಗಳಶೆಟ್ಟಿಯ ಮಗ **ಕೇತಿಸೆಟ್ಟಿ** ೨೫೦ ಗದ್ಯಾಣಗಳಿಂದಲೂ ಜೀರ್ಣೋದ್ಧಾರ ಮಾಡಿರಬೇಕು ಅಥವಾ ನೂತನವಾಗಿ ಕಟ್ಟಿಸಿರಬೇಕು.

—ಪಾಂ. ಪು. ೧೫೪—೧೫೫

ಪಾತಾಳಾಂಕಣದ ದಾಸಕಲ್ಲುಗಳನ್ನು ತಿಮ್ಮರಸಯ್ಯನ ತಮ್ಮ ಹಿರಿಯಣ್ಣನ ಧರ್ಮ ಸೇವೆಯಾಗಿರುವುದು. —ಪಾಂ, ಪು. ೧೫೦

**ಗೋಪುರ**— ಮಂದಿರಕ್ಕೆ ಅಲಂಕಾರರೂಪವಾಗಿಯೂ, ನೋಡುವವರಿಗೆ ಆಕರ್ಷಕವಾಗಿಯೂ. ಪ್ರಾಕಾರ ಮಧ್ಯದಲ್ಲಿ ಮಹಾದ್ವಾರದ ಮೇಲೆ ಬೃಹದಾಕಾರವಾಗಿ ರಚಿಸಿರುವ ಕಟ್ಟಡಕ್ಕೆ ಗೋಪುರವೆಂದು ಹೆಸರು. ಇತರ ದೇವಸ್ಥಾನಗಳಲ್ಲಿ ಗೋಪುರವು ಅಂತಹ ಚತುರಶ್ರವಾಗಿರುವುದು. ನಮ್ಮ ದೇವಸ್ಥಾನದಲ್ಲಿ ಗೋಪುರವು

ಸಮ ಚತುರಸ್ರವಾಗಿ ನಾಲ್ಕೂ ಪಕ್ಕದಲ್ಲೂ ಸಿಂಹಲಲಾಟವಿರುವುದು. ಕರ್ಣಕೂಟ, ಹಾರ, ಪಂಜರ ಸಾಲು ಎಂಬ ಅಲಂಕಾರಗಳಿಂದ ಕೂಡಿರುವುದು. ಮೂರು ದ್ವಾರಗಳಿಂದಲೂ, ಐದು ಕಲಶಗಳಿಂದಲೂ ಕೂಡಿರುವುದು.

ಕೆಳಗಿನ ಮೊದಲನೆಯ ದ್ವಾರದ ಮೇಲೆ ಆನೆಯ ಸಾಲು ಚಿತ್ರಿಸಿರುವುದು. ಎರಡನೆಯ ದ್ವಾರದ ಮೇಲೆ ಹಂಸದ ಸಾಲು. ಮೂರನೆಯ ದ್ವಾರದ ಕೆಳಗೆ ಕುದುರೆಯ ಸಾಲು, ಪದಾತಿ ಸೈನ್ಯದ ಸಾಲು ಕಾಣಬರಲಿಲ್ಲ. ಆನೆಗಳು, ಹಂಸ, ಕುದುರೆ ಇವುಗಳ ಚಲನ ವಲನೆಗಳು ಅವುಗಳ ಚೇಷ್ಟಾ ವಿನ್ಯಾಸಗಳನ್ನು ಸ್ವಲ್ಪ ಹೊತ್ತು ಅವಲೋಕಿಸಿ ನೋಡಿದರೆ ಅವುಗಳು ಚಲಿಸುವಂತೆ ಭಾಸವಾಗುತ್ತವೆ. ಆನೆಗಳು ನಾಲ್ಕು ಪಕ್ಕದಿಂದ 25×4=100 ಆನೆಗಳು ಚಿತ್ರಿತವಾಗಿವೆ. ಇಲ್ಲಿ ವಿಶೇಷವೇನೆಂದರೆ ಆನೆಗಳ ಸಾಲಿನಲ್ಲಿ ಮೊದಲನೆಯ ದ್ವಾರದ ಮೇಲೆ ಮಧ್ಯದಲ್ಲಿ ಸಿಂಹ ಲಲಾಟವಿರಬೇಕು. ಅದಕ್ಕೆ ಬದಲು ಸಿಂಹರೂಪವನ್ನೇ ಚಿತ್ರಿಸಿರುವುದು ಎರಡನೆಯ ದ್ವಾರದ ಮೇಲೆ ಗಜಲಕ್ಷ್ಮಿಯು ಚಾಮರಧಾರಿಯೊಂದಿಗೆ ಇರುವುದು. ಮೂರನೆಯ ದ್ವಾರದ ಮೇಲೆ ಬಾಲಕೃಷ್ಣನ ರೂಪವಿರುವುದು. ಇಲ್ಲಿ ಚಿತ್ರಿಸಿರುವ ಆನೆ, ಹಂಸ, ಕುದುರೆಗಳು ವಿನ್ಯಾಸಗಳನ್ನು ನೋಡಿದರೆ ಬೇಲೂರು, ಹಳೇಬೀಡು ದೇವಸ್ಥಾನಗಳಲ್ಲಿ ಚಿತ್ರಿಸಿರುವುದೆಂದು ತಿಳಿಯಬೇಕು.

ಶ್ರೀರಾಮಾನುಜರಕಾಲದಲ್ಲಿ ಗೋಪುರವು ಕಟ್ಟಲ್ಪಟ್ಟಿರಲಿಲ್ಲ ಕೇವಲ ಮಹಾ ದ್ವಾರ ಪ್ರಸ್ತರದವರೆಗೆ ಕಟ್ಟಲ್ಪಟ್ಟಿದ್ದಿತು. ಅದಕ್ಕೆ ೯೮೯ ವರಹಗಳು ಖರ್ಚಾಗಿದ್ದವು. ರಾಮಾನುಜರ ಕಾಲಾನಂತರ ಮಹಾ ವಿದ್ವಾನ್ ಪರಾಶರ ಭಟ್ಟರು ಇಲ್ಲಿಗೆ ಬಂದು ದೇವರನ್ನು ಸೇವಿಸುವ ಈ ಮಧ್ಯಕಾಲದಲ್ಲಿ ಗೋಪುರವು ಕಟ್ಟಿರಬೇಕು. ಏಕೆಂದರೆ ಗುರುಪರಂಪರೆಯಲ್ಲಿ ಭಟ್ಟರು ಚತುರಾನನ ಗೋಪುರ ವನ್ನು ಸೇವಿಸಿದ್ದಾಗಿ ತಿಳಿಸಿರುವುದು. ಕಾಲ ಸುಮಾರು AD 1140ರ ಮೇಲೆ.

**ಹೊರಕೈಸಾಲೆ–** ಗೋಪುರದ್ವಾರದಿಂದ ಹೊರಕ್ಕೆ ಬಂದಮೇಲೆ ದೇವಸ್ಥಾನದ ಹೊರಗೆ ಪ್ರದಕ್ಷಿಣವಾಗಿ ಬರಲು ಎತ್ತರವಾದ ಜಗತಿಯ ಮೇಲೆ ಕೈಸಾಲೆ ಮಂಟಪವು ನಿರ್ಮಿತವಾಗಿರುವುದು ಈ ಕೈಸಾಲೆ ಗೋಡೆಯ ಕೈಪಿಡಿ ಗೋಡೆಯಲ್ಲಿ ಗೂಡು ಗಳನ್ನು ಮಾಡಿ ಅದರಲ್ಲಿ ನಾನಾವಿಧ ದೇವತಾ ವಿಗ್ರಹಗಳು ಅವುಗಳ ಚೇಷ್ಟಾ ಭಂಗಿ, ಪ್ರಕೃತಿ ಸೌಂದರ್ಯ, ಸ್ತ್ರೀ ವಿಗ್ರಹಗಳು ಸ್ತ್ರೀಸ್ವರೂಪದ ಮನ್ಮಥ ಚೇಷ್ಟಾ ವಿನ್ಯಾಸಗಳು ಚಿತ್ರಿತವಾಗಿರುವುವು. ಹೊರಗಿನ ಕೈಸಾಲೆ ಪ್ರಾಕಾರದ ಅಧಿಷ್ಠಾನವು ಉಪಾನ– ಪದ್ಮಕೇಸರ, ತ್ರಿಪಟ್ಟಿಕುಮುದ, ಕಂಠ, ಮಹಾಪಟ್ಟಿ, ಕಪೋತದಿಂದ ಪ್ರತಿಬಂಧವೆಂಬ ಕನಾಲ್ಕು ಮೂರು ವಿನ್ಯಾಸದಿಂದ ರಚಿತವಾಗಿರುವುದು.

**ರಥಬೀದಿ–** ದೇವಸ್ಥಾನದ ನಾಲ್ಕು ಪಕ್ಕದಲ್ಲೂ ರಥ ಸಂಚರಿಸಲು ರಥಬೀದಿ ಇರುವುದು. ಅದನ್ನು ದಾಟಿದರೆ–

**ದೀಪಸ್ತಂಭ.** ಇದು ಒಂದೇ ಶಿಲೆಯ ಸ್ತಂಭವು. ಇದರ ವಿನ್ಯಾಸವು ಕೆಳಗಿನಿಂದ ಒಂದು ಭಾಗ ಚತುರಸ್ರ, ಮೇಲಿನಿಂದ ಮೂರು ಭಾಗ ಷೋಡಶಾಸ್ರ ದಿಂದ ಕೂಡಿರುವುದು. ಸ್ತಂಭದ ಮೇಲೆ ಚಂದ್ರಾಕಾರ ಮಂಟಪದ ಆಕಾರವು ನಿರ್ಮಿತವಾಗಿರುವುದು. ಈ ದೀಪದ ಕಂಭಕ್ಕೆ ೧೨೨ ವರಹಗಳು ಖರ್ಚಾದವು.

ಕಂಭದ ಪಶ್ಚಿಮ ಭಾಗದಲ್ಲಿ ಎದುರು ಶ್ರೀನಾರಾಯಣಸ್ವಾಮಿಗೆ ಅಭಿಮುಖ ವಾಗಿ ಅಂಜಲಿಬದ್ಧನಾದ **ಗರುಡದೇವರೂ,** ಉತ್ತರಕ್ಕೆ **ಹಂಸ,** ಪೂರ್ವಕ್ಕೆ ಕುಳಿತಿರುವ **ಸಿಂಹ,** ದಕ್ಷಿಣಕ್ಕೆ **ಹನುಮಂತದೇವರು** ಇವಲ್ಲಾ ಅರ್ಧಾಂಕಿತ ವಿಗ್ರಹವಾಗಿರುವುದು. ಈ ದೀಪಸ್ತಂಭದ ಮೇಲೆ ಕಾರ್ತಿಕ ಮಾಸದಲ್ಲಿ ದೀಪವನ್ನು ಲೋಕಕ್ಷೇಮವಾಗಿ ಹಚ್ಚುದುವರು.

**ವಾಹನ ಮಂಟಪ–** ದೀಪಸ್ತಂಭಕ್ಕೆ ಪೂರ್ವಭಾಗದಲ್ಲಿ ವಾಹನ ಮಂಟಪವು ಅತ್ಯುನ್ನತ 16 ಸ್ತಂಭಗಳಿಂದ ಕೂಡಿರುವುದು. ಈ ವಾಹನ ಮಂಟಪ ಕಟ್ಟಲು ೨೦೦ ವರಹಗಳು ಖರ್ಚಾದವು.

**ಬದರೀನಾರಾಯಣ ಸನ್ನಿಧಿ–** ಮೇಲೆ ತಿಳಿಸಿದ ದೀಪಸ್ತಂಭ ವಾಹನ ಮಂಟಪದ ಎಡಪಕ್ಕದಲ್ಲಿ ಬದರೀನಾರಾಯಣ ಸನ್ನಿಧಿ ಇರುವುದು. ಇಲ್ಲಿ ಬದರೀನಾರಾಯಣ ದೇವರು ಪ್ರತಿಷ್ಠಿತರಾಗಿರುವುದು ಅವರ ಸಾನಿಧ್ಯದಿಂದಲೂ, ವೃಕ್ಷದ ಮಹಾತ್ಮ್ಯೆಯಿಂದಲೂ, ಈ ಕ್ಷೇತ್ರಕ್ಕೆ **ದಕ್ಷಿಣಬದರಿಕಾಶ್ರಮ** ಎಂದು ಹೆಸರುಂಟು. ಈ ವೃಕ್ಷಕ್ಕೆ ಎರಡು ವೇಳೆಯೂ ಪೂಜಾ ನಿವೇದನಗಳು ನಡೆಯುತ್ತವೆ.

**ವೇದಾಂತದೇಶಿಕರ ಸನ್ನಿಧಿ–** ರಾಜಬೀದಿಯಲ್ಲಿ ವೇದಾಂತದೇಶಿಕರು ಪ್ರತಿಷ್ಠಿತವಾಗಿರುವ ದೇವಾಲಯವನ್ನೂ ಮತ್ತು ಮಂಟಪವನ್ನೂ ಕಾಣಬಹುದು. ಯಾರು ? ಯಾವಕಾಲದಲ್ಲಿ ಕಟ್ಟಿಸಿ ಪ್ರತಿಷ್ಠಿಸಿದರು ಎನ್ನುವುದು ತಿಳಿಯಬರಲಿಲ್ಲ.

ಎತ್ತರವಾದ ಜಗತಿಯ ಮೇಲೆ ಗರ್ಭಗೃಹ, ಮುಖಮಂಟಪ, ನವರಂಗ, ಬಾಹ್ಯಮಂಟಪ ಅವರ ಹೊರಗೆ ಉಭಯ ಪಾರ್ಶ್ವಗಳಲ್ಲಿಯೂ ಎತ್ತರವಾದ ಜಗತಿ ಕೈಸಾಲೆ ಮಂಟಪವಿದೆ.

ಕಲ್ಯಾಣಿ ಬಳಿ ಹಲಸೂರು **ವೆಂಕಟಸ್ವಾಮಿಯಿಂದ** ಚೆಲುವನಾರಾಯಣಸ್ವಾಮಿ ಕಲ್ಯಾಣೋತ್ಸವದ ಮಂಟಪವನ್ನು, ಸೇವಾರ್ಥವಾಗಿ ಕಟ್ಟಿಸಲು ತರಲ್ಪಟ್ಟ ಕಲ್ಲು ಚಪ್ಪಡಿ ಕಂಭಗಳನ್ನೂ ಅಲ್ಲದೆ ನಾಗಮಂಗಲಕ್ಕೆ ಹೋಗುವ ಕೋಟೆ ದೊಡ್ಡ

ಬಾಗಿಲ ಮುಂದೆ ಇದ್ದ ಮಂಟಪದ ಕಂಭಗಳು, ಅಲ್ಲದೆ ರಾಯಗೋಪುರದ ಹತ್ತಿರ ಇದ್ದ ಐದುಕಲು ಮಂಟಪವನ್ನು ತೆಗೆದು ಆ ಕಲ್ಲು ಚಪ್ಪಡಿ ಮತ್ತು ಕಂಭಗಳಿಂದ ಮೇಲೆ ತಿಳಿಸಿದ ಜಗತಿ ಕೈಸಾಲೆ ಮಂಟಪವನ್ನು 1897 ರಲ್ಲಿ **ಶ್ರೀವಿಲ್ಲಿ ಪುತ್ತೂರು ರಂಗಾಚಾರ್ಯರು,** ಜನಳಿ **ವೇಂಕಟನರಸಿಂಹಾಚಾರ್ಯರು** ಎಂಬುವರು ಕಟ್ಟಿಸಿದರು.

**ಶ್ರೀರಂಗನಾಥರು–** ಕಲಾಪಕಾಲದಲ್ಲಿ ಮೇಲುಕೋಟೆಗೆ ವಿಜಯ ಮಾಡಿಸಿದರು. ಸುಮಾರು ಕ್ರಿ.ಶ 1230 AD ಆಗ ಈ ಸ್ಥಳದಲ್ಲಿ ವಿಜಯ ಮಾಡಿಸಿ ಪೂಜಾದಿಗಳು ನಡೆದಿರಬಹುದು. ಆಗ ಈ ಕಟ್ಟಡ ಇದ್ದಿತೆ? ಇಲ್ಲವೇ? ಎಂಬ ವಿಷಯವು ತಿಳಿಯದು. ತದನಂತರ ಶ್ರೀರಂಗನಾಥರು ಇಲ್ಲಿಂದ ತಿರುಪತಿಗೆ ವಿಜಯಮಾಡಿಸಿದ ಮೇಲೆ ಅವರ ಜ್ಞಾಪಕಾರ್ಥವಾಗಿ ಅವರು ವಿಜಯಮಾಡಿಸಿದ್ದ ಸ್ಥಳದಲ್ಲಿ **ಶ್ರೀರಂಗನಾಥಮೂರ್ತಿ**ಯನ್ನು ಪ್ರತಿಷ್ಠಿಸಬೇಕೆಂಬ ಅಭಿಪ್ರಾಯ ಇದ್ದಿತೆಂದು ವದಂತಿ. ಪ್ರಕೃತ ಇಲ್ಲಿ **ವೇದಾಂತದೇಶಿಕರು** ಪ್ರತಿಷ್ಠಿತರಾಗಿರುವರು.

## ಜೀಯರಗುಡಿ

ದೇವಸ್ಥಾನದ ಹೊರಗೆ ಉತ್ತರ ಭಾಗದಲ್ಲಿ ಶ್ರೀರಾಮಾನುಜಾಚಾರ್ಯರ ಕಾಲದಲ್ಲಿ ಈಗ ಜೀಯರಗುಡಿ ಇರುವ ಸ್ಥಳದಲ್ಲಿ ದೇವಸ್ಥಾನದ ಕೈಂಕರ್ಯಪರರಾದ ತಳಕೋಪದಾಸರು ತಿರುನಾರಾಯಣಪುರದಾಸರು ಇವರಿಗೆ ವಾಸಕ್ಕೆ ನಿವೇಶನ ಸ್ಥಳವಾಗಿದ್ದಿತು. ಕಾಲಕ್ರಮದಲ್ಲಿ ಪ್ರಾಮಾದಾಮರಗಳಿಂದ ಗುಡಿ ಶಿಥಿಲಾವಸ್ಥೆಗೆ ಬಂದಾಗ ಈ ಸ್ಥಳವು ಪಾಳಾಗಿ ಬಿದ್ದಬಿದ್ದಂತೆ ತಿಳಿದುಬರುತ್ತದೆ.

(ಶಾಂ.ಪ್ರ. ಶಾಸನ ೧೭೯)

ಈ ಸ್ಥಳದಲ್ಲಿಯೇ ರಾಮಾನುಜಾಚಾರ್ಯರ ಕಾಲದಲ್ಲಿ ತಿರುನಾರಾಯಣಪುರ ದಾಸರು (ದೇವಸ್ಥಾನದ ಕೈಂಕರ್ಯಪರರು) ತಮ್ಮ ಮನೆಗೆ ತಳಪಾಯವನ್ನು ಅಗುಳಿಸಿದಾಗ ಗೋಡೆಯ ಅಂಚಿನಲ್ಲಿ ಇಬ್ಬರು ನಾಚ್ಚಿಯಾರರು ದ್ರವ್ಯಸಂಪತ್ತು ಆಭರಣಗಳೊಡಗೂಡಿ ದೊಡ್ಡ ಪಾತ್ರೆಯಲ್ಲಿದ್ದುದನ್ನು ಕಂಡುಬಂದ ಸ್ಥಳವು.

ಶಕ ೧೩೮೧ ಬಹುಧಾನ್ಯ ಸಂ॥ (2-12-1458 ರಲ್ಲಿ) ರಾಜ ಪ್ರಧಾನ ತಿಮ್ಮಣ್ಣದಂಡನಾಯಕರು ತಮ್ಮ ಪತ್ನಿ ರಂಗನಾಯಕಮ್ಮನ ಹೆಸರಿನಲ್ಲಿ ಆರೋಪವಾಗಿದ್ದ ಈ ನಿವೇಶನವನ್ನು ಕ್ರಯಕ್ಕೆ ತೆಗೆದು **ದೇಶಾಂತ್ರಿಮಠ**ವಾಗಿ ಕಟ್ಟಿಸಿ (ರಾಮಾನುಜಕೂಟ) ಅದರಲ್ಲಿ ಹದಿನೈದಿಕ ೩೦ ಜನ ಶ್ರೀವೈಷ್ಣವ ಬ್ರಾಹ್ಮಣರಿಗೆ ಪ್ರತಿನಿತ್ಯವೂ ಭೋಜನ ನಡೆಯಲು ಮೇಲುಕೋಟೆ ಕಾಲುವೆ 80 ವರಹ ಉತ್ಪತ್ತಿಯಾಗುವ ಬಿಳೇನಹಳ್ಳಿ, ಯಾಳಪನಹಳ್ಳಿ ಎಂಬ ಎರಡು ಗ್ರಾಮಗಳನ್ನು

ಅವುಗಳ ಸರ್ವಮಾನ್ಯವನ್ನೂ, ರಂಗಸಮುದ್ರದ ಯೋಗಿಕೆಗೆ ಕೆಲವು ಗದ್ದೆ ಭೂಮಿ ಗಳನ್ನೂ, ಇಮ್ಮಡಿ ಪ್ರೌಢರಾಯರ (ಮಲ್ಲಿಕಾರ್ಜುನ ಮಹಾರಾಯರು) ಅನುಮತಿ ಯನ್ನು ಹೊಂದಿ ಶ್ರೀಯತಿರಾಜ ವಂಶದ ವೇದಾಂತಿ ರಾಮಾನುಜಜೀಯರ ವಶಕ್ಕೆ ಒಪ್ಪಿಸಿ ಈ ಧರ್ಮವನ್ನು ನಡೆಸಿಕೊಂಡು ಬರುವಂತೆ ಧರ್ಮಶಾಸನ ಬರೆದು ಒಪ್ಪಡಿಸಿದರು.

—ಹಾಂ. ಪು. ೧೭೯

ಈ ರಾಮಾನುಜಕೂಟವು 1530ರ ವರೆಗೂ ನಡೆದು ಬಂದಿರಬಹುದು. (ಹಾಂ. ಪು. 132) ಈ ಸ್ಥಳದಲ್ಲಿ ಮಣವಾಳಮಹಾಮುನಿಗಳಿಗೆ ಕ್ರಿ.ಶ. 1564ರಲ್ಲಿ ಧರ್ಮವು ಕಾಣಬರುವುದರಿಂದ (ಹಾಂ. ಪು. ೧೨೮ ) 1530–1564 ಈ ಮಧ್ಯೆ **ಮಣವಾಳಮಹಾಮುನಿಗಳ ಪ್ರತಿಷ್ಠೆಯಾಗಿರಬೇಕೆಂದು ತಿಳಿಯಬರುತ್ತದೆ.**

ಈಗಿರುವ ಜೀಯರ ಸನ್ನಿಧಿ ಗುಡಿ ಕಟ್ಟಡ:- ಈ ಕಟ್ಟಡವು 1458 ರಲ್ಲಿ ಕಟ್ಟಿದ ಕಟ್ಟಡವೇ ಆಗಿರಬೇಕು. ಗರ್ಭಗುಡಿ ಅದರ ಮುಂದೆ ಮಧ್ಯದಲ್ಲಿ ತೊಟ್ಟಿ ಅದರ ಸುತ್ತಲೂ ಎತ್ತರವಾದ ಜಗತಿ ಕೈಸಾಲೆ ಮಂಟಪ. ಒಟ್ಟು ರಂಗಮಂಟಪವು 25 ಅಂಕಣಗಳಿಂದ ಕೂಡಿ ೩೬ ಕಂಭಗಳನ್ನೊಳಗೊಂಡಿರುವುದು. ಅಡಿಗೆಮನೆ ಊಟದಮನೆ ಉಗ್ರಾಣದ ಹೊರಗೆ ಜಗತಿ- ಒಟ್ಟು 42 ಅಂಕಣಗಳಿಂದ ಕೂಡಿರುವುದು.

## ತಿರುಮಂಗೈಯಾಳ್ವಾರ್ ಸನ್ನಿಧಿ

ದೇವಸ್ಥಾನದ ಹಿಂದೆ ಪಶ್ಚಿಮ ಬೀದಿ (ದೇವಳಬೀದಿ) ಯಲ್ಲಿ ಉತ್ತರ ಮುಖವಾಗಿ ಹೋದಲ್ಲಿ ಎಡಭಾಗದಲ್ಲಿ ತಿರುಮಂಗೈ ಆಳ್ವಾರ್ ಸನ್ನಿಧಿ ಇರುವುದು. ಗರ್ಭಗೃಹ, ಮಹಾಮಂಟಪ, 6 ಅಂಕಣ, ಸ್ತಂಭಗಳಿಂದ ನಿರ್ಮಿತವಾಗಿರುವುದು. ಪಾಕಶಾಲೆ ಮುಂತಾಗಿ ಕಟ್ಟಲ್ಪಟ್ಟಿರುವುದು.

**ನಮ್ಮಾಳ್ವಾರ್ ಸನ್ನಿಧಿ-** ಶ್ರೀರಾಮಾನುಜರ ಕಾಲದಲ್ಲಿ ಈ ಕಟ್ಟಡವು **ನಖಕ್ಕರ್ಣೇಶ್ವರಂ** ಎಂಬ ಶಿವದೇವಾಲಯವಾಗಿದ್ದಿತು. ಶಿವಭಕ್ತರಿಗೂ ಜೈನರಿಗೂ ಕಲಹವುಂಟಾದಾಗ ಜೈನರ ಸಹಾಯಕ್ಕಾಗಿ ಶ್ರೀವೈಷ್ಣವರು ಬಂದುದರಿಂದ ಭಕ್ತರಿಗೆ ಕೋಪವುಂಟಾಗಿ ಆಕ್ರೋಶದ ಫಲವಾಗಿ ಚೆಲುವನಾರಾಯಣಸ್ವಾಮಿ ನವರಂಗದ ಒಂದು ಭಾಗವು ನಾಶ ಮಾಡಲ್ಪಟ್ಟಿತು. ತತ್ಫಲವಾಗಿ ಶ್ರೀವೈಷ್ಣವರು ಈ ಶಿವಲಿಂಗವನ್ನು ಕಿತ್ತು ಹಾಕಿ ಅಲ್ಲಿ ನಮ್ಮಾಳ್ವಾರ್ ವಿಗ್ರಹವನ್ನು ಪ್ರತಿಷ್ಠಿಸಿದರು. ಈಗಲೂ ಈ ದೇವಸ್ಥಾನದ ಎಲ್ಲಾ ಭಾಗದಲ್ಲೂ ಶಿವದೇವಾಲಯದ ಚಿಹ್ನೆಗಳು ಹಾಗೆಯೇ ಇರುತ್ತವೆ.

## ಶ್ರೀಯದುಗಿರಿಯತಿರಾಜಮಠ (ಶ್ರೀಭಾಷ್ಯಕಾರರಮಠ)

(ರಾಮಾನುಜಕೂಟ)

ಶ್ರೀಭಾಷ್ಯಕಾರರು ಗ್ರಾಮಜೀರ್ಣೋದ್ಧಾರಮಾಡಿ ದೇವಸ್ಥಾನ ಗುಡಿ ಗೋಪುರ ಪ್ರಾಕಾರಾದಿಗಳನ್ನು ಕಟ್ಟಿಸಿದ ಮೇಲೆ ವಿಷ್ಣುವರ್ಧನನಿಗೆ ಹೇಳಿ ಕಳುಹಿಸಲು ವಿಷ್ಣುವರ್ಧನನು ದೇವರಿಗೆ ಪಡಿತರ ದೀಪಾರಾಧನ ನಡೆಯುವುದಕ್ಕೆ ಗ್ರಾಮ ಸೀಮೆಭೂಮಿಗಳನ್ನು ಕೊಟ್ಟು ಶ್ರೀರಾಮಾನುಜಾಚಾರ್ಯರಿಗೆ ನಾಲ್ಕು ಮಠವನ್ನು ಕಟ್ಟಿಸಿಕೊಡುವ ಹೇರಗೆ ಏರ್ಪಡಿಸಿದನು.

ದೇವಾಲಯಕ್ಕೆ ಪಶ್ಚಿಮಪೂರ್ವದಲ್ಲಿ ನಿವೇಶನ ಒಂದಕ್ಕೆ ೨೨ ಅಡಿಗಳ ಅಳತೆ ಭೂಮಿಯ ಮೇರೆ ೧೫ ನಿವೇಶನಗಳ ಭೂಮಿ – ತೆಂಕಲು ಬಡಗಲು ಇದಕ್ಕೆ ಇಮ್ಮಡಿ – ಸರ್ವಮಾನ್ಯವಾಗಿ ಶ್ರೀಭಾಷ್ಯಕಾರರು ತಮ್ಮದಾಗಿ ಯತಿರಾಜ ಮಠವನ್ನು ಕಟ್ಟಿಸಿ ಅದರಲ್ಲಿ ಕೋಯಿಲ್‌ಕೇಳ್ವಿ ಶ್ರೀಯತಿರಾಜ ನಾರಾಯಣಜೀಯರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿದರು.

ಶ್ರೀಯತಿರಾಜ ಮಠಾಧಿಪತಿಗಳು ಪರಂಪರೆಯಾಗಿ ದೇವಸ್ಥಾನದ ಆಡಳಿತ ಕೈಂಕರ್ಯವನ್ನು ನಡೆಸಿ ಬರುತ್ತಿರುವಾಗ 1575ಕ್ಕೆ ಮೇಲೆ ಮಠಾಧಿಪತಿಗಳ ಮಣಿಗಾರರವರಲ್ಲಿ ಕಲಹವು ಪ್ರವೇಶಿಸಿದುದರ ಫಲವಾಗಿ ಮಠಾಧಿಪತಿಗಳಿಗೆ ವಿಘಾತ ಉಂಟಾದಮೇಲೆ, ಮಣಿಗಾರರವರಿಗೆ ನಿರಂಕುಶಾಧಿಕಾರವುಂಟಾಯಿತು. ತದನಂತರ ಮಠದ ಕಟ್ಟಡಗಳೆಲ್ಲವೂ ವ್ಯತ್ಯಾಸವಾದಂತೆ ಕಂಡುಬರುತ್ತದೆ. ತದನಂತರಕಾಲದಲ್ಲಿ 1612ಕ್ಕೆ ಮೇಲೆ ಸ್ವಲ್ಪ ಸಮಾಧಾನ ಸ್ಥಿತಿಗೆ ಬಂದಮೇಲೆ ಆಳುವೇಳದ ಕಟ್ಟಡವನ್ನು ಪುನಃ ಮಠವನ್ನಾಗಿ ಮಾರ್ಪಡಿಸಿರುವಂತೆ ಕಾಣುತ್ತದೆ.

ಯತಿರಾಜಮಠದ ನವರಂಗ ದ್ವಾರಕ್ಕೆ ನೇರವಾಗಿ ದೇವರ ಸನ್ನಿಧಿ ದ್ವಾರ ಇರುವುದಿಲ್ಲ. ಅಥವಾ ದೇವರ ಸನ್ನಿಧಿ ದ್ವಾರಕ್ಕೆ ನೇರವಾಗಿ ಹೊರಗಿನ ನವರಂಗದ ದ್ವಾರವಿರುವುದಿಲ್ಲ. ವ್ಯತ್ಯಾಸಸೂತ್ರದಲ್ಲಿರುವುದು.

ಶ್ರೀಯತಿರಾಜಮಠ ನವರಂಗ ಮಂಟಪವನ್ನು ಜೀರ್ಣೋದ್ಧಾರ ಮಾಡುವಾಗ ಕಂಭಗಳಲ್ಲೊಂದು ಕಂಭವು ಕೋಸಲಾಪುರ (ಮುರಳೀಅಗ್ರಹಾರ)ದ ಶ್ರೀರಾಮಭಟ್ಟನ ಹೆಂಡತಿಯ ಧರ್ಮವು ಕಾಣುವುದು. ಶಾಂ. ಪು. ೧೮೩.

### ಧರ್ಮಗಳು

**ಶ್ರೀಯತಿರಾಜಮಠವನ್ನು ರಾಮಾನುಜಕೂಟವೆಂದೂ ಕರೆಯುವುದೂ** ಉಂಟು. ಶಕ ೧೧೭೮ ನಳ ಸಂ॥ (30-11-1256 ರಲ್ಲಿ) ತೆರಕಣಾಂಬಿಯ.

ಚನ್ನಪ್ಪಶೆಟ್ಟಿಯವರ ಮಕ್ಕಳು ಅಳಗಿಯಮಣವಾಳದಾಸರಿಂದ ಕೇತಿಯಪ್ಪಶೆಟ್ಟಿಯು ರಾಮಾನುಜಕೂಟ ಶ್ರೀಯತಿರಾಜಮಠಕ್ಕೆ ।............ವನಹಳ್ಳಿ, ರಾಮರಸಪುರ, ಎಂಬ ಎರಡು ಗ್ರಾಮಗಳನ್ನು, ಹರಳಹಳ್ಳಿಯ ಗದ್ದೆ ಭೂಮಿಯನ್ನು ಧರ್ಮ-ಮಾಡಿರುವರು.

ಪಾಂ. ಪು. ೧೮೨

ನಾಗಮಂಗಲದ ಅಧಿಕಾರಿ ತಿಮ್ಮಣ್ಣದಂಡನಾಯಕರು ಅನ್ನಛತ್ರ ಅಥವಾ ರಾಮಾನುಜಕೂಟ ಎಂಬುವುದನ್ನು 1457 ರಲ್ಲಿ ಕಟ್ಟಿಸಿ ಆರಂಭಿಸಿದರು. ಅದಕ್ಕೆ ಮೊದಲು, ರಾಮಾನುಜಕೂಟ ಎಂದರೆ ಶ್ರೀಯತಿರಾಜಮಠವೆಂದು ತಿಳಿಯಬೇಕು.

## ಮಂಟಪಗಳು

**ತುಲಾಭಾರಮಂಟಪ–** ಶ್ರೀನಾರಾಯಣಸ್ವಾಮಿ ದೇವಸ್ಥಾನದ ಹಿಂಭಾಗದ ಮೇಲು ಬೀದಿಯಲ್ಲಿ ಎರಡು ಮಂಟಪಗಳಿವೆ. ಅವಕ್ಕೆ ತುಲಾಭಾರಮಂಟಪವೆಂದು ಹೆಸರು. ಇಲ್ಲಿ ವಿಜಯನಗರದ ಮಂತ್ರಿಗಳಾದ ತಿಮ್ಮಣ್ಣದಂಡನಾಯಕರು ತಾವು ತುಲಾಭಾರ ಪುರುಷದಾನ ಮಾಡಿ ಇಲ್ಲಿ ಅದರ ಜ್ಞಾಪಕಾರ್ಥವಾಗಿ ಮಂಟಪವನ್ನು ಕಟ್ಟಿಸಿದರು.

**ಭುವನೇಶ್ವರೀಮಂಟಪ–** ಶಕ ೧೭೯೯ ಈಶ್ವರ ಸಂ॥ (30–5–1877)ರಲ್ಲಿ ಕಲ್ಯಾಣಿ ಪುಷ್ಕರಿಣಿ ಉತ್ತರ ಪಾರ್ಶ್ವದಲ್ಲಿ ಮುಮ್ಮಡಿ ಕೃಷ್ಣರಾಜಒಡೆಯರು ಅಷ್ಟ ಕೋಣದ ಅತಿ ರಮಣೀಯವಾದ ಭುವನೇಶ್ವರೀಮಂಟಪವನ್ನು ಕಟ್ಟಿಸಿದರು. ಕೃಷ್ಣರಾಜತಿರುನಾಳಿನಲ್ಲಿ ಈ ಮಂಟಪಕ್ಕೆ ಚೆಲ್ವಪಿಳ್ಳೆ ದೇವರ ಉತ್ಸವವು ವಿಜಯವಾಗುವುದು.

ಪಾಂ. ಪು. ೧೮೮, ೧೮೯

**ಗಜೇಂದ್ರಮಂಟಪ–** ಕಲ್ಯಾಣಿ ಪುಷ್ಕರಿಣಿಗೆ ಉತ್ತರ ಪಾರ್ಶ್ವದಲ್ಲಿರುವುದು. ಈ ಮಂಟಪ ಅಥವಾ ಹಾಸುಗಲ್ಲುಗಳು ಇವುಗಳಲ್ಲಿ ಮೂರು ಅಂಕಣಗಳು ರಂಗಾಶೆಟ್ಟಿಯ ಧರ್ಮವಾಗಿರುವುದು. ಅಲ್ಲದೆ ಕೃಷ್ಣಕುಮಾರ ತಿರುಮಲಾಚಾರ್ಯರು, ಮಂಡಯಂ ಪಾರ್ಥಸಾರಥಿ, ತಿಮ್ಮಾಜೋಯಿಸರು, ಗೋಪಾಲ ಶಿಂಗ್ರಾಚಾರ್ಯರು ಇವರ ಧರ್ಮವೂ ಕಂಡುಬರುವುದು.

ಪಾಂ. ಪು. ೧೯೦, ೧೯೧, ೧೯೨, ೧೯೩, ೧೯೪

**ಯಳಂದೂರು ಮಹಾರಾಜ್ಞಿಮಂಟಪ–** ಕಲ್ಯಾಣಿ ಈಶಾನ್ಯ ದಿಕ್ಕಿನಲ್ಲಿರುವ ಮಂಟಪವನ್ನು ಮಹಾರಾಜ್ಞಿ ದೇವಾಜಮ್ಮಣ್ಣಿಯವರು ಕಟ್ಟಿಸಿದ ಮಂಟಪವು.

ಪಾಂ. ಪು. ೧೯೫

**ಕಣಿಗಲು ಬೀದಿಯಲ್ಲಿರುವ ಮಂಟಪ–** ಶಕ ೧೭೬೮ ವಿಶ್ವಾವಸು ಸಂ॥ (3–4–1846) ರಲ್ಲಿ ಸ್ಥಳದ ಆಚಾರ್ಯ ಪುರುಷರಾದ ಕೈಂಕರ್ಯಂ

ತಿರುಮಲಾಚಾರ್ಯರು ಶ್ರೀಚೆಲುವರಾಯಸ್ವಾಮಿ ಬಿಜಯಮಾಡಿಸಲು ಕಟ್ಟಿಸಿದ ಮಂಟಪವು. ವೈರಮುಡಿ ಬ್ರಹ್ಮೋತ್ಸವಕಾಲದಲ್ಲಿ ಧ್ವಜಾರೋಹಣ ದಿವಸ ಚೆಲುವರಾಯಸ್ವಾಮಿ ಈ ಮಂಟಪಕ್ಕೆ ಬಿಜಯಮಾಡಿಸಿ ಉತ್ಸವ ನಡೆಯುತ್ತದೆ.

ಶಾಂ.ಪ್ರ., ೨೦೯.

**ಸಹಸ್ರಗಾಥಾಮಂಟಪ–** ಮೇಲಿನ ಮಂಟಪದ ಪಕ್ಕದಲ್ಲಿ ಇನ್ನೊಂದು ಮಂಟಪವು ಕಟ್ಟಲ್ಪಟ್ಟಿರುವುದು. ಆ ಮಂಟಪದಲ್ಲಿ ಸಾರಿತ ಶಾಸನವಿರುವುದು. ಶ್ರೀಶೈಲಗುರುಗಳೆಂಬುವರು ವೈಕುಂಠನಾಥ ಮತ್ತು ಹತ್ತು ಆಳ್ವಾರುಗಳ ಪ್ರಾಚೀನ ವಿಗ್ರಹಗಳನ್ನು ಪ್ರತಿಷ್ಠಿಸಿದರು. ಅಪರ ಭಾಗದಲ್ಲಿ ಬಂದ ಶ್ರೀಶೈಲಾಚಾರ್ಯರು ಸಹಸ್ರಗಾಥಾ ಉತ್ಸವದ ಮೊದಲನೆಯ ದಿನದ ಉತ್ಸವಕ್ಕಾಗಿ ನಿರ್ಮಿಸಿದ ಮಂಟಪವು ಎಂದಿರುವುದು.

ಶ್ರೀರಾಮಾನುಜರು ೧೨ ಆಳ್ವಾರ ಮೂರ್ತಿಗಳನ್ನು (ಲೋಹ ಮೂರ್ತಿಗಳು ಮಾತ್ರ) ನೂತನವಾಗಿ ಮಾಡಿಸಿ ಪ್ರತಿಷ್ಠಿಸಿದರು. ಆಂಡಾಳ್ ಶಿಲಾಮೂರ್ತಿ ಮಾಡಿಸಿ ಇತರ ಆಳ್ವಾರುಗಳಿಗೆ ಮೂಲಮೂರ್ತಿಗೆ ಶಿಲಾರೂಪ ಮಾಡಿಸಲಿಲ್ಲವು. ಶ್ರೀಶೈಲಗುರುಗಳು ಈ ಆಳ್ವಾರುಗಳಿಗೆಲ್ಲಾ ಮೂಲವಿಗ್ರಹ ಶಿಲಾರೂಪವನ್ನು ಮಾಡಿಸಿ ಪ್ರತಿಷ್ಠಿಸಿದರೆಂದು ತಿಳಿಯಬೇಕು. ಆ ಕಾಲದಲ್ಲೇ ವೈಕುಂಠನಾಥರನ್ನೂ ಪ್ರತಿಷ್ಠಿಸಿದರು.

ಸಹಸ್ರಗಾಥಾ ಉತ್ಸವ ಆರಂಭದಿವಸಕ್ಕಾಗಿ ಮಂಟಪ ನಿರ್ಮಿತವು ಎಂಥದು. ಸಹಸ್ರಗಾಥಾ ಉತ್ಸವ ಎಂದರೆ ಅಧ್ಯಯನೋತ್ಸವವು. ಧನುರ್ಮಾಸದಲ್ಲಿ ಕೊನೆಯ ಹತ್ತು ದಿನಗಳು ವೇದಪ್ರಬಂಧ ಪಾರಾಯಣಾದಿಗಳು ಅಮೂಲಾಗ್ರವಾಗಿ ಪಠಣ ಮಾಡುವರು. ನಮ್ಮ ದೇವಸ್ಥಾನದಲ್ಲಿ ಶ್ರೀರಾಮಾನುಜರ ಕಾಲದಲ್ಲೇ ಆಳ್ವಾರಾಚಾರ್ಯರುಗಳ ವಿಗ್ರಹ ಉತ್ಸವ ಮೂರ್ತಿಗಳು ಪ್ರತಿಷ್ಠಿತವಾಗಿದ್ದರೂ 1368ರ ವರೆಗೆ ಅಧ್ಯಯನೋತ್ಸವವು ಆರಂಭವಾಗಿರಲಿಲ್ಲವು.

1367–68 ರಲ್ಲಿ ಜೈನರಿಗೂ ಭಕ್ತರಿಗೂ (ಶಿವಭಕ್ತರು) ಕಲಹವುಂಟಾಗಿ ಜೈನರ ಅನೇಕ ದೇವಾಲಯಗಳು ನಾಶವಾದವು. ಜೈನರ ಸಹಾಯಕ್ಕೆ ಶ್ರೀವೈಷ್ಣವರು ಬರಲು ಶಿವಭಕ್ತರಿಗೆ ಕೋಪವುಂಟಾಗಿ ಚೆಲುವರಾಯಸ್ವಾಮಿ ದೇವಸ್ಥಾನದ ಒಂದು ಭಾಗವು ನಾಶವಾಯಿತು. ಇದರಿಂದ ಕುಪಿತರಾದ ಶ್ರೀವೈಷ್ಣವರು ಮೇಲುಕೋಟೆಯಲ್ಲಿ ಶ್ರೀರಾಮಾನುಜರ ಕಾಲದಲ್ಲಿ ಶಿವದೇವಾಲಯದಲ್ಲಿ ಪ್ರತಿಷ್ಠಿತವಾಗಿದ್ದ ಶಿವಲಿಂಗವನ್ನು ಕಿತ್ತುಹಾಕಿ ಆ ಸ್ಥಳದಲ್ಲಿ ನಮ್ಮಾಳ್ವಾರ್ರ ಶಿಲಾವಿಗ್ರಹವನ್ನು 1368 ರಲ್ಲಿ ಪ್ರತಿಷ್ಠಿಸಿದರು. ಆ ಕಾಲದಲ್ಲೇ 1368 ಕಾಲ ಸ್ಥಳದ

ಆಚಾರ್ಯ ಪುರುಷರಾದ ಅನಂದಾಂಬಿಳ್ಳೈ ವಂಶಸ್ಥರು ಶ್ರೀಶೈಲಗುರು ಎಂಬುವರು ಆಳ್ವಾರಾಚಾರ್ಯರ ಮೂಲ ಶಿಲಾವಿಗ್ರಹವನ್ನು ವೈಕುಂಠನಾಥ ಮೂರ್ತಿಯನ್ನೂ ಹೊಸದಾಗಿ ಪ್ರತಿಷ್ಠಿಸಿದರು. ಈ ಕಾಲದಿಂದ ಅಧ್ಯಯನೋತ್ಸವವು ಆರಂಭವಾಯಿತೆಂದು ತಿಳಿಯಬೇಕು.

ಅನಂತರಕಾಲದಲ್ಲಿ ಮೇಲೆ ತಿಳಿಸಿದ ಶ್ರೀಶೈಲಗುರುಗಳ ವಂಶದಲ್ಲಿ ಬಂದ ಶ್ರೀಶೈಲಾಚಾರ್ಯ ಎಂಬುವರು ಅಧ್ಯಯನೋತ್ಸವ (ಸಹಸ್ರಗಾಥಾ ಉತ್ಸವ) ಮೊದಲನೆಯ ದಿವಸಕ್ಕಾಗಿ ಈ ಮಂಟಪ ನಿರ್ಮಾಣವು ಎಂದರೆ ಅಧ್ಯಯನೋತ್ಸವವು ಸಂಭ್ರಮವಾಗಿ ನಡೆಯಲು ಸ್ಥಳದ ಆಚಾರ್ಯ ಪುರುಷರು ಒಪ್ಪಿದ್ದರು ಒಂದೊಂದು ದಿನದಂತೆ ಚರಿತ್ರ ನಡೆಸಲು ಏರ್ಪಟ್ಟು ಶ್ರೀಚೆಲುವರಾಯಸ್ವಾಮಿ ಈ ಮಂಟಪಕ್ಕೆ ಅಧ್ಯಯನೋತ್ಸವ ಮೊದಲನೆಯ ದಿವಸ ಈ ಮಂಟಪಕ್ಕೆ ಬಿಜಯ ಮಾಡಿಸಿ ಪುಷ್ಪಧಾರಣೆ ವರಪ್ರ ಮುಂತಾದುವು ನಡೆಯಲು ಕಟ್ಟಿಸಿದ ಮಂಟಪವೆಂದು ತಿಳಿಯಬೇಕು. ೨೦೦

## ರಾಯ ಗೋಪುರ

ರಾಜಒಡೆಯರು (ಸುಮಾರು AD 1612) ಅಧಿಷ್ಠಾನ ಪುಷ್ಪಪೂರ್ವಕ ಶಿಲಾ ಭಿತ್ತಿಗಳನ್ನು ರಚಿಸಿ ದ್ವಾರದ ಎರಡು ನಾಲ್ಕು ಕಂಭಗಳನ್ನು ಮಾತ್ರ ನಿಲ್ಲಿಸಿದರು. ಈ ಕಟ್ಟಡ ಮುಂದೆ ಯಾವಕಾರಣದಿಂದ ನಿಂತುಹೋಯಿತೆಂದು ತಿಳಿಯಬರಲಿಲ್ಲ.

ರಾಯಗೋಪುರ ಸಮೀಪದಲ್ಲಿ ಐದು ಅಂಕಣ ಮಂಟಪವಿದ್ದಿತು. ಈ ಮಂಟಪವನ್ನು ತೆಗೆದು ವೇದಾಂತದೇಶಿಕರ ಸನ್ನಿಧಿ ಹೊರಗೆ ಕೈಸಾಲೆ ಮಂಟಪಕ್ಕೆ ಉಪಯೋಗಿಸಿದರೆಂದು ತಿಳಿದುಬರುತ್ತದೆ.

**ಸಪ್ತ ಕ್ಷೇತ್ರಗಳು**– ನಾರಸಿಂಹಕ್ಷೇತ್ರ, ಈ ಗ್ರಂಥದ ಕೊನೆಯಲ್ಲಿ ವಿವರವಾಗಿ ತಿಳಿಸಿರುತ್ತದೆ.

ಕ್ಷೇತ್ರವೆಂದರೇನು ? ಪುಣ್ಯಭೂಮಿ ಅದು ಹೇಗಾಯಿತು ?

1. ಮಹಾತ್ಮರ ವಾಸ, ದೇವರ ಸಾನ್ನಿಧ್ಯ, ಪ್ರಕೃತಿ ಸೌಂದರ್ಯ, ತೀರ್ಥ ವಿಶೇಷ ಇವುಗಳ ಸೇರುವಿಕೆಯಲ್ಲಿ ಆ ಸ್ಥಳವು ಏಕಾಂತವಾಗಿ ಅಲ್ಲಿ ಅನೇಕ ದೇವರ ದೇವತೆಗಳ ಧ್ಯಾನದಿಂದ ಅವರ ಮಂತ್ರಗಳನ್ನು ಜಪಮಾಡಿದರೆ ಬೇಗ ಅಭೀಷ್ಟ ಸಿದ್ಧಿ, ಆರೋಗ್ಯ, ಜ್ಞಾನಾಭಿವೃದ್ಧಿಯುಂಟಾಗುತ್ತದೆ. ಈ ರೀತಿಯಲ್ಲಿ ನಮ್ಮ ಮೇಲುಕೋಟೆಯಲ್ಲಿ ಸಪ್ತ ಕ್ಷೇತ್ರಗಳೆಂದು ವರ್ಣಿಸಿರುವರು.

2. ವರಾಹಕ್ಷೇತ್ರ– ಶ್ರೀನರಸಿಂಹದೇವರ ಬೆಟ್ಟದ ಕೆಳಗೆ ಕಲ್ಯಾಣಿ ತೀರದಲ್ಲಿ ವರಾಹ ಪ್ರತಿಷ್ಠೆಯುಳ್ಳದು. ಇಲ್ಲಿ ಈ ವರಾಹಸ್ವಾಮಿ ಪ್ರತಿಷ್ಠಿತರಾಗಿರುವರು.

ಸ್ಥಿತಮೂರ್ತಿ ಆಗಕಾಲ ಸಮುದ್ರದಿಂದ ಉದ್ಧರಿಸಿತಂದ ಭೂದೇವಿಯನ್ನು ಎಡ ತೊಡೆಯ ಮೇಲೆ ಕುಳ್ಳಿರಿಸಿಕೊಂಡ ಸನ್ನಿವೇಶ.

3. ಶ್ರೀಸೀತಾರಾಮಕ್ಷೇತ್ರ– ಶ್ರೀರಾಮದೇವರ ಸನ್ನಿಧಿ, ಕಲ್ಯಾಣೀ ತೀರದ ದಕ್ಷಿಣಭಾಗದಲ್ಲಿ ಶ್ರೀರಾಮದೇವರ ಜ್ಞಾಪಕಾರ್ಥವಾಗಿ ಕಟ್ಟಲ್ಪಟ್ಟು ಪ್ರತಿಷ್ಠಿತರಾಗಿರುವರು.

4. ಜ್ಞಾನಾಶ್ವತ್ಥಕ್ಷೇತ್ರ– ಪಂಚಭಾಗವತಕ್ಷೇತ್ರ. ಕಲ್ಯಾಣೀ ತೀರ್ಥದ ಪಶ್ಚಿಮ ತೀರದಲ್ಲಿ ಅಜ್ಞಾನ ನಿವಾರಕಕ್ಷೇತ್ರವು. ಈ ಅಶ್ವತ್ಥಕ್ಷೇತ್ರದ ಕೆಳಗೆ ಶುಕ, ಪುಂಡರೀಕ, ರುಕ್ಮಾಂಗದ, ಅಂಬರೀಷ, ವಿಕುಕ್ಷಿ ಎಂಬ ಐದುಜನ ಭಾಗವತರು ನಾರಾಯಣ ಧ್ಯಾನದಲ್ಲಿ ನಿರತರಾದವರ ಜ್ಞಾಪಕಾರ್ಥವಾಗಿ ಅವರ ಹೆಸರಿನಲ್ಲಿ ಏರ್ಪಟ್ಟಿರುವ ಕ್ಷೇತ್ರ. ಇಲ್ಲಿ ಪಂಚ ಭಾಗವತರ ಮೂರ್ತಿ ಅರ್ಧಾಂಕಿತವಾಗಿ ಪ್ರತಿಷ್ಠಿತವಾಗಿವೆ.

ಈ ಸ್ಥಳದಲ್ಲಿ ಪಂಚಾರಿಯ್ಯ ಮತ್ತು ಮಹಾಮಂಡಲೇಶ್ವರ ನಂಬ್ಯಾಲದ ತಿಮ್ಮಯದೇವ ಮಹಾ ಅರಸುಗಳೂ ಸೇರಿ ಇಲ್ಲಿ ಪ್ರತಿದಿನ ಅನ್ನದಾನ ನಡೆಯಲು ಏರ್ಪಡಿಸಿದರು. ಪಾಂ, ಪು. ೩೦

5. ತಾರ್ಕ್ಷ್ಯಕ್ಷೇತ್ರ– ನಾಮದಗರುಡದೇವರು. ಪಂಚಭಾಗವತ ಕ್ಷೇತ್ರಕ್ಕೆ ಪಶ್ಚಿಮದಲ್ಲಿ ಸ್ವಲ್ಪದೂರದಲ್ಲಿರುವುದು. ಇಲ್ಲಿ ವಿಷ್ಣುವಿನ ಆಜ್ಞಾನುಸಾರ ಗರುಡನು ಶ್ವೇತಮೃತ್ತಿಕೆಯನ್ನು ತಂದಿರಿಸಿದನು. ಅದು ಅಕ್ಷಯವಾಗಿದೆ.

ಶಕ ೧೧೮೧ ಅಥವಾ ೧೨೪೧ ಸಿದ್ಧಾರ್ಥಿ ಸಂ॥ (AD 1259–1319) ರಲ್ಲಿ ಸೋವಪ್ಪದಂಡನಾಯಕರೂ, ಇಮ್ಮಡಿ ರಾಹುತರಾಯರೂ ತಿರುಮಣ ಪೆರುಮಾಳಿಗೆ (ನಾಮದ ಗರುಡದೇವರು) ಕೆಲವು ಭೂಮಿ ಧರ್ಮ. ಪಾಂ,ಪು. ೧೮೫

6. ಪರಿಧಾನ ಶಿಲಾಕ್ಷೇತ್ರ– ವೇದಪುಷ್ಕರಿಣೀ ತೀರದಲ್ಲಿ ಒಂದು ಶಿಲೆ ಇದೆ. ದತ್ತಾತ್ರೇಯರು ಈ ಶಿಲೆಯಮೇಲೆ ಕಾಷಾಯ ವಸ್ತ್ರವನ್ನಿಟ್ಟು ಪರಿಗ್ರಹಿಸಿ ಸನ್ಯಾಸವನ್ನು ತೆಗೆದುಕೊಂಡರು. ಶ್ರೀರಾಮಾನುಜರೂ ಸಹ ಈ ದೇಶಕ್ಕೆ ಶ್ವೇತ ವಸ್ತ್ರಧರರಾಗಿ ಬಂದು ಈ ಶಿಲೆಯಮೇಲೆ ಕಾಷಾಯವಸ್ತ್ರವನ್ನಿಟ್ಟು ಅನಂತರ ಈ ವಸ್ತ್ರವನ್ನು ಗ್ರಹಣಮಾಡಿದರು. ಈಗಲೂ ಶ್ರೀವೈಷ್ಣವರಲ್ಲಿ ಸನ್ಯಾಸಿಯಾಗುವುದಾದರೆ ಈ ಶಿಲೆಯಮೇಲೆ ಕಾಷಾಯವನ್ನಿಟ್ಟು ಗ್ರಹಣಮಾಡುವರು.

7. **ನಯನಕ್ಷೇತ್ರ–** ಯೋಗಾನರಸಿಂಹಸ್ವಾಮಿ ಬೆಟ್ಟಕ್ಕೆ ಸೇರಿದಂತೆ ಉತ್ತರಭಾಗಕ್ಕೆ ಉದ್ದಕ್ಕೂ ಆನಿಂದ ಶಿಲಾಪ್ರಸರಿಸಿದೆ. ಅದರಲ್ಲಿ **ಕೇಶವ**

**ದೇವಸ್ಥಾನವು** ಕೊರೆಯಲ್ಪಟ್ಟಿದೆ. ಗರ್ಭಗೃಹ, ರಂಗಮಂಟಪ ಪ್ರದಕ್ಷಿಣ ಮಾರ್ಗ ಕಾಣುವುದು. ಗರ್ಭಗೃಹ ಪೂರ್ತಿಯಾಗಿ ರಂಗಮಂಟಪದ ಮುಂಭಾಗ ಕೊರೆದು ಕಂಭದ ಸಾಲುಗಳಿವೆ. ಪ್ರದಕ್ಷಿಣ ಮಾರ್ಗಕ್ಕೆ ಆರಂಭಿಸಿ ಕೆಲಸಗಳು ನಿಂತು ಹೋಗಿವೆ. ಅದೇರೀತಿಯಲ್ಲಿ ಪ್ರಾಕಾರದಲ್ಲಿ ಉತ್ತರ ದಕ್ಷಿಣಭಾಗದ ಕೆಲಸಗಳು ಕಾಣಬರಲಿಲ್ಲ. ದೇವಸ್ಥಾನವು ಪಶ್ಚಿಮಾಭಿಮುಖವಾಗಿದೆ. ಈರೀತಿ ಏಕಶಿಲಾ ದೇವಾಲಯಗಳು ಭರತ ಖಂಡದಲ್ಲಿ ಅನೇಕಕಡೆ ಇರುವುದು. ಯಾವ ಕಾರಣದಿಂದ ಈ ಕೆಲಸಗಳು ನಡೆಯದೆ ಅರ್ಧಾಂಕಿತವಾಗಿ ನಿಂತುಹೋದುವೆಂದು ತಿಳಿಯಲಿಲ್ಲ. ಈರೀತಿ ದೇವಾಲಯಗಳು ಎಂಟನೇ ಶತಮಾನದಿಂದೀಚೆಗೆ ನಿರ್ಮಿಸುವುದು ಕಾಣಬರುವುದಿಲ್ಲವಾದ್ದರಿಂದ ಈ ದೇವಸ್ಥಾನವೂ ಅದಕ್ಕಿಂತ ಹಿಂದಿನದಾಗಿರಬೇಕು. ಈ ಸ್ಥಳದಲ್ಲಿ ಕುಳಿತು ಜಪ, ತಪ ಧ್ಯಾನ ಮಾಡಿದರೆ ಇಷ್ಟಾರ್ಥಫಲ ಸಿದ್ಧಿಸುವುದೆಂದು ಹಿರಿಯರು ಹೇಳುತ್ತಾರೆ.

ಇಲ್ಲಿ **ಕೇಶವದೇವರನ್ನು** ಪ್ರತಿಷ್ಠಿಸಬೇಕೆಂದು ಅಭಿಪ್ರಾಯ ಪಟ್ಟಿರುವಂತೆ ಕಂಡುಬರುತ್ತದೆ. ಎಂಟನೇ ಶತಮಾನದ ಈ ದೇವಸ್ಥಾನ ಕಟ್ಟಬೇಕಾದರೆ ಊರು ಇರಲೇಬೇಕು. ಈ ದೇವಸ್ಥಾನ ಅರ್ಧಾಂಕಿತವಾಗಿರುವುದರಿಂದ ಇದು ನಿಂತು ಹೋಗಲು ಕಾರಣ ಊರು ಸಮೂಲವಾಗಿ ನಾಶವಾದ್ದರಿಂದ ಇದೂ ಸಹ ಅರ್ಧಾಂಕಿತವಾಗಿ ನಿಂತುಹೋಗಿರಬೇಕೆಂದು ಕಾಣಿಸುವುದು.

ಬಿಂದುಮಾಧವನಗುಡಿ– ಕಲ್ಯಾಣೀ ತೀರದಲ್ಲಿರುವುದು ಕಂಠೀರವ ಮಹಾರಾಜರು (1701–1711) ಕಲ್ಯಾಣಿಯ ಸುತ್ತಲೂ ಇರುವ ಪ್ರಾಕಾರ ಮಂಟಪದಲ್ಲಿ ಬಿಂದುಮಾಧವನ ಗುಡಿಯನ್ನು ಕಟ್ಟಿಸಿ ಪ್ರತಿಷ್ಠಿಸಿದರು. ದೇವರ ಪೂಜಾ ನಿವೇದನಗಳಿಗೆ ಧರ್ಮವನ್ನು ಏರ್ಪಡಿಸಿದರು.



ಶ್ರೀ [illegible]

ಸಂಕೋಚ ಪ್ರಯುಕ್ತ, ನವರಂಗದಲ್ಲಿ ಉತ್ಸವಮೂರ್ತಿ ಸನ್ನಿಧಿಯನ್ನು ನಿರ್ಮಿಸಿರುವರು.

ಯಾವ ವಿಷ್ಣುದೇವಾಲಯದಲ್ಲಿ ನೋಡಿದರೂ ಉತ್ಸವಮೂರ್ತಿ ಒಂದೇ ರೂಪವಾಗಿರುವುದು. ಉಭಯನಾಚ್ಚಿಯಾರರೂ ಅದೇ ರೀತಿ ಅಲಂಕಾರದಿಂದ ಕೂಡಿರುವರು. ನಮ್ಮ ಉತ್ಸವಮೂರ್ತಿಯು ಸ್ಥಿತರೂಪ, ಚತುರ್ಭುಜ, ಶಂಖ ಚಕ್ರ ಗದಾ, ಅಭಯಹಸ್ತ, ಕಿರೀಟ, ಹಾರ, ಕುಂಡಲಾದಿಗಳಿಂದ ಶೋಭಿತರಾಗಿರುವರು.

ಉಭಯನಾಚ್ಚಿಯಾರರ ರೂಪವು ದ್ವಿಭುಜಗಳಿಂದ ಕೂಡಿ ಶ್ರೀದೇವಿಯು ಬಲದಕೈಯಲ್ಲಿ ಮೊಗ್ಗಿನ ಪದ್ಮಪುಷ್ಪವನ್ನು ಎಡದಕೈ ಲಂಬಹಸ್ತವಾಗಿಯೂ, ಭೂದೇವಿಯು ಬಲದಕೈಯಲ್ಲಿ ಮೊಗ್ಗಿನ ಪದ್ಮಪುಷ್ಪವನ್ನು ಹಿಡಿದು ಎಡದಕೈ ಗಜಹಸ್ತವಾಗಿರುವುದು. ಇಲ್ಲಿ ವಿಶೇಷವೇನೆಂದರೆ ಶ್ರೀದೇವಿಯು ದೇವರ ಪಕ್ಕಕ್ಕೆ ಎಡದಕೈಯಲ್ಲಿ ಅರಳಿದ ಕಮಲಪುಷ್ಪವನ್ನು ಹಿಡಿದು ಬಲದಕೈ ಗಜಹಸ್ತವಾಗಿರಬೇಕು. ಇಲ್ಲಿ ಶಿಲ್ಪದ ಸಮತೋಲನವಿರುವುದಿಲ್ಲ. ಬಲದ ಕೈಯಲ್ಲಿ ಅರಳಿದ ಪುಷ್ಪವಿರಬಾರದೆಂದು ಆಗಮ ಶಾಸ್ತ್ರವಿಧಿಯು. ಯಾವ ಕಾಲದಲ್ಲಿ ಯಾವ ವಿಗ್ರಹವು ಹೇಗೆ ವ್ಯತ್ಯಾಸವಾಯಿತೆಂದು ತಿಳಿದುಬರಲಿಲ್ಲ.

ಉತ್ಸವಮೂರ್ತಿ ಪಾದಗಳ ಮಧ್ಯೆ ಲಕ್ಷ್ಮೀ ವಿಗ್ರಹವು ಒಂದಿರುವುದು. ಉತ್ಸವಮೂರ್ತಿಯು ಬಹು ಅಂದವಾಗಿ, ಕೋಮಲಭಾವದಿಂದಿರುವುದರಿಂದ ಚೆಲುವರಾಯಸ್ವಾಮಿ ಎಂದೂ, ಶ್ರೀರಾಮಾನುಜರಿಗೆ ಬಹು ಪ್ರಿಯವಾದ್ದರಿಂದ ಸಂಪತ್ಕುಮಾರನೆಂದೂ, ತ್ರೇತಾಯುಗದಲ್ಲಿ ಶ್ರೀರಾಮಚಂದ್ರಮೂರ್ತಿಯಿಂದ ಆರಾಧಿತವಾದ್ದರಿಂದ ರಾಮಪ್ರಿಯರೆಂದೂ ಕರೆಯುವರು.

**ವಿಷ್ವಕ್ಸೇನರು**— ವಿಷ್ವಕ್ಸೇನರೆಂಬುವರು ವಿಷ್ಣುವಿನ ಪರಿವಾರ ದೇವತೆಗಳಲ್ಲಿ ಅತಿಮುಖ್ಯರು. ಸಾಧಾರಣವಾಗಿ ಎಲ್ಲಾ ದೇವಸ್ಥಾನದಲ್ಲೂ ಮೂಲಮೂರ್ತಿಗೆ ಹತ್ತಿರದಲ್ಲಿ ಎಂದರೆ ವಾಯುವ್ಯಭಾಗದಲ್ಲಿ ಪ್ರತಿಷ್ಠಿತರಾಗಿರುವರು. ನಮ್ಮ ದೇವಸ್ಥಾನದಲ್ಲಿ ಪ್ರಾಕಾರದ ಎಡಗಡೆ ಪಾರ್ಶ್ವದಲ್ಲಿ ಒಂದು ಚಿಕ್ಕ ಸನ್ನಿಧಿಯಲ್ಲಿ ಸ್ಥಾಪಿತವಾಗಿರುವುದು. ಮೂಲಮೂರ್ತಿ ಶಿಲಾ, ಉತ್ಸವಮೂರ್ತಿ ಲೋಹ ಬಿಂಬವು. ವಿಷ್ವಕ್ಸೇನರು ದೇವಸ್ಥಾನ ಮತ್ತು ಗೃಹಗಳಲ್ಲಿ ನಡೆಯುವ ಪ್ರತಿ ಶುಭ ಶೋಭನ ಕಾರ್ಯಗಳಲ್ಲಿಯೂ ಮೊದಲು ಇವರಿಗೆ ಪೂಜಾದಿಗಳು ನಡೆಸಲ್ಪಟ್ಟು ಮುಂದಿನ ಇತರ ಕಾರ್ಯಗಳು ನಡೆಸಲ್ಪಡುತ್ತವೆ.

ಮಡಿಸಿಕೊಂಡಿರುವನು. ಮೇಲಿನ ಎರಡು ಕೈಗಳಲ್ಲಿ ಶಂಖ ಚಕ್ರವನ್ನು ಹಿಡಿದು ಕಿರೀಟ ಹಾರ ಕುಂಡಲಾದಿಗಳಿಂದ ಶೋಭಿತನು.

ಈ ವಿಗ್ರಹ ಮೂರ್ತಿಯು AD 1368 ರಲ್ಲಿ ಶ್ರೀಶೈಲಗುರು ಎಂಬುವ ರಿಂದ ಪ್ರತಿಷ್ಠಿತವಾಯಿತು. ಇದೇಕಾಲದಲ್ಲಿ ಅಣ್ಣಾಚಾರ್ಯರುಗಳ ಮೂಲ ವಿಗ್ರಹ ಶಿಲಾಮೂರ್ತಿ ಪ್ರತಿಷ್ಠಿತವಾಯಿತು. ಶಾಂ. ಪು. ೨೦೯-೨೧೦

ತಿರುಕಚ್ಚಿನಂಬಿ ಸನ್ನಿಧಿ— ಸುದರ್ಶನಾಳ್ವಾರ್ ಸನ್ನಿಧಿ ಹೊರಪಕ್ಕದಲ್ಲಿ ಈ ತಿರುಕಚ್ಚಿನಂಬಿ ಆಚಾರ್ಯರು ಪ್ರತಿಷ್ಠಿತರಾಗಿರುವರು. ಕಾಲ ಸರಿಯಾಗಿ ತಿಳಿಯದು.

## ಶ್ರೀಲಕ್ಷ್ಮೀಅಮ್ಮನವರ ಸನ್ನಿಧಿ (ಯದುಗಿರಿ ಅಮ್ಮನವರು)

ಸುದರ್ಶನಾಳ್ವಾರ್ ಸನ್ನಿಧಿಯಿಂದ ಮುಂದೆ ಹೋದರೆ ವಾಯುವ್ಯ ಮೂಲೆ ಯಲ್ಲಿ ಲಕ್ಷ್ಮೀಅಮ್ಮನವರ ಸನ್ನಿಧಿ ಇರುವುದು. ದೇಶದ ಯಾವ ದೇವಸ್ಥಾನದಲ್ಲೇ ಆಗಲಿ ಲಕ್ಷ್ಮೀಅಮ್ಮನವರ ರೂಪವು ಒಂದೇ ಆಗಿರುವುದು. ಪದ್ಮಾಸನದಲ್ಲಿ ಕುಳಿತಿರುವ ರೂಪ, ಚತುರ್ಭುಜವತ್ತು. ಮೇಲಿನ ಎರಡು ಕೈಗಳಲ್ಲಿ ಕಮಲವು, ಕೆಳಗಿನ ಬಲದಕ್ಕೆ ಅಭಯಹಸ್ತ, ಎಡದಕ್ಕೆ ವರದಹಸ್ತ, ಕಿರೀಟ ಮುಕುಟಹಾರಾದಿ ಗಳಿಂದ ಶೋಭಿತವಾ ಸೌಮ್ಯಮೂರ್ತಿ.

ಇದೇ ಆಕೃತಿಯ ಉತ್ಸವಮೂರ್ತಿ. ಈ ಸನ್ನಿಧಿಯು ಆಲಯಾಶ್ರಿತ ಸ್ವತಂತ್ರಲಕ್ಷ್ಮೀ ಎಂದು ಸಂಜ್ಞೆ. ಆಲಯಾಶ್ರಿತ ಎಂದು ಹೇಳಿದ್ದರೆ ಲಕ್ಷ್ಮಿಯು ಸ್ವತಂತ್ರ ಪರಾತ್ಪರ ದೇವತೆಯಾಗುತ್ತಾಳೆ. ಆಗ ಲಕ್ಷ್ಮಿಯು ಶಾಕ್ತದೇವತೆಯೆಂದು ಕರೆಯಲಾಗುತ್ತದೆ.

ಉತ್ಸವಮೂರ್ತಿ ಚೆಲುವನಾರಾಯಣಸ್ವಾಮಿ ಪಕ್ಕದಲ್ಲಿರುವ ಶ್ರೀ ಭೂದೇವಿಗಳು ಎರಡು ಹಸ್ತಗಳಿಂದ ಕೂಡಿರುತ್ತಾರೆ. ಲಕ್ಷ್ಮೀ ಭೂದೇವಿಯರಾದರೂ ಚತುರ್ಭುಜ ಇರುವುದಿಲ್ಲ. ಅವರು ಪತಿಸಾನ್ನಿಧ್ಯದಲ್ಲಿ ಪತ್ನಿಯ ಸೌಮ್ಯತೆ ಮತ್ತು ಅಸ್ವತಂತ್ರ್ಯ ವನ್ನು ತೋರಿಸುವುದು. ಇಲ್ಲಿ ಪತಿಸಾನ್ನಿಧ್ಯ ದೂರವಾಗಿರುವುದರಿಂದ ದೇವಿಗೆ ಪಟ್ಟದರಾಣಿ - ಗೃಹಿಣಿ - ಸ್ವತಂತ್ರ ಅಸ್ತಿಯಿಂದ ಚತುರ್ಭುಜವತ್ತು.

ಭೂಲೋಕಮಾತೆಯಾದ ವಿಷ್ಣುವಿನ ಪತ್ನಿ ಮಹಾಲಕ್ಷ್ಮಿಯು ತನ್ನ ದಿವ್ಯದೇಶ ಮಹಾತ್ಮೆಯನ್ನನುಸರಿಸಿ ಶ್ರೀರಂಗದಲ್ಲಿ ಶ್ರೀರಂಗನಾಯಕಿ ಎಂದೂ, ಕಾಂಚೀಪುರ ದಲ್ಲಿ ಪೆರುಂದೇವಿ ಎಂದೂ, ತಿರುಪತಿಯಲ್ಲಿ ಅಲಮೇಲುಮಂಗೈ ಎಂದೂ, ಮೇಲು

ಕೋಟೆಯಲ್ಲಿ ಯದುಗಿರಿ ಎಂದೂ ಕರೆಯುವರು. ಇದೇ ರೀತಿಯಲ್ಲಿ ಇತರ ದಿವ್ಯ ದೇಶಗಳಲ್ಲಿ ಆಯಾ ಸ್ಥಳದ ಮಾಹಾತ್ಮ್ಯೆಯನ್ನನುಸರಿಸಿ ವಿವಿಧ ಹೆಸರುಗಳಿಂದ ಕರೆಯುವರು.

**ಶ್ರೀರಾಮಾನುಜರ ಕಾಲದಲ್ಲಿ ಮೂಲಮೂರ್ತಿ ಲಕ್ಷ್ಮೀಅಮ್ಮ**ನವರನ್ನು ಹೊಸದಾಗಿ ಮಾಡಿಸಿದರೆ ಅಥವಾ ಭೂಶೋಧನದಲ್ಲಿ ದೊರಕಿತೆ ? ತಿಳಿಯಲಿಲ್ಲ. ಮೊತ್ತದಲ್ಲಿ ರಾಮಾನುಜರು ಅಮ್ಮನವರನ್ನು ಪ್ರತಿಷ್ಠೆ ಮಾಡಿರುವರು. ಉತ್ಸವಮೂರ್ತಿಯನ್ನು ರಾಮಾನುಜರು ಹೊಸದಾಗಿ ನಿರ್ಮಿಸಿದರೆಂದು ತಿಳಿಯಬರುವುದು. ಆದರೆ ಮೂಲಮೂರ್ತಿ ಇಲ್ಲದೆ ಉತ್ಸವಮೂರ್ತಿಯನ್ನು ನಿರ್ಮಿಸುವುದಿಲ್ಲವಾದ್ದರಿಂದ ಉತ್ಸವಮೂರ್ತಿಗಿಂತ ಮೊದಲೇ ಮೂಲಮೂರ್ತಿ ಸಿದ್ಧವಾಗಿರಬೇಕು.

**ದ್ವಾರಪಾಲಿಕೆಯರು–** ಲಕ್ಷ್ಮೀಅಮ್ಮನವರ ಸನ್ನಿಧಿಯಿಂದ ಹೊರಕ್ಕೆ ಬಂದರೆ ಪಾರ್ಶ್ವದಲ್ಲಿ ಇಬ್ಬರು ಸ್ತ್ರೀ ದ್ವಾರಪಾಲಿಕೆಯರಿರುವರು. ಈ ರೀತಿ ಸ್ತ್ರೀ ದ್ವಾರಪಾಲಿಕೆಯರಿರುವುದು ಅಪರೂಪ. ಕೆಲವು ದೇವಸ್ಥಾನಗಳಲ್ಲಿ ಮಾತ್ರ ಕಾಣಬಹುದು. ಬಲಭಾಗದಲ್ಲಿ ಸ್ತ್ರೀ ಸ್ಥಿತರೂಪ ಎರಡು ಕೈಗಳು ಬಲದಕೈಯಿಂದ ಚಾಮರವನ್ನು ಹಿಡಿದಿರುವಳು. ಎಡಪಾರ್ಶ್ವದ ದ್ವಾರಪಾಲಿಕೆ ಬಲದ ಕೈಯಿಂದ ಚಾಮರವನ್ನು ಬೀಸುತ್ತಿರುವಳು. ಇವರಿಬ್ಬರ ಕಿರೀಟದ ಮೇಲು ಭಾಗದಲ್ಲಿ ಬಲಭಾಗದಲ್ಲಿ ಪರಮಶಿವನ ಅಂಧಕಾಸುರ ಸಂಹಾರರೂಪವೂ, ಎಡ ಭಾಗದಲ್ಲಿ ಗಜಾಸುರ ಸಂಹಾರರೂಪವೂ ಚಿತ್ರಿಸಿರುವುದರಿಂದ ಈ ದ್ವಾರಪಾಲಿಕೆಯರು ಶಿವದೇವಾಲಯಕ್ಕೆ ಸಂಬಂಧಿಸಿದ್ದು ಅಲ್ಲಿಂದ ತಂದಿರಬೇಕೆಂದು ಕಾಣುವುದು. ಆದರೆ ಇಬ್ಬರು ದ್ವಾರಪಾಲಿಕೆಯರ ಹಣೆಯಲ್ಲಿ ವೈಷ್ಣವ ಚಿಹ್ನೆಯಾದ ಊರ್ಧ್ವಪುಂಡ್ರದ ಮೂರರೇಖೆಯು ಕಾಣಬರುತ್ತದೆ. ಸಮನ್ವಯವು ಹೇಗೆಮಾಡುವುದು ?

### ಗಜೇಂದ್ರವರದರಾಜಸ್ವಾಮಿ ಸನ್ನಿಧಿ

ಯದುಗಿರಿಅಮ್ಮನವರ (ಮಹಾಲಕ್ಷ್ಮಿ) ಸನ್ನಿಧಿಯಿಂದ ಶ್ರೀರಾಮಾನುಜಾಚಾರ್ಯರ ಸನ್ನಿಧಿಗೆ ಬರುವಾಗ ಶ್ರೀರಾಮಾನುಜರ ಸನ್ನಿಧಿಗೆ ಸೇರಿದಂತೆ ಲಕ್ಷ್ಮೀ ಅಮ್ಮನವರಿಗೆ ಎದುರಾಗಿ ವರದರಾಜಸ್ವಾಮಿ ಸನ್ನಿಧಿ ಇರುವುದು. ದೇವರು ಗರುಡಾರೂಢರಾಗಿ ಶಂಖ ಚಕ್ರಗದಾ ಅಭಯ ಮುದ್ರೆಗಳಿಂದಲೂ, ಕಿರೀಟಾದಿ ಅಲಂಕಾರಗಳಿಂದಲೂ ಶೋಭಿತರಾಗಿರುವರು. ಈ ಸನ್ನಿಧಿ ಏರ್ಪಟ್ಟ ಕಾಲ ತಿಳಿಯಲಿಲ್ಲ. ಶ್ರೀರಾಮಾನುಜರ ಕಾಲದಲ್ಲಿ ಈ ಸ್ಥಳದಲ್ಲಿ ಅಮ್ಮನವರಿಗೆ ಪಾಕಶಾಲೆ ನಿರ್ಮಿತವಾಗಿದ್ದಿತು.

ಶ್ರೀಲಕ್ಷ್ಮೀನಾರಾಯಣ ವಿಗ್ರಹ— ಈ ವಿಗ್ರಹವು ಪ್ರಥಮ ಪ್ರಾಕಾರವಾದ ಕತ್ತಲೆ ಪ್ರದಕ್ಷಿಣವೆಂಬ ಸ್ಥಳದಲ್ಲಿರುವುದು. ಆಸೀನಮೂರ್ತಿ ತೊಡೆಯಮೇಲೆ ಲಕ್ಷ್ಮೀಅಮ್ಮನವರು ಕುಳಿತಿರುವರು. ಕಿರೀಟಹಾರ ಕುಂಡಲಾದಿ ಆಭರಣಗಳಿಂದ ಶೋಭಿತರಾಗಿರುವರು. ಆದರೆ ಈ ವಿಗ್ರಹಕ್ಕೆ ಪ್ರತ್ಯೇಕವಾಗಿರಬೇಕಾದ ಪೀಠ ವಿರುವುದಿಲ್ಲ. ಪೀಠವೇನಾಯಿತು ? ಈ ವಿಗ್ರಹವು ಏತಕ್ಕಾಗಿ ಯಾವ ಕಾಲ ವಿಗ್ರಹ ಪ್ರತಿಷ್ಠಾಪನ ಮುಂತಾಗಿ ಚರಿತ್ರೆ ತಿಳಿಯಬರಲಿಲ್ಲ.

## ಭಕ್ತವಿಗ್ರಹಗಳು

ಭಗವಂತನ ವಿಗ್ರಹಮೂರ್ತಿಗಳನ್ನು ಹೇಗೆ ಪೂಜಿಸಬೇಕು ? ಉತ್ಸವವನ್ನಾವ ರೀತಿ ಯಲ್ಲಿ ಮಾಡಬೇಕು ? ಭಗವಂತನ ಗುಣಗಳೇನು ? ಅವನು ಆಗಿಂದಾಗ್ಯೆ ಲೋಕ ಕ್ಷೇಮಕ್ಕಾಗಿ ಅವತರಿಸಿ ಮಾಡಿದ ಕೆಲಸವೇನು ? ಇತ್ಯಾದಿ ವಿಷಯಗಳು ನಮಗೆ ತಿಳಿದ ಬಗೆ ಹೇಗೆ ? ಯಾರು ಹೇಳಿಕೊಟ್ಟರು ? ಇತ್ಯಾದಿ ವಿಷಯಗಳು ನಮಗೆ ತಿಳಿದ ಬಗೆ ಹೇಗೆ ? ಎಂದರೆ ಹಿಂದೆ ದೇಶಮುಖಂಡರುಗಳು, ದೇಶಭಕ್ತರು, ಭಗವದ್ಭಕ್ತರು ಇದ್ದರು. ಅವರು ರಾಷ್ಟ್ರಕ್ಕಾಗಿ, ಪ್ರಜೆಗಳಿಗಾಗಿ ಕಷ್ಟಪಟ್ಟವರು. ಸತ್ಯವಂತರಾಗಿದ್ದರು. ನಮಗೆ ಹೇಗೆ ತಿಳಿಯಿತು ? ಪರಂಪರೆಯಾಗಿ ಹೇಳಿಕೆ ಯಿಂದ ತಿಳಿಯಿತು. ಅವರ ಚರಿತ್ರೆಗಳನ್ನು ಬರೆದಿಟ್ಟಿರುತ್ತಾರೆ. ಓದಿತಿಳಿದೆವು. ಅಂತೆಯೇ ಭಗವಂತನ ರಹಸ್ಯಗಳನ್ನೆಲ್ಲಾ ಉಪದೇಶಿಸುವುದಕ್ಕಾಗಿಯೂ, ಬರೆ ದಿಡುವುದಕ್ಕಾಗಿಯೂ, ವೇದವ್ಯಾಸ, ಶೌನಕಾದಿ ಮಹರ್ಷಿಗಳು, ಟಂಕ, ದ್ರಮಿಡ, ಶಂಕರ, ರಾಮಾನುಜ, ಮಧ್ವ ಮುಂತಾಗಿ ಅನೇಕ ಪೂರ್ವಾಚಾರ್ಯ ಮಹನೀ ಯರುಗಳು ಅವತರಿಸಿ ಭಗವಂತನ ವಿಚಾರವಾದ ಗ್ರಂಥಗಳನ್ನು ಬರೆದು ಶಿಷ್ಯಪ್ರಶಿಷ್ಯ ಕ್ರಮದಿಂದ ಉಪದೇಶಿಸುತ್ತಾ ಜನಗಳಿಗೆ ತಿಳಿಸಿರುತ್ತಾರೆ. ಅವರು ತಿಳಿಸಿದಂತೆ ನಾವು ಆ ಗುರುಗಳ ವಿಷಯದಲ್ಲಿ ಕೃತಜ್ಞರಾಗಿರಬೇಕಾದುದು ನ್ಯಾಯವೇ ಆಗಿರುವುದು. ರಾಷ್ಟ್ರದಲ್ಲಿ ದೇಶಭಕ್ತರಾದ ಎಲ್ಲಾ ಮುಖಂಡರನ್ನೂ ಮರ್ಯಾದೆ ಮಾಡಲು ಸಾಧ್ಯವಿರುವುದಿಲ್ಲ. ಅವರಲ್ಲಿ ಮುಖ್ಯರಾದವರನ್ನು ಮಾತ್ರ ಮರ್ಯಾದಿಸುತ್ತೇವೆ. ಅಂತೆಯೇ ಮುಖ್ಯರಾದ ಪ್ರಧಾನರಾದ ವೇದಾಂತ ಬೋಧಕರಾದ ಆಳ್ವಾರಾಚಾರ್ಯರುಗಳು, ಶಂಕರ, ಮಧ್ವ, ರಾಮಾನುಜ ಇವರ ವಿಗ್ರಹಗಳನ್ನು ಪ್ರತಿಷ್ಠಿಸಿ ಅವರ ಜಯಂತಿಯನ್ನೂ ಉತ್ಸವವನ್ನೂ ಸಂಭ್ರಮವಾಗಿ ಆಚರಿಸುತ್ತೇವೆ.

ಪ್ರಕೃತ ಶ್ರೀವೈಷ್ಣವ ದೇವಾಲಯಗಳಲ್ಲಿ ಶ್ರೀರಾಮಾನುಜರ ವಿಗ್ರಹ ಪ್ರತಿಷ್ಠೆ ಇಲ್ಲದಿದ್ದಲ್ಲಿ ಅದೇ ದೇವಸ್ಥಾನದಲ್ಲಿ ತೀರ್ಥಪ್ರಸಾದಗಳನ್ನು ಸ್ವೀಕರಿಸುವುದಿಲ್ಲವೆಂಬ ನಿಯಮವಿರುವುದು.

ಮಾರ್ಗಮಧ್ಯೆ ಮಧುರಾಂತಕವೆಂಬ ಸ್ಥಳದಲ್ಲಿ ಇಬ್ಬರೂ ಭೇಟಿಯಾದರು. ರಾಮಾನುಜರು ಅವರನ್ನು ಕರೆದುಕೊಂಡು ತಮ್ಮ ಮನೆಯ ಅರ್ಧ ಭಾಗದಲ್ಲಿ ಅವರನ್ನಿಟ್ಟು ಅವರಿಂದ ಸಕಲವೇದಾಂತಶಾಸ್ತ್ರ ಸಂಪ್ರದಾಯಗಳನ್ನು ತಿಳಿದರು. ಶಾಸ್ತ್ರಗಳನ್ನೆಲ್ಲಾ ಓದಿ ವೈರಾಗ್ಯವನ್ನು ಹೊಂದಿ ಸನ್ಯಾಸವನ್ನು ಸ್ವೀಕರಿಸಿದರು.

ತಾವು ಓದಿ ತಿಳಿದುಕೊಂಡ ವಿಶಿಷ್ಟಾದ್ವೈತ ವೇದಾಂತಜ್ಞಾನವನ್ನು ಜನಗಳಿಗೆ ಬೋಧಿಸುತ್ತಾ ಬಂದರು. ಯಾದವಪ್ರಕಾಶರು ರಾಮಾನುಜರ ಪ್ರಭಾವ, ಅವರ ಜ್ಞಾನ, ಶಾಸ್ತ್ರವಿಚಾರ ನ್ಯಾಯವಾಗಿರುವುದೆಂದು ತಿಳಿದು ತಾವೂ ಸಹ ಅವರ ಶಿಷ್ಯರಾದರು.

ರಾಮಾನುಜರಿಗೆ ಮೊದಲಿಯಾಂಡಾನ್ ಮತ್ತು ಅವರ ಜ್ಞಾತಿ ಕೂರತ್ತಾಳ್ವಾನ್ ಎಂಬುವರು ವಿಶಿಷ್ಟಾದ್ವೈತ ವೇದಾಂತಜ್ಞಾನದಲ್ಲಿ ರಾಮಾನುಜರಿಗೆ ಬಲಭುಜದಂತೆ ಸಹಾಯಕರಾಗಿದ್ದರು.

ಕಾಲಕ್ರಮದಲ್ಲಿ ರಾಮಾನುಜರು– ಅದ್ವೈತಜ್ಞಾನವಾದ ಮಾಯಾವಾದವನ್ನು ಖಂಡಿಸಿ ವಿಶಿಷ್ಟಾದ್ವೈತವೇದಾಂತ ತತ್ವವಾಗಿ ಬ್ರಹ್ಮಸೂತ್ರಕ್ಕೆ ಶ್ರೀಭಾಷ್ಯವೆಂಬ ವ್ಯಾಖ್ಯಾನವನ್ನು ಬರೆದರು. ಇನ್ನೂ ಅನೇಕ ಗ್ರಂಥಗಳನ್ನು ಬರೆದರು. ಈ ಕಾರ್ಯಗಳಿಂದ ಸಮುದಾಯದಲ್ಲಿ ಗಣ್ಯತೆಯನ್ನು ಹೊಂದಿ ಶ್ರೀವೈಷ್ಣವರಿಗೆಲ್ಲಾ ಗುರುಗಳು– ಆಚಾರ್ಯರಾಗಿ ಬಂದರು– ಶ್ರೀರಾಮಾನುಜರ ವೈಷ್ಣವ ತತ್ವ ಪ್ರಬಲವಾಯಿತು. ಚೋಳರಾಜನು ಶೈವಮತ ತತ್ವಾಭಿಮಾನಿಯಾದ್ದರಿಂದ ರಾಮಾನುಜರನ್ನು ಕರೆದು ಶೈವಮತ ತತ್ವವನ್ನು ಸ್ವೀಕರಿಸೆಂದು ನಿರ್ಬಂಧಿಸಿದನು. ಇದರಿಂದ ಅಭಿಪ್ರಾಯ ಭೇದವುಂಟಾಗಿ ರಾಮಾನುಜರು ತಮಗೆ ಪ್ರಾಣಾಪಾಯವೆಂದು ತಿಳಿದು ಶ್ರೀರಂಗದಿಂದ ಹೊರಟು ಮೇಲ್ನಾಡು ಈ ಕರ್ನಾಟಕಕ್ಕೆ ಬಂದರು. ಇಲ್ಲಿ ತಮ್ಮ ವಿದ್ವತ್ಪ್ರಭಾವದಿಂದ ಜೈನರಿಗೂ, ರಾಮಾನುಜರಿಗೂ ವಾದವಿವಾದವುಂಟಾಗಿ ರಾಮಾನುಜರು ಜಯಿಸಿ ಬಂದುದರಿಂದ ಅಲ್ಲಿಯ ರಾಜನಾದ ವಿಷ್ಣುವರ್ಧನನು ಶಿಷ್ಯನಾದನು. ಅವನ ಸಹಾಯದಿಂದ ತಿರುನಾರಾಯಣಪುರವನ್ನು ಜೀರ್ಣೋದ್ಧಾರಮಾಡಿ ಇಲ್ಲಿ ೧೨ ವರ್ಷಗಳಿದ್ದು ಶ್ರೀರಂಗಕ್ಕೆ ಹಿಂತಿರುಗಿದರು.

**ಶ್ರೀರಾಮಾನುಜರವೇದಾಂತ ತತ್ತ್ವಗಳು**–ಚಿತ್ತು(ಜೀವರಾಶಿ), ಅಚಿತ್ತು= ಜಡಪದಾರ್ಥ, 3 ಈಶ್ವರ = ಪರಮಾತ್ಮರವನ್ನು ಪರಬ್ರಹ್ಮ ಎಂಬ ಈ ಮೂರು ತತ್ವಗಳು. ಶ್ರೀಮನ್ನಾರಾಯಣನು ಸಕಲಕಲ್ಯಾಣ ಗುಣಗಳಿಂದ ಕೂಡಿ ಸರ್ವ

ತಿರುಕಚ್ಚಿ ನಂಬಿ—ಸುದರ್ಶನಾಳ್ವಾರು ಸನ್ನಿಧಿ ಪಕ್ಕದಲ್ಲಿರುವುದು. ಸ್ಥಿತ ಮೂರ್ತಿ—ಸಮಭಂಗದಲ್ಲಿ ನಿಂತಿರುವ ರೂಪ—ಅಂಜಲಿಹಸ್ತರು. ಈ ಮಹಾತ್ಮರಿಂದ ರಾಮಾನುಜರು ನಾರಾಯಣ ಪರತ್ವವನ್ನು ತಿಳಿದುಕೊಂಡರು. ವ್ಯಾಖ್ಯಾನ ಪಂಡಿತರು. ಇವರು ಮದರಾಸ್ ಹತ್ತಿರ ಪೂಂದಮಲ್ಲಿ ಎಂಬುದು ಇವರ ಜನ್ಮ ಸ್ಥಳವು. ಕಾಂಚೀವರದರ ಕೈಂಕರ್ಯದಲ್ಲಿ ಸದಾ ನಿರತರಾದವರು—

ನಾಥಮುನಿ ಆಳವಂದಾರು— ಲಕ್ಷ್ಮೀಅಮ್ಮನವರ ಸನ್ನಿಧಿಯಲ್ಲಿ ನಾಥಮುನಿ ಆಳವಂದಾರ್ರ ಮೂರ್ತಿಗಳಿವೆ.

ನಾಥಮುನಿಗಳು ಶ್ರೀವೈಷ್ಣವರಿಗೆ ಪ್ರಥಮಾಚಾರ್ಯರು. ಆಳ್ವಾರುಗಳು ರಚಿಸಿದ ಪ್ರಬಂಧಗಳನ್ನು ಸಂಪಾದಿಸಿ ಪ್ರಚಾರಮಾಡಿದವರು—

ಆಳವಂದಾರ್ರು— ಇವರು ನಾಥಮುನಿಗಳ ಮಗನಮಗ—ವಯಸ್ಸಾದ ಮೇಲೆ ಸನ್ಯಾಸವನ್ನು ಸ್ವೀಕರಿಸಿ ವೇದಾಂತಸಂಪ್ರದಾಯ ವಿಷಯಗಳಲ್ಲಿ ಅನೇಕ ಗ್ರಂಥಗಳನ್ನು ಬರೆದಿರುವರು—

**ನಮ್ಮಾಳ್ವಾರ್ರು**—ಶ್ರೀ ಲಕ್ಷ್ಮೀಅಮ್ಮನವರ ಸನ್ನಿಧಿಯಲ್ಲಿ ನಮ್ಮಾಳ್ವಾರ್ರ ಶಿಲಾಮೂರ್ತಿ ಒಂದಿರುವುದು.

ರಾಜಕೀಯ ಕಾರಣಗಳಿಂದ ವಿಪರೀತವಾಗಿರುವುದು ಅರಿದಮೇಲೆ ಈ ಸ್ಥಳದಲ್ಲಿ ನಮ್ಮಾಳ್ವಾರ್ರವರ ಮೂಲವಿಗ್ರಹವನ್ನು ಹೊಸದಾಗಿ ಮಾಡಿ ಪ್ರತಿಷ್ಠಿಸಿ ಪೂಜಾ ಉತ್ಸವಾದಿಗಳನ್ನು ನಡೆಸುವವರು — ಭದ್ರತೆಗಾಗಿ ಉತ್ಸವಮೂರ್ತಿಯನ್ನು (ಬೋಳುವಮೂರ್ತಿ) ದೇವಸ್ಥಾನದಲ್ಲಿ ಬಲಮುರಿಯವರ ಪಕ್ಕದಲ್ಲಿ ವಿಷ್ವಕ್ಸೇನರ ಸನ್ನಿಧಿಯಲ್ಲಿ ನಮ್ಮಾಳ್ವಾರ್ರು ಮತ್ತು ತಿರುಮಂಗೈಯಾಳ್ವಾರ್ರ ಉತ್ಸವ ವಿಗ್ರಹವನ್ನು ಇಟ್ಟಿರುವರು—

ನಮ್ಮಾಳ್ವಾರು ತಿರುವಾಯ್ಮೊಳಿ ಎಂಬುದಾಗಿ ಭಗವಂತನ ಗುಣಗಾನ ವಿಷಯದಲ್ಲಿ ಒಂದು ಸಾವಿರ ದ್ರಾವಿಡ ಪದ್ಯಗಳನ್ನು ಬರೆದಿರುವರು. ಶ್ರೀವೈಷ್ಣವ ಸಮುದಾಯಕ್ಕೆಲ್ಲಾ ಮುಂದಾಳುಗಳು. ತಿರುಮಂಗೈಯಾಳ್ವಾರು ಸಹ ಒಂದು ಸಾವಿರ ದ್ರಾವಿಡ ಪದ್ಯಗಳಿಂದ ಭಗವಂತನನ್ನು ಸ್ತೋತ್ರಮಾಡಿ ಸಾಕ್ಷಾತ್ಕರಿಸಿದವರು. ನಮ್ಮಾಳ್ವಾರರು ಪದ್ಮಾಸನದಲ್ಲಿ ಕುಳಿತಿರುವರು. ಉಪದೇಶಮುದ್ರೆ—ತಿರುಮಂಗೈಯಾಳ್ವಾರ್ರು ಸ್ಥಿತರೂಪ—ಕತ್ತಿ ಗುರಾಣಿ ಹಿಡಿದಿರುವರು. ಈಗ ದೇವಸ್ಥಾನದಲ್ಲಿರುವ ಶಿಲಾಮೂರ್ತಿ ನಮ್ಮಾಳ್ವಾರ್ರು ಯಾವಾಗ ಯಾರಿಂದ ಯಾವಕಾಲದಲ್ಲಿ ಪ್ರತಿಷ್ಠಿತ ರಾದರು ? ಕುಣಿಗಲ್ ಬೀದಿಯಲ್ಲಿರುವ ಮಂಟಪದಲ್ಲಿರುವ ೨೦೦ನೇ ನಂ. ಶಾಸನದ..

ಪ್ರಕಾರ ಶ್ರೀಶೈಲ ಗುರು ಎಂಬುವರಿಂದ ಪ್ರತಿಷ್ಠಿತರೆಂದು ತಿಳಿಯಬೇಕು. ಏಕೆಂದರೆ ಈ ವಿಗ್ರಹ ಪ್ರತಿಷ್ಠೆಯಾದ ಮೇಲೆ ಅವರ ವಂಶದಲ್ಲಿ ಬಂದ ಶ್ರೀಶೈಲಾಚಾರ್ಯರಿಂದ ಅಧ್ಯಯನೋತ್ಸವ ಆರಂಭವೆಂದು ಆ ಶಾಸನದಲ್ಲಿ ತಿಳಿಸುವುದು. ಅಲ್ಲದೆ ಅಧ್ಯಯನೋತ್ಸವವು ಮೇಲೆ ತಿಳಿಸಿದ ಮಂಟಪದಲ್ಲೇ ಆರಂಭವೆಂದೂ ತಿಳಿಸುವುದು.

ಈ ಶ್ರೀಶೈಲ ಗುರು ಯಾರು ? ಕಾಲ ಯಾವುದು ?

ಶ್ರೀಶೈಲಾಚಾರ್ಯರ ಕಾಲ ತಿಳಿಯಬರಲಿಲ್ಲ

**ಆಂಡಾಳ್ – ಗೋದಾದೇವಿ – ಶೂಡಿಕೊಡುತ್ತ ನಾಚ್ಚಿಯಾರ್**

ನಮ್ಮ ದೇವಸ್ಥಾನದಲ್ಲಿ ಪ್ರತ್ಯೇಕವಾದ ಆಂಡಾಳ್ ಸನ್ನಿಧಿ ಇರುವುದಿಲ್ಲ. ಆದರೆ ಶ್ರೀರಾಮಾನುಜರು ಹೊಸದಾಗಿ ವಿಗ್ರಹಗಳನ್ನು ಮಾಡಿಸುವಾಗ ಸೂಡಿ-ಕೊಡುತ್ತ ನಾಚ್ಚಿಯಾರ್ ಶಿಲಾವಿಗ್ರಹವನ್ನು ಮಾಡಿಸಿದರು. ಅಲ್ಲದೆ ೧೨ ಆಳ್ವಾರು ವಿಗ್ರಹಗಳನ್ನು ಮಾಡಿಸುವಾಗ ಆಂಡಾಳ್ (ಲೋಹ ವಿಗ್ರಹ) ವಿಗ್ರಹವನ್ನೂ ಮಾಡಿಸಿದರು.

ಪ್ರಕೃತ ಆಂಡಾಳ್ ಶಿಲಾವಿಗ್ರಹವು ಒಂದಡಿ ಎತ್ತರವಿದ್ದು, ಪೂಜೆ ಇಲ್ಲದೆ ಪ್ರಥಮ ಪ್ರಾಕಾರ ಕತ್ತಲ ಪ್ರದಕ್ಷಿಣ ಕೋಣೆಯಲ್ಲಿರುವುದು. ಆಂಡಾಳ್ ಲೋಹ ವಿಗ್ರಹವೇನಾಯಿತೆಂಬುದು ತಿಳಿಯಲಿಲ್ಲ. ಆಂಡಾಳ್ ಸೂಡಿಕೊಡುತ್ತ ನಾಚ್ಚಿಯಾರ್ ಉತ್ಸವವು ವರ್ಷ ತಿರುನಕ್ಷತ್ರಕ್ಕೆ ೬೦ ವರಹಗಳು ಖರ್ಚು ಕಂಡುಬರುವುದು. ಶಾ. ಶ. ೧೪೮೬ (A.D. 1564 ರಲ್ಲಿ) ತದನಂತರ ಯಾವ ಕಾಲದಲ್ಲಿ ಹೇಗೆ ? ಅಂತರಿತವಾಯಿತೆಂಬುದು ತಿಳಿಯಲಿಲ್ಲ. ಪ್ರಕೃತ ಆಂಡಾಳ್ ಉತ್ಸವವನ್ನು ಲಕ್ಷ್ಮೀಅಮ್ಮನವರ ಸನ್ನಿಧಿಯಲ್ಲೇ ನಡೆಸುವರು.

**ಪರಿಚಯ**— ದಕ್ಷಿಣ ದೇಶದ ಶ್ರೀವಿಲ್ಲಿಪುತ್ತೂರು ಎಂಬ ಗ್ರಾಮದಲ್ಲಿ ವಿಷ್ಣುಚಿತ್ತರೆಂಬ ಮಹನೀಯರು ಅಲ್ಲಿಯ ವಟಪತ್ರಶಾಯಿ ದೇವರಿಗೆ ನಂದನವನ ಪುಷ್ಪಕೈಂಕರ್ಯವನ್ನು ನಡೆಸುತ್ತಿದ್ದರು. ಅಲ್ಲಿಯ ರಾಜ ವಲ್ಲಭದೇವರಾಯನು ಒಂದು ದಿನ ನಗರ ಶೋಧನವಾಗಿ ರಾತ್ರಿ ಬರುತ್ತಿರುವಾಗ ದಾರಿಯಲ್ಲಿ ಒಬ್ಬ ಬ್ರಾಹ್ಮಣನನ್ನು ಕಂಡು, ಅವನ ಕುಲ ಗೋತ್ರ ನಾಮವನ್ನು ವಿಚಾರಿಸಲು, ಆ ಬ್ರಾಹ್ಮಣನು ಮಧ್ಯಾಹ್ನಕ್ಕೆ ಬೇಕಾಗುವ ಪದಾರ್ಥಗಳನ್ನು ಬೆಳಿಗ್ಗೆ ಸಂಪಾದಿಸುವಂತೆ ನಾಳೆ ನಮ್ಮ ಜೀವನಕ್ಕೆ ಬೇಕಾಗುವ ಪದಾರ್ಥಗಳನ್ನು ಈ ದಿನವೇ ಸಂಗ್ರಹಿಸುವಂತೆ, ನಮ್ಮ ಕಾಲಾನಂತರ ನಮಗೆ ಬೇಕಾದ ವಸ್ತುಗಳನ್ನು ಈ ಜನ್ಮದಲ್ಲೇ ಸಂಪಾದಿಸಬೇಕೆಂಬ ವೇದಾಂತ ರಹಸ್ಯವನ್ನು ತಿಳಿಸಿದನು.

ಬೆಳಗ್ಗೆ ರಾಜನು ವೇದಾಂತ ತತ್ವ ರಹಸ್ಯವನ್ನರಿಯಲು ಪಂಡಿತರ ಸಭೆಯನ್ನು ಏರ್ಪಡಿಸಿದನು. ಆಗ ವಿಷ್ಣುಚಿತ್ತರು ಹೋಗಿ ಆ ಸಭೆಯಲ್ಲಿ ನಾರಾಯಣಪರತ್ವವನ್ನು ಪ್ರತಿಪಾದಿಸಿ, ಜಯಶೀಲರಾದರು.

ಇನ್ನೊಂದು ಕಾಲದಲ್ಲಿ ವಿಷ್ಣುಚಿತ್ತರಿಗೆ ಅಲ್ಲಿಯ ದೇವರು ವಟಪತ್ರಶಾಯಿ ಸ್ವಪ್ನದಲ್ಲಿ ತಿಳಿಸಿದಂತೆ ತಮ್ಮ ತುಳಸೀ ತೋಟದಲ್ಲಿ ಅಯೋನಿಜೆಯಾದ ಶಿಶುವು ದೊರಕಿದ್ದನ್ನು, ತಂದು ಗೋದೆ – ಆಂಡಾಳ್ ಎಂಬ ಹೆಸರಿಟ್ಟು, ತಾಯಿ ಇಲ್ಲದ್ದರಿಂದ ಬಹು ಮಮತೆಯಿಂದ ಸಾಕಿದರು. ಗೋದೆಗೆ ಚಿಕ್ಕಂದಿನಿಂದಲೂ ಭಗವದ್ವಿಷಯ ಭಾಗವತ ಕಥೆಗಳನ್ನೂ, ಕೈಂಕರ್ಯಗಳನ್ನೂ ಉಪದೇಶಿಸಿದರು. ಗೋದೆಯು ದೊಡ್ಡವಳಾಗುತ್ತಾ ಬಂದು, ಪ್ರಕೃತಿ ಸಂಬಂಧವಶದಿಂದ ಒಂದು ದಿನ ಗೋದೆಯು ಭಾಗವತವನ್ನು ಕೇಳುತ್ತಿರುವಾಗ ರುಕ್ಮಿಣಿಯು ಭಗವಂತನಾದ ಶ್ರೀಕೃಷ್ಣನನ್ನು ಪತಿಯನ್ನಾಗಿ ಹೊಂದಿದಳೆಂದು ಕೇಳಿ, ಅದೇ ರೀತಿಯಲ್ಲಿ ನಾನೇಕೆ ಭಗವಂತನನ್ನು ಪತಿಯಾಗಿ ಹೊಂದಬಾರದು? ಎಂಬ ಜ್ಞಾನೋದಯವುಂಟಾಯಿತು. ತಾನು ಭಗವಂತನಿಗೆ ಸರಿಯುಂಟೋ ? ಇಲ್ಲವೋ ? ಎಂದು ಮನಸ್ಸಿಗೆ ಬರಲು ವಿಷ್ಣುಚಿತ್ತರು ದೇವರಿಗಾಗಿ ಕಟ್ಟಿಟ್ಟಿದ್ದ ಪುಷ್ಪಮಾಲಿಕೆಯನ್ನು ಅವರಿಲ್ಲದ ವೇಳೆಯಲ್ಲಿ ತೆಗೆದು ಅಲಂಕರಿಸಿಕೊಂಡು ಕನ್ನಡಿಯಲ್ಲಿ ನೋಡಿ ತನ್ನ ರೂಪ, ಲಾವಣ್ಯ, ಗುಣಗಳಿಂದ ತಾನೇ ಸಂತೋಷಿತಳಾಗಿ ತನ್ನನ್ನು ಭಗವಂತನು ವರಿಸುವನೆಂದು ಸಂತೋಷಪಡುತ್ತಾ, ತಂದೆಯು ಬರುವರೆಂಬ ಭಯದಿಂದ ಪುಷ್ಪಮಾಲೆಯನ್ನು ಕಳಚಿ ಯಥಾ ಸ್ಥಾನದಲ್ಲಿಡುತ್ತಿದ್ದಳು. ಇದನ್ನು ತಿಳಿಯದ ಆಳ್ವಾರು ವಿಷ್ಣುಚಿತ್ತರು ದೇವರಿಗೆ ಸಮರ್ಪಿಸಿ ಬರುತ್ತಿದ್ದರು. ಈರೀತಿ ಪ್ರತಿ ದಿನವೂ ನಡೆಯುತ್ತಿದ್ದು ಒಂದುದಿನ ಪುಷ್ಪಮಾಲೆಯನ್ನು ಮುಡಿದು ಅಲಂಕರಿಸಿ ಕಳಚಿ ಇಡುತ್ತಿದ್ದುದನ್ನು ಕಂಡು ಮನಸ್ಸಿನಲ್ಲಿ ಖಿನ್ನರಾಗಿ ಆ ದಿನ ದೇವರಿಗೆ ಪುಷ್ಪಮಾಲೆಯನ್ನು ಸಮರ್ಪಿಸದೆ ಇದ್ದರು. ರಾತ್ರಿ ಅವರ ಸ್ವಪ್ನದಲ್ಲಿ ಭಕ್ತಿ, ಜ್ಞಾನ, ಗುಣಸಂಪನ್ನೆಯಾದ ನಿನ್ನ ಮಗಳು ಮುಡಿದು ಅಲಂಕರಿಸಿ ಕಳಚಿಟ್ಟ ಪುಷ್ಪಮಾಲೆಯೇ ನನಗೆ ಇಷ್ಟವೆಂದು ತಿಳಿಸಲು, ವಿಷ್ಣುಚಿತ್ತರು ಭಯಪಟ್ಟು ತಮ್ಮ ಮಗಳು ಭೂದೇವಿಯ ಅಂಶವಾಗಿರಬೇಕೆಂದು ಆಲೋಚಿಸಿ ದೇವರು ನಿಯಮಿಸಿದಂತೆಯೇ ಗೋದೆಯು ಮುಡಿದು ಅಲಂಕರಿಸಿಕೊಂಡ ನಂತರ ಕಳಚಿ ಇಟ್ಟ ಪುಷ್ಪಮಾಲೆಯನ್ನು ಸಮರ್ಪಿಸುತ್ತಾ ಬಂದರು. ಆದರೆ ಗೋದಾದೇವಿಗೆ ಪ್ರಾಪ್ತ ವಯಸ್ಸಾದರೂ ಅನೇಕ ಕಾರಣಗಳಿಂದ ವಿವಾಹವಾಗಲಿಲ್ಲ. ಗೋದೆಗೂ ಮನಸ್ಸಿಗೆ ಬಂದು ಭಗವಂತನಲ್ಲಿ ವಿರಹಿತಳಾಗಿ ತಿರುಪ್ಪಾವೈ - ವಾರಣಮಾಯಿರ ಎಂಬ ಸ್ತೋತ್ರಗಳನ್ನು ರಚಿಸಿದಳು. ಒಂದುದಿನ ಶ್ರೀರಂಗನಾಥನು ಆಳ್ವಾರರ ಸ್ವಪ್ನದಲ್ಲಿ ತನಗೂ ವಿವಾಹವಾಗುವಂತೆ ತಿಳಿಸಿದನು. ಆಳ್ವಾರು ಬಹು ಸಂಭ್ರಮದಿಂದ ಮಗಳನ್ನಲಂಕರಿಸಿ

ಶ್ರೀರಂಗಕ್ಕೆ ಕರೆದುಕೊಂಡು ಹೋದರು. ಶ್ರೀರಂಗನಾಥರನ್ನು ದರ್ಶನ ಮಾಡುವಾಗ ಗೋದೆಯು ಶ್ರೀರಂಗನಾಥರಲ್ಲಿ ಐಕ್ಯಳಾದಳು. ಗೋದೆಯು ಭಕ್ತಿಪರವಶಳಾಗಿ ಲೋಕ ಕ್ಷೇಮವಾಗಿ ಬರೆದ ಸ್ತೋತ್ರವನ್ನು ನಾವು ಪ್ರತಿದಿನ ಆರಾಧನೆಯಲ್ಲಿ ಅನುಸಂಧಿಸಿ ಬರುತ್ತೇವೆ.

**ವೇದಾಂತದೇಶಿಕರು– ಕಾಲ AD 1268–1369.**

ವೇದಾಂತದೇಶಿಕರು ಕಾಂಚೀಪುರದಲ್ಲಿ ಜನಿಸಿದವರು. ತಂದೆ ಅನಂತಸೂರಿಗಳಲ್ಲಿ ಓದಿದವರು. ಕಾವ್ಯ, ನಾಟಕ, ಸಾಹಿತ್ಯ ವೇದಾಂತ ಗ್ರಂಥಗಳನ್ನೂ, ಮತ ಗ್ರಂಥಗಳನ್ನೂ ಓದಿ ಮಹಾ ವಿದ್ವಾಂಸರಾದರು. ಇವರು ಕವಿಗಳು– ಇವರ ಹೃದಯದಿಂದ ಸಂಸ್ಕೃತ ಶ್ಲೋಕಗಳು ಧಾರಾಕಾರವಾಗಿ ಬರುತ್ತಿದ್ದವು. ಇದರಿಂದ ಇವರಿಗೆ ಕವಿ ತಾರ್ಕಿಕ ಸಿಂಹ ಎಂಬ ಬಿರುದುಂಟು. ವೇದಾಂತದೇಶಿಕರು ಕವಿಗಳು– ವೇದಾಂತಿಗಳು– ವಾದಿಭಯಂಕರರು– ಅನೇಕವಾಗಿ ವೇದಾಂತ ವಿಷಯದಲ್ಲಿ ವಾದ ಗ್ರಂಥಗಳನ್ನು ಬರೆದಿರುವರು. ಇವರ ಕಾಲದಲ್ಲಿ ತುರುಷ್ಕರ ದಾಳಿಯಿಂದ ಶ್ರೀರಂಗ ಕ್ಷೇತ್ರವು ಹಾಳಾಯಿತು. ಪಿಳ್ಳೈ ಲೋಕಾಚಾರ್ಯರೆಂಬುವರೂ, ವೇದಾಂತ ದೇಶಿಕರೂ ಸೇರಿ ಶ್ರೀರಂಗನಾಥಸ್ವಾಮಿಯನ್ನೂ, ವೇದಾಂತ ಗ್ರಂಥಗಳನ್ನೂ ಕಾಪಾಡಿ ಬಂದರು.

ವೇದಾಂತದೇಶಿಕರು ಶ್ರೀವೈಷ್ಣವ ಸಾಮ್ರಾಜ್ಯಕ್ಕೆ ಕೋಟೆಯಂತೆ. ಪರಮತ ಖಂಡನ, ಸ್ವಮತಸ್ಥಾಪನ ವಿಷಯದಲ್ಲಿ ಅನೇಕ ವೇದಾಂತ ವಾದಗ್ರಂಥಗಳನ್ನು ಬರೆದು ಶ್ರೀ ವೈಷ್ಣವ ಸಿದ್ಧಾಂತವನ್ನು ಬೆಳೆಸಿದರು. ಶ್ರೀವೈಷ್ಣವ ಮತಕ್ಕೆ ಎರಡನೆಯ ರಾಮಾನುಜರಂತೆ ಪ್ರಸಿದ್ಧರಾಗಿರುವರು. ಇವರು ಗರುಡನ– ಹಯಗ್ರೀವನ ಉಪದೇಶ ಪಡೆದರು– ಇವರ ಸನ್ನಿಧಿ ರಾಜಬೀದಿಯಲ್ಲಿರುವುದು.

**ಮಣವಾಳಮಾಮುನಿ– (ಕಾಲ 1370–1443)**

ಮೂಲ ವಿಗ್ರಹ– ಉತ್ಸವ ವಿಗ್ರಹ ಎರಡೂ ಇರುವುವು. ರಾಮಾನುಜರಂತೆ ಅಂಜಲಿ ಮುದ್ರೆ. ಪದ್ಮಾಸನದಲ್ಲಿ ಕುಳಿತಿರುವರು. ರಾಮಾನುಜರ ವಿಗ್ರಹಕ್ಕೂ ಇವರ ವಿಗ್ರಹಕ್ಕೂ ಭೇದವನ್ನು ತೋರಿಸಲು ಇವರ ಶಿರಸ್ಸಿನ ಮೇಲೆ ಆದಿಶೇಷನ ಹೆಡೆಯ ಸಂಪೂರ್ಣಾಕಾರದಿಂದಲಂಕರಿಸಿರುವರು. ರಾಮಾನುಜರ ಅಪರಾವತಾರ ವೆನ್ನುವರು.

ಇವರ ಪ್ರತಿಷ್ಠೆ ಸುಮಾರು AD 1530–1564 ರ ಮಧ್ಯೆ ಪ್ರತಿಷ್ಠೆಯು.

ಪರಿಚಯ– ಈ ಮಹಾತ್ಮರು ದಕ್ಷಿಣ ದೇಶದ ಆಳ್ವಾರ್‌ತಿರುನಗರಿಗೆ ಸೇರಿದ ಶಿಕ್ಕಿಲ್‌ಕಿಡಾರಂ ಎಂಬ ಊರು ಇವರ ಜನ್ಮಸ್ಥಳವು. ಇವರು ಸನ್ಯಾಸಾಶ್ರಮವನ್ನು

ಸ್ವೀಕರಿಸಿ ಶ್ರೀವೈಷ್ಣವ ಸಂಪ್ರದಾಯಕ್ಕಾಗಿ ತಮ್ಮ ಜೀವಮಾನವನ್ನು ಕಳೆದರು— ಆಳ್ವಾರಾಚಾರ್ಯರ ದ್ರಾವಿಡ ಪ್ರಬಂಧಗಳಿಗೆ ವ್ಯಾಖ್ಯೆ ಕೊಟ್ಟು ಅನೇಕ ಸ್ವತಂತ್ರ ಗ್ರಂಥಗಳನ್ನೂ ವ್ಯಾಖ್ಯಾನ ಗ್ರಂಥಗಳನ್ನೂ ಬರೆದಿರುವರು. ಇವರು ದೇವಸ್ಥಾನ ಗ್ರಾಮಗಳಲ್ಲಿ ವೇದ, ಪ್ರಬಂಧಪಾರಾಯಣ, ಸೇವಾಕಾಲ ನಡೆಯುವ ಕ್ರಮವನ್ನು ನಿಷ್ಕೃಷ್ಟ ಮಾಡಿದರು. ಅವರು ಮಾಡಿದ ಕ್ರಮದಲ್ಲಿ ಅದ್ಯಾವಧಿ ಪ್ರಬಂಧ ಸೇವಾಕಾಲ ನಡೆಯುತ್ತಿರುವುದು. ಈ ಮಹಾತ್ಮರು ತಮ್ಮ ಉಪದೇಶದಿಂದಲೂ ಆಚರಣೆಯಿಂದಲೂ ಶ್ರೀವೈಷ್ಣವರ ಹೃದಯದಲ್ಲಿ ನಿಂತು ಪ್ರಸಿದ್ಧರಾಗಿ ಶ್ರೀವೈಷ್ಣವರಿಗೆಲ್ಲಾ ಆಚಾರ್ಯ ಸ್ಥಾನದಲ್ಲಿರುವರು.

## ರಾಜಭಕ್ತಿ ಪ್ರತಿಮೆಗಳು

ಸಾಧಾರಣವಾಗಿ ಹಿಂದೂ ರಾಜರು ದೇವಸ್ಥಾನ, ಗುಡಿಗೋಪುರಗಳನ್ನು ಕಟ್ಟಿಸಿ, ಬ್ರಾಹ್ಮಣರಿಗೆ ಅಗ್ರಹಾರ, ವೃತ್ತಿ, ದಾನ, ಇತ್ಯಾದಿಗಳನ್ನು ಕೊಟ್ಟು ದೇವಾಲಯಗಳಲ್ಲಿ ಪೂಜಾ, ನಿವೇದನ, ಉತ್ಸವಾದಿಗಳು ನಡೆಯಲು ಏರ್ಪಡಿಸಿರುವುದರಿಂದ ಅವರ ಕೃತಜ್ಞತಾ ಜ್ಞಾಪಕಾರ್ಥವಾಗಿ ಅವರ ಪ್ರತಿಕೃತಿಗಳನ್ನು, ಲೋಹ ಮತ್ತು ಶಿಲೆಯಲ್ಲಿ ಮಾಡಿ ದೇವಸ್ಥಾನದಲ್ಲಿಟ್ಟು ಮರ್ಯಾದಿಸುವುದುಂಟು.

ಅದನ್ನನುಸರಿಸಿ ನಮ್ಮ ದೇವಸ್ಥಾನದಲ್ಲಿಯೂ ರಾಜರ ವಿಗ್ರಹಗಳನ್ನು ಪ್ರತಿಷ್ಠಿಸಿರುವರು.

**ರಾಜಒಡೆಯರು**— ಪ್ರತಿದಿನದ ಪದ್ಧತಿಯಂತೆ ದೇವಸ್ಥಾನದಲ್ಲಿ ಶ್ರೀನಾರಾಯಣಸ್ವಾಮಿಗೆ ಮಹಾಮಂಗಳಾರತಿ ನಡೆಯುತ್ತಿದ್ದಾಗ ಅತ್ಯದ್ಭುತವಾದ ತೇಜಸ್ಸೊಂದು ನವರಂಗದಲ್ಲಿ ಕಾಣಿಸಿ ದೇವರ ಪಾದದಲ್ಲಿ ಐಕ್ಯವಾದುದನ್ನು ನೋಡಿದ್ದ ಜನರು ಅದೇನು ವಿಷಯವೆಂದು ವಿಚಾರಿಸುವಲ್ಲಿ ರಾಜಒಡೆಯರು ಪರಮಪದಿಸಿದರೆಂದು ತಿಳಿದು ಅವರು ಮಹಾಭಕ್ತರಾದ್ದರಿಂದ ಅವರ ಜ್ಞಾಪಕಾರ್ಥವಾಗಿ ಅವರ ವಿಗ್ರಹವನ್ನು ರಂಗಮಂಟಪದ ಕಂಬದಲ್ಲಿ ಕಟ್ಟುಮಾಡಿ ಪ್ರತಿದಿನದ ಮಂಗಳಾರತಿ ಸಮಯದಲ್ಲಿ ಮರ್ಯಾದೆಯು ಏರ್ಪಟ್ಟು ಅದ್ಯಾವಧಿ ನಡೆದುಬರುತ್ತಿರುವುದು.

ದೇವಸ್ಥಾನದ ಅಡಿಗೆಮನೆ ಪಕ್ಕದಲ್ಲಿ ಮುಮ್ಮಡಿ ಕೃಷ್ಣರಾಜಒಡೆಯರು ಮತ್ತು ಅವರ ನಾಲ್ಕುಜನ ಪತ್ನಿಯರು ಉಭಯಪಾರ್ಶ್ವಗಳಲ್ಲಿಯೂ, ಕೈಮುಗಿದು ನಿಂತಿರುವುದನ್ನು ಕಾಣಬಹುದು. ಎಲ್ಲರೂ ರಾಜಚಿಹ್ನಾಂಕಿತರಾಗಿರುವರು. ಶ್ರೀನಾರಾಯಣಸ್ವಾಮಿಯ ಪ್ರತಿದಿನದ ಮಹಾಮಂಗಳಾರತಿ ಸಮಯದಲ್ಲಿ ತೀರ್ಥ ಪುಷ್ಪಮಾಲೆ ಮರ್ಯಾದೆಯು ತಾಳಮೇಳದೊಂದಿಗೆ ಬಂದು ರಾಜಮರ್ಯಾದೆ ನಡೆಯುವುದು.

ಪಾಂ. ಪ್ರ. ೧೫೭

## ಪೂಜಾ–ಉತ್ಸವಾದಿಗಳು

ನಮ್ಮ ದೇವಸ್ಥಾನದಲ್ಲಿ ಪಾಂಚರಾತ್ರಾಗಮಕ್ಕೆ ಸೇರಿದ ಈಶ್ವರ ಸಂಹಿತಾ, ಪಾದ್ಮ ಸಂಹಿತೆಗಳ ಪ್ರಕಾರ ಪೂಜಾ ಉತ್ಸವಾದಿಗಳು ನಡೆಯುತ್ತವೆ. ಸಾಧಾರಣವಾಗಿ ಎಲ್ಲಾ ದೇವಸ್ಥಾನಗಳಲ್ಲಿಯೂ. ನಿತ್ಯಪೂಜೆ, ವಿಶೇಷಪೂಜೆ ಎಲ್ಲವೂ ಆಗಮಶಾಸ್ತ್ರದಲ್ಲಿ ತಿಳಿಸಿರುವಂತೆ ನಡೆಸುವರು.

ಈ ಪೂಜೆಯು ಆರು ವಿಧವಲ್ಲಿ ನಡೆಯುವುದು. ಭಗವಂತನಿಗೆ ವಿಶ್ವರೂಪ ಮರ್ಯಾದೆಯಾದ ಮೇಲೆ 1. **ಮಂತ್ರಾಸನ**– ಇದರಲ್ಲಿ ದೇವರಿಗೆ ಸುಪ್ರಭಾತ ಹೇಳುವರು ಅನಂತರ 2. **ಸ್ನಾನಾಸನ**– ಇದರಲ್ಲಿ ದೇವರಿಗೆ ದಂತಧಾವನ ಅಭಿಷೇಕಾದಿಗಳು ನಡೆಯುತ್ತವೆ. 3. **ಅಲಂಕಾರಾಸನ**. ಇದರಲ್ಲಿ ದೇವರಿಗೆ ಮಡಿಬಟ್ಟೆಯನ್ನುಡಿಸಿ ಪುಷ್ಪ ಆಭರಣಗಳಿಂದ ಅಲಂಕಾರ ಮಾಡುವರು. ಈ ಮಧ್ಯದಲ್ಲಿ ವೇದ, ಪ್ರಬಂಧಪಾರಾಯಣ, ಸೇವಾಕಾಲ. ವೇದಪಾರಾಯಣ, ಮಂತ್ರಪುಷ್ಪ ಸ್ತೋತ್ರಾದಿಗಳನ್ನು ಹೇಳುವರು. ಅನಂತರ 4. **ಭೋಜ್ಯಾಸನ**– ಇದರಲ್ಲಿ ದೇವರಿಗೆ ವಿವಿಧ ಭೋಜನ ಪದಾರ್ಥಗಳನ್ನು ಪಕ್ವಮಾಡಿ ನಿವೇದಿಸುವರು. ಅನಂತರ ಐದನೆಯದಾಗಿ ಪುನಃ **ಮಂತ್ರಾಸನ**– ಇದರಲ್ಲಿ ದೇವರು ಆರಾಮವಾಗಿರಬೇಕೆಂದು ಪ್ರಾರ್ಥಿಸಿ ಉಪಚಾರ ಮಾಡುವರು. ಆರನೆಯದಾಗಿ **ಪರ್ಯಂಕಾಸನ**– (ಶಯನಾಸನ) – ಈ ಕಾಲದಲ್ಲಿ ಮಹಾಮಂಗಳಾರತಿ ನಡೆಸಿ, ವೇದಮಂತ್ರಗಳಿಂದಲೂ ಪ್ರಬಂಧ ಸ್ತೋತ್ರಗಳಿಂದಲೂ. ಭಗವಂತನ ಗುಣಗಾನವನ್ನು ಹೇಳಿ, ನಮಗೂ ಅವನಿಗೂ ಇರುವ ಶೇಷ ಶೇಷಿಭಾವ ಸಂಬಂಧವನ್ನು ತಿಳಿಸಿ. ನಮ್ಮನ್ನು ಕಾಪಾಡುವವನು ನೀನಲ್ಲದೆ ಬೇರೆಯವರಿಲ್ಲವೆಂದು ತಿಳಿಸಿ, ನೆರೆದ ಭಕ್ತರಾದ ಆಳ್ವಾರಾಚಾರ್ಯರುಗಳ ಪ್ರತಿನಿಧಿಗಳಾದ ಮಠಾಧಿಪತಿಗಳು, ಆಚಾರ್ಯ ಪುರುಷರು ಆದಿಯಾಗಿ ಎಲ್ಲರಿಗೂ ವರ್ಣಾಶ್ರಮ ಕ್ರಮದಲ್ಲಿ ಆಶೀರ್ವಾದವನ್ನು ಹೇಳಿ ತೀರ್ಥಪ್ರಸಾದವನ್ನು ಕೊಡುವರು.

**ಉತ್ಸವಗಳು**– ನಾವು ದೇವಸ್ಥಾನಕ್ಕೆ ಹೋಗಬೇಕು. ಕಾರಣಾಂತರದಿಂದ ಹೋಗಲಾಗದಿದ್ದರೆ ಪರಮ ಕಾರುಣಿಕನಾದ ಭಗವಂತನು ತಾನಾಗಿ ಬಂದು ಅನುಗ್ರಹಿಸುವನು ಎಂಬ ಅಭಿಪ್ರಾಯದಂತೆ ಉತ್ಸವವನ್ನು ನಡೆಸುವರು. ದೇವಸ್ಥಾನದಲ್ಲಿ ಆಗಮಶಾಸ್ತ್ರವನ್ನನುಸರಿಸಿ ಕೆಲವು ಉತ್ಸವಗಳೂ, ಧರ್ಮದಾತರನ್ನನುಸರಿಸಿ ಕೆಲವು ಉತ್ಸವಗಳೂ ನಡೆಯುತ್ತವೆ.

ಉತ್ಸವಮೂರ್ತಿಯನ್ನು ವಿವಿಧ ಆಭರಣ ಪುಷ್ಪಹಾರಗಳಿಂದಲಂಕರಿಸಿ ಪ್ರಭಾಸಹಿತವಾದ ಪೀಠದಲ್ಲಿ ಬಿಜಯಮಾಡಿಸಿ, ಮೇಳತಾಳ, ವಾದ್ಯ, ದೀವಟಿ, ಛತ್ರಿ, ಚಾಮರಾದಿ ಮರ್ಯಾದಾವಸ್ತುಗಳೊಂದಿಗೆ ಉತ್ಸವ ಮಾಡುವರು,

ಈ ಉತ್ಸವಗಳಲ್ಲಿ **ಬ್ರಹ್ಮೋತ್ಸವವು** ಪ್ರಧಾನವಾದುದು. ನಮ್ಮ ದೇವಸ್ಥಾನದಲ್ಲಿ ಶ್ರೀನಾರಾಯಣಸ್ವಾಮಿ ಜಯಂತಿದಿನವನ್ನನುಸರಿಸಿ ಹಿಂದಕ್ಕೆ ಒಂಭತ್ತು ದಿನಗಳಿಂದ ಆರಂಭಿಸಿ ಮೊದಲನೇ ದಿನ ಧ್ವಜಾರೋಹಣ. ನಾಲ್ಕನೆಯ ದಿನ ವಯಿರಮುಡಿ ಕಿರೀಟಧಾರಣೋತ್ಸವ, ಏಳನೆಯ ದಿನ ರಥೋತ್ಸವ ಒಂಭತ್ತನೆಯ ದಿನ ಶ್ರೀನಾರಾಯಣಸ್ವಾಮಿ ಜಯಂತಿ **ಅವಭೃತೋತ್ಸವ**– ಈ ರೀತಿ ನಡೆಯುವುದು. ಪ್ರತಿದಿನ ಎರಡು ವೇಳೆಯೂ ವಿವಿಧ ವಾಹನಗಳಿಂದ ಉತ್ಸವ ನಡೆಸುವರು.

ಅಂತೆಯೇ ಕೃಷ್ಣರಾಜೋತ್ಸವ, ಕೃಷ್ಣರಾಜಮುಡಿ, ಮಕರ ಶುಕ್ಲ ಪುನರ್ವಸು ಉತ್ಸವ– ಪವಿತ್ರೋತ್ಸವ, ಅಷ್ಟತೀರ್ಥ, ಭಾಷ್ಯಕಾರ ತಿರುನಕ್ಷತ್ರ ಮುಂತಾಗಿ ಅನೇಕ ಉತ್ಸವಗಳು ನಡೆಯುತ್ತವೆ.

ಅಂಥ ಉತ್ಸವಗಳಲ್ಲಿ ಬ್ರಹ್ಮೋತ್ಸವ ಕಾಲದಲ್ಲಿ ಗಜೇಂದ್ರಮೋಕ್ಷ ಎಂಬ ಉತ್ಸವವನ್ನು ಚಿಕ್ಕದೇವರಾಜರು ಏರ್ಪಡಿಸಿದರು. ಈ ಉತ್ಸವಗಳಲ್ಲಿ ಬಂದ ಭಕ್ತರು ಯಾತ್ರಿಕರಿಗೆ ಅನ್ನದಾನ ನಡೆಸುವರು.

## ಆಭರಣಗಳು – ಆರಾಧನ ಪಾತ್ರೆಗಳು

ಶ್ರೀಯತಿರಾಜಮಠದ ಸ್ವಾಮಿಗಳು ಶ್ರೀಚೆಲ್ವಪಿಳ್ಳೆ ದೇವರಿಗೆ ಹೃದಯದಲ್ಲಿರುವ ಲಕ್ಷ್ಮಿಯನ್ನು 1140–1186 ಈ ಮಧ್ಯಕಾಲದಲ್ಲಿ ಸಮರ್ಪಿಸಿರುವುದಾಗಿ ತಿಳಿದುಬರುವುದು.

ಸಂಪತ್ಸುತಸ್ಯ ಯದುಭೂಪರ ಮಂಗಳಸ್ಯ
ಯೋವಕ್ಷಸ್ತನ್ಯತ ಹರೇರನಪಾಯಿನಿ ಶ್ರೀಃ ;
ತಂಯೋಗಿನಂ ಯತಿವರೇಣ್ಯ ನಿಯೋಗ ಲಬ್ಧ
ಸಂಪತ್ಕುಮಾರ ಪದಮನ್ವಹ ಮಾಶ್ರಯಾಮಃ ।

ಶಕ ೧೩೮೦ ಬಹುಧಾನ್ಯ ಸಂ॥ (2–12–1458) ಮಹಾಪ್ರಧಾನ **ತಿಮ್ಮಣ್ಣ ದಂಡನಾಯಕರೂ**, ಅವರ **ಪತ್ನಿ ರಂಗನಾಯಕಮ್ಮನೂ** ಶ್ರೀ ನಾರಾಯಣ ಚೆಲ್ವಪಿಳ್ಳೆಯವರಿಗೆ ರತ್ನಾಭರಣ, ಸುವರ್ಣಮಂಟಪ, ರಜತ ಪರ್ಯಂಕಾದಿಗಳನ್ನು ಸಮರ್ಪಿಸಿರುವರು. ಪಾಂ. ಪ್ರ. ೧೬೯

**ರಾಜಒಡೆಯರು** 1. 7. 1614ರಲ್ಲಿ ಶ್ರೀ ಚೆಲುವರಾಯಸ್ವಾಮಿಗೆ ಅಮೂಲ್ಯ ರತ್ನಗಳಿಂದ ನೂತನವಾಗಿ ವಯಿರಮುಡಿಯಂತಿರುವ **ರಾಜಮುಡಿ**

ಎಂಬ ಕಿರೀಟವನ್ನು ಸಮರ್ಪಿಸಿ ಬ್ರಹ್ಮೋತ್ಸವ ಕಾಲದಲ್ಲಿ ವಜ್ರಮುಡಿಯನ್ನು ಧರಿಸಿ ತೆಗೆದನಂತರ ತಾವು ಸಮರ್ಪಿಸಿದ ರಾಜಮುಡಿಯನ್ನು ಧರಿಸಿ ಬ್ರಹ್ಮೋತ್ಸವವು ಕಳೆದನಂತರ ಶ್ರೀರಂಗಪಟ್ಟಣ ಅರಮನೆಗೆ ಬರುವಂತೆಯೂ ಅಷ್ಟತೀರ್ಥ ಮುಂತಾದ ವಿಶೇಷೋತ್ಸವಗಳಲ್ಲಿ ರಾಜಮುಡಿ ಮಾತ್ರ ಹೋಗಿಬರುವಂತೆಯೂ ನಿಬಂಧನೆ ಮಾಡಿದರು. ಅಲ್ಲದೆ ಶ್ರೀ ನಾರಾಯಣಸ್ವಾಮಿಗೆ ಅಮೂಲ್ಯವಾದ ರತ್ನಕವಚವನ್ನು ಸಮರ್ಪಿಸಿದರು

**ಚಿಕ್ಕದೇವರಾಜ ಒಡೆಯರು** ಉತ್ಸವಮೂರ್ತಿ ಚೆಲುವರಾಯಸ್ವಾಮಿಯ ಉಭಯನಾಚ್ಚಿಯಾರರಿಗೆ ಬಂಗಾರದ ಬಿಂಬ ಹಸ್ತಗಳನ್ನು ಸಮರ್ಪಿಸಿದರು.

ಪಾ, ಪು. ೧೬೯

**ಮುಮ್ಮಡಿ ಕೃಷ್ಣರಾಜ ಒಡೆಯರು** ಚೆಲುವರಾಯಸ್ವಾಮಿ, ಶ್ರೀನಾರಾಯಣಸ್ವಾಮಿ ಶ್ರೀಯೋಗಾನರಸಿಂಹಸ್ವಾಮಿ ಇವರಿಗೆ ಚಿನ್ನಬೆಳ್ಳಿ, ಅರ್ಘ್ಯ ಪಾತ್ರೆ, ಕೊಪ್ಪರಿಗೆ ನವರತ್ನ ಮಯವಾದ ಗಂಡಭೇರುಂಡ ಎಂಬ ಪದಕ. ಮುತ್ತಿನ ಸರಗಳು. ಹಸ್ತಾಭರಣ, ಕಂಠಾಭರಣ, ಪಾದಾಭರಣ, ಕರ್ಣಾಭರಣ ನಾಸಿಕಾ ಭರಣಗಳು, ಕಿರೀಟಾದಿಗಳು ಸಮರ್ಪಿಸಿದರು.

ರಾಜಮುಡಿಗೆ ಸಮಾನವಾದ ಅಮೂಲ್ಯ ರತ್ನಖಚಿತವಾದ **ಕೃಷ್ಣರಾಜಮುಡಿ** ಎಂಬ ಕಿರೀಟವನ್ನು ಶಕ ೧೭೩೦ ಈಶ್ವರ ಸಂ|| **(1817)**ರಲ್ಲಿ ಚೆಲುವರಾಯ ಸ್ವಾಮಿಗೆ ಸಮರ್ಪಿಸಿದರು. ಶ್ರೀನಾರಾಯಣಸ್ವಾಮಿಗೆ ಬಂಗಾರದ ಪಾದಗಳನ್ನು ಸಮರ್ಪಿಸಿದರು.

ಪಾಂ. ಪು. ೧೭೦

ಮುಮ್ಮಡಿ ಕೃಷ್ಣರಾಜ ಒಡೆಯರು. ಅವರ ಪತ್ನಿಯರು, ಮುದ್ದುಲಿಂಗಯ್ಯ, ಶ್ರೀಯತಿರಾಜದಾಸ, ಮೈಸೂರು ದಳವಾಯಿ ದೇವರಾಜಯ್ಯ ಅವರು, ಬೆಳ್ಳಿತಟ್ಟೆ ಬಟ್ಟಲುಗಳು – ಕೊಡ. ಉದ್ಧರಿಣೆ, ಆರತಿತಟ್ಟೆ, ಕುಂಭಾರತಿ, ಕೊಪ್ಪರಿಗೆ ಮುಂತಾದ ಅನೇಕ ಬೆಳ್ಳಿಪಾತ್ರೆಗಳನ್ನು ಸಮರ್ಪಿಸಿರುವರು.

ಮುಮ್ಮಡಿ ಕೃಷ್ಣರಾಜ ಒಡೆಯರು ಉತ್ಸವಮೂರ್ತಿ ಲಕ್ಷ್ಮೀಅಮ್ಮನವರಿಗೆ ಸುವರ್ಣಕಂಠಾಭರಣ ಪದಕ ಸಮರ್ಪಿಸಿದರು.

ಬಸವಲಿಂಗಯ್ಯ ಎಂಬುವರು ಚೆಲುವರಾಯಸ್ವಾಮಿಗೆ ಸುವರ್ಣ ವಡ್ಯಾಣವನ್ನು ಸಮರ್ಪಿಸಿರುವರು.

**ರಥ ಮತ್ತು ವಾಹನಗಳು–** ನಾವು ಪೂಜಿಸಿ ಧ್ಯಾನಿಸುವ ಯಾವ ದೇವತಾ ಮೂರ್ತಿಯೇ ಆಗಲಿ ಪೂಜಾ ನೈವೇದ್ಯಗಳಿಂದ ಎಷ್ಟು ಸಂತೋಷ ಪಡುವುದೋ

ಅದಕ್ಕೆ ದ್ವಿಗುಣವಾಗಿ ಪುಷ್ಪಾಲಂಕಾರ ವಾಹನಾರೋಹಣದಿಂದ ಉತ್ಸವ ಮಾಡಿದರೆ ಸಂತೋಷಪಡುವರು.

ರಥವಾಹನ ಎಲ್ಲಕ್ಕೂ ಗರುಡನೇ ಅಧಿದೇವತೆಯು. ಈ ವಾಹನ ಉತ್ಸವಗಳಲ್ಲಿ ರಥವಾಹನವೇ ಹಿರಿದಾಗಿರುವುದು.

ಈ ರಥದಲ್ಲಿ ಬ್ರಹ್ಮೋತ್ಸವ ಕಾಲದಲ್ಲಿ ನಿಯಮಿತ ವಾಹನಗಳನ್ನೂ, ಭಕ್ತರ ಇಷ್ಟ ಬಂದ ದಿನದಲ್ಲಿ ಇಷ್ಟಬಂದ ವಾಹನವನ್ನೂ ಮಾಡಬಹುದು. ವಾಹನಗಳು ಇಲ್ಲದಿದ್ದಲ್ಲಿ ಗರುಡವಾಹನ ಒಂದನ್ನು ಮಾಡಿದರೆ ದೇವರಿಗೆ ಪ್ರೀತಿದಾಯಕವಾಗುವುದು. ದೇವಸ್ಥಾನದಲ್ಲಿ ಪಿತ್ರಾರ್ಜಿತವನ್ನು ಅನುಸರಿಸಿ ವಿಮಾನ, ಭಾಸ್ಕರ, ಚಂದ್ರ, ಶೇಷ, ಸಿಂಹ, ಗರುಡ, ಗಜ, ರಥ, ಅಶ್ವ, ಮಂಟಪ, ಹಂಸ, ಶಿಬಿಕಾ ಮುಂತಾಗಿ ಅನೇಕವಿಧ ವಾಹನಗಳ ಉತ್ಸವಗಳು ನಡೆಯುತ್ತವೆ.

**ಸಮರ ಭೂಪಾಲ ವಾಹನ**

ಶಕ.........ಸಂ॥ (1368) **ಶ್ರೀಶೈಲಗೌಡರು** ಎಂಬುವರು ಶ್ರೀಚೆಲ್ವಪಿಳ್ಳೆ ರಾಯರಿಗೆ ಸಮರ ಭೂಪಾಲವಾಹನವನ್ನು ಮಾಡಿಸಿ ಸಮರ್ಪಿಸಿದ ಧರ್ಮ.
ಶಾಂ. ಪು. ೨೧೦

ಶಕ ೧೪೮೦ ವಿರೋಧಿಕೃತು ಸಂ॥ ಆಶ್ವಯುಜ ೧೦ 24–10–1557ರಲ್ಲಿ ನಾರಾಯಣಸ್ವಾಮಿ ಚೆಲುವರಾಯಸ್ವಾಮಿಗೆ ಎಂಬಾರಯ್ಯ, ಅಪ್ಪಯ್ಯಂಗಾರು, ಮಹಾಮಂಡಲೇಶ್ವರ ನಂದ್ಯಾಲದ ತಿಮ್ಮಯ್ಯದೇವ ಮಹಾ ಅರಸುಗಳೂ ಸೇರಿ ಸುವರ್ಣದ **ಗರುಡವಾಹನವನ್ನು** ಮಾಡಿಸಿ ಸಮರ್ಪಿಸಿದರು. ಶಾಂ. ಪು. ೧೩೧

ಮುಮ್ಮಡಿ ಕೃಷ್ಣರಾಜ ಒಡೆಯರು ಬೊಂಬೆರಥವನ್ನು ನಿರ್ಮಿಸಿ 'ಕೃಷ್ಣರಾಜ ತಿರುನಾಳ್' ಎಂಬ ಉತ್ಸವವನ್ನು ಮಾಡಲು ನಿರ್ಧರಿಸಿ. ನಾನಾವಿಧ ಬಣ್ಣದ ವಾಹನಗಳನ್ನು ಮಾಡಿಸಿ ಸಮರ್ಪಿಸಿದರು.
ಶಾಂ. ಪು. ೧೬೭

ವಾನಮಾಮಲೈ ಮಠದ ಸ್ವಾಮಿಗಳು ರಾಮಾನುಜಜೀಯರು ದಂತದ ಪಲ್ಲಕ್ಕಿಯನ್ನು ಸಮರ್ಪಿಸಿರುವರು.
ಶಾಂ. ಪು. ೧೬೭

## ಧರ್ಮಗಳು

ಶಕ.....ಸಂ॥ (      ) ರಲ್ಲಿ ಮಹಾಪ್ರಧಾನ ಛತ್ರಾಧಿಕಾರಿ **ಹೆಗ್ಗಡೆ** ಸಂಧಿಗೆಯ ನಾಗಣ್ಣದೇವನು ಶ್ರೀನಾರಾಯಣಸ್ವಾಮಿ ದೇವರಿಗೆ ಕೆಲವು ಧರ್ಮ.
ಶಾಂ. ಪು. ೧೫೪

ಶಕ ೧೧೦೨ ವಿಕಾರಿ ಸಂ॥ (1179)ರಲ್ಲಿ ಅರಪ್ಪನಾಯಕರು ಕೆರೆಯ ಕೆಳಗೆ ಒಂದು ಖಂಡುಗ, ಕಾಲುವೆ ಕೆಳಗೆ ಒಂದು ಖಂಡುಗ ಧಾನ್ಯ ಬರುವ ಗದ್ದೆ ಭೂಮಿ ಧರ್ಮ. ಚಿಕ್ಕಹಳ್ಳಿರಾಯರ ಬೆಂಗಳನೀರಮಡುವಿನ ಸೇವೆಗೆ (ಮಡಿಬಟ್ಟೆ ಮಾಡುವುದು) ಧರ್ಮ. ಈ ಧರ್ಮವನ್ನು ಚಿಕ್ಕಲಿಂಗರಾಯ ನಡೆಸುವುದು.

ಶ್ರೀ. ಪ. (ಅರಕೆರೆ) ೧೦೧

ಶಕ ೧೪೪೧ ಪ್ರಮಾಥಿ ಸಂ॥ ನಿಜಜ್ಯೇಷ್ಠ ಬಹುಳ ೫ ಬುಧವಾರ (15–6–1519) ಕೃಷ್ಣದೇವರಾಯರ ಕಾಲದಲ್ಲಿ ತಿಮ್ಮಸೆಟ್ಟಿಯವರ ಮಕ್ಕಳು **ಲಕ್ಷ್ಮೀಪತಿಸೆಟ್ಟಿಯವರು** ದೇವಸ್ಥಾನಕ್ಕೆ ಸೇರಿದ ಪುರ ಗ್ರಾಮದಲ್ಲಿನ ಹೊಸಕೆರೆಯನ್ನು 300 ಗದ್ಯಾಣಗಳಿಂದ ಜೀರ್ಣೋದ್ಧಾರ ಮಾಡಿದ ಸೇವೆಗಾಗಿ ದೇವಸ್ಥಾನದಿಂದ ಆರು ಪಡಿಪ್ರಸಾದವನ್ನು ದೇವರಿಗೆ ನಿವೇದನ ಮಾಡಲ್ಪಟ್ಟು ಅದರಲ್ಲಿ ದೇವಾಂಶ ಎರಡು ಭಾಗ ಹೋಗಲಾಗಿ ಉಳಿದ ನಾಲ್ಕು ಭಾಗ ಪಡಿಗೆ ಪ್ರಸಾದವು ಲಕ್ಷ್ಮೀಪತಿಸೆಟ್ಟಿಯವರಿಗೆ ಸಲ್ಲುವುದು ಎಂದು ಧರ್ಮ. ಪಾಂ. ಪು ೧೩೫

ಶಕ ೧೪೫೦ ಸರ್ವಜಿತು ಸಂ॥ (28–1–1528) ಕೃಷ್ಣದೇವರಾಯರ ಕಾಲದಲ್ಲಿ ಶ್ರೀನಾರಾಯಣ ಚಿಕ್ಕಹಳ್ಳಿಸ್ವಾಮಿ ಸನ್ನಿಧಿಗೆ ಸ್ಥಾನಾಧಿಕಾರಿಗಳಾದ **ಅಪ್ಪಬಳ ದೇವರಾಜರ ಮಕ್ಕಳು ಕೃಷ್ಣರಾಯ ನಾಯಕರು** ತಮ್ಮ ನಾಯಕತನಕ್ಕೆ ಕೃಷ್ಣದೇವರಾಯರು ಕೊಟ್ಟ ಶ್ರೀರಂಗಪಟ್ಟಣಕ್ಕೆ ಸೇರಿದ ೨೫೪ ಗದ್ಯಾಣ ವರಮಾನಸ್ಥಳ ಧರ್ಮ.

| ವರಮಾನ | | ಖರ್ಚು | |
|---|---|---|---|
| ಕಾಮನಾಯಕನಹಳ್ಳಿ | ೪೫ ವರಹಗಳು | ಕೆಪ್ಪತಿರುನಾಳಿಗೆ | ೫೦ |
| ಸಿಂಧಘಟ್ಟದ ತಿಮ್ಮನಹಳ್ಳಿ | ೯ | ಪ್ರಸಾದಗಳಿಗೆ | ೧೫೦ |
| ಚಿಟ್ಟನಹಳ್ಳಿ ಗ್ರಾಮ | ೫೦ " | | |
| ಬೇಲೂರುಕೆರೆಯಲ್ಲಿ | | ಶ್ರೀ ಲಕ್ಷ್ಮೀದೇವಿಗೆ ಪಾಯಸ | |
| ಹೊಸದಾಗಿ ಬಿಡಿಸಿಟ್ಟ | | ನಿವೇದನ | ೧೦ |
| ಸಂತೆಯ ವರಮಾನ | ೭೦ " | | |
| ತಳವಾರಿಕೆ | ೨೭ " | | |
| ಸ್ಥಳಸುಂಕ ಅಡಕೆಸುಂಕ | ೩೦ " | ಶ್ರೀನರಸಿಂಹದೇವರ ಅಭಿಷೇಕ | |
| ಬಿಲ್ಲವಸವರ್ತನೆ | ೨೦ | ಆರೋಗಣೆಗೆ | ೧೪ |
| ಮನೆ ತೆರಿಗೆ | ೩ | ಇತರೆ | |
| | | | ೨೫೪ |

ಒಟ್ಟು— ೨೫೪ ವರಹಗಳು ಪಾಂ. ಪು. ೧೩೮

ಶಕ ೧೪೬೭ ಕ್ರೋಧಿ ಸಂ॥ (AD 27-10-1544)
೧೪೬೮ ವಿಶ್ವಾವಸು ಸಂ॥ (AD 15-10-1545) ರಲ್ಲಿ ವಿಜಯನಗರದ

ಸದಾಶಿವರಾಯರ ಆಜ್ಞೆಯಂತೆ, ಅಚ್ಯುತ ಮಹಾರಾಜರೂ, ನಂದ್ಯಾಲದ ನರಸಿಂಗಯದೇವ ಮಹಾಅರಸುಗಳ ಕುಮಾರರು ತಿಮ್ಮರಸಯದೇವ ಮಹಾಅರಸುಗಳೂ ದೇವಸ್ಥಾನದ ಸಕಲ ಮಂದಿರಾದಿಗಳನ್ನೂ, ದೇವಾಲಯ ಮಾಡ್ಯ, ತಿರುವಾಭರಣ ವಸ್ತ್ರಭಂಡಾರ, ಹನುಮಂತಮುದ್ರೆ ದೇವಸ್ಥಾನಕ್ಕೆ ಸೇರಿದ ಸಕಲವಾದ ಗ್ರಾಮಭೂಮಿಗಳನ್ನೂ ಅಧಿಕಾರವನ್ನೂ ಶ್ರೀಯತಿರಾಜಸ್ವಾಮಿಗಳಾದ ವೇದಾಂತ ರಾಮಾನುಜ ಜೀಯರ ವಶಮಾಡಿ ರಾಮಾನುಜಮುದ್ರೆಯುಂಗುರವನ್ನು ಕೊಟ್ಟು ಆಜ್ಞಾಪಿಸಿದರು. ಶ್ರೀಶಠಕೋಪ, ಶ್ರೀಪಾದಮರ್ಯಾದೆ ಇವುಗಳನ್ನು ಪಿತ್ರ ಪರಂಪರೆಯಾಗಿ ಅನುಭವಿಸಿಕೊಂಡು ಬರುವುದೆಂದೂ, ದೇವರಿಗೆ ಧೂಪದೀಪ, ನೈವೇದ್ಯಗಳಿಗೆ 2000 ವರಹಗಳ ಉತ್ಪತ್ತಿಯಾಗುವ ಕಾವೇರಿ ತೀರದ 1. ಬಲ್ಲಾಳಪುರ 2. ಹೇಮಾವತೀ ತೀರದ ವರಾಹಕಲ್ಲಹಳ್ಳಿ ಇವೆರಡು ಸ್ಥಳಕ್ಕೆ ಸೇರಿದ ಗದ್ದೆ ಬೆದ್ದಲು ತೋಟ, ತುಡಿಕೆ, ತಳವಾರ ಒಕ್ಕಲುಮಕ್ಕಳು, ಸುಂಕ ಸುವರ್ಣಾದಾಯ, ಕಾಡಾರಂಬ, ಸೀರಾಡಂಬ, ಹಾಗ್ಗವಣೆ, ಇವೂ ಮುಂತಾದ ಸಕಲಸ್ವಾಮ್ಯಗಳನ್ನೂ, ರಾಮಾನುಜಕೂಟದಲ್ಲಿ ನಿತ್ಯ ತದೀಯಾರಾಧನೆಗೆ ಕ್ರಮವನ್ನು ಏರ್ಪಡಿಸಿ ತತ್ಸಂಬಂಧವಾಗಿ ಶಾಸನವನ್ನು ಬರೆದು ಧರ್ಮವಹಿಸಿದರು.

ಪಾ. ಪು. ೧೨೯-೧೩೦

| | | |
|---|---|---|
| ೧ | ಶ್ರೀನಾರಾಯಣಸ್ವಾಮಿ ಚೆಲುವರಾಯಸ್ವಾಮಿಗೆ ಅಮೃತಪಡಿ, ತಿರುಪ್ಪಣ್ಯಾರದೊಂದಿಗೆ ಅಮೋಗಣೆ ಮತ್ತು ಶ್ರೀಯತಿರಾಜ ಮಠದಲ್ಲಿ ತದೀಯಾರಾಧನೆ | ೪೦೩ |
| ೨ | ನಂದಾದೀಪ - ಅಲಂಕಾರಕ್ಕೆ ವಸ್ತ್ರ | ೧೫೧ \| ೭೨ |
| ೩ | ಶ್ರೀನಾರಾಯಣದೇವರಿಗೆ ಪುಣುಗು ಕಸ್ತೂರಿ ಪಚ್ಚಕರ್ಪೂರ ಪನ್ನೀರು | ೩೬೦ |
| ೪ | ಶ್ರೀರಾಮಾನುಜಾಚಾರ್ಯರ ನಿತ್ಯತಿರುವಾರಾಧನೆಗೆ | ೩೭ |
| ೫ | " " ಹಬ್ಬತಿರುನಕ್ಷತ್ರ ೧೨ಕ್ಕೆ | ೬೦ |
| ೬ | " " ವರ್ಷತಿರುನಾಳಿಗೆ | ೬೦ |
| ೭ | ಶ್ರೀಚೆಲ್ವಪಿಳ್ಳೆರಾಯರ ರಥೋತ್ಸವಕ್ಕೆ | ೫೦ |
| ೮ | ಬೃಂದಾವನ ನಾಳಿಕ್ಕೆ ಚರವುಸಹ | ೪೮ |
| ೯ | ಧನುರ್ಮಾಸ ಪೂಜೆಗೆ | ೧೫೦ |
| ೧೦ | ಕ್ಷಾಮಕ್ಷೋಭೆಗಳಿಗೆ | ೮೦೦ |

ಒಟ್ಟು ವರಹಗಳು = ೨೦೦೦

| | |
|---|---|
| ಆಳ್ವಾರುಗಳ ಅಟು (೧೨) ತಿರುನಕ್ಷತ್ರಕ್ಕೆ ೨೦ ವರಹ ಪ್ರಕಾರ — | ೨೪೦ |
| ಶ್ರೀಭಾಷ್ಯಕಾರರ ರಥೋತ್ಸವ ತಿರುನಾಳಿಗೆ | ೮೦ |
| ತಿರುನಂದಾವನ, ಚೆರಪ್ಪ, ಸಂಬಳ ಇತ್ಯಾದಿಗಳಿಗೆ — — | ೫೭ |
| ಶ್ರೀಭಾಷ್ಯಕಾರರ ಮಾಸತಿರುನಕ್ಷತ್ರ ೧೨ಕ್ಕೆ. ಚೂಡಿಕೊಟ್ಟಮತ್ತ ನಾಚ್ಚಿಯಾರ್ (ಆಂಡಾಳ್) ತಿರುನಕ್ಷತ್ರ ೧, ಮತ್ತು ಪೆರಿಯಜೀಯರ್ ಮಣವಾಳ ಮಾಮುನಿ ತಿರುನಕ್ಷತ್ರ ೧, ಅಂತೂ ತಿರುನಕ್ಷತ್ರ ಹದಿನಾಲ್ಕು — — ೬೦ ವರಹ ಪ್ರಕಾರ | ೮೪೦ |
| ಪೆರಾವತಿಂದು ಪೊಣಗುಲಾಪ್ಪು – ವರ್ಷ ೧ಕ್ಕೆ | ೧೨೭ |
| ಮೊತ್ತ | ೧೩೪೪ |
| ಉಳಿದ ಹಣದಲ್ಲಿ ಭಾಷ್ಯಕಾರರ ರಾಮಾನುಜಕೂಟ | ೧೩೭ |
| (ಶ್ರೀಯತಿರಾಜಮಠದಲ್ಲಿ) ಕಬೀರ್ಯಾರಾಧನೆಗೆ ಉಳಿದ ಹಣ. ...... | ೯ |

ಮೊತ್ತ ವರಹಗಳು

ಶಾಂ. ಪ್ರ. ೧೫೮

ಶಕ ೧೪೯೨ ಪ್ರಮೋದೂತ ಸಂ॥ (AD 8-3-1570)ರಲ್ಲಿ ಸದಾಶಿವ ರಾಯರ ಕಾಲದಲ್ಲಿ ಶ್ರೀನಾರಾಯಣಸ್ವಾಮಿಗೆ ಪೆರುಗೊಂಡ, ಚಿತ್ರಕೊಂಡ ಮಹಾ ನಾಯಕರ ಮಕ್ಕಳು ರಾಮಾನಾಯಕರು ಶ್ರೀಚೆಲ್ವಪಿಳ್ಳೆಗೆ ಮಾಡಿದ್ದ ಧರ್ಮವನ್ನು ಸ್ಥಿರಪಡಿಸಿ ಚೆಲ್ವಪಿಳ್ಳೆರಾಯರ ಆರೋಗಣೆ, ರಾಮಾನುಜಕೂಟದಲ್ಲಿ ಶ್ರೀಯತಿ ರಾಜಮಠದಲ್ಲಿ ಅನ್ನದಾನ ಎಂಬುದಾಗಿ ಕಟ್ಟುಮಾಡಿ ನಡೆಸಿದ ಧರ್ಮ.

ಶಾಂ. ಪ್ರ. ೧೩೩

ಶಕ......(   )ರಲ್ಲಿ ಬಲ್ಲಾಳರಾಯರ ಸಿರಿಯಮ ಮೇಲೆ ದೇವರ ದಣ್ಣ ನಾಯಕರು ನಂದಾದೀಪಕ್ಕಾಗಿ ಹೊಸಹಳ್ಳಿಯ ಸುಂಕ, ಪರ್ಣಕರ, ಸೊಳ್ಳ ಇತ್ಯಾದಿ ವರಮಾನಗಳಿಂದ ದೇವರ ನಂದಾದೀಪಕ್ಕೆ ಧರ್ಮ. ಶಾಂ. ಪ್ರ. ೨೦೭

ಶಕ ೧೪೫೬ ವಿಜಯ ಸಂ॥ (5-2-1534)ರಲ್ಲಿ ಚಾರಿಲ ಅಪ್ಪರಾಜ ಮಕ್ಕಳು ಹರಿರಾಜರು ದೇವಸ್ಥಾನಕ್ಕೆ ಸೇರಿದ ಕೆರೆಗಳಾದ ಹೊಸಕೆರೆಯೂ, ದೇವ ಒಡೆಯರ ಕೆರೆಯೂ ಒಡೆದು ಶಿಥಿಲವಾದುದನ್ನು ಒಂದುನೂರು ವರಹಗಳಿಂದ ಹೊಸ ಕೆರೆಯನ್ನೂ ೧೫೦ ವರಹಗಳಿಂದ ದೇವಒಡೆಯರ ಕೆರೆಯನ್ನೂ ಜೀರ್ಣೋದ್ಧಾರ ಮಾಡಿದುದರ ಕಾರಣ ದೇವಸ್ಥಾನದಿಂದ ಪ್ರತಿದಿನ ದೇವರಿಗೆ ನಾಲ್ಕು ಪಡಿಗೆ ಪ್ರಸಾದ ನಿವೇದನವಾಗಿ ಅದರಲ್ಲಿ ದೇವಾಂಶವೇ ಉಳಿದ ಪ್ರಸಾದವನ್ನು ಅವರಿಗೆ ಕೊಡುವಂತೆ ಏರ್ಪಡಿಸಿದ ಧರ್ಮ. ಶಾಂ. ಪ್ರ. ೧೩೮

ಶಕ ೧೫೦೭ ಪಾರ್ಥಿವ ಸಂ॥ (**AD** 15-10-1585) ಅಚ್ಯುತ ಮಹಾರಾಜರ ಕಾಲದಲ್ಲಿ ಶ್ರೀನಾರಾಯಣಸ್ವಾಮಿ ಸನ್ನಿಧಿಗೆ ಉದಯಗಿರಿ ಪರಿಸರದ ಅಪ್ಪರಾಜಗಳ ಮಕ್ಕಳು ತಿರುಮಲರಾಜಗಳು ೧೩೦ ವರಹ, ವರದನಾಯಕನಹಳ್ಳಿ, ಸೆಟ್ಟಿಪುರ ಮಾಲನಹಳ್ಳಿ, ಇವಕ್ಕೆ ಸೇರಿದ ಕಾಲುವೆಗಳು, ನಿಲುಮಂಗಲ, ಹೊಳಲಹಳ್ಳಿ, ಕೆರಸಾರಕನಹಳ್ಳಿ. ಈ ಐದು ಗ್ರಾಮಗಳನ್ನು ಚಲ್ಲಪಿಳ್ಳೆರಾಯರಿಗೆ, ನಿತ್ಯಸಂಧಿ, ತೆಪ್ಪ ತಿರುನಾಳು ಜರಗ್ಗೆ, ಸಂದಾವನ ಮೊದಲಾದ ಕೈಂಕರ್ಯಕ್ಕಾಗಿ ಧಾರಾಪೂರ್ವಕ ಧರ್ಮ.

| | | |
|---|---|---|
| ನಿತ್ಯಸಂಧಿ ಅಮೃತಪಡಿ | ೭೬ ವರಹಗಳು | |
| ತೆಪ್ಪತಿರುನಾಳು ಜರಗ್ಗೆ | ೪೮ | |
| ಸಂದಾವನ ಸಂಬಳ | ೬ | |
| | ೧೩೦ ವರಹಗಳು | ಪಾಂ.ಪ್ರ. ೧೨೫ |

ಶಕ...... (          ) ವಿರೂಪಾಕ್ಷ ಚತುರ್ವೇದಿ ಭಟ್ಟರಿತ್ಯಾದಿಗಳು (ನಾಗಮಂಗಲ) ಗಂಗಪ್ಪನು ಮತ್ತು ಬೋಲುಕೋಟೆ ಅಗ್ರಹಾರಗಳೂ ಸೇರಿ ಶ್ರೀನಾರಾಯಣಸ್ವಾಮಿಗೆ ಧರ್ಮ.. ಪಾಂ. ಪ್ರ. ೧೫೬

ಶಕ ೧೪೭೨ ಸಾಧಾರಣ ಸಂ॥(1550-51) ಶ್ರೀ ನಾರಾಯಣಸ್ವಾಮಿ ಚೆಲುವರಾಯಸ್ವಾಮಿ ಸನ್ನಿಧಿಗೆ ಮಹಾಮಂಡಲೇಶ್ವರ ಅಚ್ಯುತರಾಯ ಮಹಾನಾಯಕ ಜನಾರ್ದನ ಭೋಗದ ಮಹಾಅರಸುಗಳು ತಮಗೆ ಸದಾಶಿವರಾಯರು ಕೊಟ್ಟ ಸಿಂಧಘಟ್ಟದ ಗ್ರಾಮಗಳಲ್ಲಿನ ೪೬ ವರಹಗಳು ಉತ್ಪತ್ತಿಯಾಗುವ ಭೂಮಿಯನ್ನು ಸರ್ವಮಾನ್ಯವಾಗಿ ಧರ್ಮ ನಡೆಸಿದರು. ಪಾಂ. ಪ್ರ. ೧೫೩

ಶಕ ೧೪೭೩ ವಿರೋಧಿಕೃತು ಸಂ॥ (1551) ಸದಾಶಿವ ಮಹಾರಾಯರ ಕಾಲದಲ್ಲಿ ಶ್ರೀ ನಾರಾಯಣದೇವರಿಗೆ ಹಿರಿಯಣ್ಣಯ್ಯನವರ ಮಕ್ಕಳು ಮಹಾಪ್ರಧಾನರು ಅಪ್ಪಯ್ಯಂಗಾರಯ್ಯನವರೂ, ಮತ್ತು ಮಹಾಮಂಡಲೇಶ್ವರ ನಂದ್ಯಾಳದ ತಿಮ್ಮಯದೇವ ಮಹಾಅರಸುಗಳೂ ಸೇರಿ ೩೦ ವರಹ ಉತ್ಪತ್ತಿಯಾಗುವ ನಾಗಲಾಪುರಹಳ್ಳಿ ಗ್ರಾಮ ಧರ್ಮ.

ಚಲ್ಲಪಿಳ್ಳೆಸ್ವಾಮಿಯವರಿಗೆ ಆರೋಗಣೆ
ಪಂಚಭಾಗವತ ಸ್ಥಳದಲ್ಲಿ ತದೀಯಾರಾಧನೆ. ತಿರುನಂದಾವನ
ಚಿಕ್ಕತಿರುನಾಳು ಹಿರಿ ತಿರುನಾಳು ಪಂಕಳ ಸಂಭಾವನೆ . ೧೫

| | | | | |
|---|---|---|---|---|
| ವರಾಹಸ್ವಾಮಿ ಸನ್ನಿಧಿಯಲ್ಲಿ ನಿತ್ಯ ಕಟ್ಟಳೆ ದವ್ಯನ್ನ ನಿವೇದನ | | | | ೨೪ |
| ಸಂಬಳ. | — | — | — | ೬ |
| ಕ್ಷಾಮಡಾಮರಕ್ಕೆ. | | — | — | ೫ |

ಮೊತ್ತ ವರಹಗಳು— ೩೦

ಶಾಂ. ಪ್ರ. ೧೩೮

ಶಕ ೧೪೮೬ ರಕ್ತಾಕ್ಷಿ ಸಂ॥ (AD 28-11-1564)ರಲ್ಲಿ ಸದಾಶಿವ ಮಹಾರಾಯರ ಕಾಲದಲ್ಲಿ ಶ್ರೀನಾರಾಯಣ ದೇವರ ಸನ್ನಿಧಿಗೆ ಮಹಾಮಂಡಲೇಶ್ವರರಾದ ಹಿರೇಕೊಂಡ ಮಹಾಅರಸುಗಳು, ಕೊಂಡಮರಾಜು ಮಹಾಅರಸುಗಳು, ಕೊಂಡ ರಾಜೇಂದ್ರ ಮಹಾಅರಸುಗಳು ಸೇರಿ ಹುನಾರು 2000 ವರಹ ಉತ್ಪತ್ತಿ ಬರಾಗುವ ಚನ್ನಪಟ್ಟಣಕ್ಕೆ ಸೇರಿದ, ಮಂಗನೂರು 2 ಕುಡಿಪ್ಪರ 3 ಪೀಲು ಸಮುದ್ರ, 4 ಚಿರಣಪ್ಪರ, 5 ಹೊಸ್ಸಬಿಗೆ. 6 ಅಬ್ಬನಪಳ್ಳಿ. 7 ಅರೇಪಳ್ಳಿ. 8 ಸಣ್ಣಬಿನಪಳ್ಳಿ, ಇವೇ ಮೊದಲಾದ ಗ್ರಾಮಗಳಿಗೆ ಸೇರಿದ ತೋಟ, ತುಡಿಕೆ, ಗದ್ದೆ, ಬೆದ್ದಲು, ಕೆಳದಿಸಿ. ಒಕ್ಕಲು ಮಕ್ಕಳು, ಸುಂಕ, ಸುವರ್ಣಾದಾಯ, ಇವೇ ಮೊದಲಾದ ಸಕಲ ಸ್ವಾಮ್ಯಗಳೊಂದಿಗೆ ಭೂದಾನ ಧರ್ಮ ಮಾಡಿಸಿದ್ದರು.

## ನಂದಾದೀಪ – ನಂದನವನ – ಪುಷ್ಪಕೈಂಕರ್ಯ

ಶಕ ೧೦೭೮ ಯುವ ಸಂ॥ ಚೈತ್ರಮಾಸ = ಮಕರಮಾಸ ಶುಕ್ಲಪಕ್ಷ ಸೋಮವಾರ (1156) ಹೊಯ್ಸಳನಾರಸಿಂಹನು ತಿರುನಾರಾಯಣ ದೇವರಿಗೆ **ಪುಷ್ಪಕೈಂಕರ್ಯಕ್ಕಾಗಿ** ತಿರುನಂದನವನ ಕೈಂಕರ್ಯಕ್ಕೆ ಧರ್ಮ. ಒಂದು ವೇಳೆ ಈ ನಾರಸಿಂಹನು ಮೂರನೆಯ ನಾರಸಿಂಹನಾಗಿದ್ದ ಪಕ್ಷದಲ್ಲಿ ಶಕ ೧೧೯೮ ಯುವ ಸಂ॥ (1276) ಆಗುವುದು. ಶಾಂ. ಪ್ರ. ೧೨೧

**ತಿರುಮಂಗೈನಂಬಿ ತಿರುನಂದನವನ ಎಂಬ ಒಂದು ನಂದನವನವಿತ್ತು ಕಾಲ?**

ಶಾಂ.ಪ್ರ. ೧೪೮

ಶಕ ೧೪೬೭ ಕ್ರೋಧಿ ಸಂ॥ ಕಾರ್ತಿಕ ಶುದ್ಧ ೧೩ (27-10-1544) ಶಕ ೧೪೬೫ ವಿಶ್ವಾವಸು ಸಂ॥ ಕಾರ್ತಿಕ ಶುದ್ಧ ೧೦ (15-10-1543) ರಲ್ಲಿ ಸಂಬಂಧಿಸಿದ ಮಹಾಮಂಡಲೇಶ್ವರ ಮಹಾ ಅರಸುಗಳು ದೇವರ ನಂದಾದೀಪಕ್ಕೆ ಧರ್ಮ. ಶಾ. ಪ್ರ. ೧೩೯–೧೪೦

ಶಕ ೧೪೬೩ ವಿರೋಧಿ ಸಂ॥ ಆಶ್ವಯುಜ ಬ ೧೦ (24-10-1541)ರಲ್ಲಿ ಸದಾಶಿವ ಮಹಾರಾಯರ ಕಾಲದಲ್ಲಿ ಶ್ರೀತಿರುನಾರಾಯಣ ದೇವರ ಪುಷ್ಪಕೈಂಕರ್ಯ

ಕ್ಕಾಗಿ ಕಲ್ಯಾಣಿ ಪಕ್ಕದಲ್ಲಿ ಮಹಾಭಾಗವತ ಕ್ಷೇತ್ರಕ್ಕೆ ಸೇರಿದ ಜಾಗ್ಯ, ಮಹಾಮಂಡಲೇಶ್ವರ ನರಸ್ಯಾಲದ ತಿಮ್ಮಯದೇವ ಶ್ರೀಕೃಷ್ಣಕೈಂಕರ್ಯಕ್ಕಾಗಿ ನಂದಾದೀಪವನ್ನು ಬಿಡಿಸಿದ ಧರ್ಮ.

ಶಕ ೧೪೦೮ ವಿಷು ಸಂ|| ವೈಶಾಖ ಬ ೫ ಯಲ್ಲಿ (158. ಶ್ವರ ರಾಮರಾಜಯ್ಯ ದೇವರು ಮಾಲಿಮಯ್ಯಗಾರು ತಿರುನಂದಾದೀಪದ ಧರ್ಮ.

ಶಕ ೧೫೩೧ ವಿರೋಧಿಕೃತು ಸಂ|| ಮಾಘ ಬ ಸ ದೇವರಾಜ ಒಡೆಯರು ಅರಸರು ನಂದಾದೀಪ ಮತ್ತು ಕೈಂಕರ್ಯಕ್ಕೆ ಧರ್ಮ.

ಶಕ ೧೩೩೫ ಅಕ್ಷಯ ಸಂವತ್ಸರ ಅಯ್ಯನವರು, ತಿರು ನಿತ್ಯ ತಿರುಮಾಳಿ ಶ್ರೀಕೃಷ್ಣಕೈಂಕರ್ಯಕ್ಕಾಗಿ ಗದ್ದೆ ಭೂಮಿ . ಧ ತಿರುಕ್ಕೋಟ್ಟಿ ಊರಿನ ಹುಣಿಸೆ ನಡೆಸುವುದು.

ಶಕ ೧೩೬೨ ದುರ್ಮತಿ ಸಂ|| (1441)ರಲ್ಲಿ ತಿರು ನಂದಾದೀಪಕ್ಕಾಗಿ ಅರಮನೆಯ ತಿಮ್ಮರಸರು, ತಿಪ್ಪರಸರು ನೆ

### ಆಳ್ವಾರುಗಳ ತಿರುನಕ್ಷತ್ರಗಳಿಗೆ ಧರ್ಮ

**ನಾಮಧಾರಿಗಳು ಶ್ರೀವೈಷ್ಣವರು** ಶಕ ೧೧೮೧ ಅಥವಾ ೧೨೪೧ (1259 1319)ರಲ್ಲಿ ಮಹಾಪ್ರಧಾನರಾದುದರಿಂದ 'ಆಳ್ವಾ' ತಿರುಮಂಜನದವರಿಗೆ (ನಾಮಧಾರಿಗಳು ಪುರುಷರು) ಕೆಲವು ಭೂ

### ಶ್ರೀರಂಗನಾಥಸ್ವಾಮಿ ಉತ್ಸವಗಳಿಗೆ ಧರ್ಮ

**ಶಕ 1601** ಕಾಲಯುಕ್ತಿ ಸಂ|| ಆಷಾಢ ಶುದ್ಧ ೧೦ (A. D. 20-6-1678) ಚಿಕ್ಕದೇವ ಮಹಾರಾಜರು ಪಟ್ಟಣದ ಪಾಲು ತ್ರಿರುವಳ್ಳಿ ಕೌಶಿಕ ಗೋತ್ರದ ಶ್ರೀರಂಗಪಟ್ಟಣದ **ಅಳಸಿಂಗರಯ್ಯಂಗಾರ ಆರ್ಯರು** ದೊಡ್ಡ ದೇವರಾಜ ಒಡೆಯರು ಮಹಾರಾಜರಿಗೆ ಭಾರತಶಾಸ್ತ್ರ ಪಠನ, ಹೇಳಿ ಧಾರ್ಮಿಕ ಪ್ರತಿಷ್ಠೆಯ ಶ್ರೀರಂಗಪಟ್ಟಣದಲ್ಲಿ ಮಹಾರಾಜರು ಅವರಿಗೆ ಸಮರ್ಪಿಸಿದ ಸರಕಾರದ ಹೋಬಳಿ ಮಂಡಗೆರೆಗೆ ಸೇರಿದ ನಾಗನಹಳ್ಳಿ, ಬೇಲೂರು ಗ್ರಾಮಗಳಲ್ಲಿ ನಾಗನಹಳ್ಳಿಯನ್ನು ತಾವೇ ಇಟ್ಟುಕೊಂಡು ಬೇಲೂರು ಗ್ರಾಮವನ್ನು

ತಾವು ಏರ್ಪಡಿಸಿ ನಡೆಸಿಕೊಂಡು ಬರುತ್ತಿದ್ದ ಶ್ರೀರಾಮಾನುಜಾಚಾರ್ಯರ ತಿರುನಕ್ಷತ್ರ ಹತ್ತು ದಿವಸದ ವಾಹನ, ರಥೋತ್ಸವ, ಮಂಟಪಸೇವೆ ಚಪ್ಪರಾಣಿಕೆ ಮುಂತಾದ ಸೇವೆಗಳಿಗಾಗಿ ತಿರುನಾರಾಯಣದೇವರ ಶ್ರೀಭಂಡಾರಕ್ಕೆ ಸಮರ್ಪಿಸಿ ಧರ್ಮಶಾಸನ ಬರೆದರು. ಈಗಲೂ ಈವಂಶೀಯರಿಗೆ ಪಡಾಳಿ, ಶಠಕೋಪ, ಅಗ್ರತೀರ್ಥ ಮರ್ಯಾದೆ ನಡೆಯುತ್ತಿದೆ. ಕ. ದೇ. 16 ಪಾಂ. ಪು. 149

ಶ್ರೀರಾಮಾನುಜಾಚಾರ್ಯರ ತಿರುನಕ್ಷತ್ರ ಉತ್ಸವವನ್ನು ಇವರೇ ಏರ್ಪಡಿಸಿದರೆಂದು ತಿಳಿಯಬಹುದು ಈ ಕಾಲಕ್ಕೆ ಮುಂಚೆಯೇ ಶ್ರೀರಾಮಾನುಜಾಚಾರ್ಯರ ವರ್ಷ ತಿರುನಕ್ಷತ್ರ ಮತ್ತು ರಥೋತ್ಸವ ಮಾತ್ರ ನಡೆಯುತ್ತಿದ್ದಿತು. ಅದನ್ನು ಹತ್ತು ದಿನಗಳ ಉತ್ಸವವನ್ನಾಗಿ ಮಾಡಿ ಹೆಚ್ಚು ಸಂಭ್ರಮ ಮಾಡಿದರು ಎಂದು ತಿಳಿಯಬೇಕು. ಪಾಂ. ಪು. ೧೩೦

ಶಕೆ ವಿಷು ಸಂ॥ ಅಧಿಕ ಶ್ರಾವಣ ಶುದ್ಧ ೫ (6-7-1581) ಮಹಾಮಂಡಲೇಶ್ವರ ರಾಮರಾಜಯ್ಯನವರ ಕಾರ್ಯಕರ್ತ ತಿರುಮಲೆಪ್ಪನಾಯಕ ಅಯ್ಯನವರು ಶ್ರೀರಾಮಾನುಜಾಚಾರ್ಯರಿಗೆ ಟಿಲುಕುಲಿ (ಚಿಕ್ಕಕುರಳಿ) ಗ್ರಾಮ ಸರ್ವಮಾನ್ಯವಾಗಿ ಭೂಮಿ ಧರ್ಮ. ಪಾಂ. ಪು. ೫೦

ಶ್ರೀರಾಮಾನುಜಾಚಾರ್ಯರಿಗೆ ಸದಾ ಧರಿಸಲು ಬಂಗಾರದ ತ್ರಿದಂಡವನ್ನು ಶ್ರೀರಂಗಪಟ್ಟಣದ ಶ್ರೀಯೋಗಿ ಪಾರ್ಥಸಾರಥಿ ಅಯ್ಯಂಗಾರ್ಯರು ಸಮರ್ಪಿಸಿದ ಧರ್ಮ.

**ನಮ್ಮಾಳ್ವಾರ್ ಸನ್ನಿಧಿಗೆ ಧರ್ಮ** ಶಕ ೧೨೯೧ ಸೌಮ್ಯ ಸಂ॥ ಆಶ್ವಯುಜ ಶುದ್ಧ ೧೦ ಸೋಮವಾರ (12-9-1369) ಬುಕ್ಕಣ್ಣರಾಯರ ಕಾಲದಲ್ಲಿ ತಿರುನಾರಾಯಣಪುರದ ಶ್ರೀವೈಷ್ಣವರು ನಮ್ಮಾಳ್ವಾರವರಿಗೆ ನಿತ್ಯ ಆರಾಧನೆ, ಪಡೋಗಣೆ, ಅಮೃತಪಡಿ ಇವುಗಳು ನಡೆಯಲು ಕೊಂಚಾರಕಟ್ಟೆಗೆ ಸೇರಿದ ಮಾಯಿಲಗಾಳಿ ಗ್ರಾಮದ ಎರಡೆಕರೆ ಭೂಮಿ ಸಮರ್ಪಿಸಿದ ಧರ್ಮ.

ಪಾಂ. ಪು.

ಶಕೆ ೧೪೪೮ ವ್ಯಯ ಸಂ॥ (1526)ರಲ್ಲಿ ಆಟಿರಾಜ ಅಪ್ಪಳರಾಜ ಅವರ ಮಕ್ಕಳು ವೆಂಕಟಾದ್ರಿ, ಎಲ್ಲಪ್ಪನವರು ನಮ್ಮಾಳ್ವಾರ್ ನಿತ್ಯ ನೈಮಿತ್ತಿಕ ಸೇವೆಯು ನಡೆಯಲು ಅಪ್ಪಳರಾಜಪುರ ಗ್ರಾಮವನ್ನು ಸಮರ್ಪಿಸಿದ ಧರ್ಮ.

ಪಾಂ. ಪು. ೧೩೩

**ರಾಜಕಟ್ಟಳೆ – ಅಕ್ಕಿ ಪಡಿತರ ಧರ್ಮಸಾನ್ನ್ಯ** ---- ಮುಮ್ಮಡಿ ಕೃಷ್ಣರಾಜ ಒಡೆಯರು ರಾಜಕಟ್ಟಳೆ ಎಂಬುದಾಗಿ ಮೇಲುಕೋಟೆಯಲ್ಲಿ ವಿಶ್ರಾಂತ ವಯೋವೃದ್ಧ ತ್ರಿಮತಸ್ಥ ಬ್ರಾಹ್ಮಣರು ಪ್ರತಿಯೊಬ್ಬ ಕುಟುಂಬಕ್ಕೆ ಸಾಕಾಗುವಂತೆ ಅಕ್ಕಿ ಪಡಿತರ ಬಟ್ಟೆ, ಪಂಚೆ, ಸೀರೆ, ವಸ್ತ್ರ ಇವುಗಳನ್ನು ದೇವಸ್ಥಾನದಿಂದ ಕೊಡುವಂತೆ ಏರ್ಪಡಿಸಿದರು.

**ಕಲ್ಲುತೊಟ್ಟಿ**– ಶ್ರೀನಾರಾಯಣಸ್ವಾಮಿ ದೇವಸ್ಥಾನದ ಅಡಿಗೆ ಮನೆಯಲ್ಲಿ ಇರುವ ದೊಡ್ಡ ಕಲ್ಲುತೊಟ್ಟಿಯು **ಪಂಡಿತದೇವ** ಎನ್ನುವವರ ಧರ್ಮವಾಗಿರುವುದು.

ಪಾಂ. ಪು. ೧೬೭

**ವ್ಯಕ್ತಿಗತ ಧರ್ಮಗಳು**-- ಶಕ ೧೬೪೭ ವಿಶ್ವಾವಸು ಸಂ॥ (AD 10-10-1725) ರಲ್ಲಿ **ಕೃಷ್ಣರಾಜಒಡೆಯರು** ಅಳಗಿಂಗಪೆರುಮಾಳ್ ಅವರ ಪುತ್ರರಾದ **ತಿಂಗಪೆರುಮಾಳ್ ಅಯ್ಯಂಗೆ** ನಾಗಮಂಗಲಕ್ಕೆ ಸೇರಿದ ಹುಲ್ಲೇನಹಳ್ಳಿ, ಕರಡಿಹಳ್ಳಿ, ರಘುನಾಥಪುರ, ಹರಳೀಕೆರೆ, ಮಾರಳಿಕೆರೆ, ಈ ಐದೂ ಗ್ರಾಮಗಳು ಸರ್ವಮಾನ್ಯದೊಂದಿಗೆ ಸಮರ್ಪಿಸಿದರು. ಪಾಂ. ಪು. ೨೧೬

### ಅಗ್ರಹಾರ – ಮನೆಗಳು – ಭೂದಾನ – ವೃತ್ತಿ ಧರ್ಮಗಳು

**ಸೀತಾಂಬಿಕಾ ಧರ್ಮ ಅಗ್ರಹಾರ**- ಶಕ ೧೩೮೬ ವಿಕ್ರಮ ಸಂ॥ (AD 1460) ರಲ್ಲಿ ನಾಗಮಂಗಲದ ಅಧಿಕಾರಿ ತಿಮ್ಮಣ್ಣ ದಂಡನಾಯಕರು ತಮ್ಮ ತಾಯಿ ಸೀತಾಂಬಿಕಾ ಅವರ ಹೆಸರಿನಲ್ಲಿ ಬ್ರಾಹ್ಮಣರಿಗೆ ೨೦ ವೃತ್ತಿ ಭೂದಾನ ಧರ್ಮ.

ಪಾಂ. ಪು. ೧೫೩

**ಕುರುಕುಳಿಮಂಗಾಡಿ ನಮ್ಮಾಳ್ವಾರ್ ಅಗ್ರಹಾರ**– ಶಕ ೧೩೯೧ ವಿರೋಧಿ ಸಂ॥ ಆಶ್ವಯುಜ ಬಹುಳ.........(AD 1469) ವಿರೂಪಾಕ್ಷ ಮಹಾರಾಜರ ಕಾಲದಲ್ಲಿ ಪರಮ ಭಾಗವತ ನಾಚ್ಚಾರಮ್ಮನು ಪ್ರೌಢದೇವರಾಯರಾದ ಮಲ್ಲಿಕಾರ್ಜುನದೇವರಾಯರಿಂದ ಶ್ರೀಮನ್ನಾಗಮಂಗಲ ನಾಯಕ ಸಿಂಹಮುಕಳಿಯನಾಡನ್ನು ಧರ್ಮವಾಗಿ ಪಡೆದು – ಶ್ರೀನಾರಾಯಣಸ್ವಾಮಿಗೆ ಸಮರ್ಪಿಸಿದ ನಂತರ ಮಹಾ ಪ್ರಧಾನ ತಿಮ್ಮಣ್ಣ ದಂಡನಾಯಕರು, ಯತಿರಾಜ ಮಠಾಧಿಪತಿಗಳು, ಐವತ್ತಿಬ್ಬರು– ಶ್ರೀವೈಷ್ಣವರುಗಳು ತಿಳಿಸಿದಂತೆ ಕಬ್ಬಿನಕೊಳಮನಾಡಿಗೆ ಸೇರಿದ ಕುರುಕುಳಿಮಂಗಾಡಿಯಲ್ಲಿ ೧೬ ಗೃಹ ನಿವೇಶನ ಮತ್ತು ನೇರಳಹಳ್ಳಿ ಗ್ರಾಮದೊಳಗೆ ತೆಂಕಣ ಕೋಟೆಯ ಮೇಡಿನಕರೆಯ ಸಮೀಪದಲ್ಲಿ ೧೬ ಗೃಹ ನಿವೇಶನವನ್ನೂ, ಮಾಡಿ ಒಟ್ಟು ೩೭ ಗೃಹ ನಿವೇಶನಗಳಲ್ಲಿ ನೇರಳಹಳ್ಳಿಯಲ್ಲಿ ಐವತ್ತಿಬ್ಬರಿಗೆ ಒಂದು ಗೃಹ

ನಿವೇದನ. ಇಂತೀ ಎರಡು ಗ್ರಾಮ ನಿವೇದನಗಳನ್ನೂ ಅಲ್ಲಿದ್ದ ಶ್ರೀಕೃಷ್ಣನಿಗೆ ಸಮರ್ಪಿಸಿದ ಧರ್ಮ. ಅಲ್ಲದೆ ಕುಳಿಯೂರರಿಂದ ಕಾಲುವೆ ಪರಾಂಕುಶ ಕಾಲುವ್ಯೆ ಕೆರೆಯ ಕೆಳಗಣ ಗದ್ದೆ ಬೆದ್ದಲು ಭೂಮಿ ಸಹ ಸಮರ್ಪಿಸಿದ ಧರ್ಮ.

ಶಾಂ. ಪ್ರ ೧೬೩

ಶಕ ೧೫೩೬ ಆನಂದ ಸಂ॥ (AD 1614) ರಲ್ಲಿ ಶ್ರೀರಂಗಪಟ್ಟಣದ ರಾಜ ಒಡೆಯರು ತಮಗೆ ವಿಜಯನಗರದ ವೇಂಕಟಪತಿ ರಾಜರು ಉಂಬಳಿಯಾಗಿ ಕೊಟ್ಟ ಮುತ್ತಿಗೆ ಗ್ರಾಮಕ್ಕೆ ನರಸಿಂಹಪುರವೆಂದು ನಾಮಕರಣ ಮಾಡಿ ಅದಕ್ಕೆ ಸೇರಿದ ೯ ಗ್ರಾಮಗಳು ಮತ್ತು ಹೊರಗಿನ ೯ ಗ್ರಾಮಗಳಿಗೆ ಒಡೆಯೂರು ಗ್ರಾಮ ಸೇರಿಸಿ ಹತ್ತು ಗ್ರಾಮಗಳನ್ನು ೩೦ ವೃತ್ತಿಗಳನ್ನಾಗಿ ಮಾಡಿ ಮೇಲುಕೋಟೆ ಯಲ್ಲಿ ವಾಸವಾಗಿರುವ ೨೫ ಶ್ರೋತ್ರಿಯ ಬ್ರಾಹ್ಮಣರಿಗೆ ಧರ್ಮವಾಗಿ ಕೊಟ್ಟ ಗ್ರಾಮ. ಭೂಮಿ ವಿವರಗಳು–

| | ವರಹಗಳು |
|---|---|
| ಒಡೆಯೂರು ಮುತ್ತಿಗೆ ಗ್ರಾಮ (ನರಸಿಂಹಪುರ) | ೧೦೦೦–೦ |
| ಚೆನ್ನಟ್ಟಿ ಗ್ರಾಮ | ೭೦೮–೦ |
| ಕಂಬದಹಳ್ಳಿ ಗ್ರಾಮ | ೩೦೦–೦ |
| ಹಾಲಕೆರೆಹಳ್ಳಿ ಗ್ರಾಮ | ೩೦೦–೦ |
| ಪಟ್ಟಣ ಗ್ರಾಮ | ೨೦೦–೦ |
| ಹುಣಸನಹಳ್ಳಿ ಗ್ರಾಮ | ೪೦೦–೦। |
| ಸಂಚೇನಹಳ್ಳಿ ಗ್ರಾಮ | ೨೦೦–೦ |
| ನಾಯಕನಹಳ್ಳಿ ಗ್ರಾಮ | ೨೦೦–೦ |
| ಹುಲ್ಲಹಳ್ಳಿ ಗ್ರಾಮ | ೨೦೦–೦ |
| ಕೊಡಗನಹಳ್ಳಿ ಗ್ರಾಮ | ೨೦೦–೦ |

ಹತ್ತು ಗ್ರಾಮಗಳ ವರಮಾನ ಹೊನ್ನುವರಹ ೩೭೦೮–೦। =

ಶ್ರೀ. ಪ. ೧೫೭ ತಾಮ್ರಶಾಸನ.

**ಕಂಠೀರವ ಅಗ್ರಹಾರ– (ಕಂಠೀರವ ನೃಪಾಂಬೋಧಿ ಅಗ್ರಹಾರ)**

ಶಕ ೧೫೬೭ ಪಾರ್ಥಿವ ಸಂ॥ (AD 1645) ರಲ್ಲಿ ಕಂಠೀರವ ನರಸ ರಾಜರು ಸೋಸಲೆಪುರ ಗ್ರಾಮಕ್ಕೆ ಸೇರಿದಂತೆ 1. ತಟ್ಟಕೆರೆ. 2. ಹಂಡೇಹಳ್ಳಿ.

3. ಕಾಳೇಯನಹಳ್ಳಿ, 4. ಬೀರಮಾನಹಳ್ಳಿ, 5. ಕಲ್ಲೇಗೌಡನ, 6. ಮಲ್ಲನಾಯಕನ ಹಳ್ಳಿ. 7. ಮಾರನಾಯಕನಹಳ್ಳಿ ಎಂಬ ಈ ಏಳು ಉಪಗ್ರಾಮಗಳನ್ನೂ ಸೇರಿಸಿ, ಎಂಟು ಗ್ರಾಮಗಳನ್ನು ಧರ್ಮಪಾಲಿತ ತಮ್ಮ **ಹೆಸರಿನಲ್ಲಿ ಕಲ್ಯಾಣಿ ತೀರ್ಥದ ಬಳಿ ಕಂಠೀರವ ಅಗ್ರಹಾರವೆಂಬುದಾಗಿ** ಅಗ್ರಹಾರವನ್ನು ನಿರ್ಮಿಸಿ, ಮನೆಗಳನ್ನು ಕಟ್ಟಿಸಿ ಅದರಲ್ಲಿ ಒಂದು ಮನೆಕ್ಕೆ ಸೇರುವ ಸೋಪಸ್ಕರಗಳನ್ನಿತ್ತು ಶ್ರೀವೈಷ್ಣವರಿಗೆ ಧರ್ಮ. ಗ್ರಾಮ ಭೂಮಿಗಳನ್ನು ೪೫ ವೃತ್ತಿಗಳನ್ನಾಗಿ ಮಾಡಿ ೨ ವೃತ್ತಿ ಶ್ರೀಲಕ್ಷ್ಮೀನರಸಿಂಹಸ್ವಾಮಿಗೆ ಉಳಿದ ೪೩ ವೃತ್ತಿಗಳನ್ನು ವೇದಶಾಸ್ತ್ರ ಪಂಡಿತರುಗಳಿಗೆ ಧರ್ಮ. ಇಲ್ಲಿ ಲಕ್ಷ್ಮೀನರಸಿಂಹ ದೇವರಿಗೆ ೨ ವೃತ್ತಿ ಹೇಳಿರುವುದು. ಇದು ಶ್ರೀರಂಗಪಟ್ಟಣದ ಲಕ್ಷ್ಮೀನರಸಿಂಹ ದೇವಸ್ಥಾನ ಎಂದು ತಿಳಿಯಬೇಕು.) ವೇದವನ್ನು ಹೇಳಿಕೊಡುವ ಪಂಡಿತರಿಗೆ ೨ ವೃತ್ತಿ ಇತರರಿಗೆಲ್ಲಾ ಒಂದೊಂದು ವೃತ್ತಿಯಂತೆ ಧರ್ಮ.
ಶಾಸ. ಪು. ೨೦೪

## ತೀರ್ಥ - ಪುಷ್ಕರಿಣಿಗಳು - ಕಲ್ಯಾಣಿ, ಅಷ್ಟತೀರ್ಥ

ಪ್ರತಿಯೊಂದು ಗ್ರಾಮದಲ್ಲಿಯೂ ಒಂದು ದೇವಾಲಯ, ಅದಕ್ಕೆ ಸೇರಿದಂತೆ ಒಂದು ಬಾವಿ, ಕೊಳ ಅಥವಾ ಕೆರೆ, ಅಗತ್ಯ ನಿರ್ಮಿಸಿರುವರು. ಆ ರೀತಿ ಜಲಾಶಯವನ್ನು ನಿರ್ಮಿಸುವಾಗ ಶಿಲ್ಪ ಲಕ್ಷಣ, ನಿಯಮಗಳನ್ನನುಸರಿಸಿರುವರು. ಆರೀತಿ ನಿರ್ಮಿಸಿರುವ ಜಲಾಶಯಗಳು ಗ್ರಾಮದ ಹೊರಗಾಗಲಿ, ಮಧ್ಯದಲ್ಲಾಗಲಿ ಅನುಕೂಲವಾದ ಸ್ಥಳದಲ್ಲಿ ನಿರ್ಮಿಸುವರು. ಆ ರೀತಿ ಜಲಾಶಯವನ್ನು ನಿರ್ಮಿಸುವ ಪ್ರಕ್ರಿಯೆಯಲ್ಲಿ **ವಾಪೀ, ಕೂಪ, ತಟಾಕ, ಕುಂಡ** ಎಂಬುದಾಗಿ ನಾಲ್ಕು ವಿಧಗಳುಂಟು. ಅವುಗಳು ಆಕಾರಭೇದ ಮಾನಭೇದದಿಂದ ವಾಪೀ ವಿಧಾನದಲ್ಲಿ ನಾಲ್ಕು ವಿಧವೂ, ಕೂಪ ಹತ್ತು ವಿಧವೂ, ತಟಾಕ ಆರು ವಿಧವೂ, ಕುಂಡ ನಾಲ್ಕು ವಿಧವೂ ಆಗಿರುವುದು.

ನಮ್ಮ ಊರಿನಲ್ಲಿ ವಿವಿಧ ಆಕಾರದ ಜಲಾಶಯ ಪುಷ್ಕರಿಣಿಗಳನ್ನು ನಿರ್ಮಿಸಿರುವರು. ೧ ವರ್ತುಳಾಕಾರ, ೨ ಚತುರಶ್ರ, ಒಂದು, ಎರಡು, ಮೂರು, ನಾಲ್ಕು ಪಕ್ಕಗಳಲ್ಲಿ ಇಳಿಯುವಂತೆ ಸೋಪಾನಗಳನ್ನು ನಿರ್ಮಿಸಿರುವ ಕೊಳಗಳಿವೆ. ಇವುಗಳಿಗೆ **ನಂದಾ, ಭದ್ರ, ಜಯಾ,** ವಿಜಯಾ ಎಂಬ ಪಾರಿಭಾಷಿಕ ಹೆಸರುಗಳೂ ಉಂಟು.

**ಕಲ್ಯಾಣಿ**— ದೇವರಿಗೆ ಪೂಜಾಂಗವಾಗಿ ತೀರ್ಥಸ್ನಾನ ಅಥವಾ ಅಭಿಷೇಕ ಸ್ನಾನ, ಪಾನ, ಸಂಧ್ಯೆಗಳಿಗೆ ಅನುಕೂಲವಾಗುವಂತೆ ರಾಮಾನುಜರು ಕಲ್ಯಾಣಿ ಪುಷ್ಕರಿಣಿಯನ್ನು ಕಟ್ಟಿಸಲು (1099–1103) ನಾಲ್ಕು ವರ್ಷಗಳು ಬೇಕಾದವು.

೫೦೦ ವರ್ಷಗಳಾದ ಮೇಲೆ ಕಲ್ಯಾಣ ಪುಷ್ಕರಿಣಿಯು ಶಿಥಿಲವಾದುದು ಕಂಡು ಬಂದುದರಿಂದ ಮೈಸೂರು ರಾಜರಾದ **ಚಾಮರಾಜರು** ತಮ್ಮ ಧರ್ಮಪತ್ನಿ **ಮುದ್ದಾಜಮ್ಮಣ್ಣಿಯವರ** ಹೆಸರಿನಲ್ಲಿ AD 1633 ರಲ್ಲಿ ಕಲ್ಯಾಣ ಪುಷ್ಕರಿಣಿಗೆ ಸೋಪಾನವನ್ನು ಕಟ್ಟಿಸಿ ಸುತ್ತಲೂ ಕೈಸಾಲೆ ಮಂಟಪವನ್ನು ಕಟ್ಟಿಸಿದರು.

**ತೆಪ್ಪಕೊಳ—** ಈ ಕೊಳವು ಕೋಟೆಯ ಹೊರಗೆ ನಮ್ಮಾಳ್ವಾರ್ ಗುಡಿಯ ಪಕ್ಕದಲ್ಲಿರುವುದು. ಇಲ್ಲಿ ಚಿಲ್ಲಪಿಳ್ಳೆಯವರಿಗೆ ತೆಪ್ಪವು ನಡೆಯುತ್ತಿತ್ತು. ಈಗ ಕಲ್ಯಾಣ ಪುಷ್ಕರಿಣಿಯಲ್ಲಿ ನಡೆಯುತ್ತದೆ. ಈ ತೆಪ್ಪಕೊಳವನ್ನು ಉದಯಗಿರಿ ನೀಲಅಪ್ಪರಾಜಮಕ್ಕಳು ತಿರುಮಲೆರಾಜಗಳು ಹೊಸದಾಗಿ ಕಟ್ಟಿಸಿದರು. ಅಲ್ಲದೆ ಚೆಲುವರಾಯಸ್ವಾಮಿಯನ್ನು ವಿಜಯಮಾಡಿಸಿ ತೆಪ್ಪ ನಡೆಸಲು ೪೮ ವರಹ ವರಮಾನವುಳ್ಳ ಗ್ರಾಮ ಭೂಮಿಗಳನ್ನು ಧರ್ಮಮಾಡಿದರು. ಪಾಂ. ಪ್ರ ೧೭೫

**ಅಷ್ಟತೀರ್ಥ—** ಕಾರ್ತಿಕಮಾಸದಲ್ಲಿ ಯದುಗಿರಿ ಬೆಟ್ಟಪ್ರದಕ್ಷಿಣೆ ಎಂಬುದಾಗಿ ಹೆಸರಿಟ್ಟು. ಈ ಕೊಳಗಳಲ್ಲಿ ಸ್ನಾನಮಾಡಿ ಆಯುರಾರೋಗ್ಯ, ಪುತ್ರ ಸಂತಾನ ಹೊಂದಲು ಎಂಟು ಕೊಳಗಳನ್ನು ನಿರ್ಮಿಸಿರುವರು. 1 ವೇದಪುಷ್ಕರಿಣಿ, 2 ಯಾದವತೀರ್ಥ, 3 ದರ್ಭತೀರ್ಥ, 4 ಪರಾಶರತೀರ್ಥ, 5 ಪದ್ಮತೀರ್ಥ, 6 ಮೈತ್ರೇಯತೀರ್ಥ, 7 ನಾರಾಯಣತೀರ್ಥ, 8 ಕಲ್ಯಾಣ— ವೈಕುಂಠಗಂಗೆ. **ದೊಡ್ಡಕೃಷ್ಣರಾಜ ಒಡೆಯರು** (          ) ತಮ್ಮ ಎಂಟುಮಂದಿ ಪತ್ನಿಯರ ಹೆಸರಿನಲ್ಲಿ ಮೇಲುಕೋಟೆ ಅಷ್ಟತೀರ್ಥ ಕೊಳಗಳನ್ನು ಒಂದಾಗುತಲೊಂದು ಜೀರ್ಣೋದ್ಧಾರಮಾಡಿದರು. ತೊಣ್ಣೂರು 99

**ಚಿಕ್ಕಯ್ಯನಕೊಳ—** ಈ ಕೊಳವನ್ನು ನಾರಣೂರ ಲಕ್ಷ್ಮಣಯ್ಯನ ಮಕ್ಕಳು ಚಿಕ್ಕಯ್ಯನು ಕಟ್ಟಿಸಿದನು. ಈ ಕೊಳಗಳಲ್ಲದೆ ಇನ್ನೂ ಅನೇಕ ಕೊಳಗಳಿವೆ.

ಪಾಂ. ಪ್ರ. ೨೧೦

**ಪಂಚಭಾಗವತ ಕ್ಷೇತ್ರ—** ಕಲ್ಯಾಣಿಪುಷ್ಕರಿಣಿ ಪಶ್ಚಿಮತೀರದಲ್ಲಿ ಪಂಚ ಭಾಗವತ ಕ್ಷೇತ್ರವಿದೆ.

೧ ೨ ೩ ೪ ೫

ಈ ವಿಗ್ರಹಮೂರ್ತಿಗಳು ಅರ್ಧಾಂಕಿತವಾಗಿವೆ. ಇಲ್ಲಿ ಏಂಬಾಬಯ್ಯ ಮತ್ತು ಮಹಾಮಂಡಲೇಶ್ವರ ಸಂದ್ಯಾಲದ ತಿಮ್ಮಯ್ಯದೇವ ಮುಂತಾದ ಅರಸುಗಳು ಸೇರಿ ಪಂಚಭಾಗವತ ಕ್ಷೇತ್ರದಲ್ಲಿ ಪ್ರತಿದಿನ ಅನ್ನದಾನ ನಡೆಯಲು ಧರ್ಮ ಏರ್ಪಡಿಸಿದರು.

ಪಾಂ. ಪ್ರ. ೧೩೦

**ಬಿಂದುಮಾಧವನ ಗುಡಿ**– ಕಂಠೀರವಮಹಾರಾಜರು (1701–1711) ರಲ್ಲಿ ಕಲ್ಯಾಣಿಯ ಸುತ್ತಲೂ ಇರುವ ಪ್ರಾಕಾರದ ಮಂಟಪದಲ್ಲಿ ಸ್ವನಾಮಾಂಕಿತವಾಗಿ ಬಿಂದುಮಾಧವನ ಗುಡಿಯನ್ನು ಕಟ್ಟಿಸಿ, ಪೂಜಾ ನಿವೇದ್ಯಗಳಿಗೆ ಏರ್ಪಡಿಸಿ ಅನೇಕ ಧರ್ಮಕಾರ್ಯಗಳನ್ನು ಮಾಡಿದರು.

## ಅನ್ನದಾನ - ರಾಮಾನುಜಕೂಟ - ಶ್ರೀಯತಿರಾಜ ಮಠ. ಅನ್ನದಾನ ಒಡೆಯರ ಮಠ

ಶಕ ೧೩೮೦ ಬಹುಧಾನ್ಯ ಸಂ|| (2–12–1458) ರಲ್ಲಿ ಮಹಾಪ್ರಧಾನ **ತಿಮ್ಮಣ್ಣ ದಂಡನಾಯಕರ ಪತ್ನಿ ರಂಗನಾಯಕಿ** ಅವರು ದೇವಸ್ಥಾನದ ಉತ್ತರ ಭಾಗದಲ್ಲಿ ಪಡುವಲು ಅರೂಪವಾಗಿದ್ದ ನಿವೇಶನವನ್ನು ಕ್ರಯಕ್ಕೆ ಕೊಂಡು ಅಲ್ಲಿ ದೇಶಾಂತ್ರಿಯರವಾಗಿ ಕಟ್ಟಿಸಿ ಅದರಲ್ಲಿ ಪ್ರತಿನಿತ್ಯವೂ ೨೪ ಜನರು ವೈದಿಕ ಶ್ರೀವೈಷ್ಣವ ಬ್ರಾಹ್ಮಣ ಭೋಜನ ನಡೆಯಲು (ರಾಮಾನುಜಕೂಟ) ೧೦ ವರಹ ವರಮಾನದ್ದಳ್ಳ ಬಳೇನಹಳ್ಳಿ, ಮಲಿಯದಹಳ್ಳಿ ಗ್ರಾಮ ಎರಡು ಸಮರ್ಪಿಸಿದ ಧರ್ಮ.

ಮಾಂ. ಪ್ರ. ೧೬೫

ಶಕ ............ (          ) ಕೃಷ್ಣದೇವರಾಯರ ಕಾಲದಲ್ಲಿ ಯತಿರಾಜ ಸ್ವಾಮಿಗಳು ನಡೆಸಿರುವ ರಾಮಾನುಜಕೂಟಕ್ಕೆ ಯತಿರಾಜಮಠಕ್ಕೆ ದೇವಸ್ಥಾನದಿಂದ ಎರಡು ತಳಿಗೆ ಪ್ರಸಾದ ಸಲ್ಲುವುದು. ಮಾಂ. ಪ್ರ. ೧೫೭

ವಿದ್ವಾಂಸರು ಎಂಬಾರಯ್ಯ ಅವರ ಕುಮಾರರಾದ ಅಪ್ಪಯ್ಯಂಗಾರ್ಯರೂ ನಂದ್ಯಾಲದ ನರಸಿಂಹದೇವ ಅರಸುಗಳ ಕುಮಾರರು ತಿಮ್ಮಯ್ಯದೇವ ಅರಸುಗಳೂ ಸೇರಿ ರಾಮಾನುಜಕೂಟದಲ್ಲಿ ತದೀಯಾರಾಧನೆ ನಡೆಸಲು ಧರ್ಮ ಏರ್ಪಡಿಸಿದರು.

ಶಕ ೧೪೯೨ ಪ್ರಮೋದೂತ ಸಂ|| (8–3–1570) ರಲ್ಲಿ ಸದಾಶಿವರಾಯರ ಕಾಲದಲ್ಲಿ ವೆಲುಗೋಂಡ ಚಿತ್ರಕೊಂಡ ಮಹಾನಾಯಕರ ಮಕ್ಕಳು ರಾಯಪ್ಪ ನಾಯಕರು ಚೆಲ್ವಪಿಳ್ಳೆಯವರಿಗೆ ಅರೋಗಣೆ ಮಾಡಿದನಂತರ ರಾಮಾನುಜಕೂಟ (ಶ್ರೀಯತಿರಾಜ ಮಠ) ದಲ್ಲಿ ಅನ್ನದಾನ ನಡೆಯಲು ಏರ್ಪಡಿಸಿದ ಧರ್ಮ.

ಮಾಂ. ಪ್ರ. ೧೩೨

ಶಕ........ ನಳ ಸಂ|| (AD1256) ರಲ್ಲಿ ತಿರುಕೋವಲೂರು ಜನಪ ಶೆಟ್ಟಿಯವರ ಮಕ್ಕಳು ಅಳಗಿಯ ಮಣವಾಳದಾಸರಾದ **ಕೇತಿಯಪ್ಪಶೆಟ್ಟಿಯವರು** ರಾಮಾನುಜಕೂಟದಲ್ಲಿ ಪ್ರತಿದಿನ ನಾಲ್ಕು ಜನ ಶ್ರೀವೈಷ್ಣವರ ಭೋಜನ ನಡೆಯಲು

..........ವನಹಳ್ಳಿ, ಕಾಮನಪುರ ಈ ಎರಡು ಗ್ರಾಮಗಳನ್ನು, ಮರಸಹಳ್ಳಿಯಲ್ಲಿ ಐದು ಖಂಡುಗ ಭತ್ತ ಬೆಳೆವ ಗದ್ದೆ ಭೂಮಿಯನ್ನು ಸಮರ್ಪಿಸಿದ ಧರ್ಮ.

ಶಾಂ. ಪ್ರ. ೧೮೨

ಶಕ ೧೪೬೭ ವಿಶ್ವಾವಸು ಸಂ॥ (AD 1545) ಶ್ರೀ ರಾಮಾನುಜಕೂಟದಲ್ಲಿ ತಿರುವಾರಾಧನೆಗೆ ೪೫ ಪಣ. **ವೇದಾಂತರಾಮಾನುಜಜೀಯರ ಮಠಕ್ಕೆ** (ಶ್ರೀಯತಿರಾಜಮಠ) ೧೭೫ ಪಣ ಅಕ್ಕಿ ದೇವಸ್ಥಾನದಿಂದ ಪ್ರತಿದಿನ ಕೊಡಲ್ಪಡುವುದು. ಈ ಧರ್ಮವು ಮಹಾಮಂಡಲೇಶ್ವರ ಅಳಿಯ ನರಸಿಂಗಯ್ಯದೇವ ಮಹಾ ಅರಸುಗಳ ಕುಮಾರರು ನಾರಾಯಣದೇವ ಅರಸುಗಳು ಸದಾಶಿವರಾಯರು ಅವರಿಗೆ ನಾಮಕೀರ್ತನಕ್ಕಾಗಿ ಸಮರ್ಪಿಸಿದ ಭೂಮಿ ಧರ್ಮದಲ್ಲಿ. ಶಾಂ. ಪ್ರ. ೧೭೫

ಶಕ ೧೪೮೬ ರಕ್ತಾಕ್ಷಿ ಸಂ॥ (AD 1564) ಮಹಾಮಂಡಲೇಶ್ವರ ಮಹಾ ಅರಸುಗಳ ಪುತ್ರರು, ಕೆಂಗೋಟೆ ಮಹಾಅರಸುಗಳ ಪುತ್ರರು ಕೊಂಡರಾಜು ವಿಜಯದೇವ ಮಹಾಅರಸುಗಳು ಶ್ರೀಪಟ್ಟಣಹಳ್ಳಿ ದೇವರಿಗೆ ಗ್ರಾಮಭೂಮಿಗಳನ್ನು ಧರ್ಮಮಾಡುವಾಗ ಶ್ರೀಭಾಷ್ಯಕಾರರ ರಾಮಾನುಜಕೂಟದಲ್ಲಿ (ಶ್ರೀಯತಿರಾಜ ಮಠ) ಅನ್ನಸಂತರ್ಪಣೆಗಾಗಿ ೧೦೭ ವರಹ ಧರ್ಮ. ಶಾಂ. ಪ್ರ. ೧೭೨

**ಶಿವಕೂಟ** — **ಶ್ರೀರಾಮಾನುಜರು** ತಿರುನಾರಾಯಣಪುರವನ್ನು ಜೀರ್ಣೋದ್ಧಾರ ಮಾಡುವಾಗ ಮುಕ್ಕಣ್ಣೇಶ್ವರ (ತ್ರಿನೇತ್ರದ ದೇವಸ್ಥಾನ) ಎನ್ನುವ ಶಿವದೇವಾಲಯವನ್ನು ಸಹ ನಿರ್ಮಿಸಿದ್ದರು. ಆ ದೇವಸ್ಥಾನವನ್ನು ನೋಡಿಕೊಳ್ಳುವುದಕ್ಕೆ **ಶಿವಮತದ ಸನ್ಯಾಸಿಗಳನ್ನೇ** ಏರ್ಪಡಿಸಿದ್ದರು. ಪ್ರಕೃತ ವಿವರಿಸುವ ಅನ್ನದಾನ ಒಡೆಯರ ಮಠ ಎನ್ನುವುದರಲ್ಲಿ ನಿತ್ಯ ಸಮಾರಾಧನೆಯುಂಟು. ಶಿವದೇವಾಲಯದಲ್ಲಿ, ಶಿವಕೂಟದಲ್ಲಿ ಊಟವೂ ಉಂಟು. ಈ ಅನ್ನದಾನಒಡೆಯರ ಮಠವೂ, ಶಿವಕೂಟವೂ ಒಂದೆಯೇ ಬೇರೆಯೇ ತಿಳಿಯುವುದಿಲ್ಲ. ಹೇಗಾದರೂ ಇರಲಿ ಅನ್ನದಾನ ನಡೆಯುವ ಸ್ಥಳ **ಅನ್ನದಾನಒಡೆಯರ ಮಠ** ಎಂದೇ ಕರೆಯೋಣ.

## ಅನ್ನದಾನ ಒಡೆಯರ ಮಠ

ಶ್ರೀರಾಮಾನುಜರು ತಿರುನಾರಾಯಣಪುರವನ್ನು ಜೀರ್ಣೋದ್ಧಾರ ಮಾಡಿದಾಗ ಮುಕ್ಕಣ್ಣೇಶ್ವರಂ (ತ್ರಿನೇತ್ರದ ದೇವಸ್ಥಾನ) ಎನ್ನುವ ಶಿವಾಲಯವನ್ನು ಸಹ ನಿರ್ಮಿಸಿದರು. ಆ ಕಾಲದಲ್ಲೇ ಅನ್ನದಾನ ಒಡೆಯರ ಮಠವೂ ಕಟ್ಟಲ್ಪಟ್ಟಿತು. ಇಲ್ಲಿಯ ಅಧಿಕಾರಿ ಸನ್ಯಾಸಿಯೆ? ಅಥವಾ ಗೃಹಸ್ಥರೆ? ತಿಳಿಯುವುದಿಲ್ಲ. ಇಲ್ಲಿ ಶೈವರಿಗೆಲ್ಲಾ ಅನ್ನದಾನ ನಡೆಯುವುದಕ್ಕೆ ಏರ್ಪಟ್ಟಂತೆ ಕಾಣುವುದು. ತದನಂತರ ಕಾಲದ ಚರಿತ್ರೆ ತಿಳಿಯಬರಲಿಲ್ಲ. ಹಾಗೆಯೇ ಪರಂಪರೆಯಾಗಿ ಬಂದನಂತರ,

**ಅನ್ನದಾನ ಸೆಟ್ಟಿ**– ಇವರು ಆಗಿನ ಶ್ರೀರಂಗ ಸರಕಾರಕ್ಕೂ ಜನಗಳಿಗೂ ಅಥವಾ ವ್ಯಾಪಾರಸ್ಥರ ಮಧ್ಯೆ ವ್ಯವಹಾರ ಭಾಗದಲ್ಲಿ ಪ್ರವೇಶಿಸುವ ಸಕ್ಷತ ಅಧಿಕಾರ ವುಳ್ಳವರು. ಇವರು ಅನೇಕ ಸ್ಥಳದಲ್ಲಿ ಪ್ರತಿದಿನ ಅನ್ನದಾನ ನಡೆಸುವ ಧರ್ಮವನ್ನು ನಡೆಸುತ್ತಿತ್ತು. ಒಂದು ಕಾಲದಲ್ಲಿ ಸ್ವದೇಶಾಯಕರು ತನಗೆ ವಿರೋಧವಾದ ಅಂಚೆಕಾಮದ್ದನ್ನು ಹಿಂಗೆಹಾಡಿ ಆದುದರಿಂದ ಒಂದು ಲಕ್ಷ ಹನ್ನೊಂದು ಸಾವಿರ ವರಹವನ್ನು ದಂಡವಾಗಿ ತೆಗೆದುಕೊಂಡು ಸೆರೆಮನೆಯಲ್ಲಿಟ್ಟನು. ಆಗ ಬಕ್ಷಿದಾಸು ಎಂಬುವರು (ಮುಖ್ಯ ಅಧಿಕಾರಿ) ಬಳಿ ಶ್ರೀನಿವಾಸರಾಯರು ಈ ಅನ್ನದಾನ ಸೆಟ್ಟಿಯವನ್ನು. ವರಸೆಟ್ಟಿಯನ್ನು ಹಣಕಟ್ಟಿ ಬಿಟ್ಟು ಅಂಚೆಕಾಮದ್ದನ್ನು ಬಿಡಿಸಿದರು. ಈ ಮಠದಲ್ಲಿ ಪ್ರತಿದಿನ ಅನ್ನದಾನ ನಡೆಯುತ್ತಿದ್ದುದರಿಂದ ಅನ್ನದಾನ ಮಂಟಪವೆಂದು ಪ್ರಸಿದ್ಧಿಯಾಯಿತು. ಮೇಲುಕೋಟೆ ಅಲ್ಲದೆ ಇನ್ನೂ ಅನೇಕ ಕಡೆಗಳಲ್ಲಿ ಇವರು ಪ್ರತಿದಿನ ನೂರಾರು ಜನರಿಗೆ ಅನ್ನದಾನ ಮಾಡಲು ಏರ್ಪಡಿಸಿದ್ದರು.

## ವರ್ಣರಂಜಿತ ಚಿತ್ರಗಳು

ಶ್ರೀನಾರಾಯಣಸ್ವಾಮಿ ದೇವಸ್ಥಾನದ ಬಳಿಯಿರುವ ಶ್ರೀಯತಿರಾಜಮಠದ ನವರಂಗದಲ್ಲಿ ವರ್ಣ ಚಿತ್ರಗಳು ಕಾಣುತ್ತವೆ. ಚಿತ್ರವನ್ನು ಬಹು ಅಂದವಾಗಿಯೂ ಅಚ್ಚುಕಟ್ಟಾಗಿಯೂ ಬರೆಯಲಾಗಿದೆ. ನಾಲ್ಕು ದಿಕ್ಪಾಲಕರ ದೇವತೆಗಳು, ಭಗವಾನ್ ಶ್ರೀಮನ್ನಾರಾಯಣ ಪಾರ್ಥಸಾರಥಿ, ಶ್ರೀರಾಮ ಪಟ್ಟಾಭಿಷೇಕ, ಆಚಾರ್ಯರುಗಳು, ಮುಂತಾದವುಗಳು. ರಾಮಾನುಜ ಸಂಪ್ರದಾಯದ ಈ ವರ್ಣ ಚಿತ್ರಗಳು 1914 ರಲ್ಲಿ ಆಗಿನ ಮಠಾಧಿಪತಿಗಳಾಗಿದ್ದ ಶ್ರೀ ವಾನಮಾಮಲೈ ರಾಮಾನುಜರವರು ಆಳ್ವಾರ್ ಸ್ವಾಮಿಗಳ ಬರುವಿಕೆಯ ನೆನಪಿನಿಂದ ಬರೆಸಿದರು. ಈಗ ಅವುಗಳನ್ನು ಉಳಿಸಿದ್ದಾರೆ.

**ದೇವದಾಸಿ**– ಮನುಷ್ಯನ ಜೀವನದಲ್ಲಿ ಮನೋರಂಜನೆಯೂ ಒಂದು ಮುಖ್ಯವಾದ ಅಂಗ. ಅದರಲ್ಲಿ ನೃತ್ಯ, ಗೀತ, ವಾದ್ಯಗಳು ಅತಿ ಮುಖ್ಯವೆನಿಸಿದವು. ಇವುಗಳನ್ನು ಕಲಿತು ಜನರ ಮನಸ್ಸನ್ನು ಸಂತೋಷಪಡಿಸುವ ಒಂದು ವೃತ್ತಿಯನ್ನು ಕೈಕೊಂಡವರಿಗೆ ದೇವದಾಸಿಯರೆಂದು ಕರೆದರು. ಇವರೂ ಸಹ ಇದರೊಂದಿಗೆ ದೇವರಿಗೆ ನೃತ್ಯದ ಸೇವೆಯನ್ನು ಸಲ್ಲಿಸುತ್ತಿದ್ದರು. ಅವರೂ ವೇಶ್ಯಾ ವೃತ್ತಿಯನ್ನು ಗೌರವದಿಂದಾಗಿದ್ದರು. ಅವರನ್ನು ಜನರು ಗೌರವಿಸುತ್ತಿದ್ದರು. ಪ್ರಾಚೀನ ಕಾಲದಿಂದಲೂ ಅನೇಕ ಚರಿತ್ರೆ, ಕಾವ್ಯಗಳಲ್ಲಿ ಈ ವೃತ್ತಿಯವರ ಮನೆಗಳಲ್ಲಿ ಶಾಸ್ತ್ರ ಚರ್ಚೆ, ವಿಚಾರಗೋಷ್ಠಿ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆ ವೇಶ್ಯಾವೃತ್ತಿಯಲ್ಲಿಯೂ, ಧರ್ಮ ಸಮ್ಮತವಾದ ಕ್ರಮವಿರುತ್ತದೆ,

ಕಾಲಾಂತರದಲ್ಲಿ ಅನೇಕ ಕಾರಣಗಳನ್ನನುಸರಿಸಿ ನೇಮ ನಿಶ್ಚಯಗಳು ಪ್ರಧಾನವಾಗಿ ಬಂದು ಕೆಲವಿದ್ದರೂ ಬಿಟ್ಟರೂ ಈ ವೃತ್ತಿಯನ್ನು ಆರಂಭಿಸಿದರು.

ಸಂಘವನದ ಶ್ರೇಯಸ್ಸಿಗಾಗಿ ಪ್ರಾಚೀನರು ಒಂದು ಪದ್ಧತಿಯನ್ನೇರ್ಪಡಿಸಿದರು; ಅದೇ **ದೇವದಾಸಿ** ಎಂಬ ವೃತ್ತಿ. ಆಲಯಗಳಲ್ಲಿ ಭಗವಂತನ ನಿತ್ಯ ಪೂಜಾ ಉತ್ಸವ ಮೊದಲಾದ ಕಾಲಗಳಲ್ಲಿ ಕೆಲಸ ಮಾಡಲು ಇವರಿಗೆ ಅವಕಾಶ ಕಲ್ಪಿಸಿದರು. ಈ ವಿಚಾರವನ್ನು ಆಗಮಶಾಸ್ತ್ರಗಳಲ್ಲಿ ವಿವರವಾಗಿ ತಿಳಿಸಿರುವರು.

ಗಣಿಕಾ ವಂಶಸ್ಥರಾದ ಈ ದಾಸಿಯರಿಗೆ ಶಾಸ್ತ್ರೋಕ್ತವಾದ ದೀಕ್ಷಾಸಂಸ್ಕಾರವನ್ನು ನಡೆಸಿ ದೇವಸ್ಥಾನದಲ್ಲಿ ಕೆಲಸಕ್ಕೆ ನೇಮಿಸುವಾಗ ಅವರ ಕಾರ್ಯಕ್ರಮಗಳನ್ನು ಅನುಸರಿಸಿ ಏಳು ವಿಧಗಳುಂಟು.

1 **ದತ್ತಾ**– ಸ್ವಯಂಪ್ರೇರಿತವಾಗಿ ಭಕ್ತಿಯಿಂದ ದೇವಸ್ಥಾನಕ್ಕೆ ಬಂದು ಗುಡಿಸಿ, ಸಾರಿಸಿ ರಂಗೋಲೆಯಿಡತಕ್ಕವಳು.

2 **ವಿಕ್ರೀತಾ**– ಕ್ರೀತೆಯಾಗಬೇಕೆಂಬ ಉದ್ದೇಶದಿಂದ ಅಥವಾ ದ್ರವ್ಯ ಲೋಭದಿಂದಲೋ ಮನೆಯವರಿಂದ ಕೊಡಲ್ಪಟ್ಟು ದೇವಸ್ಥಾನಕ್ಕೆ ಬರತಕ್ಕವಳು.

3 **ಭೃತ್ಯಾ**– ಕುಟುಂಬದ ಏಳ್ಗೆಯ ಉದ್ದೇಶದಿಂದ ದೇವಸ್ಥಾನಕ್ಕೆ ಬರತಕ್ಕವಳು. ಭೃತ್ಯಾ ಎಂದು ಕರೆಯಲ್ಪಡುವಳು.

4 **ಭಕ್ತಾ**– ಭಕ್ತಿಯಿಂದ ಬಂದು ಆಲಯದಲ್ಲಿ ಸಂಸ್ಕಾರಕರ್ಮವನ್ನು ಹೊಂದಿ ದೇವಸ್ಥಾನದಿಂದ ನಿಯಮಿಸಲ್ಪಡತಕ್ಕವಳು.

5 **ಹೃತಾ**- ಆಲಯದಲ್ಲಿ ದಾಸಿಯಾಗಲು ಕಾರಣಾಂತರದಿಂದ ಬಿಟ್ಟು ಹೋಗಿ ಪುನಃ ಆಹ್ವಾನಿಸಲ್ಪಟ್ಟು ಬರತಕ್ಕವಳು.

6 **ಅಲಂಕಾರದಾಸಿಕಾ** - ಅಲಂಕಾರದಾಸಿಯು ಕಲಾನಿಪುಣೆಯಾಗಿಯೂ, ಸುಂದರಿಯಾಗಿಯೂ, ದೈವಭಕ್ತಿಯುಳ್ಳವಳಾಗಿಯೂ, ಇರುವುದರೊಂದಿಗೆ ಶಾಸ್ತ್ರ ರೀತಿ ಸಂಗೀತ ನಾಟ್ಯಕಲೆಗಳನ್ನು ಗುರುಗಳ ಹತ್ತಿರ ಕಲಿತು ಅಲಂಕಾರಯುತಳಾಗಿ ದೇವಸ್ಥಾನದಿಂದ ಅಥವಾ ರಾಜನಿಂದ ನಿಯಮಿಸಲ್ಪಡತಕ್ಕವಳು.

7 **ರುದ್ರಗಣಿಕಾ**– ರುದ್ರಗಣಿಕೆಯರು ಕುಂಭಾರತಿ ಮತ್ತು ಗೀತನೃತ್ತವನ್ನು ನಡೆಸತಕ್ಕವರು. ಇವರು ಈಗ ಇರುವುದಿಲ್ಲ.

ಮೇಲೆ ತಿಳಿಸಿದವರೆಲ್ಲರೂ ದೇವಸ್ಥಾನದಿಂದ ಪಾಂಚರಾತ್ರ, ಶೈವಾಗಮಗಳ ರೀತಿಯಾಗಿ "ದೇವದಾಸೀ" ಎಂಬ ಸಂಸ್ಕಾರದಿಂದ ಅಧಿಕಾರ ಹೊಂದುವರು. ಈ ದೇವದಾಸಿಯರ ಮಕ್ಕಳು, ಮೊಮ್ಮಕ್ಕಳು ಎಲ್ಲರಿಗೂ ಆಲಯದಲ್ಲೇ ಮಾಂಗಲ್ಯ ಧಾರಣೆ. ವಿವಾಹವನ್ನು ನಡೆಸಬೇಕೆಂಬ ನಿಯಮವುಂಟು. ಇವರ ವೇಷವು ದ್ರಾವಿಡ ಸ್ತ್ರೀಯರ ವೇಷ (ಒಳಕಚ್ಚೆ) ಅಥವಾ ಮಹಾರಾಷ್ಟ್ರ ವೇಷಸ್ಥರಂತೆ (ಹೊರಕಚ್ಚೆ) ಕಟ್ಟಬೇಕು. —ಶೈವಾಗಮಸಾರ ಗ್ರಂಥ

## ದೇವಸ್ಥಾನದ ಕೈಂಕರ್ಯಪರರು

ದೇವಸ್ಥಾನದಲ್ಲಿ ಕೈಂಕರ್ಯಪರರು ಎಷ್ಟು ಜನರಿರುತ್ತಾರೆ ಅವರ ಕಾರ್ಯಗಳೇನು ?

**೧. ದೇವರು -** ದೇವರ ಸಮೀಪಕ್ಕೆ ಹೋಗಿ ದರ್ಶನಮಾಡಿ ಅವನಿಗೆ ತಲೆಬಾಗಿ ನಮಸ್ಕರಿಸಿ ಅವನ ಸ್ತೋತ್ರನಾಮಗಳನ್ನು ಹೇಳಿ ಅವನ ತೀರ್ಥಪ್ರಸಾದವನ್ನು ಹೊಂದುವ ಭಕ್ತರಾದ ನಮ್ಮನ್ನು ಅನುಗ್ರಹಿಸುವುದು ಮಾತ್ರವಲ್ಲದೆ ಚರಾಚರ ಪ್ರಪಂಚವನ್ನೇ ಕಾಪಾಡುವ ಸರ್ವಗುಣಸಂಪನ್ನನೂ, ಸರ್ವಶಕ್ತನೂ ಆದ ಪರಮಾತ್ಮ ದೇವರು.

**೨. ಅರ್ಚಕರು— ಆರಾಧಕರು -- ಭಟ್ಟಾಚಾರ್ಯರು—** ಇವರು ಭಗವಂತನ ಭಕ್ತರಾದ ನಮ್ಮ ಪ್ರತಿನಿಧಿಯಾಗಿ ದೇವಸ್ಥಾನದಲ್ಲಿ ಭಗವಂತನ ಪೂಜೆಯನ್ನು ಮಾಡತಕ್ಕವರು. ಅಲ್ಲದೆ ಭಗವಂತನ ಪ್ರತಿನಿಧಿಯಾಗಿ ನಮಗೆ ಆಶೀರ್ವಾದವನ್ನು ಹೇಳಿ ತೀರ್ಥಪ್ರಸಾದವನ್ನು ಕೊಡತಕ್ಕವರು ಭಟ್ಟಾಚಾರ್ಯರು.

**೩. ಸನ್ನಿಧಿಪರಿಚಾರಕರು—** ಅರ್ಚಕರಿಗೆ ಸಹಾಯಕರಾಗಿ ದೇವರ ಪಾತ್ರೆಗಳನ್ನು ಶುದ್ಧಿಮಾಡಿ ದೇವರಿಗೆ ತೀರ್ಥವಸ್ತ್ರಆರಾಧನಾ ವಸ್ತುಗಳನ್ನು ಸಿದ್ಧಪಡಿಸಿ ಪೂಜಾಂಗವಾದ ಎಲ್ಲಾ ಕೆಲಸಗಳನ್ನೂ ಮಾಡತಕ್ಕವರು.

**೪. ಅಧ್ಯಾಪಕರು—** ಭಗವಂತನ ಮೂರ್ತಿಯನ್ನು ಪೂಜಿಸುವಾಗ ಮತ್ತು ಉತ್ಸವ ವಿಶೇಷಗಳಲ್ಲಿ ಆಳ್ವಾರಾಚಾರ್ಯರುಗಳಿಂದ ರಚಿತವಾದ ಸ್ತೋತ್ರ ಮತ್ತು ದಿವ್ಯಪ್ರಬಂಧ, ವೇದ ಇತ್ಯಾದಿಗಳನ್ನು (ಭಗವಂತನ ಗುಣಗಾನ-ನಾಮಸ್ಮರಣೆ) ಹೇಳುವವರು. ಇದಕ್ಕೆ ಪಾರಾಯಣ ಸೇವಾಕಾಲವೆಂದು ಹೆಸರು. ಇದು ಸಾಮೂಹಿಕವಾಗಿ ನಡೆಸಲ್ಪಡುವುದು. ಸ್ತೋತ್ರ ಮತ್ತು ದ್ರಾವಿಡ ಪಾಶುರಪದ್ಯಗಳು ಕೇಳುವುದಕ್ಕೆ ಹಿತಕರವಾದ ಒಂದು ವಿಧ ರಾಗದಲ್ಲಿ ಹೇಳುವರು. ಇವು

ದೇವಸ್ಥಾನದ ಒಳಗೆ ಪೂಜಾಕಾಲದಲ್ಲಿಯೂ, ಹೊರಗೆ ಉತ್ಸವಕಾಲಗಳಲ್ಲಿಯೂ ನಡೆಯುತ್ತದೆ.

ಉತ್ಸವಕಾಲಗಳಲ್ಲಿ ವೇದವು ದೇವರ ಹಿಂದೆಯೂ ದ್ರಾವಿಡ ಪ್ರಬಂಧವು ಉತ್ಸವದ ಮುಂದೆಯೂ ನಡೆಯುವ ನಿಯಮವನ್ನು ನೋಡುತ್ತೇವೆ. ಈ ರೀತಿ ವೇದಪಾರಾಯಣ, ದ್ರಾವಿಡ ಪ್ರಬಂಧ ಸೇವಾಕಾಲಗಳಿಂದ ದೇವರನ್ನೂ, ನಮ್ಮನ್ನೂ ಸಂತೋಷಪಡಿಸುವವರು ಅಧ್ಯಾಪಕರೆಂದು ಕರೆಯಲ್ಪಡುವರು.

**೫. ಪರಿಚಾರಕ (ಅಡಿಗೆಯವರು)**— ಅರ್ಚಕರಿಗೆ ಸಹಾಯಕರಾಗಿ ದೇವರಿಗೆ ನಿವೇದನಮಾಡಲು ಏರ್ಪಟ್ಟು, ವಿವಿಧ ಪ್ರಸಾದವನ್ನು ಕಾಲಕಾಲಕ್ಕೆ ಸರಿಯಾಗಿ ಸಿದ್ಧಪಡಿಸಿ ನಿವೇದನವಾದ ನಂತರ ಭಕ್ತಾದಿಗಳಾದ ನಮಗೆ ಪ್ರಸಾದವನ್ನು ಹಂಚುವವರು.

**೬. ಆಚಾರ್ಯಪುರುಷರು**— ಭಗವಂತನ ಪೂಜೆ ಉತ್ಸವಾದಿಗಳು ಶಾಸ್ತ್ರಸಂಪ್ರದಾಯವಾಗಿ ಆಯಾಕಾಲದಲ್ಲಿ ನಡೆಯುವುದನ್ನು ನೋಡಿಕೊಳ್ಳುವುದು; ಶಾಸ್ತ್ರಸಂಪ್ರದಾಯಗಳು ವ್ಯತ್ಯಾಸವಾದಲ್ಲಿ, ಧರ್ಮಶಾಸ್ತ್ರ, ಆಗಮಶಾಸ್ತ್ರಗಳನ್ನು ನೋಡಿ ಸರಿಪಡಿಸುವುದು ಮತ್ತು ಲೋಕಕ್ಷೇಮವಾಗಲೆಂದು ಪ್ರಾರ್ಥಿಸಿ ಭಕ್ತರಾದ ನಮ್ಮ ಪರವಾಗಿ ಭಗವಂತನ ಸೇವೆ ನಡೆಸಲು ಏರ್ಪಟ್ಟಿರುವವರು.

ಈ ಆಚಾರ್ಯಪುರುಷರು ಗೃಹಸ್ಥರಾಗಿಯೂ, ಸನ್ಯಾಸಿಗಳಾಗಿ ಮಠಾಧಿಪತಿಗಳಾಗಿಯೂ ಇರಬಹುದು. ದೇವಸ್ಥಾನದ ವೈದಿಕ, ಲೌಕಿಕ ಆಡಳಿತವನ್ನು ನೋಡಿಕೊಂಡು ಇರುವುದಲ್ಲದೆ ಶಿಷ್ಯರಿಗೆ ಮುದ್ರಾಧಾರಣೆಯಿಂದ ವೇದಾಂತ ಜ್ಞಾನೋಪದೇಶವನ್ನು ಮಾಡಿ ಶಿಷ್ಯಪ್ರಶಿಷ್ಯ ಕ್ರಮದಲ್ಲಿ ರಾಮಾನುಜರ ಸಿದ್ಧಾಂತವನ್ನು ಪ್ರಚಾರ ಮಾಡುತ್ತಲ್ಲದೆ, ಆಳ್ವಾರಾಚಾರ್ಯರುಗಳ ಪ್ರತಿನಿಧಿಯಾಗಿ ದೇವಸ್ಥಾನದಲ್ಲಿ ಅಗ್ರತೀರ್ಥಮರ್ಯಾದೆಯನ್ನು ಹೊಂದಿರುವವರು.

**೭. ಆಳು**— ದೇವಸ್ಥಾನದಲ್ಲಿ ಮೇಲೆ ತಿಳಿಸಿದವರಿಗೆಲ್ಲಾ ಸಹಾಯಕವಾಗಿಯೂ, ದೇವಸ್ಥಾನದ ಶುಭ್ರತೆ, ರಕ್ಷಣೆ ನೋಡಿಕೊಂಡು ಸಣ್ಣಪುಟ್ಟ ಕೆಲಸಗಳನ್ನು ಮಾಡುವವನು.

**೮. ಧರ್ಮಕರ್ತ**— ದೇವಸ್ಥಾನದಲ್ಲಿ ಪೂಜೆ ನಿವೇದನ, ಉತ್ಸವ, ಇತ್ಯಾದಿಗಳು ಕಾಲಕ್ಕೆ ಸಮರ್ಪಕವಾಗಿ ನಡೆಯಲು ಪದಾರ್ಥಗಳನ್ನು ಹೊಂದಿಸಿ ದೇವಸ್ಥಾನದ ಆಡಳಿತವನ್ನು ನೋಡಲು ಏರ್ಪಟ್ಟಿರುವ ಅಧಿಕಾರಿ.

**೯. ಭಕ್ತರಾದ ನಾವು**— ಕೊನೆಯದಾಗಿ ದೇವಸ್ಥಾನಕ್ಕೆ ಹೋಗಿ ದೇವರಿಗೆ ಭಕ್ತಿಯಿಂದ ನಮಸ್ಕರಿಸಿ ದೇವರನ್ನು ದರ್ಶನಮಾಡಿ ದೇವರ ತೀರ್ಥಪ್ರಸಾದ ಅನುಗ್ರಹವನ್ನು ಹೊಂದಿರುವ ಭಕ್ತರಾದ ನಾವು.

ಈ ರೀತಿ ಕೈಂಕರ್ಯಪರರು ಇದ್ದೇ ಇರಬೇಕು, ಅಲ್ಲದೆ ಐಶ್ವರ್ಯ ಅನುಕೂಲ್ಯಗಳನ್ನನುಸರಿಸಿ ವಾದ್ಯಗಾರರು, ದೇವಸ್ಥಾನದ ಶುಭ್ರತೆ, ರಕ್ಷಣೆ, ಅಲಂಕಾರ, ರಂಗೋಲಿ, ಛತ್ರಿಚಾಮರ, ದೀವಟಿ ಮುಂತಾದ ಮರ್ಯಾದಾವಸ್ತುಗಳನ್ನು ಹಿಡಿಯುವವರು ಮುಂತಾಗಿ ಅನೇಕ ಕೈಂಕರ್ಯಪರರ ಅವಶ್ಯಕತೆ ಇರುವುದು.

## ಮಠ – ಮಠಾಧಿಪತಿಗಳು – ಪಾಠಶಾಲೆ

### ಮಠಶಬ್ದಾರ್ಥ ವಿಚಾರ :

ಮಠವೆಂದರೆ ವಿದ್ಯಾಭ್ಯಾಸಂಗಸ್ಥಳ. ಈ ವಿದ್ಯಾಭ್ಯಾಸಂಗಸ್ಥಳವು ಪಾಠ ಹೇಳಿಕೊಡುವ ಗುರುಗಳ ಮನೆ ಅಥವಾ ನಾಲ್ಕು ವಿದ್ಯಾರ್ಥಿಗಳು ಕುಳಿತುಕೊಳ್ಳುವ ಅಂಗಳ ಅಥವಾ ಮನೆಯ ಜಗುಲಿ ಅಥವಾ ಊರಿಗೆ ಸೇರಿದ ಅರಳಿಕಟ್ಟೆ ಅಥವಾ ಆಲದಮರದ ಕೆಳಗೆ – ಈ ಸ್ಥಳಗಳಲ್ಲಿ ಪಾಠಪ್ರವಚನವು ನಡೆದು ಬಂದಿತು. ಮೊತ್ತದಲ್ಲಿ ಎಲ್ಲಿ ಪಾಠಪ್ರವಚನಗಳು ನಡೆದು ಬರುವುದೋ ಆ ಸ್ಥಳಕ್ಕೆ ಮಠ ಎಂದು ಹೆಸರು.

**ಗುರುಕುಲ – ಗುರುಕುಲಾಶ್ರಮ–** ಕಾಲಕ್ರಮದಲ್ಲಿ ಪಾಠಪ್ರವಚನ ನಡೆಯುತ್ತಿರುವ ಪ್ರಸಿದ್ಧ ಮರದ ಕೆಳಗೆ ಎಂದರೆ ಅರಳಿಮರದ ಕಟ್ಟೆ ಬಳಿ ಚಪ್ಪರವನ್ನು ಹಾಕಿ ವಿದ್ಯಾಭ್ಯಾಸವು ನಡೆದು ಬಂದಿತು. ತದನಂತರಕಾಲದಲ್ಲಿ ಶ್ರೀಮಂತರ ಧಾರ್ಮಿಕ ಅಭಿಮಾನ ಅದರಿಂದ ಚಪ್ಪರದ ಸ್ಥಳದಲ್ಲಿ ವಿದ್ಯಾಗುರುಗಳಿಗೆ ಆಶ್ರಮನೆ, ಗುಡಿಸಲು ಕಟ್ಟಿ ಗುರುಗಳು ವಾಸಮಾಡುವುದಕ್ಕೂ ವಿದ್ಯಾರ್ಥಿಗಳಿಗೆ ಸೌಕರ್ಯವಾಗುವಂತೆ ಊಟೋಪಚಾರಗಳು ನಡೆಯಲು ಏರ್ಪಾಟಾದವು.

ಆ ಸ್ಥಳಕ್ಕೆ ಆಶ್ರಮವೆಂದು ಹೆಸರಿದೆ. ಆಶ್ರಮದಲ್ಲಿ ಶಿಷ್ಯರು – ವಿದ್ಯಾರ್ಥಿಗಳು ವಿದ್ಯಾಭ್ಯಾಸಂಗ ಮಾಡಲು ಬರುವವರಾದರು. ಪಾಠಪ್ರವಚನವು ಉಷಃಕಾಲದಲ್ಲಿಯೇ (ಬೆಳಗಿನ 5 ಗಂಟೆಯಿಂದಲೇ) ಆರಂಭವಾಗುವುದರಿಂದ ದೂರದಿಂದ ಎಂದರೆ ಹೊರಗಿನಿಂದ ಬರುವ ವಿದ್ಯಾರ್ಥಿಗಳಿಗೆ ಕಷ್ಟವಾದ್ದರಿಂದ ವಿದ್ಯಾರ್ಥಿಗಳು ಆಶ್ರಮದಲ್ಲಿಯೇ ಇರಬೇಕಾಯಿತು. ಆ ರೀತಿ ಶಿಷ್ಯರು ಗುರುಗಳ ಸಮೀಪದಲ್ಲೇ ಎಂದರೆ ಆಶ್ರಮದಲ್ಲೇ ಇರಬೇಕಾದ್ದರಿಂದ ಆಗ ಗುರುಗಳು ಶಿಷ್ಯರುಗಳನ್ನು ಪೋಷಿಸಬೇಕಾಯಿತು. ವಿದ್ಯಾರ್ಥಿಗಳು ಬ್ರಹ್ಮಚಾರಿಗಳಾದ್ದರಿಂದ ವಿದ್ಯಾರ್ಥಿಗಳು ಭಿಕ್ಷಾನ್ನವನ್ನು ತರಬೇಕಾಯಿತು. ಅಲ್ಲದೆ ಧರ್ಮದಾತರುಗಳು ಗುರುಗಳಿಗೆ ಸಹಾಯ ಮಾಡುವುದರಿಂದ ಗುರುಗಳು ವಿದ್ಯಾರ್ಥಿಗಳಿಗೆ ಊಟೋಪಚಾರ ನಡೆಸುತ್ತಿದ್ದರು. ಈ ರೀತಿ ಶಿಷ್ಯರು ಗುರುಕುಲಾಶ್ರಮದಲ್ಲಿ ನಿಂತುದರಿಂದ ಗುರುಗಳ ದೃಷ್ಟ್ಯಾ ಗುರುಕುಲಾಶ್ರಮವೆಂದೂ ಶಿಷ್ಯರ ದೃಷ್ಟ್ಯಾ ಗುರುಕುಲವಾಸವೆಂದು ಕರೆಯಲಾಯಿತು.

ಯಾವ ಸ್ಥಳವನ್ನು ಯಾವ ಹೆಸರಿನಿಂದ ಹೇಗೆ ಹೇಳಿದರೂ ವಿದ್ಯಾವ್ಯಾಸಂಗವು ನಡೆಯುವ ಸ್ಥಳಕ್ಕೆ ಮಠವೆಂದು ಹೆಸರು. ಈ ಮಠದಲ್ಲಿ ಬಾಲಬೋಧೆಯಿಂದ ತರ್ಕ, ವ್ಯಾಕರಣ, ಸಾಹಿತ್ಯ, ವೇದ, ವೇದಾಂತ ಸ್ತೋತ್ರಪಾಠ ಎಲ್ಲವನ್ನೂ ಗುರುಗಳು ಬೋಧಿಸುತ್ತಿದ್ದರು.

ಕಾಲಕ್ರಮದಲ್ಲಿ ವೇದಾಂತ ಭಾಗದಲ್ಲಿ ಮತಭೇದವುಂಟಾಗಿದ್ದರೂ ಯಾವ ಮತವೇದಾಂತವನ್ನು ಓದಬೇಕು – ತಿಳಿಯಬೇಕು ಎಂದು ಹೇಳಿದರೂ ಆ ಶಾಸ್ತ್ರವನ್ನಾಗಲಿ, ವೇದಾಂತವನ್ನಾಗಲಿ ಗುರುಗಳು ಆಯಾ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿದ್ದರು. ಅಂದರೆ ಎಲ್ಲಾ ವೇದಾಂತ ಪ್ರಕ್ರಿಯೆಯನ್ನೂ ಆ ಗುರುಗಳು ತಿಳಿದವರಾಗಿದ್ದರು. ಅರ್ಥಾತ್ ಗುರುಗಳು ತಾವು ಒಂದು ವೇದಾಂತ ಮತ ಅಥವಾ ತತ್ತ್ವಕ್ಕೆ ಸೇರಿದ್ದು ವಿದ್ಯಾರ್ಥಿಯು ಬೇರೆ ವೇದಾಂತಮತ ಅಥವಾ ತತ್ತ್ವ ಪ್ರಕ್ರಿಯೆಯನ್ನು ತಿಳಿಯಲು ಬಂದರೆ ಆ ವಿದ್ಯಾರ್ಥಿಯು ಇಷ್ಟಪಡುವ ವೇದಾಂತ ಪ್ರಕ್ರಿಯೆಯನ್ನು ಗುರುಗಳು ಹೇಳಲು _ ಬೋಧಿಸಲು ಸಮರ್ಥರಿದ್ದರು. ಆಗ ಯಾವ ಭೇದಭಾವವೂ ಅಸೂಯಾಮತ್ಸರವೂ ಇರಲಿಲ್ಲವು.

**ಪಾಠಶಾಲಾ**

ಕಾಲಕ್ರಮದಲ್ಲಿ ಪ್ರಸಿದ್ಧ ವಿದ್ವಾಂಸರಲ್ಲಿ ಓದಲು ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾದುದಲ್ಲದೆ ವಿವಿಧ ಶಾಸ್ತ್ರಗಳನ್ನು ಓದುವ ವಿದ್ಯಾರ್ಥಿಗಳೂ ಅಧಿಕವಾದರು. ಆಗ ಗುರುಗಳು ಇತರ ವಿದ್ವಾಂಸರ ಸಹಾಯವನ್ನು ಕೋರಬೇಕಾಯಿತು. ಅಲ್ಲದೆ ವಿಶಾಲ ಸ್ಥಳದ ಅವಶ್ಯಕತೆಯೂ ಉಂಟಾಯಿತು. ವಿದ್ಯಾರ್ಥಿಗಳ ಸಂಖ್ಯೆ ಮತ್ತು ವಿಶಾಲವಾದ ಸ್ಥಳದ ಅವಶ್ಯಕತೆ ಇವುಗಳಿಗಾಗಿ ಶ್ರೀಮಂತರ, ಧಾರ್ಮಿಕರ ಅಭಿಮಾನದಿಂದ ಗುರುಗಳ ಮಠ, ವಿದ್ಯಾಸಂಸ್ಥೆಗೆ ಅಧಿಕ ಪರಮಾನವು ಉಂಟಾಯಿತು. ಇದರಿಂದ ಗುರುಗಳು ವಿದ್ಯಾರ್ಥಿಗಳಿಗೆ ಪ್ರತ್ಯೇಕ ಸ್ಥಾನವನ್ನೇರ್ಪಡಿಸಿ ಅಲ್ಲಿ ವಿದ್ವಾಂಸರ, ಉಪಾಧ್ಯಾಯರ ಸಹಾಯದಿಂದ ಪಾಠಪ್ರವಚನವನ್ನು ನಡೆಸಲು ಏರ್ಪಡಿಸಿದುದರ ಫಲವಾಗಿ ಆ ಪ್ರತ್ಯೇಕವಾದ ಸ್ಥಳಕ್ಕೆ **ಪಾಠಶಾಲಾ** ಎಂದು ಹೆಸರಾಯಿತು. ಆಗ ಮೇಲೆ ತಿಳಿಸಿದ ಗುರುಗಳು ವಾಸವಾಗಿದ್ದ ಮಠದಲ್ಲಿ ಕೆಳಗಿನ ಮಟ್ಟದ ವಿದ್ಯಾಭ್ಯಾಸಾಂಗವು ಕಡಿಮೆಯಾಗಿ ಪಾಠಶಾಲೆಯಲ್ಲಿ ನಡೆಯುವಂತೆಯೂ ಪ್ರೌಢಭಾಗ ಎಂದರೆ ವೇದಾಂತ ಭಾಗವನ್ನು ಮಾತ್ರ ಗುರುಗಳಲ್ಲಿಯೇ ವ್ಯಾಸಂಗ ಮಾಡುವ ಕ್ರಮವಾಯಿತು. ಇದರಿಂದ ಪಾಠಶಾಲೆಯು ಪ್ರಧಾನವಾಗಿ ಏರ್ಪಟ್ಟಿತು.

## ಮಠ – ಮಠಾಧಿಪತಿಗಳು

ಮಠದಲ್ಲಿ ಕೆಳಗಿನ ಮಟ್ಟದ ವಿದ್ಯಾಭ್ಯಾಸಂಗವು ಕಡಿಮೆಯಾಗಿ ಐಶ್ವರ್ಯದ ಮಾಹಾತ್ಮ್ಯೆಯಿಂದ ಪ್ರತ್ಯೇಕವಾಗಿ ಪಾಠಶಾಲೆಯು ಏರ್ಪಟ್ಟು ಅದರ ಮೇಲ್ವಿಚಾರಣೆಯು ಮಾತ್ರ ಗುರುಗಳಿಗೆ ಉಂಟಾದ್ದರಿಂದ ಆ ಮಠದ ಗುರುಗಳಿಗೆ ಮಠ ಶಬ್ದದಿಂದ ಮಠಾಧಿಪತಿಗಳೆಂದು ಕರೆಯಲಾಯಿತು.

ಮೇಲೆ ತಿಳಿಸಿದ ಮಠ, ಗುರುಗಳು, ಮಠಾಧಿಪತಿಗಳು ಯಾವ ವೇದಾಂತ ತತ್ತ್ವವನ್ನು ಯಾವ ವಿದ್ಯಾರ್ಥಿಯು ಇಷ್ಟಪಟ್ಟಲ್ಲಿ ಆ ವೇದಾಂತ ತತ್ತ್ವವನ್ನು ಅಂಥಾ ವಿದ್ಯಾರ್ಥಿಗಳಿಗೆ ಉಪದೇಶಿಸುವ ಶಕ್ತಿ ಸಾಮರ್ಥ್ಯಗಳು ಇದ್ದವು. ಯಾವ ಮಠದ ವಿದ್ಯಾರ್ಥಿಯೇ ಆಗಲಿ ಆ ವಿದ್ಯಾರ್ಥಿಯು ತನ್ನ ಮಠದ ತತ್ತ್ವವನ್ನು ತಿಳಿಯಬೇಕೆಂದು ತಿಳಿಸಿದರೆ ವಿದ್ಯಾರ್ಥಿಯು ತಾನು ಇಷ್ಟಪಟ್ಟ ವೇದಾಂತತತ್ತ್ವವನ್ನು ಗುರುಗಳು ಬೋಧಿಸಲು ಶಕ್ತಿವಂತರಾಗಿದ್ದರು.

ಕಾಲಕ್ರಮದಲ್ಲಿ ವೇದಾಂತ ಪ್ರಕ್ರಿಯೆಯಲ್ಲಿ ಭಿನ್ನಭಿನ್ನ ಮತ ಸಂಪ್ರದಾಯಗಳನ್ನು ತಿಳಿಯಲು ವಿದ್ಯಾರ್ಥಿಗಳು ಬಯಸುವವರಾಗಿದ್ದರು. ಅಂಥಾ ಮತದ ವೇದಾಂತ ಪ್ರಕ್ರಿಯೆಯನ್ನು ಬೋಧಿಸಲು ಅಂಥಾ ಮತದ ಗುರುಗಳೇ ಏರ್ಪಟ್ಟು ಅದರಿಂದ ಅನೇಕ ಮಠಗಳು ಪ್ರತ್ಯೇಕ ಪ್ರತ್ಯೇಕವಾಗಿ ಉತ್ಪನ್ನವಾದವು. ವಿದ್ಯಾರ್ಥಿಗಳೂ ಸಹ ತಮ್ಮ ತಮ್ಮ ವೇದಾಂತ ತತ್ತ್ವವನ್ನು ತಿಳಿಯಲು ಅಂಥಾ ಮತ ತತ್ತ್ವವನ್ನು ತಿಳಿಸುವ ಗುರುಗಳು ಎಂದರೆ ಅಂಥಾ ವೇದಾಂತ ಪ್ರಕ್ರಿಯೆ ತಿಳಿದ ಗುರುಗಳ ಮಠ – ಮಠಾಧಿಪತಿಗಳಲ್ಲಿ ವಿದ್ಯಾಭ್ಯಾಸಂಗ ಮಾಡುವವರಾದರು. ಅದರ ಫಲವಾಗಿ ಈಗ ಅನೇಕ ಮಠ ಸಂಪ್ರದಾಯ ಸಂಸ್ಥೆಗಳನ್ನು ಕಾಣುತ್ತೇವೆ.

## ಗೃಹಸ್ಥರು (ಪೀಠಾಧಿಪತಿ) ಸನ್ಯಾಸಿಗಳು (ಮಠಾಧಿಪತಿ)

ಸಾಧಾರಣವಾಗಿ ಮೇಲೆ ತಿಳಿಸಿದ ಮಠ – ವಿದ್ಯಾಭ್ಯಾಸ ಸ್ಥಳಗಳೆಲ್ಲವೂ ಗೃಹಸ್ಥರ ಅಧಿಕಾರದಲ್ಲಿದ್ದವು. ಆ ಗೃಹಸ್ಥರಲ್ಲಿ ಒಬ್ಬೊಬ್ಬರು ತುರ್ಯಾಶ್ರಮವನ್ನು ಅನುಸರಿಸುವವರಾದ್ದರಿಂದ ಅವರು ತಮ್ಮ ಕುಟುಂಬ ರಕ್ಷಣೆಗೆ ಪ್ರತ್ಯೇಕ ಏರ್ಪಾಡುಗಳನ್ನು ಮಾಡಿ ಸನ್ಯಾಸವನ್ನು ಸ್ವೀಕರಿಸಿ ತಾವಿದ್ದ ಸ್ಥಳದಲ್ಲೇ ಸನ್ಯಾಸಧರ್ಮವನ್ನು ನಡೆಸುವವರಾಗಿದ್ದರು. ಜೊತೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾದಾನವೂ ನಡೆಯುತ್ತಿದ್ದವು. ಮೇಲೆ ತಿಳಿಸಿದ ಗೃಹಸ್ಥರೂ, ಸನ್ಯಾಸಿಗಳೂ ಇಬ್ಬರನ್ನೂ ಕರೆಯುವಾಗ ಮರ್ಯಾದಾರ್ಥವಾಗಿ ಒಂದೇ ಶಬ್ದದಿಂದ ಪೀಠಾಧಿಪತಿಗಳು (ವಿದ್ಯಾಪೀಠ = ವಿದ್ಯೆಯನ್ನು ಬೋಧಿಸುವ ಸ್ಥಳ) ಎಂದು ಕರೆಯಲಾಯಿತು. ಆದರೆ ಇಬ್ಬರಿಗೂ ವೈಲಕ್ಷಣ್ಯ ತೋರಿಸಬೇಕಾದ್ದರಿಂದ ಸನ್ಯಾಸಿಗಳನ್ನು ಮಠಾಧಿಪತಿಗಳೆಂದೂ, ಗೃಹಸ್ಥ

ರನ್ನು ಪೀಠಾಧಿಪತಿಗಳೆಂಬ ಸಂಜ್ಞೆಯು ಏರ್ಪಟ್ಟಿತು. ಸಾಧಾರಣವಾಗಿ ಪೀಠಾಧಿಪತಿ-ಆಚಾರ್ಯಪುರುಷರು ಎಂಬ ಸಂಜ್ಞೆ ಶ್ರೀರಾಮಾನುಜರ ಕಾಲದಲ್ಲೂ ಮಠಾಧಿಪತ್ಯವು ಶಂಕರಾಚಾರ್ಯರ ಕಾಲದಲ್ಲೂ ಉಂಟಾಗಿರಬಹುದು.

ಶ್ರೀಶಂಕರಾಚಾರ್ಯರು ತಮ್ಮ ಅದ್ವೈತ ತತ್ವವನ್ನು ಬೋಧಿಸಲು ಭರತ ಖಂಡದ ಅಲ್ಲಲ್ಲಿ ಮಠಗಳನ್ನು ಸ್ಥಾಪಿಸಿ ಅಲ್ಲಿ ಸನ್ಯಾಸಿಗಳನ್ನೇರ್ಪಡಿಸಿದರು. ಕಾಲ ಕ್ರಮದಲ್ಲಿ ಅವರೇ ಮಠಾಧಿಪತಿಗಳಾದರೆಂದು ಕೇಳುತ್ತೇವೆ.

ಶ್ರೀರಾಮಾನುಜರು ತಮ್ಮ ವೇದಾಂತ ಪ್ರಕ್ರಿಯೆಯನ್ನು ಪ್ರಚಾರಗೊಳಿಸಲು ೭೪ ಸಿಂಹಾಸನಾಧಿಪತಿಗಳೆಂದು ಕರೆದು ಅವರಲ್ಲಿ ಗೃಹಸ್ಥರನ್ನೂ, ಸನ್ಯಾಸಿಗಳನ್ನೂ ಜೊತೆಯಲ್ಲಿ ಸೇರಿಸಿ ಏರ್ಪಡಿಸಿದರು. ಅಲ್ಲದೆ ವೈಷ್ಣವ ದೇವಾಲಯಗಳ ಆಡಳಿತ ವನ್ನೂ, ತಮ್ಮ ಮತ ಸಂಪ್ರದಾಯವನ್ನೂ ಪ್ರಚಾರಮಾಡಲು ಮಠ ಸನ್ಯಾಸಿಗಳನ್ನು ಏರ್ಪಡಿಸಿದರು. ಇವೆರಡರ ಸಂಬಂಧವಾಗಿ, ಅದ್ವೈತ, ಮತ್ತು ವೈಷ್ಣವ ವೇದಾಂತ ಪ್ರಕ್ರಿಯೆಯ ಸಂಸ್ಥೆಗಳು ಉಂಟಾದಮೇಲೆ ಅದರ ಅನಂತರದಾಗಿ ನಿಂಬಾರ್ಕ, ವಲ್ಲಭ, ಚೈತನ್ಯ ಇತ್ಯಾದಿ ಅನೇಕ ಸಂಸ್ಥೆಗಳು. ಮಠಾಧಿಪತಿಗಳು, ಪೀಠಾಧಿಪತಿ ಗಳು-ಆಚಾರ್ಯಪುರುಷರು ಏರ್ಪಟ್ಟಿರುವುದನ್ನು ಕಾಣುತ್ತೇವೆ.

## ಶ್ರೀಯದುಗಿರಿ ಯತಿರಾಜ ಮಠ

ಶ್ರೀರಾಮಾನುಜಾಚಾರ್ಯರು ತಿರುನಾರಾಯಣಪುರವನ್ನು ಜೀರ್ಣೋದ್ಧಾರ ಮಾಡಿ ದೇವಸ್ಥಾನ, ಗುಡಿಗೋಪುರ ಪ್ರಾಕಾರಾದಿಗಳನ್ನು ಕಟ್ಟಿದಮೇಲೆ ವಿಷ್ಣುವರ್ಧನನಿಗೆ ಹೇಳಕಳುಹಿಸಲು ವಿಷ್ಣುವರ್ಧನನು ದೇವರ ಪಡಿತರ ದೀಪಾರಾಧನೆ ನಡೆಯುವುದಕ್ಕೆ ಗ್ರಾಮ, ಭೂಮಿ, ಸೀಮೆಗಳನ್ನು ಕೊಟ್ಟು ರಾಮಾನುಜಾಚಾರ್ಯರಿಗೆ ಮಠವನ್ನು ಕಟ್ಟಿಕೊಡುವ ಮೇರೆಗೆ ವಿಷ್ಣುವರ್ಧನನು ಏರ್ಪಡಿಸಿದನು.

ದೇವಾಲಯಕ್ಕೆ ದಕ್ಷಿಣ ಪೂರ್ವದಲ್ಲಿ ನಿವೇಶನ ಒಂದಕ್ಕೆ ೬೨ ಅಡಿಗಳ ಅಳತೆ ಭೂಮಿಯು ಮೇರೆ ೧೫ ನಿವೇಶನಗಳ ಭೂಮಿ. ತೆಂಕಲಲ್ಲಿ ಬಡಗಲಲ್ಲಿ ಇದಕ್ಕೆ ಇಮ್ಮಡಿ ಮೂಡಾ ಪಡುವಲಾಗಿ ಭಾಷ್ಯಕಾರರು ತಮ್ಮದಾಗಿ ಶ್ರೀ ಯತಿರಾಜಮಠ ವನ್ನು ಕಟ್ಟಿಸಿ ಅದರಲ್ಲಿ ಕೋಯಿಲ್‌ಕೇಳ್ವಿ ಶ್ರೀತಿರುನಾರಾಯಣ ಜೀಯರನ್ನು, ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿ ಅವರು ದೇವಸ್ಥಾನದ ಸಕಲ ಅಧಿಕಾರವನ್ನು ಅಗ್ರ ತೀರ್ಥಾದಿ ಮರ್ಯಾದೆಗಳನ್ನೂ ಅನುಭವಿಸಿ ಬರುವಂತೆ ಏರ್ಪಡಿಸಿದರು. ಶ್ರೀರಾಮಾನುಜಾಚಾರ್ಯರಿಗೆ ಶ್ರೀತಿರುನಾರಾಯಣಸ್ವಾಮಿಯವರನ್ನು ಸೇವಿಸಿದ ದಿವಸವು ಮಕರಮಾಸ ಶುಕ್ಲ ಪುನರ್ವಸು ನಕ್ಷತ್ರವು. ಆ ದಿನದ ಚರವನ್ನು ಸೇವಾಭು

ತಿರುನಾರಾಯಣ ಜೀಯರು ಶಿಷ್ಯಪರಂಪರೆಯಾಗಿ ನಡೆಸಿಕೊಂಡು ಬರುವುದೆಂದು ಅನುಗ್ರಹಿಸಿ ತಾವು ಕಟ್ಟಳೆಯಿಟ್ಟ ಮೇರೆಗೆ ಭಕ್ತಿ ವಿಷಯದೊಡನೆ ಅನವರತಸೇವಾ ಪರಿಚರ್ಯವಾಗಿ ಸತ್ಯಸ್ಥಿರಚಿತ್ತಕರಣಂಗಳಲ್ಲಿ ಕೈಂಕರ್ಯನಿಷ್ಠರಾಗಿ ತಮ್ಮ ತಮ್ಮ ಊಳಿಗಂಗಳನ್ನು ನಡೆಸುವಂತೆಯೂ ಆಚಾರ್ಯ ನಿಯಮನದಿಂದ ಆದರದಿಂದ ಸರ್ವವಿಧ ಊಳಿಗಂಗಳನ್ನು ಪಾಲಿಸಿಕೊಂಡು ಸುಖಿಸುತ್ತಿರಲುಳ್ಳವರು" ಎಂದಾಜ್ಞಾಪಿಸಿ ಶ್ರೀಭಾಷ್ಯಕಾರರು ತಮ್ಮ ಪ್ರಥಮ ಶಿಷ್ಯರಾದ ಕೋಯಿಲ್‌ಕೇಳ್ವಿ (ದೇವಸ್ಥಾನ ವಿಚಾರಣಾಕರ್ತ) ದೇಶಾಯಿ ತಿರುನಾರಾಯಣಜೀಯರು ಮತ್ತು ಕೈಂಕರ್ಯ ಪರರಾದ ಏವತ್ತಿಬ್ಬರು ಸಹ ತಮ್ಮ ಆಚಾರ್ಯ ವಿಗ್ರಹದಿದಿರಲ್ಲಿ ದೊಡ್ಡ ಕಣಜದಲ್ಲಿರುವ ದ್ರವ್ಯವನ್ನು ತೆಗೆದು ದೇವಾಲಯಕ್ಕೆ ಸಂಕಟವೊದಗಿದಾಗ ವೆಚ್ಚಿಸುವುದು ಎಂದು ಅಪ್ಪಣೆಯನ್ನು ದಯಪಾಲಿಸಿದರು.

ಶ್ರೀಭಾಷ್ಯಕಾರರ ನಿಯಮನದಂತೆ **ದೇಶಾಯಿ ತಿರುನಾರಾಯಣ ಜೀಯರು** ದೇವಸ್ಥಾನದ ಸಕಲವಾದ ಅಧಿಕಾರ ಅಗ್ರತೀರ್ಥ ಮರ್ಯಾದೆಯನ್ನು ಹೊಂದಿ ಶ್ರೀತಿರುನಾರಾಯಣಸ್ವಾಮಿ, ಚೆಲುವನಾರಾಯಣಸ್ವಾಮಿಯವರ ಸಕಲವಾದ ಕೈಂಕರ್ಯಗಳನ್ನು ನಡೆಸಿ ಯೋಗಕ್ಷೇಮವಾಗಿ ೩೩ ಚಾತುರ್ಮಾಸ ದೀಕ್ಷಿತರಾಗಿ ತಮ್ಮ ಅಂತ್ಯಕಾಲದಲ್ಲಿ ಶಿಷ್ಯರಾದ ನಾರಾಯಣಜೀಯರಿಗೆ ಪಟ್ಟವನ್ನು ಕೊಟ್ಟು **ರಾಮಾನುಜ ಮುದ್ರೆಯುಂಗುರವನ್ನು** ಅನುಗ್ರಹಿಸಿ ಶಕ ೧೦೬೨ ರೌದ್ರಿ ಸಂ॥ (A.D. ೧೧೪೦) ಚೈತ್ರ ಬಹುಳ ಷಷ್ಠೀ ದಿನದಲ್ಲಿ ಪರಮ ಪದಿಸಿದರು.

### ಶ್ರೀತಿರುನಾರಾಯಣಜೀಯರು

| | |
|---|---|
| ಪಟ್ಟದ ಸ್ವೀಕಾರಕಾಲ | ಪರಮಪದಕಾಲ |
| ಶಾ. ಶ. ೧೦೬೨ ರೌದ್ರಿ ಸಂ॥ | ಶಕ೧೧೦೮ ಪರಾಭವ ಸಂ॥ |
| (A.D. ೧೧೪೦) | ಜ್ಯೇಷ್ಠಶುದ್ಧ ಪ್ರಥಮಾ (೧೧೮೬) |

ಶ್ರೀ ತಿರುನಾರಾಯಣಜೀಯರು ದೇಶಾಯಿಕೇಳ್ವಿ ರಾಮಾನುಜಜೀಯರಿಂದ ಪಟ್ಟವನ್ನು ಪಡೆದುಕೊಂಡು ರಾಮಾನುಜಮುದ್ರೆಯುಂಗುರವನ್ನು ಸ್ವೀಕರಿಸಿ ಶ್ರೀತಿರುನಾರಾಯಣ ದೇವರಿಗೆ ಸಕಲವಿಧ ಕೈಂಕರ್ಯಗಳನ್ನೂ ದೇವಸ್ಥಾನದ ಆಡಳಿತವನ್ನೂ ನಡೆಸಿಕೊಂಡು ಬಂದರು.

ಶ್ರೀರಾಮಾನುಜರು ತೊಂಡನೂರಿಗೆ ಬಿಜಯಮಾಡಿಸಿದಾಗ ಅವರಿಗೆ ಸುಮಾರು ೮೦ ವರ್ಷ ವಯಸ್ಸಾಗಿದ್ದಿತು. ಇಲ್ಲಿ ೧೨ ವರ್ಷಗಳಿದ್ದು ಶ್ರೀರಂಗಕ್ಕೆ ಬಿಜಯ ಮಾಡಿಸಿದ ಮೇಲೆ ಅಲ್ಲಿ ೨೦ ವರ್ಷಗಳಕಾಲ ಸಿದ್ಧಾಂತಸ್ಥಾಪನೆ ಮಾಡುತ್ತಿದ್ದರು. ಈ ಮಧ್ಯೆ ಕಾವೇರಿ ತೀರದಲ್ಲಿ ನಾಥಸ್ವಾಮಿ (ನಂಜೀಯರು) ಎಂಬುವರು

ಅದ್ವೈತವೇದಾಂತ ವಿದ್ವತ್ಪ್ರಸಿದ್ಧರಾಗಿ ಬರುತ್ತಿರುವರೆಂದು ಕೇಳಿ ಅವರನ್ನು ಜಯಿಸಿಬರುವಂತೆ ಕೂರತ್ತಾಳ್ವಾನ್ ಕುಮಾರರು ಶ್ರೀಪರಾಶರಭಟ್ಟರಿಗೆ ತಿಳಿಸಿ ಶಕ ೧೦೬೦ ಪಿಂಗಳ ಸಂ॥ (೧೧೩೮) ಮಾಘಶುದ್ಧ ದಶಮಿಯಲ್ಲಿ ಪರಮಪದಿಸಿದರು.

ಶ್ರೀಪರಾಶರಭಟ್ಟರು ಆಚಾರ್ಯರ ಆಜ್ಞೆಯಂತೆ ಅದ್ವೈತವೇದಾಂತಪ್ರಸಿದ್ಧರಾದ ಮಾಧವಸ್ವಾಮಿಯನ್ನು ಜಯಿಸಲು ಹೊರಟು ಈ ಮೇಲ್ನಾಡಿಗೆ ಬಂದರು. ಆಗ ಭಟ್ಟರಿಗೆ ಸುಮಾರು ೬೦—೭೦ ವರ್ಷಕ್ಕೆ ಮೇಲ್ಪಟ್ಟು ಮಾಧವಸ್ವಾಮಿಗೆ ೩೫—೪೫ ವರ್ಷಗಳೂ ಆಗಿರಬಹುದು. ಭಟ್ಟರು ಬಂದಿರುವುದನ್ನು ಶ್ರೀರಂಗಪಟ್ಟಣದ ಕಾವೇರಿ ತೀರದಲ್ಲಿದ್ದ ವಿದ್ವಚ್ಛ್ರೇಷ್ಠರಾದ ಶ್ರೀಅನಂತಾಳ್ವಾರ್‌ರವರು (ಆಗ ಅವರಿಗೆ ೭೫–೮೦ ವರ್ಷವಿರಬಹುದು ಅನಂತಾಳ್ವಾರ್‌ರಕಾಲ ೧೦೫೪—೧೧೫೪) ಭಟ್ಟರನ್ನು ಕಂಡು ವಿಶಿಷ್ಟಾದ್ವೈತ ಸಿದ್ಧಾಂತ ಸಾರ್ವಭೌಮರಿಗೆ ಸ್ವಾಗತವೆಂದು ಹೇಳಿ ತಿರುನಾರಾಯಣಪುರಕ್ಕೆ ಕರೆದುಕೊಂಡು ಬಂದರು. ತಿರುನಾರಾಯಣಪುರದಲ್ಲಿ ಶ್ರೀ ಯತಿರಾಜ ತಿರುನಾರಾಯಣಜೀಯರು ಐವತ್ತಿಬ್ಬರು ಶ್ರೀವೈಷ್ಣವರುಗಳು ಸೇರಿ ದೇವಸ್ಥಾನದ ಶ್ರೀಶಠಕೋಪವೇ ಮೊದಲಾದ ಸಮಸ್ತ ಮರ್ಯಾದೆಗಳಿಂದ ಸ್ವಾಗತಿಸಿದರು.

ಭಟ್ಟರು ದೇವಸ್ಥಾನದಲ್ಲಿ ಪ್ರದಕ್ಷಿಣವಾಗಿ ಬಂದು ಎಲ್ಲಾ ಸನ್ನಿಧಿ ದೇವರುಗಳನ್ನೂ ಸೇವಿಸಿ, ತಿರುನಾರಾಯಣ ಸನ್ನಿಧಿಗೆ ಬಂದು—

ಅಜ್ಞಾನ ಜನ್ಮಗೃಹಮಾತ್ಮಗುಣೈರ್ವಿಮುಕ್ತ
ಮಾಹ್ನಾತಿ ಬಂಧನ ಪರಂ ಯದುಶೈಲನಾಥ
ಮಿಥ್ಯಾ ಪ್ರಪನ್ನ ಮತಿ ಮಾಮನವಲೋಕಯ ತ್ವಂ ।
ಭಿಕ್ಷ್ವಾಂಶ್ಚ ದೃಷ್ಟಮಾಹಾತ್ಮ ಗುರೂ ನವಲೋಕ್ಯ ಪೂರ್ವಾನ್ ।

ಈ ರೀತಿ ಮಂಗಳಾ ಶಾಸನವನ್ನು ಮಾಡಿ ಅನುಸಂಧಿಸಿದ ಮೇಲೆ ಭಟ್ಟರು ಅನಂತಾಳ್ವಾರ ಜೊತೆಯಲ್ಲಿ ಹೊರಟು ಕಾವೇರೀ ತೀರದಲ್ಲಿದ್ದ ವೇದಾಂತಿ ಮಾಧವಸ್ವಾಮಿ ಬಳಿಗೆ ಹೋಗಿ ವೇದಾಂತ ವಾದದಲ್ಲಿ ಜಯಿಸಿ ಅವರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು, ಅವರಿಗೆ ಸನ್ಯಾಸವನ್ನು ಕೊಟ್ಟು ನಮ್ಮಜೀಯರು=ನಂಜೀಯರು ಎಂದು ಹೆಸರಿಟ್ಟರು. ಭಟ್ಟರ ಅನಂತರ ಶ್ರೀವೈಷ್ಣವರಿಗೆಲ್ಲಾ ನಂಜೀಯರೇ ಆಚಾರ್ಯರಾದರು. ಭಟ್ಟರು, ತಿರುನಾರಾಯಣಪುರದಲ್ಲಿ ಶ್ರೀರಾಮಾನುಜಾಚಾರ್ಯರ ಸನ್ನಿಧಿಯ ಮುಂದೆ ಶ್ರೀಭಾಷ್ಯ ವಿಚಾರವಾಗಿ ಉಪನ್ಯಾಸ ಮಾಡಿದರು.



ಶ್ರೀ ಸಂಕಣ್ಣನವರು
(ಶ್ರೀ ಪದ್ಮಿಕೃಷ್ಣ—ಹಯಗ್ರೀವಾಚಾರ್ಯರ ಪತ್ನಿ)



ಶ್ರೀ ಯಮನಿಗ್ರಹಾಯರು
ಶ್ರೀ ಪತ್ನೀತಾಯಮ್ಮನವರು

ಆದೇಶಾಲಿದಲ್ಲಿ ನಡುವಿಳಾಖ್ಯಾನ್ಗರವರು ಶ್ರೀಭಾಷ್ಯವನ್ನು ಪಂಗಿಸ್ಪರದಾಚ್ಯ. ತೊಟ್ಟೆ ದುವಸ್ತ್ಯಾಳುಳಿಟ್ಪುರ ಮುಂತಾದವರಿಗೆ ಶ್ರೀಭಾಷ್ಯ, ಭಗವದ್ವಿಷಯ ಕಾಲಕ್ಷೇಪ ಹೇಳುತ್ತಿದ್ದರು.

ಭಟ್ಟರ ವಂಶೀಯರಿಗೆ ಈ ದೇಶದಲ್ಲಿ ಕೆಲವು ಗ್ರಾಮ ಭೂಮಿಗಳು ಧರ್ಮ ಮಾಡಿರುವುದು ತಿಳಿದುಬರುವುದು.

ಶ್ರೀ ತಿರುನಾರಾಯಣಜೀಯರು ಚೆಲ್ವಪಿಳ್ಳೆಯವರಿಗೆ ಸದಾ ಹೃದಯದಲ್ಲಿ ಧರಿಸಿರುವಂತೆ ಬಂಗಾರದ ಲಕ್ಷ್ಮೀವಿಗ್ರಹವನ್ನು ಮಾಡಿಸಿ ಸಮರ್ಪಿಸಿರುವರು.

ಶ್ರೀಯತಿರಾಜಮಠದ ತಿರುನಾರಾಯಣಜೀಯರ ಕಾಲದಲ್ಲಿ ದೇವಸ್ಥಾನಕ್ಕೆ ಅನೇಕ ಗ್ರಾಮ ಭೂಮಿಗಳು ಸಮರ್ಪಿಸಲ್ಪಟ್ಟವು. ಈ ಜೀಯರು ೪೨ ಚಾತುರ್ಮಾಸ ದೀಕ್ಷಿತರಾಗಿದ್ದು ತಮ್ಮ ಉತ್ತರಾಧಿಕಾರಿಗೆ ಅಧಿಕಾರವನ್ನು ಕೊಟ್ಟರು.

ಈ ರೀತಿಯಾಗಿ ಶ್ರೀರಾಮಾನುಜರಿಂದ ಏರ್ಪಟ್ಟ ಶ್ರೀಯತಿರಾಜಮಠದಲ್ಲಿ ಶ್ರೀರಾಮಾನುಜರ ಉತ್ತರಾಧಿಕಾರಿಯಾಗಿ ಸನ್ಯಾಸಿ ಶಿಷ್ಯ ಪ್ರಶಿಷ್ಯ ಕ್ರಮದಲ್ಲಿ ಆಚಾರ್ಯ ಪರಂಪರೆಯಾಗಿ ಮಠಾಧಿಪತಿಗಳು ಶ್ರೀನಾರಾಯಣಸ್ವಾಮಿ ಚೆಲುವ ರಾಯಸ್ವಾಮಿ ದೇವಸ್ಥಾನ ಆಡಳಿತ, ದೇವರಕೈಂಕರ್ಯ, ಅಗ್ರತೀರ್ಥ ಸ್ವೀಕರಣೆ, ವಿಶಿಷ್ಟಾದ್ವೈತ ಸಿದ್ಧಾಂತ ಸ್ಥಾಪನೆಗಳನ್ನು ನಡೆಸಿಕೊಂಡು ಬರುತ್ತಿರುವರು.

ಪ್ರಸ್ತುತ ಈ ಗ್ರಂಥರಚನಾ ಕಾಲದಲ್ಲಿ ಶ್ರೀರಾಮಾನುಜರ ವಂಶದವರೇ ಆಗಿ ಆಶ್ರಮ ಸ್ವೀಕರಿಸಿ ಮಠದ ಪರಂಪರೆಯಲ್ಲಿ ೪೦ನೆಯ ಮಠಾಧಿಪತಿಗಳಾಗಿ ಶ್ರೀನಾರಾಯಣಸ್ವಾಮಿ, ಚೆಲುವನಾರಾಯಣಸ್ವಾಮಿ ಕೈಂಕರ್ಯವನ್ನು, ರಾಮಾನುಜ ಸಿದ್ಧಾಂತ ಸ್ಥಾಪನೆಯನ್ನೂ ಮಾಡುತ್ತಾ ಬರುತ್ತಿರುವರು.

ಶ್ರೀಮತೇ ರಾಮಾನುಜಾಯ ನಮಃ

## ಶ್ರೀಯದುಗಿರಿ ಯತಿರಾಜಮಠದ ಸಿಂಹಾಸನಾಧಿಪತಿಗಳ ಆಶ್ರಮ (ಆಶ್ರಯಣ) ಪರಂಪರಾ

| | ಹೆಸರು | ಜನನ ಕಾಲ | ಆಶ್ರಮ ಸ್ವೀಕಾರ ಕಾಲ | ಪರಮಪದ ಕಾಲ | ಪಟ್ಟದಹೆಸರು | ಪರಮಪದ ಸ್ಥಳ | ಆಶ್ರಮ ವರ್ಷಗಳು |
|---|---|---|---|---|---|---|---|
| | ಶ್ರೀಮತ್ಪರಮಹಂಸೇತ್ಯಾದಿ — | | | | | | |
| ೧ | ಶ್ರೀರಾಮಾನುಜಾಚಾರ್ಯರು | ಶಕ ೯೩೯ ಪಿಂಗಲ ಸಂ\|\| ಮೇಷ ಆರ್ದ್ರಾ (AD 1017) | AD 1049 | ಶಕ ೧೦೫೯ ಪಿಂಗಲ ಸಂ ಮಾಘ ಶುದ್ಧ ದಶಮಿ (AD 1137) | | ಶ್ರೀರಂಗ | ೮೮ |
| ೨ | ಶ್ರೀಶೈಲಾರ್ಯ ತಿರುನಾರಾಯಣ ಜೀಯರು | — | ೧೦೨೬ ಸ್ವಭಾನು ಸಂ\|\| ಮೀ. ಶು. ೫ AD 1104 | ೧೦೬೨ ರೌದ್ರಿ ಸಂ ಚೈತ್ರ ಬ. ಶು. (AD 1140) | | ತಿರುನಾರಾಯಣಪುರ | ೩೬ |
| ೩ | ಶ್ರೀತಿರುನಾರಾಯಣಜೀಯರು | — | ೧೦೬೨ ರೌದ್ರಿ ಸಂ\|\| AD 1140 | ೧೧೦೨ ಶಾರ್ವರಿ ಸಂ\|\| ಜ್ಯೇಷ್ಠ ಬ ಪ್ರಥಮಾ AD 1180 | | ” | ೪೦ |
| ೪ | ಶ್ರೀಯತಿರಾಜಜೀಯರು | — | ೧೧೦೮ ಪರಾಭವ ಸಂ\|\| AD 1186 | ೧೧೪೩ ವೃಷ ಸಂ\|\| (AD 1221) | | ” | ೩೫ |
| ೫ | ಶ್ರೀಯದುಗಿರಿ ನಾರಾಯಣಜೀಯರು | — | ೧೧೪೩ ವೃಷ ಸಂ\|\| AD 1221 | — | | ” | |
| | ಶ್ರೀರಾಮಾನುಜಜೀಯರು (1368) | — | — | — | | ” | |
| | ಶ್ರೀಯತಿರಾಜ ರಾಮಾನುಜಜೀಯರು (1457) | — | — | — | | ” | |
| ೨೭ | ಶ್ರೀಶೇಷಾದ್ರಿ ರಾಮಾನುಜ ಮುನಿಗಳು | — | AD 1519 | (AD 1565) | | ತಿರುನಾರಾಯಣಪುರ | ೪೬ |
| ೨೮ | ಶ್ರೀಸಂಪತ್ಕುಮಾರ ರಾಮಾನುಜ ಜೀಯರು | — | 1565 | — | | ” | ೨೦ |

| | | | | | | | |
|---|---|---|---|---|---|---|---|
| ೨೯ | ಶ್ರೀನಾರಾಯಣ ರಾಮಾನುಜಜೀಯರು | — | — | — | | ತಿರುನಾರಾಯಣಪುರ | |
| ೩೦ | ಸಂಪತ್ಕುಮಾರ ರಾಮಾನುಜಜೀಯರು | — | — | — | | " | |
| ೩೧ | ನಾರಾಯಣ ರಾಮಾನುಜಜೀಯರು | — | — | — | | " | |
| ೩೨ | ಸಂಪತ್ಕುಮಾರ ರಾಮಾನುಜಜೀಯರು | | — | — | | " | |
| ೩೩ | ಕುಡಿಗಲ್ ಬಕುಳಾಭರಣಸ್ವಾಮಿ | — | — | ೧೭೪೪ ಚಿತ್ರಭಾನು ಸಂ॥ — —1822 | ನಾರಾಯಣ | " | |
| ೩೪ | ಕೌಟಂ ಶ್ರೀ ಭ ಸಿಂಗರಯ್ಯಂಗಾರ್ ಸ್ವಾಮಿ | ಕನ್ಯಾ ಸ್ವಾತಿ | ೧೭೪೪ ಚಿತ್ರಭಾನು ಸಂ॥ 1822 | ೧೭೬೧ ವಿಕಾರಿ ಸಂ॥ ಮಾರ್ಗಶಿರ ಶು. ಪೌರ್ಣಮಿ 20-12-1839 | ಸಂಪತ್ಕುಮಾರ | " | ೧೭ |
| ೩೫ | ಶಿಟ್ಟಮೇಲ್ ಅನಂತಾಚಾರ್ಯಸ್ವಾಮಿ | ಕುಂಭ ಚಿತ್ತಾ | ೧೭೬೧ ವಿಕಾರಿ ಸಂ॥ ಮಾರ್ಗಶಿರ ಶು. ಚತುರ್ದಶಿ 19-12-1839 | ೧೭೭೧ ಸೌಮ್ಯ ಸಂ॥ — —1849 | ನಾರಾಯಣ | ತಿರುನಾರಾಯಣಪುರ | ೧೦ |
| ೩೬ | ಛಾಂದೋಗ್ಯಂ ಕೃಷ್ಣಯ್ಯಂಗಾರ್ ಸ್ವಾಮಿ | ಕಾರ್ತಿಕ ಕೃತ್ತಿಕಾ | | ೧೭೮೦ ಕಾಳಯುಕ್ತಿ ಸಂ॥ ಅಧಿಕ ಜ್ಯೇಷ್ಠ ಶು. ೧೧ 24-5-1858 | ಸಂಪತ್ಕುಮಾರ | " | |
| ೩೭ | ನಾಟೇರಿ ವರದಾಚಾರ್ಯಸ್ವಾಮಿ | ಕುಂಭ ರೋಹಿಣಿ | ೧೭೭೬ ಪ್ರಮಾದೀಚ ಸಂ॥ ಮಾಘ ( — 1854) | ೧೮೧೨ ವಿಕೃತಿ ಸಂ॥ ಶ್ರಾವಣ ಬ. ತೃತೀಯ 1-9-1890 | ನಾರಾಯಣ | ಗೋವಿಂದಪುರ | ೩೨ |
| ೩೮ | ಕೃಷ್ಣಯ್ಯನ್ (ಮುದಿಗುಂಡಂ) ವೆಂಕಟಾಚಾರ್ಯಸ್ವಾಮಿ | ೧೭೩೬ ಭಾವ ಸಂ॥ ಮಿಥುನ ಭರಣಿ 1814 | ೧೭೮೯ ಪ್ರಭವ ಸಂ॥ ಚೈತ್ರ — —1867 | ೧೭೯೬ ಭಾವ ಸಂ॥ ಆಷಾಢ ಶು. ತೃತೀಯ 17-6-1874 | ಸಂಪತ್ಕುಮಾರ | ತಿರುನಾರಾಯಣಪುರ | ೭ |
| ೩೯ | ಪೆರಿಯಕುಮಾರ ಸಿಂಗರಾಚಾರ್ಯಸ್ವಾಮಿ | ೧೭೨೭ ಕ್ರೋಧನ ಸಂ॥ ಆಶ್ವಿನ ಪೂರ್ವಾಭಾದ್ರ 1805 | ೧೭೯೬ ಭಾವ ಸಂ॥ ಆಷಾಢ ಶು. ತೃತೀಯ 17-6-1874 | ೧೭೯೮ ಧಾತು ಸಂ॥ ಆಷಾಢ ಶು. ದ್ವಿತೀಯ 23-6-1876 | ನಾರಾಯಣ | " | ೨ |
| ೪೦ | ಸ್ವಾತಂತ್ರ್ಯ ಅಳಗಿಯ ಸಿಂಗರ್ ಸ್ವಾಮಿ | ಕಾರ್ತಿಕ ಪೂರ್ವಾಭಾದ್ರ | — | ೧೮೦೭ ಪಾರ್ಥಿವ ಸಂ॥ ಫಾಲ್ಗುಣ ಬ. ಪಂಚಮಿ 24-3-1886 | ಸಂಪತ್ಕುಮಾರ | ಶ್ರೀರಂಗಂ | ೧೦ |

| | | | | | | | |
|---|---|---|---|---|---|---|---|
| ೪೧ | ನಾಟಿಂಪಳ್ಳಿ ತಿರುನಾರಾಯಣ ಪ್ಪೆರುಮಾಳ್ | ೧೭೨೨ ರೌದ್ರಿ ಸಂ॥ ಮಿಥುನ ಆರ್ದ್ರಾ 22-6-1800 | ೧೮೦೭ ಪಾರ್ಥಿವ ಫಾಲ್ಗುಣ ಕೃಷ್ಣ ಪಂಚಮಿ | ೧೮೦೯ ಸರ್ವಜಿತು ಸಂ॥ ಶ್ರಾವಣ ಅಮಾವಾಸ್ಯೆ 3-8-1887 | ನಾರಾಯಣ | ನಾಗಪುರ | ೨ |
| ೪೨ | ಜೀಯರ್ ಸ್ವಾಮಿ ತಿರುಮಲಾಚಾರ್ಯಸ್ವಾಮಿ | ಕಾರ್ತಿಕ ಸ್ವಾತಿ | ಆರ್ದ್ರಾ ಸರ್ವಜಿತು ಸಂ॥ ಆಶ್ವಯುಜ AD 10-10-1887 | ೧೮೨೩ ಪ್ಲವ ಸಂ॥ ಆಶ್ವಯುಜ ಶು. ದ್ವಿತೀಯ 28-10-1901 | ಸಂಪತ್ಕುಮಾರ | ಗೋವಿಂದಪುರ | ೧೪ |
| ೪೩ | ಚಿನ್ನ ಕಾವನೂರ ತಿರುಗಲಾಚಾರ್ಯಸ್ವಾಮಿ | ೧೭೫೧ ವಿರೋಧಿ ಸಂ॥ ವೃಷಭ ಅನೂರಾಧ 11-5-1829 | ೧೮೨೩ ಪ್ಲವ ಸಂ॥ ಪುಷ್ಯ ಪೌರ್ಣಮಿ 23-1-1902 | ೧೮೨೯ ಪ್ಲವಂಗ ಸಂ॥ ಕಾರ್ತಿಕ ಬ. ಪಂಚಮಿ 26-11-1907 | ನಾರಾಯಣ | ತಿರುನಾರಾಯಣ ಪುರ | ೬ |
| ೪೪ | ಕೊಪ್ಪೆಕಂಬಿ ಅಳಸಿಂಗ್ರಾಚಾರ್ಯಸ್ವಾಮಿ | ೧೭೬೮ ಪರಾಭವ ಸಂ॥ ಮೇಷ ಉತ್ತರಾಷಾಢ 24-4-1846 | ...... ಶುಕ್ಲ ತ್ರಯೋದಶೀ 12-7-1908 | ೧೮೩೫ ಪ್ರಮಾದೀಚ ಸಂ॥ ಜ್ಯೇಷ್ಠ ಶು. ದಶಮಿ 13-6-1913 | ಸಂಪತ್ಕುಮಾರ | " | ೫ |
| ೪೫ | ಕೊಡಸೆ ವೆಂಕಟಾಚಾರ್ಯಸ್ವಾಮಿ | ಮಿಥುನ ಸ್ವಾತಿ 26-6-1837 | ೧೮೩೫ ಪ್ರಮಾದೀಚ ಆಷಾಢ ಶುಕ್ಲ ನವಮಿ 12-7-1913 | ೧೮೩೯ ಪಿಂಗಳ ಸಂ॥ ಆಷಾಢ ಬ. ಪ್ರತಿಪತ್ 5-7-1917 | ನಾರಾಯಣ | " | ೪ |
| ೪೬ | ಆಸೂರಿ ಅನಂತಾಚಾರ್ಯಸ್ವಾಮಿ | ೧೭೮೦ ಕಾಲಯುಕ್ತಿ ಸಂ॥ ಕುಂಭ ಅನೂರಾಧಾ 24-2-1859 | ೧೮೪೨ ರೌದ್ರಿ ಸಂ॥ ಮಾಘ ತೃತೀಯ 11-2-1921 | ೧೮೬೫ ಸ್ವಭಾನು ಸಂ॥ ವೈಶಾಖ ಶು. ತ್ರಯೋದಶೀ 17-5-1943 | ಸಂಪತ್ಕುಮಾರ | " | ೨೨ |
| ೪೭ | ಶ್ರೀಕೃಷ್ಣ ಕಾವನೂರ ತಿರುವೆಂಕಟಾಚಾರ್ ಸ್ವಾಮಿ | ೧೮೦೭ ಪಾರ್ಥಿವ ಸಂ॥ ಧನುರ್ಮಾಸ ರೇವತಿ 15-12-1885 | ೧೮೬೬ ತಾರಣ ಸಂ (17-4-1944) | — | ನಾರಾಯಣ | ಶ್ರೀರಂಗಂ | ೧೦ |
| ೪೮ | ಡಾ. ಅ. ಅಚ್ಯುತಯ್ಯಂಗಾರ್ ಸ್ವಾಮಿ | ೧೮೧೦ ಸರ್ವಜಿತು ಸಂ॥ ಮೀನ ಪುಷ್ಯ 1888 | ೧೮೭೬ ಜಯ ಸಂ॥ ಆಷಾಢ ಶು. ಪಂಚಮಿ 5-7-1954 | 20-12-1970 ವೈಶಾಖ ಶು. ತ್ರಯೋದಶಿ | ಸಂಪತ್ಕುಮಾರ | ತಿರುನಾರಾಯಣ ಪುರ | ೧೬ |
| ೪೯ | ಡಾ. ನಾರಾಯಣಯ್ಯಂಗಾರ್ ಸ್ವಾಮಿ | ಮಿಥುನ ಭರಣಿ | 20-12-1970 | ಬುಧವಾರ 9-5-1979 | ನಾರಾಯಣ | " | |
| ೫೦ | ಆಸೂರಿ ಶ್ರೀನಿವಾಸಯ್ಯಂಗಾರ್ ಸ್ವಾಮಿ | ಕೀಲಕ ಸಂ॥ ತುಲಾ ರೋಹಿಣಿ 1908 | ೧೯೦೩ ದುರ್ಮತಿ ಸಂ॥ 29-5-1981 | | ಸಂಪತ್ಕುಮಾರ | " | |

## ⓢ ಪರಕಾಲಮಠ

ಹಸ್ತೀಶಂ ಲೋಕವಿಖ್ಯಾತಂ ಕೌಂಡಿನ್ಯಂ ವಿದುಷಾಂವರಂ ।
ರಾಮಾನುಜಾರ್ಯ ಸಿದ್ಧಾಂತ ಸ್ಥಾಪನಾಚಾರ್ಯ ಮಾಶ್ರಯೇ ॥

ಈ ಮಹಾತ್ಮರು ಕಾಂಚೀಪುರದಲ್ಲಿ ಶ್ರೀವರದರಾಜರ ಕೈಂಕರ್ಯದಲ್ಲಿ ನಿರತರಾದ ವೇದಾಂತ ಶಾಸ್ತ್ರವೇತ್ತರೂ, ವಿದ್ಯಾವಿನಯಸಂಪನ್ನರೂ ಆಗಿ ತುರೀಯಾಶ್ರಮವನ್ನು ವಹಿಸಿ ರಾಮಾನುಜ ಸಿದ್ಧಾಂತವನ್ನು ಪ್ರಚಾರ ಮಾಡಲು ಮಠ ಒಂದನ್ನು ಸ್ಥಾಪಿಸಿದರು. ಇವರ ಬ್ರಹ್ಮಜ್ಞಾನ, ಬ್ರಹ್ಮತೇಜಸ್ಸು ಇವುಗಳ ಫಲವಾಗಿ ಬ್ರಹ್ಮತಂತ್ರಸ್ವಾಮಿಗಳು ಎಂದೂ ಕರೆಯಲ್ಪಟ್ಟರು. ಮಠವನ್ನು ಸ್ವತಂತ್ರವಾಗಿ ಸ್ಥಾಪಿಸಿದ್ದರಿಂದ ಬ್ರಹ್ಮತಂತ್ರಸ್ವತಂತ್ರ ಮಠ ಎಂಬುದಾಗಿ ಕರೆಯಲ್ಪಟ್ಟಿತು.

ಈ ಪೀಠದಲ್ಲಿ ಆಚಾರ್ಯರಾಗಿ ಬಂದ ಮಠಾಧಿಪತಿಗಳೆಂಬುವರು ಯಾತ್ರಾರ್ಥಿಯಾಗಿ ಹೊರಟು ತಿರುಪತಿಗೆ ಬಂದು ಅಲ್ಲಿ ಮಠವೊಂದನ್ನು ಸ್ಥಾಪಿಸಿ ಶ್ರೀನಿವಾಸನ ಕೈಂಕರ್ಯದಲ್ಲಿ ನಿರತರಾಗಿದ್ದರು. ಈ ಮಹಾತ್ಮರು ಅನೇಕ ಗ್ರಂಥಗಳನ್ನು ಬರೆದಿರುವರು.

ಮುಂದೆ ಆಚಾರ್ಯ ಸ್ಥಾನದಲ್ಲಿ ಬಂದ ಇನ್ನೊಬ್ಬ ಮಹಾತ್ಮರು ರಾಮಾನುಜ ಸಿದ್ಧಾಂತ ಪ್ರಚಾರಕ್ಕಾಗಿ ಯಾತ್ರಾರ್ಥಿಯಾಗಿ ಹೊರಟು ಈ ಕರ್ನಾಟಕದೇಶಕ್ಕೆ ಬಂದು ಕೌಂಡಿನೀ ನದಿ ತೀರವಾದ ತಿರುಮಕೂಡಲು ನರಸೀಪುರದಲ್ಲಿ ನೆಲಸಿದರು. ಕಾಲ ಸುಮಾರು 1800 ಇರಬಹುದು.

ತದನಂತರ ಕಾಲದಲ್ಲಿ ಉತ್ತರಾಧಿಕಾರಿಯಾಗಿ ಪಟ್ಟಕಟ್ಟು ಆಚಾರ್ಯರಾಗಿ ಬಂದ ಶ್ರೀಕೃಷ್ಣಬ್ರಹ್ಮತಂತ್ರ ಪರಕಾಲಸ್ವಾಮಿಗಳೆಂಬುವರು ಮಹಾರಾಜರಿಂದ ಆಹ್ವಾನಿಸಲ್ಪಟ್ಟು ರಾಜಧಾನಿಗೆ ಬಂದು ಮರ್ಯಾದೆಯನ್ನು ಹೊಂದಿದರು.

ಆ ಕಾಲದಲ್ಲಿ ಜೋಯಿಸ ಶಿಂಗ್ರ್ಯಾಚಾರ್ಯರೆಂಬುವರು ಅರಮನೆ ಅಧಿಕಾರಿಯಾಗಿದ್ದ ನರಸಿಂಹ ಅಯ್ಯಂಗಾರ್ಯರೊಂದಿಗೆ ಕಲೆತು ಮಹಾರಾಜ, ಮಹಾರಾಣಿಯವರ ಅನುಮತಿಯಿಂದ ರಾಜಧಾನಿಯಲ್ಲಿ ವಿಶಾಲವಾದ ಮಠವನ್ನು ಕಟ್ಟಿಸಿ ಕೊಟ್ಟರು

ಅಂದಿನಿಂದ ಪರಕಾಲಸ್ವಾಮಿಗಳು ರಾಜಮನೆತನಕ್ಕೆ ಗುರುಗಳಾಗಿ ಮೈಸೂರು ರಾಜಧಾನಿಯಲ್ಲೇ ನಿಂತರು. ಈ ಮಹಾತ್ಮರು ಆಚಾರ್ಯ ಪೀಠದಲ್ಲಿ 30 ವರ್ಷಕ್ಕೆ ಮೇಲ್ಪಟ್ಟು ರಾಮಾನುಜ ಸಿದ್ಧಾಂತ ಪ್ರಚಾರ ಮಾಡಿದರು. ಇವರು ಅನೇಕ ಗ್ರಂಥಗಳನ್ನು ಬರೆದಿರುವರು.

ಮುಮ್ಮಡಿ ಕೃಷ್ಣರಾಜ ಒಡೆಯರು ರಾಜಧಾನಿಗೆ ಮಠಾಧಿಪತಿಗಳನ್ನು ಕರೆಯಿಸಿ ಮಹಾನವಮಿಯ ಕಾಲದಲ್ಲಿ ಪರಕಾಲಸ್ವಾಮಿಗಳಿಗೂ ಮೇಲುಕೋಟೆಯಲ್ಲಿ ಮಠ ಒಂದನ್ನು ಕಟ್ಟಿಸಿಕೊಟ್ಟರು. ಶ್ರೀಪರಕಾಲಸ್ವಾಮಿಗಳು ಈ ಕ್ಷೇತ್ರಕ್ಕೆ ಬಂದಾಗ ಈ ಮಠದಲ್ಲಿದ್ದು ಶ್ರೀತಿರುನಾರಾಯಣ, ಶ್ರೀಚಲ್ವಪಿಳ್ಳೆಯವರ ಕೈಂಕರ್ಯದಲ್ಲಿ ನಿರತರಾದರು.

ಪ್ರಸ್ತುತ ಈ ಮಠದಲ್ಲಿ 35ನೇ ಪೀಠಸ್ಥರಾಗಿ ಬಂದ ಆಚಾರ್ಯರು ಶ್ರೀರಾಮಾನುಜ ಸಿದ್ಧಾಂತ ಪ್ರಚಾರ, ಧರ್ಮಕಾರ್ಯಗಳನ್ನು ನಡೆಸುತ್ತಿರುವರು. ಈ ಮಠದ ಆರಾಧ್ಯ ದೇವರು ಶ್ರೀಲಕ್ಷ್ಮೀಹಯಗ್ರೀವರು. ಈ ದೇವರ ಪೂಜಾದಿಗಳಿಗೆ ಮಹಾರಾಜರು ಗ್ರಾಮ ಭೂಮಿಗಳನ್ನು ಸಮರ್ಪಿಸಿರುವುದಕ್ಕೆ ಶಿಲಾಶಾಸನಗಳಿವೆ. ಈ ಪೀಠದ ಮೂಲ ಮಠವು ರಾಜಧಾನಿಯಲ್ಲಿರುವುದರಿಂದ ಈ ಮಠದ ಪೂರ್ಣ ಚರಿತ್ರೆಯು ಇದೇ ಗ್ರಂಥಕರ್ತರಿಂದ ರಚಿತವಾದ ರಾಜಧಾನಿ ದೇವಾಲಯಗಳು ಎಂಬ ಗ್ರಂಥದಲ್ಲಿ ಓದಬಹುದು.

## ಅಹೋಬಿಲಮಠ

ಶ್ರೀರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ವೇದಾಂತ ಪ್ರಚಾರವನ್ನು ಮಾಡಲು 74 ಜನ ಸಿಂಹಾಸನಾಧಿಪತಿಗಳನ್ನು ನಿರ್ಮಿಸಿದರು. ಅವರಲ್ಲಿ ಸನ್ಯಾಸಿಗಳೂ, ಗೃಹಸ್ಥರೂ ಇರುವರು. ಆ ರೀತಿ ನೇಮಿಸಲ್ಪಟ್ಟ 74 ಸಿಂಹಾಸನಾಧಿಪತಿಗಳಲ್ಲಿ ಒಬ್ಬರಾದ ಮುಡುಂಬೆ ಆಂಡಾನ್ ಸೋಮಯಾಜಿ ಆಳಿಯಾಳ್ವಾರ್ಗೆ ಇಬ್ಬರು ಮಕ್ಕಳು ವಡಕ್ಕುತಿರುವೀಧಿಪಿಳ್ಳೆ ಮತ್ತು ಮುನ್ನುರಾಮಾನುಜರು ಈ ಮಾನ್ನರಾಚಾರ್ಯರ ವಂಶದಲ್ಲಿ ಬಂದವರೇ ಪ್ರಸಿದ್ಧರಾದ ಪ್ರತಿವಾದಿಭಯಂಕರರಾದ ಅಣ್ಣ ಎಂದು ಕರೆಯಲ್ಪಡುವರು.

ವಡಕ್ಕು ತಿರುವೀಧಿಪಿಳ್ಳೆ (1167-1264) ಇವರಿಗೆ ಇಬ್ಬರು ಮಕ್ಕಳು. 1 ಪಿಳ್ಳೆಲೋಕಾಚಾರ್ಯರು. 2 ಅಳಗಿಯ ಮಣವಾಳಪೆರುಮಾಳ್‌ನಾಯನಾರ್. ಇವರೆಲ್ಲರೂ ಸಂಸ್ಕೃತದಲ್ಲಿಯೂ, ದ್ರಾವಿಡ ಭಾಷೆಯಲ್ಲಿಯೂ ಅನೇಕ ಮಹಾಗ್ರಂಥಗಳನ್ನು ಬರೆದಿರುವರು. ಈ ವಡಕ್ಕುತಿರುವೀಧಿಪಿಳ್ಳೆ ಇವರ ವಂಶದಲ್ಲಿ ಬಂದ ಕೇಶವಾಚಾರ್ಯರೆಂಬುವರು ತಿರುನಾರಾಯಣಪುರದಲ್ಲಿ ವಾಸವಿದ್ದರು. ಆ ವರ ಮಕ್ಕಳು ಶ್ರೀನಿವಾಸಾಚಾರ್ಯರು. ಈ ಶ್ರೀನಿವಾಸಾಚಾರ್ಯರೇ ಅಹೋಬಿಲ ಮಠವನ್ನು ಸ್ಥಾಪಿಸಿದರು, ಇವರು ಮೇಧಾವಿಗಳು. ಬಾಲ್ಯದಲ್ಲಿ ಕಾವ್ಯಶಾಸ್ತ್ರಗಳಲ್ಲಿ ಓದಿ ತರುವಾಯ ಪ್ರೌಢ ವಿದ್ಯಾಭ್ಯಾಸವನ್ನು ಕಾಂಚೀಪುರದಲ್ಲಿ ಓದಿದರು.

ತದನಂತರ ಕಾಲದಲ್ಲಿ ಕಾಂಚೀಪುರದಿಂದ ಅಹೋಬಿಲಕ್ಕೆ ಹೋದರು. ಅಲ್ಲಿ ತುರೀಯಾಶ್ರಮವನ್ನು ಸ್ವೀಕರಿಸಿ ಶ್ರೀಲಕ್ಷ್ಮೀನೃಸಿಂಹಸ್ವಾಮಿ ಕೈಂಕರ್ಯದಲ್ಲಿ ನಿರತರಾಗಿದ್ದು, ಅಹೋಬಿಲದಲ್ಲೇ ಮಠವನ್ನು ಸ್ಥಾಪಿಸಿದರು. ಸ್ಥಾನಬಲದಿಂದ ಈ ಮಠಕ್ಕೆ ಅಹೋಬಿಲ ಮಠವೆಂದು ಕರೆಯಲಾಯಿತು.

ಈ ಮಹಾತ್ಮರ ಕಾಲ 1378–1458. ಅನಂತರ ಕಾಲದಲ್ಲಿ ಅಹೋಬಿಲದಿಂದ ಹೊರಟು ದಕ್ಷಿಣದೇಶ ಯಾತ್ರೆಯನ್ನು ಮಾಡಿ ತದನಂತರ ಉತ್ತರದೇಶ ಯಾತ್ರೆ ಹೊರಟರು. ಪುನ್ನಾಗ ಕ್ಷೇತ್ರದಲ್ಲಿ ಒಂದು ಮಠವನ್ನು ಕಟ್ಟಿಸಿದರು. ಅದಕ್ಕೆ ಶ್ವೇತಾದ್ರಿಮಠ ಎಂದು ಹೆಸರು. ಅಲ್ಲಿಂದ ಹೊರಟು ಬದರಿ ಕ್ಷೇತ್ರವನ್ನು ಸಂದರ್ಶಿಸಿ ಅಲ್ಲಿಂದ ಸ್ವಸ್ಥಾನವಾದ ತಿರುನಾರಾಯಣಪುರಕ್ಕೆ ಬಂದು ಶ್ರೀತಿರುನಾರಾಯಣನ ಕೈಂಕರ್ಯಪರರಾಗಿದ್ದು, ಅಲ್ಲೇ ಪರಮಪದಿಸಿದರು. ಈ ಮಠವು ಕಲ್ಯಾಣಿ ತೀರದಲ್ಲಿರುವುದು. ಈ ಮಠಕ್ಕೆ ಪರಮಹಂಸರು ಪಂಡಿತರೇ ಆಚಾರ್ಯ ಪೀಠಸ್ಥರಾಗಿ ಬರುತ್ತಿದ್ದು ಶ್ರೀರಾಮಾನುಜ ಸಿದ್ಧಾಂತವನ್ನು ಪ್ರಚಾರ ಮಾಡಿ ಬರುತ್ತಿರುವರು.

**ಅಹೋಬಿಲಮಠ–** ಕಲ್ಯಾಣಿ ಪುಷ್ಕರಿಣಿ ತೀರದಲ್ಲಿದೆ.

ಮೇಲುಕೋಟೆ ವಾಸಸ್ಥರಾದ ವಣ್ ಶಠಕೋಪ ಯತೀಂದ್ರರು ಅಹೋಬಿಲದಲ್ಲಿ (AD 1437 – 1516) ಈ ಮಠವನ್ನು ಸ್ಥಾಪಿಸಿದರು. ಅವರ ಬೃಂದಾವನವು ಮೇಲುಕೋಟೆಯಲ್ಲಿ ಇರುವುದು.

ಮುಮ್ಮಡಿ ಕೃಷ್ಣರಾಜ ಒಡೆಯರು ಶಕ ೧೭೭೭ ಆನಂದ ಸಂ॥ (AD 1855) ರಲ್ಲಿ ಅಹೋಬಿಲಮಠದ ಶ್ರೀನಿವಾಸಸ್ವಾಮಿಗಳನ್ನು ಮೈಸೂರು ಅರಮನೆಗೆ ಕರೆಯಿಸಿ ಪಾದಪೂಜೆ ಮಾಡಿ, ನವರತ್ನಹಾರ, ಕಂಠೀಮುತ್ತಿನಹಾರಗಳನ್ನು, ಛತ್ರಿಚಾಮರ. ಪಲ್ಲಕ್ಕಿಗಳನ್ನೂ, ಸುವರ್ಣಾದಿ ವಸ್ತುಗಳನ್ನೂ, ಚಿನ್ನದ ರಾಮಾನುಜರ ಮೂರ್ತಿ, ವೇದಾಂತದೇಶಿಕರ ವಿಗ್ರಹವನ್ನೂ ಸಮರ್ಪಿಸಿ ಅವರಿಗೆ ಮೈಸೂರು, ಮೇಲುಕೋಟೆ, ಶ್ರೀರಂಗಪಟ್ಟಣಗಳಲ್ಲಿ ಮಠವನ್ನು ಕಟ್ಟಿಸಿಕೊಟ್ಟರು.

ಶ್ರೀರಂಗನಾಥಸ್ವಾಮಿಗಳ ಕಾಲದಲ್ಲಿ ಶ್ರೀಲಕ್ಷ್ಮೀನೃಸಿಂಹಸ್ವಾಮಿಗೆ ಬಂಗಾರದ ನವರತ್ನಪೆಟ್ಟಿಗೆ, ಬೆಳ್ಳಿಮಂಟಪ. ಶ್ರೀಗಂಧದ ಪಲ್ಲಕ್ಕಿ, ಆನೆ. ಕುದುರೆ ನವರತ್ನಾಭರಣ. ಪೂಜೋಪಕರಣಗಳು, ನವರತ್ನಮುತ್ತಿನಹಾರಗಳನ್ನು ಸಮರ್ಪಿಸಿದರು. ಒಂದು ಸಾವಿರ ವರಹ ಉತ್ಪತ್ತಿಯಾಗುವ ಸೋಸಲೆ, ತಲಕಾಡಿಗೆ ಸೇರಿದಂತೆ ನಾಗನಹಳ್ಳಿ, ಹೊಂಗಹಳ್ಳಿ, ಬೆನಕನಹಳ್ಳಿ ಎಂಬ ಮೂರು ಗ್ರಾಮಗಳನ್ನು ಸಮರ್ಪಿಸಿದರು.

(ಈ ಮಠದ ಪೂರ್ಣ ಚರಿತ್ರೆಯು ಮಠ ಮತ್ತು ಮಠಾಧಿಪತಿಗಳು ಎಂಬ ಗ್ರಂಥದಲ್ಲಿ ಬರೆದಿರುವುದನ್ನು ಓದಬಹುದು.)

## ಕಾಂಚಿ ವಾದಿಕೇಸರಿ ಅಳಗಿಯಮಣವಾಳ ಮಠ

ಕಾಂಚೀಪುರದಲ್ಲಿ ವರದರಾಜರ ಕೈಂಕರ್ಯದಲ್ಲಿ ನಿರತರಾಗಿ ದೇವಸ್ಥಾನದ ಆಡಳಿತವನ್ನು ನೋಡಿಕೊಂಡು ಆಳ್ವಾರಾಚಾರ್ಯರ ಪ್ರತಿನಿಧಿಯಾಗಿ ಅಗ್ರತೀರ್ಥ ಮರ್ಯಾದೆಯನ್ನು ಹೊಂದುತ್ತಿರುವರು. ಪರಂಪರೆಯಲ್ಲಿ ಬಂದ ಮಹಾ ವಿದ್ವಾಂಸರಾದ ಇವರು ರಾಮಾನುಜ ಸಿದ್ಧಾಂತವನ್ನು ಪ್ರಚಾರ ಮಾಡುತ್ತಾ ಬರುವಾಗ ಮೈಸೂರು ಶ್ರೀರಂಗಪಟ್ಟಣದ ಪರಿಸರ ಮಣಿಕರ್ಣಿಕಾ ಕ್ಷೇತ್ರದಲ್ಲಿ ವೇದಾಂತ ವಿಚಾರದಲ್ಲಿ ವಾದವಿವಾದವುಂಟಾಗಿ ಜಯಿಸಿ ಬಂದರು. ಈ ವರ್ತಮಾನವನ್ನು ಕೇಳಿದ ಮುಮ್ಮಡಿ ಕೃಷ್ಣರಾಜ ಒಡೆಯರು ಇವರನ್ನು ಬಹುವಾಗಿ ಮೆಚ್ಚಿ ವಾದಿಕೇಸರಿ ಎಂಬ ಬಿರುದನ್ನು ಕೊಟ್ಟು ಮೇಲುಕೋಟೆ ಕಲ್ಯಾಣಿ ತೀರದಲ್ಲಿ ಮಠವನ್ನು ಕಟ್ಟಿಸಿಕೊಟ್ಟರು. ಇವರ ಮೂಲ ಮಠವು ಕಾಂಚೀಪುರದಲ್ಲಿ ಇರುವುದು. ಅಲ್ಲಿಯ ದೇವರಾದ ವರದರಾಜರಿಗೆ ಮೈಸೂರು ರಾಜರಪರವಾಗಿ ಕೈಂಕರ್ಯ ಸೇವಾರ್ಥಗಳನ್ನು ನಡೆಸುತ್ತಿರುವರು.

ಕಂಠೀರವ ನರಸರಾಜರು ಅವರ ಧರ್ಮಪತ್ನಿ ಚಲುವಾಜಮ್ಮಣ್ಣಿ ಮತ್ತು ದೇವೀರಮ್ಮಣ್ಣಿಯವರು ಕಾಂಚೀಪುರದ ಅಳಗಿಯ ರಾಮಾನುಜಜೀಯರ ಮೂಲಕ ಶ್ರೀವರದರಾಜಸ್ವಾಮಿಯವರಿಗೆ ನಿತ್ಯಕಟ್ಟಳೆ ಕೈಂಕರ್ಯ, ಉದಯಾದಿಕಾಲತ್ರಯದ ಆರಾಧನೆ, ನೈವೇದ್ಯ, ತಿರುವಾರಾಧನೆ, ವಿಜಯೋತ್ಸವ, ಕೃಷ್ಣಕೈಂಕರ್ಯ ನಂದನ ವನ, ತೋಟ, ಮಂಟಪಸೇವೆ, ಕಲ್ಯಾಣಸರೋವರ, ನಮ್ಮುಡೆಯಾರ ಸನ್ನಿಧಿಯಲ್ಲಿ ತದೀಯಾರಾಧನೆ ಇವುಗಳಿಗೆ ಪ್ರತಿವರ್ಷವೂ 500 ವರಹಗಳವರೆಗೆ ಧರ್ಮ ನಡೆಸುತ್ತಿದ್ದುದನ್ನು ನೋಡಿ ಅವರ ಕುಮಾರರಾದ ದೊಡ್ಡಕೃಷ್ಣರಾಜರು ಮೇಲಿನ ಧರ್ಮವು ಶಾಶ್ವತವಾಗಿ ನಡೆಯಬೇಕೆಂದು ಶಕ ೧೬೪೬ ಕ್ರೋಧಿ ಸಂ|| (30-12-1724) ರಲ್ಲಿ ಶ್ರೀದೇವಿವರದರಾಜಸ್ವಾಮಿಗೆ ಮೇಲೆ ತಿಳಿಸಿದ ಧರ್ಮವು ಅಬಾಧಿತ ಸಂಪ್ರದಾಯವಾಗಿ ನಡೆಯಲು 1 ಪಟಾರ್‌ಪಟ್ಟಿ ಗ್ರಾಮ 2 ಯತ್ತಿಗನಹಳ್ಳಿ ಗ್ರಾಮ 3 ಅಬಾಜದಹಳ್ಳಿ ಗ್ರಾಮ 4 ಕಮಲನಾಯಕನಹಳ್ಳಿ ಗ್ರಾಮ 5 ಗೊಲ್ಲನಾಯಕನಹಳ್ಳಿ ಗ್ರಾಮ 6 ಮರಾಠೇಹಳ್ಳಿ ಗ್ರಾಮ 7 ಬಲ್ಲೂರ ಗ್ರಾಮ 8 ಪರತೇಹಳ್ಳಿ ಗ್ರಾಮ 9 ಬೇಗೂರನಹಳ್ಳಿ ಗ್ರಾಮ 10 ಸಿದ್ದುಲಿ ಹಳ್ಳಿ ಗ್ರಾಮ 11 ವೇಮಲಿಹಳ್ಳಿ ಗ್ರಾಮ 12 ನಲ್ಲಪನಹಳ್ಳಿ ಗ್ರಾಮ, ಅಂತೂ ಗ್ರಾಮ ಹನ್ನೆರಡು, ಕೆರೆ ಒಂದು. ಇವುಗಳಿಗೆ ಸೇರಿದ ಸುಂಕ, ಸುವರ್ಣಾದಾಯ, ಎಲ್ಲಾವಿಧವಾದ ತೆರಿಗೆ, ಕಂದಾಯ, ಫಲವನ್ನು ಮುಂತಾಗಿ ೧೨ ಗ್ರಾಮದ ಸಕಲ

ಸ್ವಾಮ್ಯ ಮತ್ತು ಅಷ್ಟಿನಾಡ ಅನಂತಗಿರಿ ಸ್ಥಳದಲ್ಲೂ ನೇಮಸ್ತೊಂಡಿ ಗ್ರಾಮ ಆ ಗ್ರಾಮದ ಸಕಲ ಸ್ವಾಮ್ಯವನ್ನೂ. ಈ ರೀತಿ ಹದಿಮೂರು ಗ್ರಾಮಗಳನ್ನೂ ಸಮರ್ಪಿಸಿ ಮೇಲೆ ತಿಳಿಸಿದ ಸಕಲ ಕೈಂಕರ್ಯ ಧರ್ಮಗಳನ್ನೂ ಅಳಗಿಯಮಣವಾಳ ರಾಮಾನುಜಜೀಯರು ಶಿಷ್ಯ ಪ್ರಶಿಷ್ಯ ಪಾರಂಪರ್ಯವಾಗಿ ನಡೆಸಿಕೊಂಡು ಬರುವ ದೆಂದು ಬರೆದ ತಾಮ್ರಶಾಸನ ಧರ್ಮ. ಪಾಂ. ಪು. 203

## ಶ್ರೀವಾನಮಾಮಲೈ ಮಠ

ಶ್ರಿಯಃಪತಿಯಾದ ಸರ್ವೇಶ್ವರನು ಅಂಯೋಗಕಾಲವನ್ನನುಸರಿಸಿ ಚೇತನೋಜ್ಜೀವನಾರ್ಥವಾಗಿ ಶ್ರೀರಾಮಾನುಜಾಚಾರ್ಯರನ್ನು ಅವತರಿಸುವಂತೆ ಮಾಡಿದನು. ಶ್ರೀರಾಮಾನುಜರು ಭೂತಪುರಿಯಲ್ಲಿ ಶಕ ೯೩೯ ಗತ ವರ್ತಮಾನ ಪಿಂಗಲ ಸಂ॥ (AD 1017) ರಲ್ಲಿ ಅವತರಿಸಿ ವೇದವ್ಯಾಸರ ಬ್ರಹ್ಮಸೂತ್ರಕ್ಕೆ ವ್ಯಾಖ್ಯಾನವನ್ನು ಬರೆದು ಕುದೃಷ್ಟಿಗಳನ್ನು ಜಯಿಸಿ ವಿಶಿಷ್ಟಾದ್ವೈತ ವೇದಾಂತವನ್ನು ಪ್ರಕಾಶಪಡಿಸಿ ಈ ಭೂಲೋಕದಲ್ಲಿ 120 ವರ್ಷಗಳಿದ್ದು ಲೋಕರಕ್ಷಣವನ್ನು ಸಾಧಿಸಿದರು.

ತದನಂತರ ಕಾಲದಲ್ಲಿ ಅಳಗಿಯಮಣವಾಳ ಮಾಮುನಿಯಾಗಿ ಅವತರಿಸಿ ವಿಶಿಷ್ಟಾದ್ವೈತ ವೇದಾಂತ ಅನುಯಾಯಿಗಳಾದ ಶ್ರೀವೈಷ್ಣವರು ಅನುಸರಿಸುವ ಶ್ರೀವೈಷ್ಣವಮತ ಸಂಪ್ರದಾಯಗಳನ್ನು ಕ್ರಮಬದ್ಧವಾಗಿ ಮಾಡಿ ಸಂಪ್ರದಾಯಗಳನ್ನು ಪ್ರಚಾರಮಾಡಿದರು. ತಮ್ಮ ಸಹಾಯಕ್ಕಾಗಿ 1 ರಾಮಾನುಜ ವಾನಮಾಮಲೈ ಜೀಯರು, 2 ಭಟ್ಟರಪಿರಾನ್ ಜೀಯರು, 3 ತಿರುವೇಂಗಡಜೀಯರು, 4 ಕೋಯಿಲ್ ಕಂದಾಡೈ ಅಣ್ಣನ್, 5 ಪ್ರತಿವಾದಿ ಭಯಂಕರ ಅಣ್ಣನ್, 6 ಎರುಂಬಿಯಪ್ಪಾ, 7 ಅಪ್ಪಿಳ್ಳೈ, 8 ಅಪ್ಪಿಳ್ಳಾರ್—ಅಷ್ಟದಿಗ್ಗಜಗಳು ಎಂಬುದಾಗಿ ಎಂಟುಮಂದಿಯನ್ನು ಏರ್ಪಡಿಸಿಕೊಂಡು ಅವರ ಮೂಲಕ ಭರತಖಂಡ ಆದ್ಯಂತ ಶ್ರೀವೈಷ್ಣವ ಸಂಪ್ರದಾಯವನ್ನು ಪ್ರಚಾರಗೊಳಿಸಿದರು.

**ವಾನಮಾಮಲೈ ರಾಮಾನುಜಜೀಯರು–** ಆ ರೀತಿ ಏರ್ಪಟ್ಟ ಅಷ್ಟದಿಗ್ಗಜ ಸಾಂಪ್ರದಾಯಿಕ ವಿದ್ವನ್ಮಣಿಗಳಲ್ಲಿ ಮೊದಲನೆಯವರಾದ ವಾನಮಾಮಲೈ ರಾಮಾನುಜಜೀಯರು ಪ್ರಸಿದ್ಧರು. ವಾನಮಾಮಲೈ ಊರಿನಲ್ಲಿ ಶ್ರೀರಂಗರಾಜ ಎಂಬುವರಿಗೆ ಮೂವರು ಕುಮಾರರು ಅವರಲ್ಲಿ ಎರಡನೆಯವರು ಅಳಗಿಯವರದರ್ ಎಂಬ ಹೆಸರಿನಿಂದ ಶಕ ರಕ್ತಾಕ್ಷಿ ಸಂ॥ 1384 ರಲ್ಲಿ ಅವತರಿಸಿದರು. ಬ್ರಾಹ್ಮಣ ವರ್ಣದವರಾದ್ದರಿಂದ ಚೌಳ, ಉಪನಯನಾದಿ ಸಂಸ್ಕಾರಗಳು ನಡೆದು ವೇದ ವೇದಾಂತ ಸಾಹಿತ್ಯಗಳನ್ನು ಅಭ್ಯಾಸ ಮಾಡಿದರು. ಇವರು ತಮ್ಮ ಪಿತೃವರ್ಯರ ಅನುಮತಿಪಡೆದು ಆಳ್ವಾರ್ ತಿರುನಗರಿಯಲ್ಲಿ ವಾಸಮಾಡಿದ್ದ ತಿರುವಾಯ್ಮೊಳಿಪಿಳ್ಳೈ

ಎಂಬುವರಲ್ಲಿ ಆಶ್ರಯಿಸಿದರು. ತಿರುವಾಯ್ಮೊಳಿಪಿಳ್ಳೆಯವರು ಇವರ ವರ್ಚಸ್ಸನ್ನು ನೋಡಿ ಇವರು ರಾಮಾನುಜದರ್ಶನ ಪ್ರವರ್ತಕರಾಗುವರೆಂದು ತಿಳಿದು ಶ್ರೀರಂಗದಲ್ಲಿ ರಾಮಾನುಜರ ಪುನರವತಾರವಾಗಿದ್ದ ತಮ್ಮ ಶಿಷ್ಯರು ಮಹಾಮುನಿಗಳಾದ ನಾಯನಾರ್ರ ಬಳಿಯಲ್ಲಿ ಆಶ್ರಯಿಸುವಂತೆ ಅನುಗ್ರಹಿಸಿ ಕಳುಹಿಸಿದರು. ಅಳಗಿಯ ವರದರು ಅಂತೆಯೇ ಶ್ರೀರಂಗಕ್ಕೆ ಹೋಗಿ ಮಹಾಮುನಿ ನಾಯನಾರ್ರಲ್ಲಿ ಆಶ್ರಯಿಸಿ ಅವರಿಂದ ತರ್ಕಮೀಮಾಂಸಾದಿ ರಹಸ್ಯಾರ್ಥಗಳನ್ನೆಲ್ಲಾ ಅಧಿಕರಿಸಿ ಮಣವಾಳ ಮಹಾಮುನಿಗೆ ಅಂತರಂಗ ಶಿಷ್ಯರಾದರು.

ಅಳಗಿಯವರದರು ವೇದಾಂತ ಜ್ಞಾನವನ್ನು, ಪಡೆದಮೇಲೆ ವೈರಾಗ್ಯವನ್ನು ಹೊಂದಿ ವಾನಮಾಮಲೆಗೆ ಬಂದು ಸನ್ಯಾಸವನ್ನು ಸ್ವೀಕರಿಸಿದರು. ವಾನಮಾಮಲೈ ರಾಮಾನುಜ ಜೀಯರೆಂದು ಕರೆಯಲ್ಪಟ್ಟರು. ಈ ಸಮಯದಲ್ಲಿ ಮಹಾಮುನಿಗಳು ಗೃಹಸ್ಥರಾಗಿಯೇ ಇದ್ದರು. ಸನ್ಯಾಸವನ್ನು ಸ್ವೀಕರಿಸಿರಲಿಲ್ಲವು. ತದನಂತರ ಕಾಲದಲ್ಲಿ ಮಹಾಮುನಿಗಳು ಸನ್ಯಾಸವನ್ನು ಸ್ವೀಕರಿಸಲು, ವಾನಮಾಮಲೈಜೀಯರು ಪಲ್ಲವರಾಯನ ಮಠವನ್ನು ಜೀರ್ಣೋದ್ಧಾರ ಮಾಡಿ ಮಣವಾಳಮಾಮುನಿಗೆ ವೇದಾಂತ ವಿಚಾರದಲ್ಲಿ ಸಹಕಾರಿಯಾಗಿದ್ದರು.

ಈ ವಾನಮಾಮಲೆ ರಾಮಾನುಜಜೀಯರು ಆಸೇತು ಹಿಮಾಚಲ ಪರ್ಯಂತ ಸಂಚಾರ ಮಾಡಿ ಶ್ರೀವೈಷ್ಣವಮತ ಪ್ರಚಾರ ಮಾಡಿದರು. ಸಂಚಾರಮಧ್ಯದಲ್ಲಿ ತಿರುಪತಿಗೆ ಬಂದು ಶ್ರೀವೇಂಕಟೇಶ್ವರಸ್ವಾಮಿಯನ್ನು ಮಂಗಳಾಶಾಸನ ಮಾಡಿದ ಕಾಲದಲ್ಲಿ ತಿರುಪತಿಯಲ್ಲಿ ವೇಂಕಟೇಶ್ವರಸ್ವಾಮಿಗೆ ದೇವನಾಚ್ಚಿಯಾರ್ ಇದ್ದು ಅದು ಕಾಲಾಂತರದಲ್ಲಿ ನಷ್ಟವಾಗಿ ಉತ್ಸವಮೂರ್ತಿ ಮಾತ್ರ ಶ್ರೀನಿವಾಸದೇವರ ಪಾದದ ಬಳಿ ಬಿಜಯಮಾಡಿಸಿದ್ದರು.

ವಾನಮಾಮಲೆ ರಾಮಾನುಜಜೀಯರಿಗೆ ಸ್ವಪ್ನದಲ್ಲಿ ತಿಳಿಸಿದಂತೆ ಆ ಉತ್ಸವ ನಾಚ್ಚಿಯಾರ್ ಮೂರ್ತಿಯನ್ನು ಬಿಜಯಮಾಡಿಸಿಕೊಂಡು ವಾನಮಾಮಲೆಗೆ ಬಂದು

ಶ್ರೀವೇಂಕಟೇಶಾಯ ಪ್ರದಾನಸಾರಿತಾ
ಹರಿಪ್ರಿಯಾ ಸಾ ವೃಷಗಾಲಯೇಶ್ವರೀ ॥ ಪ್ರಮಾಣವಾಕ್ಯ.

ನಾಚ್ಚಿಯಾರಿಗೆ ವರಮಂಗೈ ಎಂದು ಹೆಸರಿಟ್ಟು, ದೇವನಾಯಕರಿಗೂ ವರಮಂಗೈನಾಚ್ಚಿಯಾರ್ರಿಗೂ ವಿವಾಹಮಹೋತ್ಸವವನ್ನು ಸಂಭ್ರಮದಿಂದಾಗಿ ನಡೆಸಿದರು. ಈ ನಾಚ್ಚಿಯಾರ್ರಿಗೆ ದೇವಸ್ಥಾನ, ಗರ್ಭಗೃಹ, ಅರ್ಧಮಂಟಪಾದಿಗಳನ್ನು ಕಟ್ಟಿಸಿದರು.

ವಾನಮಾಮಲೆ ರಾಮಾನುಜಜೀಯರ ಅಂತರಂಗ ಶಿಷ್ಯರಾದ ರಾಮಾನುಜ ಪಿಳ್ಳೆಯವರ ಧರ್ಮಪತ್ನಿ ತಾವು ಧರಿಸಿದ್ದ ಅತುಳ್ಳಿರ್ದ ಎಲ್ಲಾ ಆಭರಣಗಳನ್ನೆಲ್ಲವನ್ನೂ ಶ್ರೀವರಮಂಗೈನಾಚ್ಚಿಯಾರ್ರಿಗೆ ಸಮರ್ಪಿಸಿದರು.

ಅನಂತರ ಕಾಲದಲ್ಲಿ ವಾನಮಾಮಲೆ ರಾಮಾನುಜಜೀಯರು ಶಿಷ್ಯ ಸಂಪತ್ತಿನೊಂದಿಗೆ ಕೂಡಿ ಶಿಷ್ಯರಿಗೆ ವೇದವೇದಾಂತ ಭಾಷ್ಯ ರಾಮಾಯಣ ಭಗವದ್ವಿಷಯ ರಹಸ್ಯಾರ್ಥಗಳನ್ನು, ಕಾಲಕ್ಷೇಪ, ತದೀಯಾರಾಧನೆಗಳನ್ನು ನಡೆಸುತ್ತಿದ್ದು 99 ವರ್ಷಗಳು ಜೀವಿಸಿದ್ದು ತಮ್ಮ ಅಂತರಂಗ ಶಿಷ್ಯರು ಕಳಿಯೂರ್ ವರದಮುನಿಯನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿ ಆಚಾರ್ಯರನ್ನು ಧ್ಯಾನಿಸುತ್ತಾ, ಶಕ ೧೪೦೬ ಶೋಭಕೃತು ಸಂ॥ (1483) ಕುಂಭ ಕೃಷ್ಣ ತ್ರಯೋದಶೀ ದಿನದಲ್ಲಿ ಪರಮಪದಿಸಿದರು.

ಇವರು ವಾನಮಾಮಲೆ ಮಠಾಧಿಪತಿಗಳಲ್ಲಿ ಮೊದಲನೆಯವರು. ಇವರ ನಂತರ, ಆಚಾರ್ಯ ಶಿಷ್ಯ ಸನ್ಯಾಸಪರಂಪರೆಯಾಗಿ ಇಲ್ಲಿಯವರೆಗೆ ಪೀಠಸ್ಥರಾಗಿ ಬಂದಿರುವರು. ಈಗ ಮಠಾಧಿಪತಿಯಾಗಿರುವವರು 28ನೇ ಪೀಠಸ್ಥರು ಇದುವರೆಗೆ ಮಠದಲ್ಲಿ ಪೀಠಸ್ಥರಾಗಿ ಬಂದವರಲ್ಲಿ ೯ ಜನ ಬ್ರಹ್ಮಚಾರಿಗಳಾಗಿರುವರು.



ಶ್ರೀ ಯೋಗನರಸಿಂಹಸ್ವಾಮಿ

**ಬೆಟ್ಟಕ್ಕೆ ದಾರಿ**– ಸೋಪಾನಮಾರ್ಗ– ಬೆಟ್ಟದಮೇಲಿರುವ ಯೋಗಾ ನರಸಿಂಹಸ್ವಾಮಿಯನ್ನು ಸೇವಿಸಲು ಮಾರ್ಗಕ್ಕಾಗಿ ಪಂತಗಳನ್ನು ಅಲಸಿಂಗ, ಅಯ್ಯಂಗಾರ್, ಕೋದಂಡರಾಮಯ್ಯ, ಅಚ್ಯುತ ವಿಜಯರಾಘವನಾಯಕ ಇವರು ಮುಂತಾದವರು ಸೋಪಾನಮಾರ್ಗ ನಿರ್ಮಿಸಿ ಧರ್ಮ ಮಾಡಿರುವರು.

ಪಾಂ. ಪು. ೧೯೬, ೧೯೭, ೧೯೮, ೧೯೯

## ಧರ್ಮಗಳು

**ದೊಡ್ಡಗಂಟೆ**– ಶ್ರೀನಿವಾಸದೇಶಿಕೇಂದ್ರ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ಧರ್ಮ.

**ಚಿಕ್ಕಗಂಟೆ**– ಜಗಿನಕೆರೆ ಬಡೇಗೌಡನ ಸೇವಾರ್ಥ, ಪಾಂ.ಪು. ೨೦೦, ೨೦೧

ಮಹಾದ್ವಾರದ ಹಿತ್ತಾಳೆ ತಗಡು. ಮಧ್ಯೆ ಯೋಗಾನರಸಿಂಹಸ್ವಾಮಿ ಸುತ್ತಲೂ ದಶಾವತಾರಗಳ ರಚನೆ. ಇದನ್ನು ಶಕ ೧೭೯೦ ಪ್ರಭವ ಸಂ॥ (AD 1867) ರಲ್ಲಿ ಸಾಲಿಗ್ರಾಮದ ಅರಳೀಕಟ್ಟೆ ತಿರಸ್ಮಾರರ ಮಗ ಅಕ್ಕಿಕುಪ್ಪೆ ಮಹಾಲೆದಾರ **ಸುಬ್ಬರಾಯನ** ಧರ್ಮವು. ಪಾಂ.ಪು. ೨೦೨

ಶ್ರೀಯೋಗಾನರಸಿಂಹಸ್ವಾಮಿಗೆ ಅರಗಲ್ಲಿ ಕೃಷ್ಣಯ್ಯ, ಗೋವಿಂದಯ್ಯನ ಹೆಂಡತಿ ಪೊನ್ನಮ್ಮ, ಅಪ್ಪಾಜಯ್ಯ, ಅವನ ಪತ್ನಿ ಶಿಂಗಾರಮ್ಮ, ಅವರ ಅಕ್ಕ ಅಪ್ಪಾಜಮ್ಮ, ಹೊಸ ಅಮ್ಮಾಳ್ವಾರಮ್ಮ ಇವರುಗಳ ಧರ್ಮವೂ ಇವೆ.

**ಆಭರಣಗಳು, ಬೆಳ್ಳಿಪಾತ್ರೆಗಳು**– ಬೆಳ್ಳಿಯಕೊಡ, ತಟ್ಟೆ, ಬಟ್ಟಲು, ಕೊಪ್ಪರಿಗೆ ಮತ್ತು ಛತ್ರಿಚಾಮರ ಇತ್ಯಾದಿ ಸೋಪಸ್ಕರಗಳನ್ನು **ರಾಮಾಯಣದ ತಿರುಮಲಾಚಾರ್ಯರ ಧರ್ಮಪತ್ನಿ ನಾಚ್ಚಾರಮ್ಮ, ತಿರುವೆಂಗಡಮ್ಮ,** ಮೇಲುಕೋಟೆ ಕಲ್ಯಾಣಿ ಕೆಂಪಮ್ಮನ ಮಗಳು ಪುಟ್ಟ ಲಿಂಗಮ್ಮ, ಪುಟ್ಟನರಸಮ್ಮ, ಪಟೇಲಗೌಡ. ಶ್ರೀರಂಗಪಟ್ಟಣದ **ತಿರುಮಲೆ ಆನಂದಾಳ್ವಿಳ್ಳೆ, ತಿರುಮಲಾಚಾರ್ಯರು** ಇತ್ಯಾದಿ ಅನೇಕರು ಸಮರ್ಪಿಸಿರುವರು,

ಶಕ ೧೭೬೪ ಶುಭಕೃತು ಸಂ॥ (AD 2-12-1842) ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಅವರ ಪತ್ನಿ ಕೃಷ್ಣವಿಲಾಸ ಸಿಂಗಾರಮ್ಮಣ್ಣಿ ಅವರು ಶ್ರೀಯೋಗಾನರಸಿಂಹಸ್ವಾಮಿಗೆ **ಸ್ವರ್ಣಕಿರೀಟ, ಪಡ್ಡಿಗೆ** ಇವುಗಳ ಧರ್ಮವು.

ಪಾಂ.ಪು. ೨೦೩

# ತೊಂಡನೂರು ದೇವಸ್ಥಾನಗಳು

(ಶ್ರೀಯಾದವನಾರಾಯಣ ಚತುರ್ವೇದಿಮಂಗಲ)

## ಮಾಹಾತ್ಮ್ಯ, ಚರಿತ್ರೆ, ಶಾಸನ - ಧರ್ಮಗಳು

ಮೇಲುಕೋಟೆ ಶ್ರೀಯದುಗಿರಿ ಯತಿರಾಜಸ್ವಾಮಿಗಳಿಂದ
ಪರಿಷ್ಕರಿಸಲ್ಪಟ್ಟಿದೆ

ಪ್ರಕಾಶಕರು :

ಶ್ರೀ ಮಂಡಯಂ ಅಣ್ಣಾದೊರೆ
ಶ್ರೀನಿವಾಸಯ್ಯಂಗಾರ್–ಯದುಗಿರಿಯಮ್ಮ ಟ್ರಸ್ಟ್
ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟೆ
ಬೆಂಗಳೂರು–560 018

[2–00

## ವಿಷಯ ಸೂಚಿ


| | | |
|---|---|---|
| 1. | ವಿಷ್ಣುವರ್ಧನನ ಪೂರ್ವಿಕರು — ರಾಜವಂಶ | |
| 2. | ಶ್ರೀರಾಮಾನುಜಾಚಾರ್ಯರ ಸಾನ್ನಿಧ್ಯ | 4 |
| 3. | ಶ್ರೀಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನ, ಮೂರ್ತಿಗಳು, ಧರ್ಮಗಳು | 6 |
| 4. | ಯಾದವಾಪುರಿ ಅಗ್ರಹಾರ | 10 |
| 5. | ಶ್ರೀಕೃಷ್ಣಸ್ವಾಮಿ ದೇವಸ್ಥಾನ (ವೀತ್ತಿರುಂದ ಪೆರುಮಾಳ್ ವಿಣ್ಣಗರಂ) ಮೂರ್ತಿ ಮತ್ತು ಧರ್ಮಗಳು | 11 |
| 6. | ಶ್ರೀನರಸಿಂಹಸ್ವಾಮಿ ದೇವಸ್ಥಾನ | 15 |
| 7. | ಶ್ರೀಗೋಪಾಲಕೃಷ್ಣಸ್ವಾಮಿ ದೇವಸ್ಥಾನ | 17 |
| 8. | ಶ್ರೀರಾಮಾನುಜರ ಮಠ | 18 |
| 9. | ಶ್ರೀಕೈಲಾಸೇಶ್ವರಸ್ವಾಮಿ ದೇವಸ್ಥಾನ | 18 |
| 10. | ಶ್ರೀನಪುರೇಶ್ವರಸ್ವಾಮಿ ದೇವಸ್ಥಾನ | 19 |
| 11. | ಶ್ರೀಹೊಯ್ಸಳೇಶ್ವರಸ್ವಾಮಿ ದೇವಸ್ಥಾನ | 19 |
| 12. | ತಿರುಮಲಸಾಗರ (ತೊಂಡನೂರುಕೆರೆ) | 19 |

ಪಾಂಡವಪುರದಿಂದ ಮೇಲುಕೋಟೆ, ನಾಗಮಂಗಲ, ಭಾಷಾ ಮಾರ್ಗದ ಎಂಟುಮೈಲಿ ದೂರದಲ್ಲಿ ಬಲಕ್ಕೆ ತಿರುಗಿದರೆ ಎರಡು ಮೈಲಿ ದೂರದಲ್ಲಿ ತೊಂಡನೂರು. ಈ ಊರು ಹೊಯ್ಸಳ ರಾಜರ ಕಾಲದಲ್ಲಿ ಎರಡನೆಯ ರಾಜಧಾನಿಯಾಗಿದ್ದಿತು. ಇಲ್ಲಿ ಶ್ರೀಲಕ್ಷ್ಮೀನಾರಾಯಣಸ್ವಾಮಿ, ಶ್ರೀಕೃಷ್ಣಸ್ವಾಮಿ, ಕೈಲಾಸೇಶ್ವರ, ನಕುಲೇಶ್ವರ, ಹೊಯ್ಸಳೇಶ್ವರ, ಗೋಪಾಲಕೃಷ್ಣಸ್ವಾಮಿ, ನರಸಿಂಹಸ್ವಾಮಿ, ರಮಣೀಯ ಸ್ವಚ್ಛತೆಯಿಂದ ಕೂಡಿದ ತೊಂಡನೂರು ಕೆರೆ (ತಿರುಮಲಸಾಗರ)— ಇವುಗಳಿಂದ ಕೂಡಿರುವುದು. ಸುತ್ತಲೂ ಪರ್ವತ ಶ್ರೇಣಿಯಿಂದ ಕೂಡಿ ರಮಣೀಯವಾದ ವಿಶ್ರಾಂತಿಸ್ಥಾನವಾಗಿರುವುದು.

ತೊಂಡನೂರು ಪಕ್ಕದಲ್ಲಿರುವ ಮೇಲುಕೋಟೆ ಇತಿಹಾಸವನ್ನು ಓದಿದರೆ ಪೂರ್ಣ ಚರಿತ್ರೆಯು ತಿಳಿದಂತಾಗುವುದು. ಇದೇ ರೀತಿಯಲ್ಲಿ ಕರ್ನಾಟಕದ ಪ್ರಸಿದ್ಧ ಚರಿತ್ರಾರ್ಹವಾದ ಅಧಿಕ ಕ್ಷೇತ್ರ ಮಹಾತ್ಮ್ಯೆ, ದೇವಸ್ಥಾನಗಳ ಚರಿತ್ರೆ, ಅವುಗಳಿಗೆ ಸಂಬಂಧಪಟ್ಟ ಧರ್ಮಗಳು, ಶಾಸನಗಳು ಮುಂತಾದುವುಗಳು ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜ ಜೀಯರ್ ಸ್ವಾಮಿಗಳಿಂದ ಅನುಗೃಹೀತವಾಗಿದೆ.

# ಯಾದವನಾರಾಯಣ ಚತುರ್ವೇದಿಮಂಗಲ

## (ತೊಂಡನೂರು)

### ವಿಷ್ಣುವರ್ಧನನ ಪೂರ್ವೀಕರು -- ರಾಜವಂಶ

ಯಾದವಕುಲತಿಲಕನಾದ ಶ್ರೀಕೃಷ್ಣ ಪರಮಾತ್ಮನ ವಂಶದವರಾದ ಯಾದವರಲ್ಲಿ ಒಂದು ಪಂಗಡದವರು ಅನೇಕ ಕಾಲಗಳ ಮೊದಲೇ ಈ ದೇಶಕ್ಕೆ ಬಂದು ನೆಲೆಸಿದ್ದರು. ಕಾಲಕ್ರಮದಲ್ಲಿ ಸಳ ಎಂಬುವನಿಗೆ ಕಾರಣಾಂತರವನ್ನು ಹೊಂದಿ ಅವನ ವೀರತ್ವದಿಂದ ಹೊಯ್ಸಳ ಎಂಬ ಅಡ್ಡಹೆಸರು ಪ್ರಸಿದ್ಧವಾಗಿ ಬಂದಿತು. ಇವನ ಮಗ ವಿನಯಾದಿತ್ಯನೆಂಬ ರಾಜನು ಮತ್ತು ಅವನ ಮಗ ಎರೆಯಂಗನೂ ಕೆಲವು ಕಾಲ ರಾಜ್ಯವಾಳಿದರು. ಆ ಸಮಯದಲ್ಲಿ ಎಂದರೆ ತೊಂಡನೂರು ಕ್ರಿ.ಶ. ೧೦೦೦ ಕ್ಕೂ ಹಿಂದೆಯೇ ಹೊಯ್ಸಳರು ತಮ್ಮ ಎರಡನೆಯ ರಾಜಧಾನಿಯಾಗಿ ಮಾಡಿಕೊಂಡಿದ್ದರು.

ಒಂದುಕಾಲದಲ್ಲಿ ಯಾದವಗಿರಿ ತಿರುನಾರಾಯಣಪುರವು ಅಭಿವೃದ್ಧಿಸ್ಥಿತಿಯಲ್ಲಿದ್ದು ಸುಮಾರು ೮ನೇ ಶತಮಾನದಲ್ಲಿ ಗೂಢ ಸ್ಥಾನಮಾನದಿಂದಲೋ ಅಥವಾ ರಾಜಕೀಯ ಕಾರಣದಿಂದಲೋ ಪ್ರಸಿದ್ಧವಾಗಿ ಹಾಳಾದ ಮೇಲೆ ಅದರ ಜ್ಞಾಪಕಾರ್ಥವಾಗಿ ಅದಕ್ಕೆ ಸಮೀಪ ಸ್ಥಳದಲ್ಲೇ ಊರನ್ನು ಕಟ್ಟಿ ಅದಕ್ಕೆ ಯಾದವನಾರಾಯಣಪುರವೆಂದೂ, ವೇದವಿದ್ಯಾಶಾಸ್ತ್ರ ಪಂಡಿತರುಗಳು ವಾಸವಾಗಿದ್ದುದರಿಂದ ಚತುರ್ವೇದಿಮಂಗಳವೆಂದೂ ಕರೆಯಲ್ಪಟ್ಟಿತು. (ಈಗಿನ ತೊಂಡನೂರು) ಅದಕ್ಕೆ ಸಾಕ್ಷಿಯಾಗಿ ಮೇಲೆ ತಿಳಿಸಿದ ವಿನಯಾದಿತ್ಯ, ಅವನ ಮಗ ಎರೆಯಂಗನೂ ಈಗಿನ ತೊಂಡನೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು.

ಈ ಎರೆಯಂಗನಿಗೆ ಬಲ್ಲಾಳ, ಬಿಟ್ಟಿದೇವ ಮತ್ತು ಉದಯಾದಿತ್ಯರೆಂಬ ಮೂವರು ಮಕ್ಕಳು. ಇವರಲ್ಲಿ ಹಿರಿಯವನಾದ ಬಲ್ಲಾಳನು ಕ್ರಿ.ಶ. 1101 ರಿಂದ 1104ರ ವರೆಗೆ ರಾಜ್ಯವಾಳಿದನು. ಕೊನೆಯವನಾದ ಉದಯಾದಿತ್ಯನು ರಾಜ್ಯಭಾರಕ್ಕೆ ಸಹಾಯಕನಾಗಿದ್ದು ಇವರ ಕಾಲದಲ್ಲೇ ಎಂದರೆ 1123 ರಲ್ಲಿ ಕಾಲವಾದನು. ಮೂರು ಜನ ಅಣ್ಣತಮ್ಮಂದಿರೂ ಅನ್ಯೋನ್ಯವಾಗಿದ್ದು ಪರಾಕ್ರಮಶಾಲಿಗಳಾಗಿದ್ದರು. ವಿಷ್ಣುವರ್ಧನನು ಶಕ್ತನೂ, ಮೇಧಾವಿಯೂ ಆಗಿ ರಾಜಕಾರ್ಯಪಟುವಾಗಿದ್ದನು. ಇವನಿಗೆ ಬಿಟ್ಟಿದೇವ, ವಿಠಲದೇವ, ವಿಜ್ಞಾನದ ಮತ್ತು ವಿಷ್ಣುವರ್ಧನ ಎಂಬ ಹೆಸರುಗಳಿದ್ದುವು. ಬಲ್ಲಾಳನು ರಾಜ್ಯಭಾರವಹಿಸುತ್ತಿದ್ದರೂ ಪ್ರತಿಭಾಶಾಲಿಯಾದ ವಿಷ್ಣುವರ್ಧನನೇ ಆಡಳಿತನಾಗಿದ್ದಿತು, ಬಲ್ಲಾಳನು ಮೂರನೆ

ಜನ ಏಕೋದರರಾದ ಅಕ್ಕತಂಗಿ ರಾಜಪುತ್ರಿಯರನ್ನು ಒಂದೇ ಭವನದಲ್ಲಿ ಇತಿಹಾಸ ಪ್ರಸಿದ್ಧವಾಗಿ ಏಕಕಾಲದಲ್ಲಿ ಅತ್ಯಂತ ವಿಜೃಂಭಣೆಯಿಂದ ವಿವಾಹವಾದನು. ಈ ಮೂರು ಜನ ರಾಜಪುತ್ರಿಯರೂ ವಿದ್ಯಾವತಿಯರಾಗಿಯೂ, ಸುಂದರಿಯರಾಗಿಯೂ ಇದ್ದು, ಭರತನಾಟ್ಯದಲ್ಲೂ, ಸಂಗೀತದಲ್ಲೂ, ಕಲಾಶಾಸ್ತ್ರದಲ್ಲೂ ಪ್ರವೀಣೆಯರಾಗಿದ್ದರು. ಆದರೆ ಬಲ್ಲಾಳನು ಮದುವೆಯಾದ ಮೂರನೇ ವರ್ಷವೇ ಕಾಲವಾಗಿರಬೇಕೆಂದು ತಿಳಿದುಬರುತ್ತದೆ.

## ವಿಷ್ಣುವರ್ಧನ

ಬಲ್ಲಾಳನಿಗೆ ಮಕ್ಕಳಿಲ್ಲವಾದ್ದರಿಂದ ವಿಷ್ಣುವರ್ಧನನೇ ದೊರೆಯಾದನು. ವಿಷ್ಣುವರ್ಧನನು ಕ್ರಿ. ಶ. 1116 ರಲ್ಲಿ ಚೋಳರಾಜನ ಸೇನೆ ಯುದ್ಧಮಾಡಿ ತಲಕಾಡು, ಕೋಲಾರ ಪಟ್ಟಣಗಳನ್ನು ಜಯಿಸಿ ಬೇಲೂರಿಗೆ ಬಂದನು. ಈ ಜಯದ ಗುರುತಾಗಿ ತಲಕಾಡಿನಲ್ಲಿ ಕೀರ್ತಿನಾರಾಯಣಸ್ವಾಮಿ ದೇವರನ್ನು ಬೇಲೂರಿನಲ್ಲಿ ಕೇಶವನಾರಾಯಣ ದೇವರನ್ನೂ ಪ್ರತಿಷ್ಠಿಸಿದನು. ಅನೇಕ ದೇಶ ಕೋಟೆಗಳನ್ನು ಜಯಿಸಿ ಬಿರುದುಗಳನ್ನು ಹೊಂದಿ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡುತ್ತಿದ್ದು ಬಂಕಾಪುರದಲ್ಲಿ 1141ರಲ್ಲಿ ಕಾಲವಾದನು. ಹೊಯ್ಸಳ ರಾಜರಲ್ಲಿ ಇವನೇ ಪ್ರಖ್ಯಾತನಾದವನು.

ವಿಷ್ಣುವರ್ಧನನಿಗೆ ಅನೇಕ ಪತ್ನಿಯರಿದ್ದರು. ಅವರಲ್ಲಿ 1. ಹಿರಿಯ-ಶಾಂತಲಾದೇವಿ 2. ಕಿರಿಯ - ಶಾಂತಲಾದೇವಿ 3. ಬಮ್ಮಲಾದೇವಿ 4. ರಾಜಲದೇವಿ 5. ಲಕ್ಷ್ಮೀದೇವಿ, 6. ದೇವಕೀದೇವಿ ಇವರು ಮುಖ್ಯರಾದವರು. ಹಿರಿಯ ಹೆಂಡತಿಯಾದ ಶಾಂತಲಾದೇವಿಯಲ್ಲಿ ಬಲ್ಲಾಳನೆಂಬ ಮಗನೂ ಹಿರಿಯಬ್ಬರಸಿ ಎಂಬ ಮಗಳೂ ಹುಟ್ಟಿದರು.

ಹಿರಿಯರಾಣಿಯಾದ ಶಾಂತಲಾದೇವಿ ಪಟ್ಟದರಾಣಿಯಾಗಿದ್ದಳು. ಶಾಂತಲಾದೇವಿಯು ವಿದ್ಯಾವತಿಯಾಗಿಯೂ, ಸಂಗೀತ, ಭರತನಾಟ್ಯ, ಕುಶಲವಿದ್ಯೆ ಮತ್ತು ವೀಣಾಗಾನ ಇವುಗಳಲ್ಲಿ ಚತುರೆಯಾಗಿದ್ದಳು. ಅನ್ನದಾನ, ವೈದ್ಯವಿದ್ಯೆ ಹೇಳಿಕೊಡುವುದು ಇವುಗಳಲ್ಲಿ ಬಹು ಪ್ರೀತಿ. ಇವಳು 1131 ರಲ್ಲಿ ಕಾಲವಾದಳು.

ವಿಷ್ಣುವರ್ಧನನಿಗೆ ಹಿರಿಯಬ್ಬರಸಿಯಲ್ಲದೆ ಇನ್ನೂ ಹೆಣ್ಣುಮಕ್ಕಳಿದ್ದಂತೆ ಕಂಡುಬರುವುದು. ಕುಮಾರಬಲ್ಲಾಳನು 1129 ರಲ್ಲಿ ಯುವರಾಜನಾಗಿಯೂ ರಾಜ್ಯಭಾರವಮಾಡುತ್ತಿದ್ದುದು ತಿಳಿದು ಬರುತ್ತದೆ. (F.C. VI M G. 22) ಮಗಳು ಹಿರಿಯಬ್ಬರಸಿಯನ್ನು ಅರಸೀಕೆರೆಯ ಸಾಮಂತರಾಜನಾದ ನೊಳಂಬಸಂಕೀರ

ಸಿಂಹನೆಂಬುವನಿಗೆ ಕೊಟ್ಟು ವಿವಾಹವಾಗಿದ್ದಿತು. ಕುಮಾರಬಲ್ಲಾಳನು 1133ಕ್ಕೆ ಮುಂಚೆಯೇ ಕಾಲವಾಗಿರಬೇಕೆಂದು ಕಾಣಬರುವುದು.

ಕಿರಿಯ ಶಾಂತಲಾದೇವಿ ಬಹಳ ಸೌಂದರ್ಯವತಿಯಾದ್ದರಿಂದ ರಾಜನು ಪ್ರೀತಿಸಿ ಮದುವೆಯಾದನು. 1136 ರಲ್ಲಿ ಅವಳೂ ಇವಳ ಮಗುವೂ ಕಾಲವಾದರು.

3ನೆಯ ಪಲ್ಲವಕುಲದವಳಾದ ಬಾಚಲಾದೇವಿಯೇ ಮುಖ್ಯಳಾದವಳು. ಇವಳು ರಾಜ್ಯಭಾರದಲ್ಲಿಯೂ, ವಿಷ್ಣುವರ್ಧನನಿಗೆ ಸಹಾಯಕಳಾಗಿದ್ದಳು. ಇವಳೂ ಸಹ ರಾಜ್ಯದ ಒಂದು ಭಾಗವನ್ನು ಆಳುತ್ತಿದ್ದಳು. ಇವಳು ಯುದ್ಧಕ್ಕೆ ಸಹಾಯಕವಾಗಿ ಒಂದು ಅಶ್ವಶಾಲೆಯನ್ನಿಟ್ಟು ಅದರಲ್ಲಿ ಕುದುರೆಸವಾರಿ, ಯುದ್ಧಪ್ರಕ್ರಿಯೆ ಮೊದಲಾದ ವಿದ್ಯೆಗಳನ್ನು ಹೇಳಿಕೊಡುವುದಾಗಿದ್ದಿತು. ಇವಳೂ ವಿಷ್ಣುವರ್ಧನನೂ ಸೇರಿ ಅನೇಕ ಭೂಮಿಗಳನ್ನೂ ಅಗ್ರಹಾರವನ್ನು ಕಟ್ಟಿಸಿ ದಾನಧರ್ಮ ಮಾಡಿದರು.

1141 ರಲ್ಲಿ ರಾಜಲದೇವಿ ಪಟ್ಟದರಾಣಿಯಾದಳು. ಇವಳು ಬಾಚಲಾದೇವಿಯ ತಂಗಿಯು. ಐದನೆಯವಳಾದ ಲಕ್ಷ್ಮೀದೇವಿಯು ಇವಳಿಗೆ 1133 ರಲ್ಲಿ ಹುಟ್ಟಿದ ನರಸಿಂಹನೆಂಬ ಮಗನೇ ಮುಂದೆ ದೊರೆಯಾದನು.

1117 ರಲ್ಲಿ ವಿಷ್ಣುವರ್ಧನನು ಹಿರಣ್ಯಗರ್ಭದಾನ, ತುಲಾಪುರುಷದಾನ ಅಶ್ವಮೇಧಯಾಗ ಮುಂತಾದವನ್ನು ಮಾಡಿಸಿದನು. (E.C. V,B, 1124)

| | | |
|---|---|---|
| ಸಳ--ಹೊಯ್ಸಳ | 984–1043 | |
| ವಿನಯಾದಿತ್ಯ | 1043–1073 | |
| ಎರೆಯಂಗ (ವೀರಸಂಗ) | 1073–1114 | |
| ವಿಷ್ಣುವರ್ಧನ | 1114–1145 | 1099–1147 |
| ವಿಜಯನರಸಿಂಹ | 1145–1188 | 1147–1174 |
| ವೀರಬಲ್ಲಾಳ | 1188–1233 | 1174 |
| ವೀರಸೋಮೇಶ್ವರ | 1249–1268 | 1237–1283 |
| ವೀರನರಸಿಂಹ | 1268–1308 | 1283–1313 |

## HOYSALA KINGS

| | |
|---|---|
| ಹೊಯ್ಸಳ | 1007 |
| ವಿನಯಾದಿತ್ಯ | 1047 ರಿಂದ 1100 |

| | | |
|---|---|---|
| ಎರೆಯಂಗ | 1062 | 1096 |
| ಬಲ್ಲಾಳ I | 1101 | 1104 |
| ವಿಷ್ಣುವರ್ಧನ | 1104 | 1141 |
| ನರಸಿಂಹ I | 1136 | 1171 |
| ಬಲ್ಲಾಳ II | 1172 | 1219 |
| ನರಸಿಂಹ II | 1220 | 1235 |
| ಸೋಮೇಶ್ವರ | 1233 | 1254 |
| ನರಸಿಂಹ III | 1254 | 1291 |
| ಬಲ್ಲಾಳ III | 1291 | 1342 |
| ಬಲ್ಲಾಳ IV | 1343 | |

## ಶ್ರೀರಾಮಾನುಜಾಚಾರ್ಯರ ಸಾನ್ನಿಧ್ಯ

ಚೇತನರ ಭಾಗ್ಯವಿಶೇಷದಿಂದ ಶ್ರೀರಾಮಾನುಜಾಚಾರ್ಯರು ಕ್ರಿಮಿಕಂಠ ಚೋಳನ ಬಾಧೆಯನ್ನು ನಿವಾರಿಸಿಕೊಂಡು ಶ್ವೇತವಸ್ತ್ರಧರರಾಗಿ ಕಾವೇರಿಯಿಂದ ಅಲಂಕೃತವಾದ ಈ ಹೊಯ್ಸಳ ಕರ್ನಾಟಕಕ್ಕೆ ಶಾಲಿ ೧೦೨೦ ಸಂದುವರ್ತಮಾನ ಬಹುಧಾನ್ಯ ಸಂ|| (A. D. 1098) ರಲ್ಲಿ ಬಿಜಯಮಾಡಿಸಿದರು. ಅನಂತರ ವಪ್ಪಗಿರಿಯಲ್ಲಿ ಬೌದ್ಧ ಸಮಯವನ್ನು ಜಯಿಸಿ (ತೊಂಡನೂರು) ತನ್ನನ್ನು ಆಶ್ರಯಿಸಿದ ವಿಷ್ಣುವರ್ಧನನಿಗೆ ಶಂಖಚಕ್ರಾಂಕನ ಮುದ್ರಾಧಾರಣೆ ಮಂತ್ರೋಪದೇಶದಿಂದ ಶ್ರೀವೈಷ್ಣವನನ್ನಾಗಿ ಮಾಡಿ ತಮ್ಮ ಶಿಷ್ಯನನ್ನಾಗಿಮಾಡಿಕೊಂಡರು. ರಾಜನ ಆಶ್ರಯದಿಂದ ಹುತ್ತದಲ್ಲಿ ಅಡಗಿದ್ದ ತಿರುನಾರಾಯಣ ದೇವರನ್ನು ಕಂಡು ಹಿಡಿದು ತಿರುನಾರಾಯಣಪುರವನ್ನು ಜೀರ್ಣೋದ್ಧಾರ ಮಾಡಿದರು. ಜೀರ್ಣೋದ್ಧಾರ ಕಾಲದಲ್ಲಿ ಶ್ರೀರಾಮಾನುಜರು ತೊಂಡನೂರಿನಲ್ಲಿ ವಾಸವಾಗಿದ್ದರು. ಶ್ರೀರಾಮಾನುಜರು ಶ್ರೀರಂಗಕ್ಕೆ ಪ್ರಯಾಣ ಬೆಳಸಿದ ಮೇಲೂ ಇವರು ವಾಸವಾಗಿದ್ದ ಮಠ ಅಥವಾ ರಾಮಾನುಜಕೂಟದಲ್ಲಿ ಅನ್ನಸಂತರ್ಪಣೆ ನಡೆಯುತ್ತಿತ್ತು. ಅದಕ್ಕೆ ಸಾಕ್ಷಿಯಾಗಿ ತೊಂಡನೂರಿನ ಅನೇಕಮಹಾಜನಗಳೂ ಅನ್ನಸಂತರ್ಪಣೆಗಾಗಿ ಭೂಮಿಧರ್ಮಮಾಡಿರುತ್ತಾರೆ. ಶ್ರೀರಾಮಾನುಜರು ತೊಂಡನೂರಿನಲ್ಲಿ ವಾಸವಾಗಿದ್ದರೆಂದೂ ಅವರು ಮಂತ್ರಶಕ್ತರೆಂದೂ ಅನೇಕ ಶಾಸನಗಳಲ್ಲಿ ವಿವರಿಸಿರುವುದು. (ಇದೇ ಗ್ರಂಥಕರ್ತರಿಂದ ಮೇಲುಕೋಟೆ ದೇವಸ್ಥಾನಗಳು ಪುಸ್ತಕದಲ್ಲಿ ವಿವರಿಸಿರುವುದನ್ನು ಕಾಣಬಹುದು).

# ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನ

ಶ್ರೀರಾಮಾನುಜಾಚಾರ್ಯರು ಹೊಯ್ಸಳನಾಡಿಗೆ ಬಂದ ಕಾಲ ಶಕ ೧೦೨೦ ಬಹುಧಾನ್ಯ ಸಂ|| AD 1098. ಇಲ್ಲಿ ೧೨ ವರ್ಷಗಳ ಕಾಲ ವಾಸವಾಗಿದ್ದು, ಶ್ರೀರಂಗಕ್ಕೆ ಹಿಂತಿರುಗಿದ ಕಾಲ ಶಕ ೧೦೩೩ ವಿಕೃತಿ ಸಂ|| ಪುಷ್ಯ ಮಾಸ AD 1111. ಈ ಕಾಲದಲ್ಲಿ ಶ್ರೀಲಕ್ಷ್ಮೀನಾರಾಯಣಸ್ವಾಮಿ ದೇವರ ಪ್ರಸ್ತಾಪ ಕಾಣದ್ದರಿಂದ ಶ್ರೀ ರಾಮಾನುಜರ ಕಾಲದಲ್ಲಿ ಈ ದೇವಸ್ಥಾನವು ಪ್ರತಿಷ್ಠಿತವಾಗಿರಲಿಲ್ಲವೆಂದು ತಿಳಿಯಬೇಕು.

ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ಒಳಪ್ರಾಕಾರದ ಮಂಟಪ ಹೊರಭಿತ್ತಿಯ ಮೇಲೆ AD 1162ನೇ ಕಾಲದ ಶಾಸನಧರ್ಮವು ಕಂಡುಬರುವುದು. ಅದ್ದರಿಂದ ಅದಕ್ಕೆ ಪೂರ್ವಭಾವಿಯಾಗಿ ಗರ್ಭಗೃಹ ಮುಂತಾದವು ಕಟ್ಟಿ ಪ್ರತಿಷ್ಠೆಯಾಗಿರಬೇಕು. ಆದ್ದರಿಂದ ಸುಮಾರು 1125-1150 ಈ ಮಧ್ಯೆ ದೇವಸ್ಥಾನ ಕಟ್ಟಿ ಪ್ರತಿಷ್ಠೆಯಾಗಿರಬೇಕು.

ಅಲ್ಲದೆ ಅಮ್ಮನವರ ಗುಡಿ ಮುಂದಿನ ಮಂಟಪವನ್ನು ವಿಷ್ಣುವರ್ಧನನ ಮಂತ್ರಿಯು ಕಟ್ಟಿಸಿರುವುದರಿಂದ ಹೊತ್ತು ಈ ದೇವಸ್ಥಾನವನ್ನು ವಿಷ್ಣುವರ್ಧನನೇ ಕಟ್ಟಿಸಿರಬೇಕೆಂದು ತಿಳಿದುಬರುವುದು. ಬೇಲೂರು ದೇವಸ್ಥಾನವು 1117 ರಲ್ಲಿ ಕಟ್ಟಿಸಿದ ನಂತರ ಎಂದರೆ 15–20 ವರ್ಷಗಳ ನಂತರ ಈ ದೇವಸ್ಥಾನವು ಕಟ್ಟಲ್ಪಟ್ಟಿರಬೇಕು.

## ಗರ್ಭಗೃಹ –

**ಮೂಲಮೂರ್ತಿ ಪ್ರತಿಷ್ಠಿತ ಸ್ಥಳ ಚತುರಶ್ರವಾಗಿದೆ**

ಮುಂದೆ ಶುಕನಾಸಿ – ಗರ್ಭಗೃಹದ ಬಾಗಿಲು ವಿಶಾಲವಾಗಿರುವುದು. ಕುಡ್ಯಸ್ತಂಭಗಳು, ಕುಂಭಮೂರ್ತಿ ಇತ್ಯಾದಿ ಅಲಂಕಾರಗಳಿಂದ ಕೂಡಿರುವುದು. ಗರ್ಭಗೃಹದ ಮೇಲೆ ವಿಮಾನಶಿಖರವು ಚತುರಶ್ರವಾಗಿ ಕರ್ಣಕೂಟ, ಹಾರ, ಪಂಜರ, ಶಾಲೆ ಎಂಬ ಅಲಂಕಾರ ವಿನ್ಯಾಸಗಳಿಂದ ಕೂಡಿರುವುದು. ಈ ದೇವಸ್ಥಾನ ಅಧಿಷ್ಠಾನ ಶೈಲಿಗೆ ಸೇರಿದ್ದು. ವಿಮಾನವು ಚತುರಶ್ರವಾಗಿರುವುದರಿಂದ ನಾಗರ ವಿಮಾನವೆಂದು ಕರೆಯಲ್ಪಡುವುದು.

ಶುಕನಾಸಿಯನ್ನು ದಾಟಿ ಹೊರಕ್ಕೆ ಬಂದರೆ ರಂಗಮಂಟಪಕ್ಕೆ ಬರುತ್ತೇವೆ. ದ್ವಾರದಲ್ಲಿ ಜಯ-ವಿಜಯರೆಂಬ ದ್ವಾರಪಾಲಕರಿರುತ್ತಾರೆ. ಒಂಭತ್ತು ಅಂಕಣ ಹದಿನಾರು ಕಂಭಗಳಿಂದ ಕೂಡಿರುವುದು. ಮಧ್ಯದ ನಾಲ್ಕು ಕಂಭಗಳು ಕಡೆದ

ವೃತ್ತಾಕಾರದ ಬಹು ನುಣುಪಾಗಿ ಹೊಳೆಯುವ ಕಂಭಗಳು ಮಾಲಾದಿ ಅಲಂಕಾರ ಗಳಿಂದ ಕೂಡಿವೆ.

ಈ ರಂಗಮಂಟಪದ ಅಂತರಾಳದ ಮೇಲೆ ಒಂಭತ್ತು ಅಂಕಣದಲ್ಲೂ ವಿತಾನ ಪದ್ಮಾಲಂಕಾರವಿದೆ. ನಾಲ್ಕು ಮೂಲೆಯಲ್ಲೂ ಸಿಂಹಲಲಾಟದಿಂದ ಕೂಡಿರುವುದು, ಎಂಟು ದಿಕ್ಕಿನಲ್ಲಿಯೂ ಚತುರಸ್ರ ಭಾಗದ ಪದ್ಮದ ಮಧ್ಯದಲ್ಲಿ ಅಷ್ಟದಿಕ್ಪಾಲಕ ರಲ್ಲೊಬ್ಬರನ್ನು ಚಿತ್ರಿಸಿರುವುದು.

ಇಲ್ಲಿಂದ ಮುಂದೆ ಮುಖಮಂಟಪಕ್ಕೆ ಬರುತ್ತೇವೆ. ಇದು ಸುಮಾರು 30 ಕಂಭಗಳಿಂದ ಕೂಡಿ ವಿಶಾಲವಾದ ಮಂಟಪವು. ಇಲ್ಲಿಂದ ಪ್ರದಕ್ಷಿಣವಾಗಿ ಬರಲು ಪ್ರದಕ್ಷಿಣಪಥವಿರುವುದು. ಇದೇ ಪ್ರಥಮ ಪ್ರಾಕಾರವು. ಇಲ್ಲಿಂದ ಪ್ರದಕ್ಷಿಣವಾಗಿ ಹೊರಟರೆ ನಮಗೆ ಎಡಪಾರ್ಶ್ವದಲ್ಲಿ ಒಂದಂಕಣ ಅಗಲದ ಕೈಸಾಲೆ ಮಂಟಪವು. ಮೂರು ದಿಕ್ಕುಗಳಲ್ಲೂ ಪೂರ್ತಿಯಾಗಿರುವುದು. ಈ ಪ್ರದಕ್ಷಿಣಮಾರ್ಗವು ಆಚ್ಛಾದನವಿಲ್ಲದ ತೆರೆದ ಪಥವಾಗಿರುವುದು.

**ಪಾತಾಳಾಂಕಣ ಅಥವಾ ಮುಖಮಂಟಪ**

ರಂಗಮಂಟಪದಿಂದ ಹೊರಕ್ಕೆ ಬಂದರೆ ಪಾತಾಳಾಂಕಣ ವಿಶಾಲವಾದ ಮಂಟಪಕ್ಕೆ ಬರುತ್ತೇವೆ. ಈ ಮಂಟಪಕ್ಕೆ ವೀರಬಲ್ಲಾಳ ಮಂಟಪವೆಂದು ಹೆಸರು. ಬಹುಶಃ ವೀರಬಲ್ಲಾಳನು ಕಟ್ಟಿಸಿರಬಹುದೆಂದು ತೋರುವುದು. ದೇವರ ಎದುರಿಗೆ ಸರಿಯಾಗಿ ಧ್ವಜಸ್ತಂಭ, ಬಲಿಪೀಠಗಳು ಪ್ರತಿಷ್ಠೆಯಾಗಿವೆ. ಈ ಧ್ವಜಸ್ತಂಭ ಬಲಿಪೀಠದ ಉಭಯ ಪಾರ್ಶ್ವಗಳಲ್ಲಿಯೂ ಇಳಿಯುವ ಸೋಪಾನಪಂಕ್ತಿಗಳಿವೆ.

ಈ ವಿಶಾಲ ಮಂಡಪ ಉತ್ತರಭಾಗದಲ್ಲಿ ಮಂಟಪವನ್ನು ಕಾಲಾಂತರದಲ್ಲಿ ಅಧಿಕಮಾಡಿರುತ್ತಾರೆ. $11 \times 6 = 66$ ಅಂಕಣಗಳಿವೆ. $7 \times 12 = 84$ ಕಂಭ ಗಳಿಂದ ಕೂಡಿರುವುದು. ಕಂಭಗಳೆಲ್ಲವೂ ಚತುರಶ್ರವು, ಎತ್ತರವಾದ ಕಂಭಗಳು. ಇಲ್ಲಿಂದ ಪ್ರದಕ್ಷಿಣವಾಗಿ ಬರಲು ಮಾರ್ಗವಿದೆ. ಇದು ಎರಡನೆಯ ಪ್ರಾಕಾರ ವೆಂದು ಕರೆಯಲಾಗುವುದು.

**ಒಂದು ವಿಮರ್ಶೆ :** ಒಳ ವಿಮಾನದ ಜಗತಿಮೇಲಿನ ಸೋಪಾನಕಲ್ಲಿನ ಮೇಲೆ AD 1173 ನೇ ಕಾಲದ ಶಾಸನ ಕಂಡುಬರುವುದು. ಪಾತಾಳಾಂಕಣದಲ್ಲಿ ಶಾಸನದ ಕಾಲ 1174 ಇರುವುದರಿಂದ ಈ ಕಾಲಕ್ಕೆ ಹಿಂದೆಯೇ ಒಳಪ್ರಾಕಾರವೆಲ್ಲಾ ಗರ್ಭಗೃಹ, ಶುಕನಾಸಿ, ರಂಗಮಂಟಪ, ಪಾತಾಳಾಂಕಣ ಎಲ್ಲಾ ಕಟ್ಟಲ್ಪಟ್ಟಿರ

ಬೇಕು. ರಂಗಮಂಟಪದ ಮೇಲೆ ಶಾಲಿ ಶಕ ೧೦೮೪ ಚಿತ್ರಭಾನು ಸಂ|| ಎಂದು ಹೇಳುವಾಗ AD 1162 ಆಗುವುದು. ಈ ಕಾಲಕ್ಕೆ ಹಿಂದೆಯೇ ಗರ್ಭಗುಡಿ, ಶುಕನಾಸಿ ಎಲ್ಲವೂ ಕಟ್ಟಿಮುಗಿದಿರಬೇಕು. ಪಾತಾಳಾಂಕಣದಲ್ಲಿ 1174 ಶಾಸನ ಇರುವುದರಿಂದ ಈ ಹತ್ತು ವರ್ಷಗಳ ಕಾಲದಲ್ಲಿ ದೇವಸ್ಥಾನವೆಲ್ಲಾ ಕಟ್ಟಿ ಪೂರ್ತಿಯಾಗಿರುವುದೆಂದು ತಿಳಿಯಬೇಕು. ಎಂದರೆ 1193 ರಿಂದ ಹಿಂದಕ್ಕೆ ಹತ್ತು ವರ್ಷಗಳು ಆದ್ದರಿಂದ ಉಪೋದ್ಘಾತದಲ್ಲಿ ತಿಳಿಸಿರುವಂತೆ 1125 ರಿಂದ 1150 ರ ಒಳಗೆ ದೇವಸ್ಥಾನದ ಕಾಲವೆಂದು ತಿಳಿಯಬೇಕು.

ಇಲ್ಲಿಂದ ಪ್ರದಕ್ಷಿಣವಾಗಿ ಹೊರಟರೆ ಅಗ್ನಿಮೂಲೆಯಲ್ಲಿ ಪಾಕಶಾಲೆ, ಮುಂದೆ ಬಂದರೆ ಲಕ್ಷ್ಮೀಅಮ್ಮನವರ ಸನ್ನಿಧಿಯು — ನೈಋತ್ಯ ಭಾಗದಲ್ಲಿರುವುದು— ಗರ್ಭಗೃಹ, ಶುಕನಾಸಿ, ಅದರ ಮುಂದೆ ವಿಶಾಲವಾದ ಮಂಟಪ 30 ಕಂಭಗಳಿಂದ ಕೂಡಿರುವುದು. ಅಮ್ಮನವರ ಗರ್ಭಗೃಹದ ಮೇಲಿನ ಶಿಖರವು ಚತುರಶ್ರವಾಗಿದೆ. ಅಮ್ಮನವರ ಸನ್ನಿಧಿಯನ್ನು ಪ್ರದಕ್ಷಿಣವಾಗಿ ಬರಲು ಮಾರ್ಗವಿದೆ.

ಅಮ್ಮನವರ ಈ ಮಂಟಪಕ್ಕೆ ಹಿಲಗಾರಿಯೆಂದು ಹೆಸರು. ವಿಷ್ಣುವರ್ಧನನ ಮಹಾಪ್ರಧಾನ ತಂತ್ರಾಧಿಷ್ಠಾಯಕ ಸುರಿಗೆಯ ನಾಗಯ್ಯನು ಈ ಮಂಟಪ, ಹಿಲಗಾರಿಯನ್ನು ಕಟ್ಟಿಸಿದನು. —ಶಾಂ. ಶ್ರ. ೬೩

ಅಲ್ಲಿಂದ ಮುಂದೆ ಬಂದರೆ ವಾಯುವ್ಯ ಭಾಗದಲ್ಲಿ ವಿಶಾಲವಾದ ಮಂಟಪವಿದೆ. ನಾಲ್ಕು ಅಂಕಣ 30 ಕಂಭಗಳಿಂದ ಕೂಡಿರುವುದು. ಈ ಮಂಟಪವನ್ನು ಮಹಾಪ್ರಧಾನ ಶ್ರೀಕರಣದ ಹೆಗ್ಗಡೆ ನಾಗಣ್ಣನಿಂದ ನಿರ್ಮಿಸಲ್ಪಟ್ಟಿತು. —ಶಾಂ.ಶ್ರ. ೫೮

**ಧ್ವಜಸ್ತಂಭ, ಬಲಿಪೀಠ**

ದೇವರ ಎದುರಿಗೆ ನೇರವಾಗಿ ಧ್ವಜಸ್ತಂಭ, ಬಲಿಪೀಠವಿರುವುದು. ದೇವಸ್ಥಾನದ ಪ್ರತಿನಿತ್ಯದ ನಿತ್ಯೋತ್ಸವದಲ್ಲಿ ಬಲಿಪೀಠವನ್ನೂ ವಿಶೇಷೋತ್ಸವಗಳಲ್ಲಿ ಧ್ವಜಸ್ತಂಭವನ್ನೂ ಉಪಯೋಗಿಸುವರು.

ವೀರಬಲ್ಲಾಳ ವಿಷ್ಣುವರ್ಧನನ ಗೋಪುರ— ಮುಂದೆ ಮಹಾದ್ವಾರದಿಂದ ಹೊರಕ್ಕೆ ಬರುತ್ತೇವೆ. ಈ ಮಹಾದ್ವಾರದ ಮೇಲೆ ಗೋಪುರವಿದ್ದಿತು. ಈಗ ಇರುವುದಿಲ್ಲ. ಈ ಮಹಾದ್ವಾರದ ಮುಂದೆ 15 ಕಂಭಗಳಿಂದ ವಿಶಾಲವಾದ ಮಂಟಪವಿದೆ.

**ದೀಪಸ್ತಂಭ**— ಗೋಪುರದ ಅನತಿದೂರದಲ್ಲಿ ಮಹಾದ್ವಾರದ ಎದುರಿಗೆ ದೀಪಸ್ತಂಭವಿರುವುದು. ಇದರ ಮೇಲೆ ಕಾರ್ತೀಕ ಮಾಸದಲ್ಲಿ ದೀಪವನ್ನು ಹಚ್ಚುವರು. ಈ ಸ್ತಂಭವು ಚತುರಸ್ರವಾದ ಪೀಠ. ಆ ಪೀಠದ ಮೇಲೆ ಆಕಾಶದ

ನೋಡುವಂತೆ ಎತ್ತರವಾದ ಅತ್ಯುನ್ನತ ಸ್ತಂಭ. ಕೆಳಭಾಗ ಚತುರಶ್ರವಾಗಿದ್ದು ಅನಂತರ ಮೇಲಿನವರೆಗೆ ಬ್ಯಾಡಕಾತ್ರ — ಹನ್ನೆರಡು ಪಟ್ಟಿಯಿಂದ ಅಲಂಕೃತವಾಗಿರುವುದು. ಕೆಳಗಿನ ಚತುರಶ್ರವಾದ ಭಾಗದಲ್ಲಿ ದೇವರ ಎದುರಿಗೆ ಸರಿಯಾಗಿ ಗರುಡ ವಿಗ್ರಹ, ಉತ್ತರ ಭಾಗದಲ್ಲಿ ಹನುಮಾನ್ ಆಂಜನೇಯಸ್ವಾಮಿ, ಪೂರ್ವಕ್ಕೆ ಕುಳಿತಿರುವ ಸಿಂಹ, ದಕ್ಷಿಣಕ್ಕೆ ಹಂಸ— ಈ ರೀತಿ ಅಲಂಕರಿಸಲ್ಪಟ್ಟಿರುವುದು.

## ವೀರಬಲ್ಲಾಳ ಮಂಟಪ

ಶಕೆ ೧೧೬೪ ಪ್ಲವ ಸಂ|| **(AD 1241)**

ಲಕ್ಷ್ಮೀನಾರಾಯಣ ದೇವಸ್ಥಾನದ ವೀರಬಲ್ಲಾಳ ಮಂಟಪವನ್ನು ನಿರ್ಮಿಸಲು ತಿರುನಾರಾಯೊಳ್ಳಿಳಾಮನವರಾದ ತಿರುನರೆಯೂರ್ ದಾಸರಾದ ಪೊನ್ನಿಲ್ ಗೋವಿಂದರ ರಾಮಪ್ಪಿರಾನ್ ಅವರು ಸುವರ್ಣದಾನ ಮಾಡಿದ್ದಲ್ಲದೆ ಆ ಮಂಟಪಕ್ಕೆ ಸುಣ್ಣ ಬಣ್ಣ ಬಳಿಯಲು 50 ಗದ್ಯಾಣಗಳನ್ನು ಸಮರ್ಪಿಸಿದರು.

ಶಾಂ. ಪು. ೬೬, ೭೦

**ಮೂಲಮೂರ್ತಿ**— ಶ್ರೀ ನಾರಾಯಣಮೂರ್ತಿ ಆರಡಿ ಎತ್ತರವಿರಬಹುದು. ಪ್ರಭಾವಳಿ ಸಹಿತವಾಗಿ ಒಂದೇ ಶಿಲೆ. ಪೀಠದ ಮೇಲೆ ಸ್ಥಿತರೂಪ=ನಿಂತಿರುವಿಕೆ— ಸಮಭಂಗ. ಪ್ರಭಾವಳಿಯು ಊರ್ಧ್ವ ಚತುರಶ್ರಯುತವಾಗಿರುವುದು. ಶ್ರೀನಾರಾಯಣಮೂರ್ತಿಯು ಚತುರ್ಭುಜ— ಮೇಲಿನ ಬಲಗೈಯಲ್ಲಿ ಗದಾ, ಎಡದ ಕೈಯಲ್ಲಿ ನಾಳಸಹಿತವಾದ ಪದ್ಮ, ಕೆಳಗಿನ ಬಲಬ್ಬು ಹಸ್ತದಲ್ಲಿ ಶಂಖ, ಎಡದ ಕೈಯಲ್ಲಿ ಚಕ್ರ. ಈ ಎರಡು ಕೈಗಳು ಸ್ವಲ್ಪ ಮುಂದೆ ಚಾಚಿಕೊಂಡಿರುವುದು. ಈ ಲಕ್ಷಣವು ಚತುರ್ವಿಂಶತಿ ಮೂರ್ತಿಗಳಲ್ಲಿ ಸೇರಿದ ಎರಡನೇ ನಾರಾಯಣಮೂರ್ತಿ ಲಕ್ಷಣವಾಗಿರುವುದು.

ಪಕ್ಕದಲ್ಲಿ ಉಭಯನಾಚ್ಚಿಯರಾದ ಶ್ರೀದೇವಿ, ಭೂದೇವಿ ಇವರ ವಿಗ್ರಹ ವಿರುವುದು. ಚಿಕ್ಕ ಸ್ವರೂಪ, ಅರ್ಧಾಂಕಿತವು. ಮೂಲವಿಗ್ರಹದಲ್ಲೇ ಸೇರಿರುವುದು, ಪೀಠದಲ್ಲಿ ಗರುಡ ಚಿಹ್ನೆ, ಗರ್ಭಗೃಹದ್ವಾರದ ಮೇಲೆ ಗಜಲಕ್ಷ್ಮಿ ಚಿಹ್ನಾಂಕಿತವಾಗಿರುವುದು.

**ಉತ್ಸವಮೂರ್ತಿ**—(ಭೋಗಮೂರ್ತಿ) ತದ್ವತ್ ಮೂಲಮೂರ್ತಿ ಲಕ್ಷಣವಾಗಿರುವುದು. ಪಕ್ಕದಲ್ಲಿ ಶ್ರೀದೇವಿ, ಭೂದೇವಿ ಉಭಯನಾಚ್ಚಿಯಾರರು ನಿಂತಿರುವರು. ಕಿರೀಟ, ಹಾರ, ಕುಂಡಲಾದಿಗಳಿಂದ ಶೋಭಿತರಾಗಿರುವರು.

**ಲಕ್ಷ್ಮೀ ಅಮ್ಮನವರು**— ಎರಡನೇ ಪ್ರಾಕಾರದಲ್ಲಿ ಪ್ರದಕ್ಷಿಣವಾಗಿ ಬರುವಾಗ ಲಕ್ಷ್ಮೀ ಅಮ್ಮನವರ ಸನ್ನಿಧಿ. ಲಕ್ಷ್ಮೀ ಅಮ್ಮನವರು ಚ ತು ರ್ಭು ಜ

ಮೇಲಿನ ಎರಡು ಕೈಗಳಲ್ಲಿ ಪದ್ಮವು. ಕೆಳಗಿನ ಎರಡು ಕೈಗಳು ಅಭಯವರದ ಹಸ್ತವಾಗಿರುವುದು. ಪದ್ಮಾಸನದಲ್ಲಿ ಕುಳಿತಿರುವರು.

**ಉತ್ಸವಮೂರ್ತಿ** — ತದ್ವತ್ ಮೂಲಮೂರ್ತಿಯಂತಿರುವುದು. ಎಲ್ಲಾ ದೇಶಗಳ ದೇವಾಲಯದಲ್ಲೂ ಮೂಲಮೂರ್ತಿ, ಉತ್ಸವಮೂರ್ತಿ ಒಂದೇ ವಿಧವಾಗಿರುವುದು. ವ್ಯತ್ಯಾಸವಿರುವುದಿಲ್ಲ.

**ಭಕ್ತವಿಗ್ರಹಗಳು** — ಎಲ್ಲಾ ದೇವಸ್ಥಾನಗಳಲ್ಲೂ ಇರುವಂತೆಯೇ ಈ ದೇವಸ್ಥಾನದಲ್ಲೂ, ವಿಷ್ವಕ್ಸೇನರು, ಆಳ್ವಾರಾಚಾರ್ಯರುಗಳೆಲ್ಲರೂ ಮೂಲಮೂರ್ತಿ (ಶಿಲಾರೂಪ), ಉತ್ಸವಮೂರ್ತಿ (ಲೋಹರೂಪ) ಪ್ರತಿಷ್ಠಿತರಾಗಿರುವರು.

## ಧರ್ಮಗಳು

ಶಕ ೧೦೯೫ ವಿಜಯ ಸಂ॥ (AD 10-6-1173)ರಲ್ಲಿ ಲಕ್ಷ್ಮೀನಾರಾಯಣ ದೇವರಿಗೆ ಕುಲಶೇಖರದಾಸಲಕ್ಷ್ಮೀನಾಥನೆಂಬುವರು ಕೆಲವು ಭೂಮಿ ದಾನಮಾಡಿರುವರು.
—ನಾಂ. ಪ್ರ. ೭೨

ಶಕ ೧೦೯೬ ಜಯ ಸಂ॥ (AD 27-11-1174 ಮತ್ತು 6-12-1174) ರಲ್ಲಿ ಎರಡನೆಯ ಬಲ್ಲಾಳನ ಕಾಲದಲ್ಲಿ ಮಹಾಪ್ರಧಾನ ಸರ್ವಾಧಿಕಾರಿಯು ಮತ್ತೆ ವಾದ. ಒಂದು ಹೆಗ್ಗಡೆ ಮಾಚಯ್ಯ, ಹೆಗ್ಗಡೆ ಕೇಶಿಮಣ್ಣ, ಹೆಗ್ಗಡೆ ಕೊಮ್ಮಣ್ಣ ಇವರುಗಳು ಒಂದೆತ್ತಿನ ಗಾಣದ ಸುಂಕ ಕಂದಾಯವನ್ನು ದೇವರಿಗೆ ಮಜ್ಜನ, ಕೈದೀವಟಿಗೆ ತಿರುವರಂಗದಾಸರ ಮೂಲಕ ಧರ್ಮ.
—ನಾಂ. ಪ್ರ. ೬೯. ೭೦

ಶಕ ೧೧೩೬ ಭಾವ ಸಂ॥ (AD 7-9-1214) ರಲ್ಲಿ ಕೊಂಡನೂರಿನ ಅಶೇಷ ಮಹಾಜನಗಳು ಲಕ್ಷ್ಮೀನಾರಾಯಣದೇವರಿಗೆ ಮತ್ತು ನಾಗಣ್ಣ ದಣ್ಣನಾಯಕನ ಚಿಕ್ಕಪ್ಪ ಅರಿಯಣ್ಣನೆಂಬುವರು ಪಾಶ್ವರ್ಕಾಲುವೆಯಲ್ಲಿರುವ ೧೦೦ ಕೊಳ ಭೂಮಿಯನ್ನು ಬೇವರ ನಡೆವರ ನಿವೇದನಕ್ಕಾಗಿ ಸರ್ವಮಾನ್ಯವಾಗಿ ಧರ್ಮ.
—ನಾಂ. ಪ್ರ. ೭೮

ಶಕ ೧೨೦೮ ಪಾರ್ಥಿವ ಸಂ॥ (AD 10-9-1286) ರಲ್ಲಿ ಲಕ್ಷ್ಮೀನಾರಾಯಣದೇವರಿಗೆ ತಿರುನಾಡೈಯ್ತಿ ಉತ್ಸವದ ೧೦ ದಿನಗಳಲ್ಲೂ ನಿವೇದನೆಯಾಗಿ ದೇವಾಂತ್ರಿ ಭಕ್ತಜನರಿಗೆ ವಿನಿಯೋಗಮಾಡಲು ಹತ್ತು ಕೊಳಗೆ ಪಡಮಾನದ ಭೂಮಿಯನ್ನು ಅಪ್ಪಣ್ಣನ ಹೆಸರಿನಲ್ಲಿ ಶ್ರೀವೈಷ್ಣವರು ಧರ್ಮವನ್ನು ನಡೆಸುವುದೆಂದು ಧರ್ಮವು.
—ನಾಂ. ಪ್ರ. ೭೯

**ನಂದಾದೀಪ**

ಶಕ ೧೦೮೪ ಚಿತ್ರಭಾನು ಸಂ|| (AD 1162) ರಲ್ಲಿ ದೇವರಿಗೆ ಯಾದವ ನಾರಾಯಣ ಚತುರ್ವೇದಿಮಂಗಲದಿಂದ ಕರ್ಣಾರಾರದೇವ ಹೆಡಮ್ಮಾರ್‌ರವರು ನಂದಾದೀಪಕ್ಕಾಗಿ ೫ ಗದ್ಯಾಣ ಸಮರ್ಪಿಸಿ, ಅದರ ವೃದ್ಧ್ಯಂಶದಿಂದ ಧರ್ಮ.

—ಶಾಂ. ಶ್ರೀ. ೫೪

ಶಕ ೧೧೧೨ ನಳ ಸಂ|| (AD 12-4-1190) ರಲ್ಲಿ ದೇವರಿಗೆ ನಂದಾದೀಪಕ್ಕಾಗಿ ಅಚ್ಯುತಣ್ಣನ ಧರ್ಮ ಕಾಣಬರುವುದು.

—ಶಾಂ. ಶ್ರೀ. ೭೧

**ನಂದನವನ**

ಶಕ ೧೮೯೮ ಯುವ ಸಂ|| (AD 1976) ರಲ್ಲಿ ತೊಂಡನೂರು ಅಶೇಷ ಮಹಾಜನಗಳೂ ಸೇರಿ ತಿರುನಾರಾಯಣ ನಂದನವನವನ್ನು ನಿರ್ಮಿಸಿ ದೇವರಿಗೆ ಸಮರ್ಪಿಸಿದರು.

—ಶಾಂ. ಶ್ರೀ. ೧೪೧

## ಇತರ ಧರ್ಮಗಳು

**ಯಾದವಪುರಿ ಅಗ್ರಹಾರ**

ಶಕ ೧೬೪೪ ಶುಭಕೃತು ಸಂ|| (AD 11-12-1722) ರಲ್ಲಿ ಇಮ್ಮಡಿ ಕೃಷ್ಣರಾಜರು ತಮ್ಮ ಅಜ್ಜಿ ದೇವೀರಮ್ಮನ ಹೆಸರಲ್ಲಿ ತೊಂಡನೂರು(ಯಾದವಪುರ) ಮತ್ತು ಅತ್ತಿಕುಪ್ಪೆ (ಚೆಲುವ ದೇವಾಂಬುಧಿ) ಈ ಎರಡು ಅಗ್ರಹಾರಗಳನ್ನು ನಿರ್ಮಿಸಿ ಈ ಅಗ್ರಹಾರಕ್ಕೆ ಸೇರಿದಂತೆ ೨೫ ಗ್ರಾಮಗಳನ್ನು ಸೇರಿಸಿ ೧೦೨ ವೃತ್ತಿಗಳನ್ನಾಗಿ ಮಾಡಿ ತ್ರಿಮತಸ್ಥ ಬ್ರಾಹ್ಮಣರನ್ನು ಅಲ್ಲಿ ನಿತ್ಯ ವಾಸಮಾಡುವಂತೆ ಗೃಹಾದಿಗಳನ್ನು ಕಟ್ಟಿಕೊಟ್ಟು ಶ್ರೀ ಲಕ್ಷ್ಮೀನಾರಾಯಣ, ಯಾದವನಾರಾಯಣ, ವಸಂತಗೋಪಾಲ ದೇವರಿಗೆ ಸಮರ್ಪಿಸಿದರು.

೧. ಹೊನ್ನನಹಳ್ಳಿ, ೨. ಮಾರನಹಳ್ಳಿ, ೩. ಸಾಮುಗೌಂಡನಹಳ್ಳಿ, ೪. ಹಿರೀ ಹಳ್ಳಿ, ೫ ಹುಲಿಕೆರೆ, ೬. ಶಾಟನಹಳ್ಳಿ, ೭. ಪುರ, ೮. ನಾಡುಬೋಯನಹಳ್ಳಿ, ೯. ಹೆಮ್ಮನಹಳ್ಳಿ, ೧೦. ಗಿಡುಮನಹಳ್ಳಿ, ೧೧. ಚಿಕ್ಕನಹಳ್ಳಿ, ೧೨. ಚಿಕ್ಕ ಹೊಸಹಳ್ಳಿ, ೧೩. ಕೆಗ್ಗನಹಳ್ಳಿ, ೧೪. ಕೆಂಚನಕೆರೆ, ೧೫. ಮಂಡಿಕನಹಳ್ಳಿ, ಇವುಗಳಿಗೆ ಸೇರಿದ ಉಪಗ್ರಾಮಗಳು ಹೆಚ್ಚುಮಂಚನಹಳ್ಳಿ, ಗಂಗನಹಳ್ಳಿ, ಈ ಹದಿನೇಳು ಗ್ರಾಮಗಳೂ ಫಲವತ್ತಾದುವು. ಕೆರೆ, ಕಟ್ಟೆ, ಕಾಲುವೆಗಳಿಂದ ಕೂಡಿ ರುವುದು. ಮೇಲೆ ತಿಳಿಸಿದ ತೊಂಡನೂರು (ಯಾದವಪುರ), ಅತ್ತಿಕುಪ್ಪೆ (ಚೆಲುವ ದೇವಾಂಬುಧಿ) ಇವೆರಡೂ ಸೇರಿ ೧೯ ಗ್ರಾಮಗಳು ಅವುಗಳ ಜೊತೆಗೆ ಕೊಪ್ಪಲು

ಗ್ರಾಮವು ಈ ರೀತಿ ೬೦ ಗ್ರಾಮಗಳು, ಈ ಗ್ರಾಮಗಳನ್ನು ೧೦೮ ವೃತ್ತಿಗಳನ್ನಾಗಿ ಮಾಡಿ ಪ್ರತಿಯೊಂದು ವೃತ್ತಿಗೂ ಒಂದು ಮನೆಯನ್ನು ಕಟ್ಟಿಸಿ, ಸಂವತ್ಸರಕ್ಕೆ ಬೇಕಾಗುವ ಧನಧಾನ್ಯಗಳನ್ನಿಟ್ಟು ಜೊತೆಗೆ ವಸ್ತ್ರಾಭರಣಗಳನ್ನೂ ಪ್ರತಿಯೊಬ್ಬ ಬ್ರಾಹ್ಮಣ ಕುಟುಂಬಕ್ಕೂ ಸಮರ್ಪಿಸಿದರು.

ಈ ರೀತಿ ೧೦೮ ವೃತ್ತಿಗಳನ್ನು ಧರ್ಮಮಾಡಿ ಅನಂತರ ಒಂದು ವೃತ್ತಿಯನ್ನು ಯಜುರ್ವೇದವನ್ನು ಹೇಳಿಕೊಡುವ ಪಂಡಿತರಿಗೂ, ಒಂದು ವೃತ್ತಿಯನ್ನು ಸಾಮವೇದ ಪಂಡಿತರಿಗೂ, ಇನ್ನೊಂದು ವೃತ್ತಿಯನ್ನು ಶಾಸ್ತ್ರಪಾಠವನ್ನು ಹೇಳಿಕೊಡುವ ಪ್ರಧಾನಿ ಗೋಪೀನಾಥರಿಗೂ ಧರ್ಮ ಮಾಡಿದರು. ಇಷ್ಟಲ್ಲದೆ ಮೇಲೆ ತಿಳಿಸಿದ ೬೦ ಗ್ರಾಮಗಳಿಗೆ ಬೊಮ್ಮನಕೊಪ್ಪಲು ಸಹಿತವಾದ ಲಿಂಗಪುರವನ್ನು ರಂಗನಕೊಪ್ಪಲು ಸಹ ಸೇರಿಸಲ್ಪಟ್ಟವು. ಮೊತ್ತ ೬೩ ಗ್ರಾಮಗಳು ಧರ್ಮ.

ಇವಲ್ಲದೆ, ಪುನಃ ೧೦೮ ವೃತ್ತಿಗಳಿಗೆ ಸೇರಿದಂತೆ ಪುನಃ ೮ ವೃತ್ತಿಗಳನ್ನು ಶಾಸ್ತ್ರ ಓದುವ ವಿದ್ಯಾರ್ಥಿಗಳಿಗೆ ಕೊಡಲ್ಪಟ್ಟಿತು. ೮ ವೃತ್ತಿಗಳಿಗೆ ಅಮೃತೂರು ಸ್ಥಳಕ್ಕೆ ಸೇರಿದ ಹೊಸಪುರ, ಪಂಚಪುರ ಈ ಎರಡು ಗ್ರಾಮಗಳೂ ಸೇರಿಸಲ್ಪಟ್ಟವು.

—ತಾಮ್ರಶಾಸನ ೯೯ ಶಾ. ಪ್ರ.

## ಶ್ರೀ ಕೃಷ್ಣಸ್ವಾಮಿ ದೇವಸ್ಥಾನ

(ವೀತ್ತಿರುಂದ ಪೆರುಮಾಳ್ — ವಿಣ್ಣಗರಂ)

ಶಕ ೧೦೭೯ ಈಶ್ವರ ಸಂ|| AD 27–3–1157 ರಲ್ಲಿ ಭುಜಬಲಮುಂಡಿಯನ್ ಮಗ ಸರ್ವಾಧಿಕಾರಿ ಸೇನಾಧಿಪತಿ ಕಾರಿಕುಡಿ ತಿಲ್ಲೈಕೂತ್ತಾಡಿ ದಣ್ಣನಾಯಕನ ಕಾರಿಕುಡಿ ತಿಲ್ಲೈಕೂತ್ತಾಡಿ ದೇವಸ್ಥಾನವನ್ನು ಕಟ್ಟಿಸಿ ಶ್ರೀ ಲಕ್ಷ್ಮೀಭೂದೇವಿ ಸಹಿತವಾಗಿ ವೀತ್ತಿರುಂದ ಪೆರುಮಾಳನ್ನು ಪ್ರತಿಷ್ಠಿಸಿದನು ಎನ್ನುವಾಗ ಪ್ರತಿಷ್ಠಿಸಿದ ಮನುಷ್ಯ, ಅವನ ಹೆಸರು, ಅಧಿಕಾರ, ಅವನ ಊರು ಎಲ್ಲವೂ ಹೇಳಿದ ಮೇಲೆ ವೀತ್ತಿರುಂದ ಪೆರುಮಾಳ್ — ಕುಳಿತಿರುವ ದೇವರು ಎಂದು ಹೇಳಿದರೆ, ದೇವರು ಯಾರು? ದೇವರ ಹೆಸರನ್ನು ಹೇಳದೇ ಇರುವುದು ಆಶ್ಚರ್ಯಕರವಾಗಿರುವುದು. ಕುಳಿತಿರುವ ದೇವರು ವೈಕುಂಠನಾಥನನ್ನು ಬಿಟ್ಟರೆ ಅನ್ಯ ಯಾವ ವಿಗ್ರಹವೂ ಕುಳಿತಿರುವ ವಿನ್ಯಾಸ ಕಾಣಬರುವುದಿಲ್ಲ. ಇದರಲ್ಲಿ ಕಾರಿಕುಡಿ ಎನ್ನುವ ಊರು ದಕ್ಷಿಣ ಮಧುರೆ ಸಮೀಪದಲ್ಲಿರುವುದು. ತಿಲ್ಲೈಕೂತ್ತಾಡಿ ಅವನ ಹೆಸರು. ಎಂದರೆ ಚಿದಂಬರದ ನಟರಾಜ ಎಂದು ಅರ್ಥವು. ವೀತ್ತಿರುಂದ — ಕುಳಿತಿರುವ ಶ್ರೀ ಭೂ ಸಹಿತನಾದ ದೇವರು ಯಾರು?

ಪ್ರತಿಷ್ಠಿತ ದಿನವೂ ತಿಳಿಯದಾಯಿತು.

ತಿಣ್ಣ್ಕಕೊತ್ತನು — ಬಿದಂಬಿಗದ ಶಬರರಾಜನು; ಉಲಗಮುಂದಾನ್ ಮಗ= ತ್ರಿಭುವನನ ಮಗ, ತಿಣ್ಣ್ಕಕೊತ್ತಪಿಣ್ಣಗರು — ಶಬರರಾಜನು ಕಟ್ಟಿಸಿದ ದೇವಸ್ಥಾನವು ಎಂದರ್ಥವು. ಅದೇ ರೀತಿಯಲ್ಲಿ ದೇವಸ್ಥಾನವೂ ಕರೆಯಲ್ಪಟ್ಟಿರುವುದು. ತಿಣ್ಣ ಕೊತ್ತ ದೇವಸ್ಥಾನ ಎಂದೇ ಪ್ರಸಿದ್ಧಿ. ತಮಿಳು ಶಾಸನಗಳಲ್ಲೂ ಸಹ ತಿತ್ತಿರುಂಡ ಪೆರುಮಾಳಿಗೆ ಧರ್ಮ ಎಂದಿರುವುದು. ಇದರಿಂದ ದೇವರು ಮಾತ್ರ ಯಾರೆಂದು ತಿಳಿಯಲಿಲ್ಲ. ಮುಂದಿನ ಶಾಸನಗಳಲ್ಲಿ ಗೋಪೀನಾಥ ಎಂದಿರುವುದು. ಶಾ. 91. ಇನ್ನೊಂದು ಶಾಸನದಲ್ಲಿ ನಾರಾಯಣ ದೇವರಿಗೆ ಧರ್ಮ ಎಂದಿದೆ (ಶಾ. 96). ಇನ್ನೊಂದು ಶಾಸನದಲ್ಲಿ ವಸಂತಗೋಪಾಲ ಎಂದಿದೆ (ಶಾ. 99). ಮತ್ತೊಂದರಲ್ಲಿ ಯಾದವನಾರಾಯಣ ಎಂದಿದೆ. ಒಟ್ಟಿನಲ್ಲಿ ಉತ್ಸವಮೂರ್ತಿಯನ್ನು ನೋಡಿ ಸಾನ್ನೆ ಕೃಷ್ಣದೇವಸ್ಥಾನವೆಂದು ನಿರ್ಣಯಿಸಿಕೊಳ್ಳಬೇಕು. ಇನ್ನೊಂದು ಶಾಸನದಲ್ಲಿ (ಶಾಂ. ಪ್ರ. 89) ಐನೂರವ ಪಿಣ್ಣಗರು = ಐನೂರವ ದೇವಸ್ಥಾನವೆಂದಿರುವುದು. ಇದಕ್ಕೆ ಅರ್ಥವೇನು ? ತಮಿಳಿನಲ್ಲಿ ಶ್ರೀವೈಷ್ಣವ ಬ್ರಾಹ್ಮಣರಿಗೆ ಐದು ಸಂಸ್ಕಾರವುಳ್ಳವರು — ಐದುನೂರವರು — ಐನೂರವರು — ಅಯ್ಯನೂರರು ಎಂದು ಕರೆಯುವಂತೆ ಈ ದೇವಸ್ಥಾನವು ಶ್ರೀವೈಷ್ಣವರಿಗೆ ಸೇರಿರುವುದರಿಂದ ಐನೂರವರ ದೇವಸ್ಥಾನ — ಐನೂರವ ಪಿಣ್ಣಗರು — ಶ್ರೀವೈಷ್ಣವರ ದೇವಸ್ಥಾನ ಎಂದು ಕರೆಯಲ್ಪಟ್ಟಿರುವುದು.

ಶಾಂ. ಪ್ರ. 86, 87, 89, 95.

## ಶ್ರೀಕೃಷ್ಣಸ್ವಾಮಿ ದೇವಸ್ಥಾನ — (ತಿತ್ತಿರುಂಡಪೆರುಮಾಳ್)

**ಗರ್ಭಗೃಹ :** ಮೂಲದೇವರು ಪ್ರತಿಷ್ಠಿತವಾದ ಸ್ಥಳ. ಚತುರಸ್ರವಾಗಿದೆ. ಗರ್ಭಗೃಹಕ್ಕೆ ಬಾಗಿಲಿರುವುದಿಲ್ಲ. ತೆರೆದ ಬಾಗಿಲಾಗಿರುತ್ತೆ. ಬಹು ಚಿಕ್ಕ ಗರ್ಭಗೃಹ ಶುಕನಾಸಿ ಗರ್ಭಗೃಹದ ಮುಂದಿನ ಅಂಕಣ. ತದನಂತರ ರಂಗಮಂಟಪವು ಶುಕನಾಸಿ ದ್ವಾರದಲ್ಲಿ ಜಯವಿಜಯ ದ್ವಾರಪಾಲಕರಿರುವರು.

**ರಂಗಮಂಟಪ**— ಈ ಮಂಟಪವು ಚತುಸ್ಕೋನದ ೧೬ ಸ್ತಂಭಗಳಿಂದ ಕೂಡಿರುವುದು. ಈ ಭಾಗವು 1175ರ ಸುಮಾರಿನಲ್ಲಿ ನಿರ್ಮಿಸಲಾಗಿದೆ. ಈ ರಂಗಮಂಟಪದಿಂದ ಹೊರಟು ಗರ್ಭಗೃಹ ಪ್ರದಕ್ಷಿಣೆ ಮಾಡಿಬರಲು ಪ್ರದಕ್ಷಿಣ ಮಾರ್ಗವಿದೆ. ಇದಕ್ಕೆ ಪ್ರಥಮ ಪ್ರಾಕಾರವೆಂದು ಹೆಸರು. ಮುಂದೆ ಹೊರಕ್ಕೆ ಬಂದರೆ ಎರಡನೆಯ ಪ್ರಾಕಾರಕ್ಕೆ ಬರುತ್ತೇವೆ. ಪ್ರದಕ್ಷಿಣವಾಗಿ ಬಂದರೆ ವಾಯುವ್ಯ ಭಾಗದಲ್ಲಿ ಲಕ್ಷ್ಮೀಅಮ್ಮನವರ ಸನ್ನಿಧಿ ಇರುವುದು.

**ಮಹಾದ್ವಾರ**— ಹೊರಕ್ಕೆ ಬರುವ ಮಹಾದ್ವಾರ. ಈ ದ್ವಾರದ ಮೇಲೆ ವೀರಬಲ್ಲಾಳನು 1191 ರಲ್ಲಿ ಗೋಪುರ ಕಟ್ಟಿಸಿದನು. ಆದಕ್ಕೆ **ವೀರಬಲ್ಲಾಳ ಗೋಪುರ** ಎಂದು ಹೆಸರು. ಪ್ರಕೃತ ಆ ಗೋಪುರ ಇರುವುದಿಲ್ಲ. ಶಾಂ.ಪು. ೬೮

ಮಹಾದ್ವಾರದ ಹೊರಗೆ ವಸಂತಮಂಟಪವಿದೆ. ವೃತ್ತಾಕಾರವಾದ ನಾಲ್ಕು ಸ್ತಂಭಗಳನ್ನೊಳಗೊಂಡಿರುವುದು. ಈ ಮಂಟಪದ ಪಕ್ಕದಲ್ಲಿ ವಸಂತಪುಷ್ಕರಿಣಿ (ಕೊಳ) ಇರಬೇಕು. ಈಗ ಕಾಣಬರುವುದಿಲ್ಲ.

**ತುಲಾಭಾರ ಸ್ತಂಭ**— ರಮಣೀಯವಾದ ಕಲ್ಲಿನ ತುಲಾಭಾರದ ಸ್ತಂಭದ ಜೋಕಟ್ಟು ಸುಮಾರು 18 ಅಡಿ ಎತ್ತರ, 9 ಅಡಿ ಅಗಲವಾಗಿರುವುದು. ಇಲ್ಲಿ ರಾಜರು ತುಲಾಭಾರವನ್ನು ಕಟ್ಟಿ ಧರ್ಮಮಾಡಲು ಏರ್ಪಡಿಸಿದ ಸ್ಥಳವು.

**ಮೂಲದೇವರು**— ಗರ್ಭಗೃಹದ ಮಧ್ಯದಲ್ಲಿ ಶ್ರೀವಿಷ್ಣು ಸುಖಾಸೀನರಾಗಿರುವರು. ಬಲಗಾಲು ಇಳಿಬಿಟ್ಟು ಎಡದ ಕಾಲು ಮಡಿಸಿರುವುದು. ಚತುರ್ಭುಜ, ಅಭಯಹಸ್ತ, ಚಕ್ರ ಶಂಖ, ಎಡದ ಕೈ ತೊಡೆಯ ಮೇಲಿರುವುದು, ಕಿರೀಟ, ಕುಂಡಲ, ಹಾರಾದಿ ಅಲಂಕಾರಗಳಿಂದ ಶೋಭಿತವು. ಉಭಯ ಪಾರ್ಶ್ವದಲ್ಲಿಯೂ ಶ್ರೀ, ಭೂದೇವಿಯರು ದ್ವಿಭುಜರಿಂದ ಆಸೀನರಾಗಿರುವರು.

**ಉತ್ಸವಮೂರ್ತಿ**— ಲೋಹವಿಗ್ರಹ, ಚತುಸ್ಸುಂದರಮೂರ್ತಿ. ತ್ರಿಭಂಗದಲ್ಲಿ ಎಡದ ಕಾಲ ಮೇಲೆ ನಿಂತು ಬಲದ ಕಾಲನ್ನು ಎಡದ ಕಾಲಿನ ಹಿಂಭಾಗಕ್ಕೆ ಕತ್ತರಿಮುದ್ರೆಯಲ್ಲಿ ಹೆಚ್ಚಿಟ್ಟು ಭೂಮಿಯ ಮೇಲಿರುವುದು. ಕೊಳಲೂದುವ ಭಂಗಿ. ಎರಡೇ ಕೈಗಳು, ಕಿರೀಟ ಹಾರಾದಿಗಳಿಂದ ಶೋಭಿತವಾಗಿರುವುದು. ಪಕ್ಕದಲ್ಲಿ ಶ್ರೀದೇವಿ ಭೂದೇವಿಯರು ದೇವರ ಪಕ್ಕಕ್ಕೆ ಪದ್ಮವನ್ನು ಹಿಡಿದಿರುವರು. ದೇವಿಯರ ಇನ್ನೊಂದು ಕೈ ಗಜಹಸ್ತವಾಗಿರುವುದು.

**ಲಕ್ಷ್ಮೀಅಮ್ಮನವರ ಸನ್ನಿಧಿ**— ಲಕ್ಷ್ಮೀಅಮ್ಮನವರು ದ್ವಿತೀಯ ಪ್ರಾಕಾರದಲ್ಲಿ ಪ್ರದಕ್ಷಿಣವಾಗಿ ಬರುವಾಗ ವಾಯುವ್ಯಮೂಲೆಯಲ್ಲಿ ಸನ್ನಿಧಿ ಇರುವುದು. ಚತುರ್ಭುಜ, ಮೇಲಿನ ಎರಡು ಕೈಗಳಲ್ಲಿ ಕಮಲ, ಬಲದ ಕೈ ಅಭಯಹಸ್ತ, ಎಡದ ಕೈ ವರದಹಸ್ತ. ಈ ರೂಪವು ಎಲ್ಲಾ ದೇವಸ್ಥಾನಗಳಲ್ಲಿಯೂ ಒಂದೇ ರೂಪವು. ಸ್ವಲ್ಪವೂ ವ್ಯತ್ಯಾಸವಿರುವುದಿಲ್ಲ. ಉತ್ಸವಮೂರ್ತಿ ಕೂಡಾ ಮೂಲಮೂರ್ತಿಯಂತಿರುವುದು.

**ಧರ್ಮಗಳು**

ಶಕ ೧೦೭೯ ಈಶ್ವರ ಸಂ|| ಅಶ್ವಯುಜ ಬಹುಳ ಅಷ್ಟಮಿ ಶುಕ್ರವಾರ AD 27-9-1157 ರಲ್ಲು ಸೇನಾಧಿಕಾರಿ ಸೇನಾಧಿಪತಿ ಕಾಳಿಕುಡಿ, ಕಲಿಕೂಷ್ಮಾಡಿ

ದಂಡನಾಯಕನು ಯಾದವನಾರಾಯಣ ಚತುರ್ವೇದಿಮಂಗಲದ ಮಧ್ಯದಲ್ಲಿ ಕಾರಿಕೆಯಡಿ ಪಿಕ್ಕೃತೋತ್ತ ದೇವಸ್ಥಾನವನ್ನು ಕಟ್ಟಿಸಿ, ಶ್ರೀ ಲಕ್ಷ್ಮೀ ಭೂದೇವಿ ಸಹಿತನಾಗಿ ವೀರತ್ತಿರುಂದ ಪೆರುಮಾಳ್-ಕೊಳ್ಳಿರುವ ದೇವರನ್ನು ಪ್ರತಿಷ್ಠೆ ಮಾಡಿಸಿ, ಆ ದೇವರಿಗೆ ಧಾರಾಪೂರ್ವಕವಾಗಿ ಬೆಟ್ಟಹಳ್ಳಿ, ಬಾಳೆಹಳ್ಳಿ, ನಗರೂರ ಗಿರಿಮನ ಹಳ್ಳಿ, ಗುಮ್ಮನಹಳ್ಳಿ, ಸಿಂದಘಟ್ಟ, ಮುಂದಣ ಬೆಟ್ಟಹಳ್ಳಿ, ಎರೆಯಕೆರೆ, ಹುಲಿಯೂರದರೆಸಿಗುಪ್ಪೆ, ಸೋಸಿಮಂಗಲ, ಬೆಳಕೆರೆ, ಬಂಡಿಹೊಳೆ, ಕೊಡಬೆಯಕೆರೆ, ಸೀಳನೆರೆ, ಕುಂಭೇನಹಾಳು, ಸಬೇಹಾಳು, ಹಾಸಂಗೊಂಡ, ಹುಲಿಗನೆ, ಬಡಬಟ್ಟೆಯ ಕೆರೆ; ಕೆಂಚನಹಳ್ಳಿ, ಎರಡಿಂಗನಸಾಡು, ಬೆಟ್ಟೂರ ಸರಹಳ್ಳಿ, ಮಾಚ್ಚಿಹಳ್ಳಿ, ಮಾಣಿಕನಹಳ್ಳಿ, ಇಂತೀ ಮೂವತ್ತುರು ಪ್ರಧಾನ್ಯಂಶಗಳು ಒಕ್ಕಲುಗೂಡಿದ್ದು ಕೊಡಿಕ್ಕಾಡಿ ದಂಡನಾಯಕರ ಮೂಲಿಕ ಭೂಮಿ ಮನೆಮಾನಗಳನ್ನು ಧರ್ಮ ಮಾಡಿದರು. ಪಾಂ. ಪ್ರ. ೮೮

ಶಕ ೧೦೯೭ ಮನ್ಮಥ ಸಂ|| AD 23-2-1175 ರಲ್ಲಿ ಮಹಾಪ್ರಧಾನ ತಂತ್ರಾಧಿಷ್ಠ ಸುರಿಗೆಯ ನಾಗಯ್ಯನ ಆಜ್ಞೆಯಂತೆ ನಾಯಕ ಹೆಗ್ಗಡೆ ಮಾರಣ್ಣನು ಬಿಳ್ಳೇವಳಿ ಕೋಟೆ, ಎಲೆಯಗುಳಿ ೩೦೦, ಕಾಡವಗದ್ದೆ ೫೦ ಗುಳಿ, ಮೊತ್ತ ೩೫೦ ಗುಳಿ ಭೂಮಿಯನ್ನು, ತನ್ನ ಆರೋಗ್ಯ ಕ್ಷೇಮವನ್ನು ಬಯಸಿ ಶ್ರೀ ಕೃಷ್ಣದೇವರಿಗೆ ಧರ್ಮ. ಪಾಂ. ಪ್ರ. ೭೯

ಶಕ ೧೧೦೦ ಹೇವಿಳಂಬಿ ಸಂ|| AD 24-6-1177 ರಲ್ಲಿ ವೀರತ್ತಿರುಂದ ದೇವರಿಗೆ ಮಹಾಪ್ರಧಾನ ಸರ್ವಾಧಿಕಾರಿ ತಂತ್ರಾಧಿಷ್ಠ ಮಾಚಯ್ಯಗಳು, ಮಹಾಪ್ರಧಾನ ಸರ್ವಾಧಿಕಾರಿ ದಂಡನಾಯಕ ಹೆಗ್ಗಡೆ ಕೇಶಿಯಣ್ಣ, ಹೆಗ್ಗಡೆ ಕೋಮಣ್ಣ, ಹೆಗ್ಗಡೆ ಮಹದೇವಣ್ಣ, ಇವರು ನವಿದೀಪಿಗೆ...............ಚಂದನವನ, ಶ್ರೀಗಂಧ, ಕರ್ಪೂರ, ಕುಂಕುಮ ಇವುಗಳಿಗೆ ಭೋಗನಹಳ್ಳಿ, ಇದರ ಕಾಲುವೆ ಸಹಿತವಾಗಿ ಮುಗ್ಗಮನೆ, ಸಮಸ್ತ ವಿಧವಾದ ಸುಂಕ, ಇವುಗಳನ್ನೆಲ್ಲಾ ಸರ್ವಮಾನ್ಯವಾಗಿ ದೇವರಿಗೆ ಧರ್ಮ. ಪಾಂ. ಪ್ರ. ೮೦

ಶಕ ........ ಸಂ|| ................ (AD ......) ರಲ್ಲಿ ಮುದಿಗೊಂಡ ಚೋಳೇಶ್ವರದ ನಾರಾಯಣ ಭಟ್ಟನ ಮಗ ಕುಲಶೇಕಂಬಿರಾನ್ ತಮ್ಮ (ಸೋದರ) ಉಡೈಯಮಿಳ್ಳೈ ವೀರತ್ತಿರುಂದ ದೇವರಿಗೆ ಮೂವತ್ತು ವರಹಗಳನ್ನು ಕೊಟ್ಟು ಅದರ ವೃದ್ಧ್ಯಂಶದಿಂದ ಪೂಜಾ ನೈವೇದ್ಯ, ಚೊಂಬು, ತಟ್ಟೆ, ಬಟ್ಟಲು ಇತ್ಯಾದಿ ಉಪಕರಣಗಳನ್ನು ತೆಗೆದು ಉಪಯೋಗಿಸಲು ಧರ್ಮ. ಪಾಂ. ಪ್ರ. ೭೫

ಸೀಮೆ ಸಾಮಂತನ ಮಗ ಮಲ್ಲಿಸಾಮಂತನು ಸಿರಕಬಳ್ಳಿ, ಭೋಗನಹಳ್ಳಿ, ಬಾಗೆಶೆಟ್ಟಿಹಳ್ಳಿ, ಗ್ರಾಮಗಳನ್ನು ವೀರತ್ತಿರುಂದದೇವರಿಗೆ ಧರ್ಮ. ಪಾಂ. ಪ್ರ. ೭೭

ಶಕ ೧೦೭೨ ಪ್ರಮೋದ ಸಂ|| (AD 1150)ರಲ್ಲಿ ನಾರಾಯಣದೇವರಿಗೆ ನಿವೇದನಕ್ಕಾಗಿ ನರಸಿಂಹ ಹೊಯ್ಸಳ ರಾಜನಿಂದ ಭೂಮಿ ಧರ್ಮ. ೯೬

(ಶಕ ......... AD .........)ರಲ್ಲಿ ಕೊಡತ್ತಾಡಿ ವಿಣ್ಣಗರಂ ದೇವರಿಗೆ ಶ್ರೀರಾಮಾನುಜರ ಶಿಷ್ಯರಾದ ಕೀರ್ನಟಿಯಾನ್, ತಿರುವರಂಗದಾಸನ್ ಎಂಬುವರು ನಾರಸಿಂಹವರ್ಮನಿಂದ ಪಡೆದ ಭೂಮಿಯನ್ನು ಈ ದೇವರ ಪೂಜಾ ನಿವೇದನಗಳಿಗೆ ಸಮರ್ಪಿಸಿದ ಧರ್ಮ. ಸಾಂ. ಪ್ರ. ೯೩

ಶಕ ೧೧೧೩ ವಿರೋಧಿಕೃತು ಸಂ|| 1191ರಲ್ಲಿ ಉತ್ತರಾಯಣ ಸಂಕ್ರಮಣ ಕಾಲದಲ್ಲಿ ಧರ್ಮ ನಡೆಯಲು ಗೋಪೀನಾಥದೇವರಿಗೆ ಧರ್ಮ. ಸಾಂ. ಪ್ರ. ೯೧

ಶಕ ೧೧೨೪ ದುರ್ಮತಿ ಸಂ|| AD 1202ರಲ್ಲಿ ತೊಂಡನೂರು ಅಶೇಷ ಮಹಾಜನಗಳು ವೃತ್ತಿ ಒಂದಕ್ಕೆ ಗದ್ಯಾಣ ೨೦ ರಂತೆ ಸಮರ್ಪಿಸಿ ಆ ಹಣದ ವೃದ್ಧ್ಯಂಶದಿಂದ ಮೀನಮಾಸ ಉತ್ಸವವನ್ನು ನಡೆಸಲು ಧರ್ಮ. ಸಾಂ. ಪ್ರ. ೮೩

ಶಕ ೧೧೨೪ ದುರ್ಮತಿ ಸಂ|| AD 1202ರಲ್ಲಿ ತೊಂಡನೂರಿನ ಅಶೇಷ ಮಹಾಜನಗಳೂ, ಕಂಚಪ್ಪ ವಿಟ್ಠಿಸೆಟ್ಟಿ ಭಂಡಾರಿಯನ್ನೂ ಸಹ ಒಂದು ವೃತ್ತಿ ಭೂಮಿಯನ್ನು ದೇವರಪೂಜೆಗಾಗಿ ಧರ್ಮ. ಸಾಂ. ಪ್ರ. ೮೪

ಶಕ ೧೧೪೫ ಸ್ವಭಾನು ಸಂ|| AD 10-11-1223ರಲ್ಲಿ ಮಹಾಪ್ರಧಾನ ಹೆಗ್ಗಡೆ ರಾಮಣ್ಣ ಮತ್ತು ಮಹಾಪ್ರಧಾನ .................. ಇವರು ಭಕ್ತಿಯಿಂದ ದೇವರಿಗೆ ಚಿಟ್ಟಿದಹಳ್ಳಿ, ಹಿರಿಯಕ್ಕನಹಳ್ಳಿ, ಮಾದಾಪುರಹಳ್ಳಿ ಇವುಗಳನ್ನು ಸರ್ವಮಾನ್ಯದಿಂದ ದೇವರಿಗೆ ಸಮರ್ಪಿಸಿದ ಧರ್ಮ. ಸಾಂ. ಪ್ರ. ೮೧

ಶಕ ೧೧೪೮ ಪಾರ್ಥಿವ ಸಂ|| 1226ರಲ್ಲಿ ಸೋವಿದೆ ಭಂಡಾರಿಯವರು ಭಕ್ತಿಯಿಂದ ದೇವರಿಗೆ ನಂದಾದೀವಿಗೆಗಾಗಿ ಧರ್ಮ. ಸಾಂ. ಪ್ರ. ೯೦

## ಶ್ರೀನರಸಿಂಹಸ್ವಾಮಿ ದೇವಸ್ಥಾನ

ಶ್ರೀಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನಕ್ಕೆ ಉತ್ತರ ಭಾಗದಲ್ಲಿ ಶ್ರೀನರಸಿಂಹಸ್ವಾಮಿ ದೇವಸ್ಥಾನವಿದೆ. ಸುಮಾರು 8-10 ಅಡಿ ಎತ್ತರ ಪ್ರದೇಶದಲ್ಲಿ ಚಿಕ್ಕದಾದ ದೇವಸ್ಥಾನವು.

ಗರ್ಭಗೃಹ, ಅದರಮುಂದೆ ಉದ್ದನಾದ ಅರ್ಧಮಂಟಪ ಅರ್ಧಮಂಟಪದ ಜೊತೆಗೆ ಅಂಕಣಗಳನ್ನು ಸೇರಿಸಿರುವುದು. ಅದರಮುಂದೆ ನವರಂಗವು. ಈ

ನವರಂಗದಲ್ಲಿ ಪ್ರದಕ್ಷಿಣಪಥವಿದೆ. ಈ ನವರಂಗವು ಚತುರಸ್ರಾಕಾರದ ೧೬ ಕಂಭ ಗಳಿಂದ ಕೂಡಿರುವುದು. ನವರಂಗದ ಮುಂದೆ ಸ್ವಲ್ಪ ತೆರೆದ ಸ್ಥಳವಿರುವುದು.

ಈ ನವರಂಗದ ಆಗ್ನೇಯ ಮೂಲೆಯಲ್ಲಿ ಅಡಿಗೆಮನೆ, ಉತ್ತರ ಭಾಗದಲ್ಲಿ ಶ್ರೀರಾಮಾನುಜರ ಸನ್ನಿಧಿ ಇರುವುದು.

**(ಅ) ನರಸಿಂಹಸ್ವಾಮಿ ಸನ್ನಿಧಿ — ಯೋಗಾನರಸಿಂಹಮೂರ್ತಿ,** ಪದ್ಮ ಪೀಠದಲ್ಲಿ ಕುಳಿತು ಯೋಗಪಟ್ಟಿಯಿಂದಲಂಕೃತವಾಗಿರುವುದು. ಪಾದಗಳು ಕತ್ತರೀ ರೂಪ ವಿನ್ಯಾಸದಲ್ಲಿರುತ್ತವೆ. ಚತುರ್ಭುಜವು ಕೆಳಗಿನ ಎರಡು ಕೈಗಳು ಮಂಡಿಯ ಮೇಲಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖಚಕ್ರವಿರುವುದು. ತೆರೆದ ಸಿಂಹವಕ್ತ್ರ ಕಿರೀಟಹಾರಕುಂಡಲಾದಿ ಅಲಂಕಾರಗಳಿಂದ ಶೋಭಿತವು.

**(ಆ) ರಾಮಾನುಜರಮೂರ್ತಿ—** ಈ ನವರಂಗದ ಉತ್ತರ ಭಾಗದಲ್ಲಿ ಶ್ರೀರಾಮಾನುಜರ ವಿಗ್ರಹ ಸುಖಾಸನಮೂರ್ತಿ — ಪದ್ಮಾಸನ, ಹಿಂಭಾಗದಲ್ಲಿ ಸಪ್ತ ಫಣಿಗಳಿಂದ ಕೂಡಿದ ಆದಿಶೇಷಾಲಂಕಾರ. ಈ ವಿಗ್ರಹವನ್ನು ನೋಡಿದರೆ ತೊಂಡನೂರಿಗೆ ರಾಮಾನುಜರು ಬಂದ ಕಾಲದ ಸ್ಮೃತಿ ಕಾಣುವುದು. ಈ ಸ್ಥಳವು ಜೈನರೊಂದಿಗೆ ವೇದಾಂತ ವಿಚಾರದಲ್ಲಿ ವಾದ ನಡೆಸಿ ಜಯಿಸಿದ ಸ್ಥಳ ವಾಗಿರುವುದು. ಆ ಜ್ಞಾಪಕಾರ್ಥವಾಗಿ ಕಾಲಾಂತರದಲ್ಲಿ ಪ್ರತಿಷ್ಠಿಸಿದರೆಂದು- ಎಂದರೆ 1212ಕ್ಕೆ ಅನಂತರ ಕಾಲದಲ್ಲಿ ಎಂದು ತಿಳಿಯಬೇಕು. ಮಂಟಪದಲ್ಲಿರುವ ಬೆಟ್ಟದ ಕಲ್ಲುಬಂಡೆಗಳಲ್ಲಿ ಅಲ್ಲಲ್ಲಿ ಪ್ರಕೃತಿಚಿತ್ರವಾದ ಹಳ್ಳಗಳು ಬಳಳು ರೂಪದಲ್ಲಿ ಕಾಣಬರುತ್ತವೆ. ಇವನ್ನೆಲ್ಲ ಜೈನರ ಪರವಾಗಿ ಹೇಳುವ ಕಥೆಗಳು ಕೇವಲ ಊಹಾಪೋಹವಾದ ಮಾತುಗಳೇ ಹೊರತು ನಿಜವಾದುದಲ್ಲ.

**(ಇ) ನರಸಿಂಹಸ್ವಾಮಿಗೆ ಧರ್ಮ—** ೧೧೨೩ ದುರ್ಮತಿ ಸಂ|| (A.D 1201) ರಲ್ಲಿ ಸಿಂಗಪ್ಪೆರುಮಾಳ್ (ನರಸಿಂಹಸ್ವಾಮಿ), ದೇವಸ್ಥಾನದ ಶ್ರೀಕಾರ್ಯದ ಅಧಿಕಾರಿ ಚೊಕ್ಕಪ್ಪೆರುಮಾಳ್, ಶಿಲ್ಪಿರೇವೋಜ, ಶ್ರೀನರಸಿಂಹಸ್ವಾಮಿ ಅರ್ಚಕರು, ಶ್ರೀಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ಶ್ರೀವೈಷ್ಣವರು, ಶ್ರೀಕೃಷ್ಣಸ್ವಾಮಿ ದೇವಸ್ಥಾನದ ಭಲ್ಲಾಳದೇವರೂ ಸಹ ದೇವರಿಗೆ ಧರ್ಮಮಾಡಿರುವರು.

ಶಾಸ.ಪು. ೧೦೮

ಇಲ್ಲಿ ತಿಳಿಸಿರುವ ಶಿಲ್ಪಿರೇವೋಜನು ಒಂದನೆಯ ಶ್ರೀಕೃಷ್ಣಸ್ವಾಮಿ ದೇವಸ್ಥಾನ ವನ್ನು ಕಟ್ಟಿಸಿದ ಶಿಲ್ಪಿರೇವೋಜನೂ ಒಬ್ಬನೇ ಆಗಿದ್ದಲ್ಲಿ ಆಗ ಶಿಲ್ಪಿರೇವೋಜನಿಗೆ ಒಂದುನೂರ ಮೂವತ್ತು ವರ್ಷಗಳಾಗುವುದು. ಆಗ ಮೇಲೆ ತಿಳಿಸಿದ ದುರ್ಮತಿ





ಉತ್ಸವ ಮೂರ್ತಿ

ಶ್ರೀ ಕೃಷ್ಣಸ್ವಾಮಿ ದೇವಸ್ಥಾನ

(ಹಿತ್ತಲಿಂದ ನೋಡುವಾಗ ವಿಗ್ರಹಗಳು)




ಶ್ರೀ ನರಸಿಂಹಸ್ವಾಮಿ ದೇವಸ್ಥಾನದ ನಕ್ಷೆ



ಶ್ರೀ ಯೋಗಾನರಸಿಂಹಸ್ವಾಮಿ



ತುಲಾಭಾರ ಸ್ತಂಭ

ಶ್ರೀ ಕೃಷ್ಣಸ್ವಾಮಿ ಚಿತ್ರದಿಂದ ಚೆಲುವನಾಳ್ ದೇವಸ್ಥಾನದ ಮುಂದಿರುವುದು

ಸಂವತ್ಸರವನ್ನು ಹಿಡಿದು ದುರ್ಮುಖಿ ಸಂವತ್ಸರವನ್ನಾಗಿ ಮಾಡಿದಲ್ಲಿ 1176 ಆಗುತ್ತದೆ. ಏಕೆಂದರೆ ಇದೇ ಕಾಂಚಿಸ್ವಾಮಿ ಶಿಲ್ಪಿಕೊತ್ತನ್ ಅವನು ಮೊಸಳೇನ ಕೈಲಾಸೇಶ್ವರ ದೇವಸ್ಥಾನದ ಆವರಣದಲ್ಲಿ 1100 ರಲ್ಲಿ ಮಂಟಪವನ್ನು ಕಟ್ಟಿಸಿದ ಶಾಸನವಿರುವುದು. (ಸಂ.                ) ಹಾಗಿದ್ದರೆ ಬೇರೆ ಶಿಲ್ಪಿಕೊತ್ತನಾದರೆ ಆಗ ದುರ್ಮುಖಿ ಸಂ|| AD 1201 ಎಂಬುದಾಗಿ ಹೇಳಬಹುದು ಎಂದು ತಿಳಿಯಬೇಕು. ಶ್ರೀನರಸಿಂಹಸ್ವಾಮಿ ದೇವಸ್ಥಾನವನ್ನು ಶಾಸನ ಸಂ. ಪಾಂ.ಪ್ರ. ೧೧೯ರ ಪ್ರಕಾರ ಬೊಕ್ಕಣ್ಣ ಪೆರ್ಗಡೆಯರವರು ಕಟ್ಟಿಸಿ ಶ್ರೀನರಸಿಂಹಸ್ವಾಮಿಯನ್ನು ಪ್ರತಿಷ್ಠಿಸಿದರೆಂದು ತಿಳಿದುಬರುತ್ತದೆ. ಆದ್ದರಿಂದ AD 1201ಕ್ಕೆ ಪೂರ್ವದಲ್ಲಿ ಶ್ರೀನರಸಿಂಹಸ್ವಾಮಿ ದೇವಸ್ಥಾನವು ಕಟ್ಟಲ್ಪಟ್ಟಿದ್ದಿತು ಎಂದು ತಿಳಿಯಬೇಕು. (ಬಹುಶಃ 1176ಕ್ಕೆ ಪೂರ್ವದಲ್ಲಿ ಪ್ರತಿಷ್ಠೆಯಾಗಿರಬಹುದು)

(೮)**ಕೃಷ್ಣಸ್ವಾಮಿ ಸನ್ನಿಧಿ**- ಶ್ರೀನರಸಿಂಹಸ್ವಾಮಿಯನ್ನು ಬೊಕ್ಕಣ್ಣ ಪೆರ್ಗಡೆಯಾರವರು ಪ್ರತಿಷ್ಠಿಸಿದ ಮೇಲೆ ಆ ದೇವಸ್ಥಾನದ ನವರಂಗದಲ್ಲಿ ಮುಟ್ಟಿಯಂ ಪಾಶ್ವಂ ಇಸ್ಸೆಯಪಿರಾ ಭಟ್ಟನೂ ಅವನ ಪತ್ನಿ ಆಂಡಾಳಮ್ಮನೂ ಸಹ ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠಿಸಿ ಆ ದೇವರ ಪೂಜಾ ನಿವೇದನಾದಿಗಳಿಗೆ ಧರ್ಮಮಾಡಿದ ಮೇಲೆ ಪ್ರಭು ಶಕ ೧೧೩೪ ಅಂಗೀರಸ ಸಂ|| (AD 1212) ರಲ್ಲಿ ತಾವು ಪ್ರತಿಷ್ಠಿಸಿದ ಶ್ರೀಕೃಷ್ಣಸ್ವಾಮಿ ವಿಗ್ರಹಕ್ಕೆ ಜಯಂತಿ ದಿನದಲ್ಲಿ ವಿಶೇಷ ಪೂಜಾ-ನಿವೇದನಗಳಿಗೂ, ಪವಿತ್ರ ದೀಪಾರಾಧನೆಗೂ ಧರ್ಮ ಮಾಡಿರುವರು. ಇದರಿಂದ ಶ್ರೀಕೃಷ್ಣ ವಿಗ್ರಹವು AD 1212ಕ್ಕೆ ಒಂದೆರಡು ವರ್ಷ ಪೂರ್ವದಲ್ಲೇ ಪ್ರತಿಷ್ಠೆಯಾಗಿರಬೇಕೆಂದು ಅರ್ಥವಾಗುವುದು. ಈಗ ಈ ವಿಗ್ರಹವಾಗಲಿ ಸನ್ನಿಧಿಯಾಗಲಿ ದೇವಸ್ಥಾನದಲ್ಲಿ ಕಾಣಬರುವುದಿಲ್ಲ. ಯಾವಾಗ? ಹೇಗೆ? ಅಂತರ್ಧಾನವಾಯಿತೆಂದು ತಿಳಿದುಬರಲಿಲ್ಲ. —ಪಾಂ.ಪ್ರ. ೧೧೯, ೧೩೦

## ಶ್ರೀಗೋಪಾಲಕೃಷ್ಣಸ್ವಾಮಿ ದೇವಸ್ಥಾನ

ದೊಡ್ಡಕೃಷ್ಣರಾಜ ಒಡೆಯರು ತಮ್ಮ ಕುಟುಂಬ ದೇವಾಜಮ್ಮಣ್ಣಿಯವರ ಹೆಸರಿನಲ್ಲಿ ತೊಣ್ಣೂರು ಸ್ಥಳದಲ್ಲಿ ಸ್ನಾನಸಂಕೇತವಾಗಿ ದೇವಸ್ಥಾನವನ್ನು ಕಟ್ಟಿಸಿ ಗೋಪಾಲಕೃಷ್ಣಸ್ವಾಮಿಯನ್ನು ಪ್ರತಿಷ್ಠೆ ಮಾಡಿಸಿ ದೇವರಿಗೆ ಪವಿತ್ರ ದೀಪಾರಾಧನೆಗೆ ವೃತ್ತಿಯನ್ನು ಕಲ್ಪಿಸಿದರು. ಪತ್ನಿಯರಿಬ್ಬರ ಹೆಸರಿನಲ್ಲಿಯೂ ಎರಡು ಅಗ್ರಹಾರ ಕಟ್ಟಿಸಿ ಅಗ್ರಹಾರದ ಒಂದಕ್ಕೆ ೨೪ ವೃತ್ತಿ ಪ್ರಕಾರ ೪೮ ವೃತ್ತಿಗಳನ್ನು ಶ್ರೀಮತಸ್ಥ ಬ್ರಾಹ್ಮಣರಿಗೂ ಗೃಹೋಪಕರಣ ಸಹಿತವಾಗಿ ಧಾರೆಯೆರೆದು ಧರ್ಮಮಾಡಿದರು. ಈ ದೇವಸ್ಥಾನವು ಯಾವಸ್ಥಳದಲ್ಲಿ ಕಟ್ಟಿಸಿ ಪ್ರತಿಷ್ಠಿಸಿದರು ?

ಈಗ ಆ ದೇವಸ್ಥಾನವೇನಾಯಿತು ? ದೇವತಾವಿಗ್ರಹವೇನಾಯಿತು ? ನೂರಾರು ವರ್ಷಗಳ ಹಿಂದಿನ ದೇವಸ್ಥಾನಗಳು ಪ್ರತಿಷ್ಠಿತವಾಗಿ ವಿಗ್ರಹಗಳಿರುವಾಗ ದೊಡ್ಡಕೃಷ್ಣರಾಜ ಒಡೆಯರ ಕಾಲ1714--1732 ಈ 250 ವರ್ಷಗಳ ಕಾಲದಲ್ಲಿ ನಾಮಾವಶೇಷವಿಲ್ಲದೆ, ಯಾವ ಗುರುತೂ ಇಲ್ಲದೆ ನಷ್ಟವಾಗಿರುವುದು ಆಶ್ಚರ್ಯವಾಗಿದೆ. ಬಹುಶಃ ಈ ದೇವಸ್ಥಾನವು ಶ್ರೀಕೃಷ್ಣಸ್ವಾಮಿ (ತಿಟ್ಟಕೊತ್ತ ದೇವಸ್ಥಾನ) ದೇವಸ್ಥಾನದ ಎದುರಿಗೆ ಕಟ್ಟಿಸಿ ಪ್ರತಿಷ್ಠೆಯಾಗಿರಬೇಕು.

## ಶ್ರೀರಾಮಾನುಜರ ಮಠ

ಶ್ರೀರಾಮಾನುಜರು ತೊಂಡನೂರಿನಲ್ಲಿರುವಾಗಲೇ ಅವರು ವಾಸಮಾಡಿದ ಸ್ಥಳವನ್ನು ರಾಮಾನುಜಮಠವೆಂದು ಕರೆಯಲ್ಪಟ್ಟಿರಬೇಕು. ಈ ಮಠಕ್ಕೆ ಚತುರ್ವೇದಿಮಂಗಲದ (ತೊಂಡನೂರು) ಅಶೇಷ ಮಹಾಜನಂಗಳೂ ಭೂದಾನ ಮಾಡಿರುವರು. ಕಾಲ ? —ಪಾಂ. ಪ್ರ- ೫೪

## ಶ್ರೀಕೈಲಾಸೇಶ್ವರಸ್ವಾಮಿ ದೇವಸ್ಥಾನ

ಈ ದೇವಸ್ಥಾನವು ಊರಿನ ಕೊನೆಯಲ್ಲಿ ಯಾದವನದೀ ತೀರದಲ್ಲಿರುವುದು. ಗರ್ಭಗೃಹ— ಇದರಲ್ಲಿ ಪ್ರತಿಷ್ಠಿತವಾದ ಲಿಂಗವು ಸುಮಾರು ಎರಡೂವರೆ ಅಡಿ ಎತ್ತರವಿರುವುದು.

ರಂಗಮಂಟಪ— ಈ ದೇವಸ್ಥಾನದ ರಂಗಮಂಟಪ ಕಂಭಗಳಲ್ಲಿ ಒಂದೊಂದು ಕಂಭವನ್ನೂ ಪಿಲಿಸೋಮ, ಸೇರಿಯಣ್ಣ, ಮಲಿಯಣ್ಣ, ಮಾಣಿವಾಳ ಮಾಡಿಸಿಕೊಟ್ಟ ಸ್ತಂಭಗಳು ಕಾಣಬರುತ್ತವೆ. ಇತರ ಕಂಭಗಳನ್ನು ಧರ್ಮಮಾಡಿದವರು ಕಾಣಬರಲಿಲ್ಲ.

ಪಶ್ಚಿಮಭಾಗದಲ್ಲಿ ಮೂರು ವೃತ್ತಾಕಾರದ ಕಂಭಗಳಿವೆ. ಪೂರ್ವಭಾಗದಲ್ಲಿ ಷೋಡಶ ಪಟ್ಟಿಯುಳ್ಳ 16 ಕಂಭಗಳನ್ನೊಳಗೊಂಡಿದೆ. ಮುಂದೆ ಒಂದಂಕಣದ ವರಾಂಡದಲ್ಲಿ 2 ಸ್ತಂಭಗಳು ಎಂಟು ಪಟ್ಟಿಯ ಅಲಂಕಾರದಿಂದ ಕೂಡಿರುವುದು.

ಈ ದೇವಸ್ಥಾನದ ದೇವರ ಮುಂದಿರುವ ಬಸವಣ್ಣ ವಿಗ್ರಹದ ಮೇಲೆ ಲಕ್ಷ್ಮೀನಾಥ ಎಂದು ಬರೆದಿರುವುದು. ಇದು ಪ್ರತಿಷ್ಠಾಕರ್ತರ ಹೆಸರೆ ? ಅಥವಾ ಶಿಲ್ಪಿಯ ಹೆಸರೆ ? ತಿಳಿಯಲಿಲ್ಲ. ಪಾಂ. ಪ್ರ. ೧೧೪, ೧೧೫, ೧೧೬, ೧೧೭

**ಧರ್ಮಗಳು —**

ಶಕ............ ಸಂ|| (1140 ಅಥವಾ 1177) ರಲ್ಲಿ ನಿಕ್ಕರಸರ ಮಕ್ಕಳು ಶಂಭುದೇವ, ಪೆಣಸಿಕ್ಕಿ, ಇವರ ಧರ್ಮ ಕಂಡುಬರುತ್ತದೆ. ಶಾಂ.ಪ್ರ ೧೦೫

ಶಕ............ ಸಂ|| (A·D ..........) ರಲ್ಲಿ ಪೆಕ್ಕಿಕೊತ್ತಭಟ್ಟನು (ಕೃಷ್ಣಭಟ್ಟ) ದೇವಕರ್ಮಿ ಮಹಾದೇವಭಟ್ಟ ಸಹ ಈ ದೇವರಿಗೆ ನಂದಾದೀವಿಗೆಕ್ಕಾಗಿ ಏರ್ಪಡಿಸಿದ ಧರ್ಮ ಶಾಂ.ಪ್ರ ೧೦೬

ಶಕ ...... ಸಂ|| (A·D ......) ರಲ್ಲಿ ಪ್ರಧಾನ ದಂಡನಾಯಕರು ನಂದಾದೀವಿಗೆಗೆ ಧರ್ಮ ಶಾಂ.ಪ್ರ ೧೦೭

**ಶಕ ಪರಾಭವ ಸಂ||** (AD....... ) ರಲ್ಲಿ ಸ್ಥಾನಪತಿ ಕೊಕ್ಕಭಟ್ಟರ ಮಗ ಆನುಜ್ಯೈಯಾರ್ಯಭಟ್ಟರೂ, ಅಯ್ಯಕೊಂಡಭಟ್ಟರೂ, ಶಾಂತಿಗ್ರಾಮದ ದೇವಣ್ಣೈಯ ಪ್ರಯೋಲಾಂಡಿ ಚಿಟ್ಟಿಯಾರೂ,

**ಯುವ ಸಂ||** ದಲ್ಲಿ ಕುರುವಯಂಡಿ ಅಂದಾನ್ ಭಟ್ಟರೂ,

**ಹೇವಿಳಂಬಿ ಸಂ||** ದಲ್ಲಿ ಸ್ಥಾನಪತಿಗಳು ಮಹಾದೇವಭಟ್ಟರೂ, ತಳಿಯ ಕ್ರಾದ್ವೈನಸ್ವಾಭಟ್ಟರೂ, ಅನುದ್ವೈಯಾರ್ಯಭಟ್ಟರೂ, ಅಣ್ಣಾಭಟ್ಟರೂ ಮತ್ತು ತೊಂಡಾಚಾರಿಯೂ ಸಹ ದೇವರ ನಂದಾದೀವಿಗೆಕ್ಕಾಗಿ 4+4+4=12 ವರಹಗಳನ್ನು ಮೂಲಧನವಾಗಿ ಕೊಟ್ಟು ಅದರ ವೃದ್ಧ್ಯಂಶದಿಂದ ನಂದಾದೀವಿಗೆಕ್ಕಾಗಿ ಧರ್ಮ. ಶಾಂ. ಪ್ರ. ೧೦೮, ೧೦೯, ೧೧೦

## ಶ್ರೀನಖರೇಶ್ವರಸ್ವಾಮಿ ದೇವಸ್ಥಾನ

ಈ ದೇವಸ್ಥಾನವು ಅಗ್ರಹಾರದ ಕೊನೆಯಲ್ಲಿರುತ್ತದೆ. ಶಕ ೧೧೧೨ ಸೌಮ್ಯ ಸಂ|| (AD 1190) ರಲ್ಲಿ ಸರ್ವಾಧಿಕಾರಿ ಸೇನಾಪತಿ ಅಚ್ಯುತಿಮ್ಮಯ್ಯನ ಮಕ್ಕಳು ಸಿರಿಲಯ್ಯ ಮತ್ತು ದಂಡನಾಯಕ ವೀರಯ್ಯನ ಮಗ ಚಾವುಂಡಯ್ಯನೂ ಈ ದೇವರ ನಂದಾದೀವಿಗೆಕ್ಕಾಗಿ ಧರ್ಮಮಾಡಿರುವರು. ಇವರ ಜೊತೆಯಲ್ಲಿ ಆಯತಹೆಗ್ಗಡೆಯು ಕೆಲವು ಧರ್ಮ ಮಾಡಿರುವರು. ಈ ಸೇನಾಪತಿಗಳು ಮೇಲುಕೋಟೆರಕ್ಷಾಪಾಲಕರಾಗಿದ್ದರು. ಶಾ. ಪ್ರ. 74

## ಶ್ರೀಹೊಯ್ಸಳೇಶ್ವರಸ್ವಾಮಿ ದೇವಸ್ಥಾನ

ಈ ದೇವಸ್ಥಾನವು ಯಾದವ ಸಮುದ್ರದ ಏರಿಯ ಮೇಲೆ ಸ್ಥಾಪಿತವಾಗಿರುವುದು.

ಶಕ... ಸಂ|| (AD... ) ರಲ್ಲಿ ವಿಜಯನಗರದ ನಾರಸಿಂಹದೇವ ಅರಸರು ಈ ದೇವರಿಗೆ ನೈವೇದ್ಯ ನಂದಾದೀವಿಗೆಗೆ ಸಮಂಟುಕಾರ್ಯದ ಧರ್ಮ ಪಾಂ.ಪ್ರ. ೧೨೩

ಶಿವಲಿಂಗ ಪ್ರತಿಷ್ಠಿತವಾದ ಈ ದೇವಸ್ಥಾನಗಳು ಕಟ್ಟಿದ ಮತ್ತು ಧರ್ಮಗಳು ಯಾವುದೂ ಈಗ ಕಾಣಬರುವುದಿಲ್ಲ. ನೊರಚೆಪ್ಪ ವಿಷಯವನ್ನು ಬರೆದಿರುವುದು.

**ತಿರುಮಲ ಸಾಗರಕೆರೆ-** ತೊಣ್ಣೂರಿನಲ್ಲಿರುವ ಈ ಕೆರೆಯು ಬಹುಸ್ವಚ್ಛವಾಗಿ ಒಂದಡಿ, ಎರಡಡಿ, ಒಂದು ಗಜದವರೆಗೂ ನೀರಿನ ತಳವನ್ನು ಗಾಜಿನಲ್ಲಿ ನೋಡಿ ದಂತೆ ಕಾಣಬರುವುದು. ನೀರನ್ನು ಕೈಯಲ್ಲಿ ತೆಗೆದುಕೊಂಡು ಕೆಳಗೆ ಬಿಟ್ಟರೆ ಮುತ್ತು ಸುರಿದಂತೆ ಕಾಣುವುದು. ಈ ಕೆರೆಯನ್ನು ಚಿಕ್ಕದೇವರಾಜರ ಮಂತ್ರಿ ಗಳಾಗಿದ್ದ ತಿರುಮಲಯ್ಯಂಗಾರ್ಯರು ಕಟ್ಟಿಸಿದರು. ಈ ಕೆರೆಯ ಜೊತೆಯಲ್ಲಿ ತಿರುಮಲಸಾಗರ ಎಂಬ ಊರು, ಶ್ರೀನಿವಾಸಸ್ವಾಮಿ ದೇವಸ್ಥಾನ, ಅನ್ನಛತ್ರ ಇವುಗಳನ್ನೂ ಕಟ್ಟಿಸಿದರು.

ಈ ಕೆರೆಯ ಸೋಪಾನಕಟ್ಟೆ, ಸನ್ನಿವೇಶಗಳನ್ನು ನೋಡಿದರೆ ಹಾಳಾದ ಅಥವಾ ಕೆಡವಲ್ಪಟ್ಟ ಅಥವಾ ದೇವಸ್ಥಾನ ಕಟ್ಟಿದನಂತರ ಮಿಕ್ಕ ಕಲ್ಲುಗಳನ್ನು ತಂದು ಜೋಡಿಸಿರುವುದು ಕಾಣಬರುವುದು. ಈ ಕೆರೆಯನ್ನು ರಾಮಾನುಜರು ಕಟ್ಟಿಸಿದರು, ರಾಮಾನುಜ ಕೆರೆ ಎಂದು ಹೇಳುವರು ಇದಕ್ಕೆ ಯಾವ ಆಧಾರವೂ ಇರುವುದಿಲ್ಲ.

ಟಿಪ್ಪು ಅಧಿಕಾರಿಯಾಗಿದ್ದ ಕಾಲದಲ್ಲಿ ಆಂಗ್ಲೇಯರಿಗೂ ಟಿಪ್ಪುವಿಗೂ ಯುದ್ಧವಾದಾಗ ಟಿಪ್ಪು ಈ ಕೆರೆಯನ್ನು ಒಡೆದು ನೀರನ್ನೆಲ್ಲಾ ಬಿಟ್ಟು ಹೋಗಿಸಿದನು. ಯುದ್ಧ ಮುಗಿದ ಮೇಲೆ ಪೂರ್ಣಯ್ಯನವರು ಕೆರೆ, ಕಟ್ಟೆ, ಬಾವಿ ಗಳನ್ನು ಜೀರ್ಣೋದ್ಧಾರ ಮಾಡಿಸಿದಾಗ ಈ ಕೆರೆಯನ್ನೂ ಜೀರ್ಣೋದ್ಧಾರ ಮಾಡಿಸಿದರು.

ಈ ಕೆರೆಯನ್ನು ಯಾದವಸಮುದ್ರವೆಂದೂ ಕರೆಯುವರು. ಮೇಲುಕೋಟೆ ಯಲ್ಲಿ ಮಳೆಕಾಲದಲ್ಲಿ ಹರಿಯುವ ಯಾದವನದಿಯ ನೀರು ಈ ಕೆರೆಗೆ ಬಂದು ಸೇರುವುದು. ಈ ಕೆರೆಯ ಕೆಳಗೆ ಕೆಲವು ಭೂಮಿಗಳು ಸಾಗುವಳಿಯಾಗುತ್ತವೆ.

ಪಾಂ. ಪ್ರ. ೧೨೩

—o—

ಈ ಕೆಳಗೆ ಕಂಡ ಗ್ರಂಥಗಳು ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟು ಮುದ್ರಣಕ್ಕೆ ಸಿದ್ಧವಾಗಿವೆ. ಕ್ಷೇತ್ರಮಹಾತ್ಮ್ಯೆ, ಚರಿತ್ರೆ, ಶಿಲಾಶಾಸನ, ಧರ್ಮಗಳು, ವಿವರಿಸಲ್ಪಟ್ಟಿರುವುವು. ಜೊತೆಯಲ್ಲಿ ಪರಿಸರದ ದೇವಾಲಯಗಳೂ ವಿವರಿಸಲ್ಪಟ್ಟಿರುವುವು–

1. ಶ್ರೀರಂಗನಾಥಸ್ವಾಮಿ ದೇವಸ್ಥಾನ — ಶ್ರೀರಂಗಪಟ್ಟಣ.
2. ಶ್ರೀನಾರಾಯಣಸ್ವಾಮಿ ದೇವಸ್ಥಾನ — ಮೇಲುಕೋಟೆ–ತಿರುನಾರಾಯಣಪುರ.
3. ತೊಂಡನೂರು ದೇವಸ್ಥಾನಗಳು — ತೊಂಡನೂರು.
4. ಮಳೂರು ಚನ್ನಪಟ್ಟಣ ದೇವಸ್ಥಾನಗಳು — ಮಳೂರು ಚನ್ನಪಟ್ಟಣ.
5. ಶ್ರೀನಂಜುಂಡೇಶ್ವರಸ್ವಾಮಿ ದೇವಸ್ಥಾನ — ನಂಜನಗೂಡು
6. ಶ್ರೀಲಕ್ಷ್ಮೀಕಾಂತಸ್ವಾಮಿ ದೇವಸ್ಥಾನ — ಕಳಲೆ.
7. ಶ್ರೀವಿಜಯನಾರಾಯಣಸ್ವಾಮಿ ದೇವಸ್ಥಾನ — ಗುಂಡ್ಲುಪೇಟೆ.
8. ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನ — ಚಾಮರಾಜನಗರ.
9. ರಾಜಧಾನಿ ದೇವಸ್ಥಾನಗಳು — ರಾಜಧಾನಿ, ಮೈಸೂರು.
10. ಬೆಂಗಳೂರು ಕೃತಿ — ಬೆಂಗಳೂರು.
11. ಶ್ರೀಗೊಮ್ಮಟೇಶ್ವರ — ಶ್ರವಣಬೆಳಗೊಳ.
12. ಶ್ರೀಚನ್ನಕೇಶವಸ್ವಾಮಿ ದೇವಸ್ಥಾನ — ಬೇಲೂರು.
13. ಶ್ರೀರಂಗನಾಥಸ್ವಾಮಿ ದೇವಸ್ಥಾನ — ಶ್ರೀರಂಗಕ್ಷೇತ್ರ.
14. ಹಳೇಬೀಡು ದೇವಸ್ಥಾನಗಳು — ಹಳೇಬೀಡು
15. ಶ್ರೀವೆಂಕಟೇಶ್ವರಸ್ವಾಮಿ ದೇವಸ್ಥಾನ — ತಿರುಪತಿ.
16. ಶ್ರೀವರದರಾಜಸ್ವಾಮಿ ದೇವಸ್ಥಾನ — ಕಾಂಚೀಪುರ.
17. ತಿರುಮಕೂಡಲು ನರಸೀಪುರದ ದೇವಸ್ಥಾನಗಳು — ಟಿ.ನರಸೀಪುರ.
18. ಶ್ರೀಪಾರ್ಥಸಾರಥಿಸ್ವಾಮಿ ದೇವಸ್ಥಾನ — ತಿರುವಲ್ಲಿಕ್ಕೇಣಿ, ಮದರಾಸ್.

ಇನ್ನೂ ಅನೇಕ ದೇವಸ್ಥಾನಗಳ ಮತ್ತು ಎಲ್ಲಾ ಊರುಗಳ ಚರಿತ್ರೆಯೂ ಬರೆಯಲ್ಪಟ್ಟಿವೆ.